**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

# ಕರ್ನಾಟಕ ವಿಧಾನ ಪರಿಷತ್ತು

22ನೇ ಸೆಪ್ಟೆಂಬರ್ 2020
ಮಂಗಳವಾರ

## ವಿಷಯಾನುಕ್ರಮಣಿಕೆ

1. **ಪ್ರಶ್ನೋತ್ತರಗಳು.**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**273 – ರಾಜ್ಯದಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸುವ ಕುರಿತು**
ಶ್ರೀ ಎಂ.ನಾರಾಯಣಸ್ವಾಮಿ
ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**005 – ರಾಯಚೂರು ನಗರ 24 X 7 ಕುಡಿಯುವ ನೀರಿನ ಬಗ್ಗೆ**
ಶ್ರೀ ಬಸವರಾಜ ಪಾಟೀಲ ಇಟಗಿ
ಶ್ರೀ ಬಿ.ಎ.ಬಸವರಾಜ(ನಗರಾಭಿವೃದ್ಧಿ ಸಚಿವರು)

**266 – ಕೆ.ಐ.ಎ.ಡಿ.ಬಿ. ಯಿಂದ ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ವಲಯಗಳ ಕುರಿತು.**
ಡಾ॥ ವೈ.ಎ.ನಾರಾಯಣಸ್ವಾಮಿ
ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**201 – ತೋಟಗಾರಿಕೆ ರೈತರ ಸಂಕಷ್ಟದ ಕುರಿತು**
ಶ್ರೀ ಪಿ.ಆರ್.ರಮೇಶ್
ಶ್ರೀ ಕೆ.ಸಿ.ನಾರಾಯಣಗೌಡ (ತೋಟಗಾರಿಕೆ, ಪೌರಾಡಳಿತ ಮತ್ತು ರೇಷ್ಮೆ ಸಚಿವರು)

**163 – ಕಸ ವಿಂಗಡಣೆ ಬಗ್ಗೆ**
ಶ್ರೀ ಸುನಿಲ್ ಸುಬ್ರಮಣಿ, ಎಂ.ಪಿ.
ಶ್ರೀ ಕೆ.ಸಿ.ನಾರಾಯಣಗೌಡ (ತೋಟಗಾರಿಕೆ, ಪೌರಾಡಳಿತ ಮತ್ತು ರೇಷ್ಮೆ ಸಚಿವರು)

**224 – ಬೀದರ್ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಿಬ್ಬಂದಿಗಳ ಕೊರತೆ ಕುರಿತು**
ಶ್ರೀ ರಘುನಾಥರಾವ್ ಮಲ್ಕಾಪೂರೆ
ಶ್ರೀ ಕೆ.ಸಿ.ನಾರಾಯಣಗೌಡ (ತೋಟಗಾರಿಕೆ, ಪೌರಾಡಳಿತ ಮತ್ತು ರೇಷ್ಮೆ ಸಚಿವರು)

**007 – ಬಡವರಿಗೆ ತಲುಪಬೇಕಾದ ಆಹಾರಧಾನ್ಯವನ್ನು ಅಕ್ರಮವಾಗಿ ದಾಸ್ತಾನು ಮಾಡಿರುವ ಕುರಿತು.**
ಶ್ರೀ ಯು.ಬಿ.ವೆಂಕಟೇಶ್
ಶ್ರೀ ಕೆ.ಗೋಪಾಲಯ್ಯ(ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**170 – ಹೊರದೇಶದ ಕೈಗಾರಿಕೆಗಳನ್ನು ರಾಜ್ಯಕ್ಕೆ ಸೆಳೆಯುವ ಕುರಿತು.**

ಶ್ರೀ ಕೆ.ಸಿ.ಕೊಂಡಯ್ಯ

ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**242 – ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್‌ನ ಎ.ಸಿ.ಎಫ್.ಎಫ್. ಯೋಜನೆ ಬಗ್ಗೆ.**

ಶ್ರೀ ಮರಿತಿಬ್ಬೇಗೌಡ

ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**257 – ಬೀದರ್ ತೋಟಗಾರಿಕೆ ಮಹಾವಿದ್ಯಾಲಯದ ಜಮೀನಿನ ಬಗ್ಗೆ.**

ಶ್ರೀ ಅರವಿಂದಕುಮಾರ್ ಅರಳಿ

ಶ್ರೀ ಕೆ.ಸಿ.ನಾರಾಯಣಗೌಡ (ತೋಟಗಾರಿಕೆ, ಪೌರಾಡಳಿತ ಮತ್ತು ರೇಷ್ಮೆ ಸಚಿವರು)

**202 – ರಾಜ್ಯದ ನ್ಯಾಯಬೆಲೆ ಅಂಗಡಿಗಳ ಅಸಮರ್ಪಕ ಕಾರ್ಯಾಚರಣೆ ಕುರಿತು**

ಶ್ರೀ ಹೆಚ್.ಎಂ.ರಮೇಶ್‌ಗೌಡ

ಶ್ರೀ ಕೆ.ಗೋಪಾಲಯ್ಯ(ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

**249 – ಮೈಸೂರು ಲ್ಯಾಂಪ್ಸ್ ಕಂಪನಿಯ ಆಸ್ತಿಯಲ್ಲಿ ಆಸ್ಪತ್ರೆ ನಿರ್ಮಿಸುವ ಬಗ್ಗೆ.**

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

**2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ರಾಜ್ಯದ ಕೈಮಗ್ಗ ಸೀರೆಗಳಿಗೆ ಮಾರುಕಟ್ಟೆ, ಕಚ್ಚಾ ಪದಾರ್ಥ ಸೇರಿದಂತೆ ಇತರೆ ವಸ್ತುಗಳ ಪೂರೈಕೆಗೆ ಸುವ್ಯವಸ್ಥೆ, ಸರ್ಕಾರದಿಂದ ಸೀರೆ ಖರೀದಿಗೆ ತ್ವರಿತ ವ್ಯವಸ್ಥೆ ಕೈಗೊಳ್ಳುವ ಬಗ್ಗೆ.**

– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ಕೆ.ಪಿ.ಎಸ್.ಸಿ ಹೊರಡಿಸಿರುವ ಅಧಿಸೂಚನೆಯಲ್ಲಿ ಮೂಲ ವೃಂದ ಮತ್ತು ಕಲ್ಯಾಣ ಕರ್ನಾಟಕ ವೃಂದದ ಗ್ರೂಪ್ ಎ ಮತ್ತು ಬಿ ತಾಂತ್ರಿಕ ಹುದ್ದೆಗಳ ಭರ್ತಿಯಲ್ಲಿ ಕೋವಿಡ್ ಪರಿಣಾಮ ಆ ಭಾಗದ ಅಭ್ಯರ್ಥಿಗಳು ಪದವಿ ಪೂರೈಸಲು ಸಾಧ್ಯವಾಗದ ಹಿನ್ನಲೆಯಲ್ಲಿ ಸರ್ಕಾರ ಇವರಿಗೆ ನೆರವು ನೀಡುವ ಬಗ್ಗೆ.**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಸರ್ಕಾರಿ ಪದವಿ ಕಾಲೇಜಿನ ಅತಿಥಿ ಉಪನ್ಯಾಸಕರಿಗೆ ಗೌರವಧನ (ವೇತನ) ಪಾವತಿಯಾಗದ ಕಾರಣ ಆತ್ಮಹತ್ಯೆಗೆ ಶರಣಾಗುತ್ತಿರುವ ಬಗ್ಗೆ.**

- ಶ್ರೀ ಆಯನೂರು ಮಂಜುನಾಥ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಇ–ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಮತ್ತು ಸಂಸ್ಕರಣೆಗೆ ಸರಿಯಾದ ವ್ಯವಸ್ಥೆ ಇಲ್ಲದೇ ಪರಿಸರ, ಮಕ್ಕಳ ಹಾಗೂ ಹಿರಿಯ ನಾಗರೀಕರ ಆರೋಗ್ಯದ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳ ಬಗ್ಗೆ.**

- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**3. ಮುಖ್ಯಮಂತ್ರಿಗಳ ಹೇಳಿಕೆ**

**ಸರ್ಕಾರಿ ಪದವಿ ಕಾಲೇಜಿನ ಅತಿಥಿ ಉಪನ್ಯಾಸಕರಿಗೆ ಗೌರವಧನ (ವೇತನ) ಪಾವತಿಯಾಗದ ಕಾರಣ ಆತ್ಮಹತ್ಯೆಗೆ ಶರಣಾಗುತ್ತಿರುವ ಬಗ್ಗೆ.**

- ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)
- ಶ್ರೀ ಆಯನೂರು ಮಂಜುನಾಥ್

**4. ಸಭೆಯ ಮುಂದಿಡಲಾದ ಕಾಗದಪತ್ರಗಳು**

**5. ಕಾರ್ಯದರ್ಶಿಯವರ ವರದಿ**

**6. ವಿಶೇಷ ಸದನ ಸಮಿತಿಗಳ ಕಾಲಾವಕಾಶ ವಿಸ್ತರಣೆ**

(ಅ) ರಾಜ್ಯದಲ್ಲಿರುವ ಹಾಗೂ ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿ

(ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಸದನ ಸಮಿತಿ

**7. ವರದಿಗಳನ್ನೊಪ್ಪಿಸುವುದು**

**8. ಚುನಾವಣಾ ಪ್ರಸ್ತಾವಗಳು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**9. ವಿಧೇಯಕಗಳನ್ನು ಹಿಂದಕ್ಕೆ ಪಡೆಯುವುದು**

**(ಅ) ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ(ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2020**

ಶ್ರೀ ಸಿ.ಸಿ.ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು)

ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**(ವಿಧೇಯಕವನ್ನು ಹಿಂಪಡೆಯಲಾಯಿತು)**

**(ಆ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2020**

ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ)

**(ವಿಧೇಯಕವನ್ನು ಹಿಂಪಡೆಯಲಾಯಿತು)**

**10. ಪರ್ಯಾಲೋಚನೆಗಾಗಿ ಸಭೆಯ ಮುಂದಿಡಲಾದ ವಿಧೇಯಕಗಳು.**

**11. ಅರ್ಧಗಂಟೆ ಕಾಲಾವಧಿ ಚರ್ಚೆ**

**ಕೊರೋನಾ ಸಂಬಂಧವಾಗಿ ಖರೀದಿಸಲಾದ ವಿವಿಧ ಸಾಮಗ್ರಿಗಳ ಬಗ್ಗೆ.**

ಶ್ರೀ ಎಂ.ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು)

ಶ್ರೀ ಜಗದೀಶ್ ಶೆಟ್ಟರ್(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು)

ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಶ್ರೀ ಎಂ.ಕೆ.ಪ್ರಾಣೇಶ್

ಶ್ರೀ ಪಿ.ಆರ್.ರಮೇಶ್

**12. ಪ್ರಕಟಣೆ**

**13. ಕೊರೋನಾ ಸಂಬಂಧವಾಗಿ ಖರೀದಿಸಲಾದ ವಿವಿಧ ಸಾಮಗ್ರಿಗಳ ಬಗ್ಗೆ ನಡೆದ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಸರ್ಕಾರದ ಉತ್ತರ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
ಶ್ರೀ ಕೆ.ಎ.ತಿಪ್ಪೇಸ್ವಾಮಿ
ಡಾ॥ ತೇಜಸ್ವಿನಿಗೌಡ
ಶ್ರೀ ಪ್ರತಾಪ್‌ಸಿಂಹ ನಾಯಕ್.ಕೆ
ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ

<><><>

(752) 22.9.2020 10.50 ಪಿಕೆ:ಎಕೆ

**<u>ಕರ್ನಾಟಕ ವಿಧಾನ ಪರಿಷತ್ತು</u>**

**ಮಂಗಳವಾರ 22ನೇ ಸೆಪ್ಟೆಂಬರ್ 2020**

**ಸದನವು ವಿಧಾನಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಬೆಳಗ್ಗೆ 10 ಗಂಟೆ 50 ನಿಮಿಷಕ್ಕೆ
ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ)ಯವರು ಸಭಾಪೀಠದಲ್ಲಿ
ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಪ್ರಶ್ನೋತ್ತರಗಳನ್ನು ಬದಿಗೊತ್ತಿ ವಿಧೇಯಕಗಳ ಬಗ್ಗೆ ಚರ್ಚೆ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿರುವ ಹಿನ್ನೆಲೆಯಲ್ಲಿ, ಮೇಲ್ಮನೆಯಲ್ಲೂ ಪ್ರಶ್ನೋತ್ತರವನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಭಾಪತಿಯವರೇ, ಹೆಚ್ಚು ವಿಧೇಯಕಗಳು ಬಂದಿರುವುದರಿಂದ ಅವುಗಳ ಬಗ್ಗೆ ವಿಸ್ತೃತವಾದ ಚರ್ಚೆ ಆಗಬೇಕಾಗುತ್ತದೆ. ಆದ್ದರಿಂದ ಪ್ರಶ್ನೋತ್ತರವನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ ಎಂಬುದು ನಾನು ಭಾವಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಪ್ರಶ್ನೋತರ ಅವಧಿಯನ್ನು ಈಗಾಗಲೇ ಕಾರ್ಯಸೂಚಿಯಲ್ಲಿ ತರಲಾಗಿದೆ. ಕೆಳಮನೆಯಲ್ಲಿ ಏನು ಮಾಡುತ್ತಾರೋ ಅದನ್ನೇ ಮೇಲ್ಮನೆಯಲ್ಲಿ ಮಾಡಬೇಕು ಎಂದು ನಮ್ಮ ನಿಯಮಾವಳಿಗಳಲ್ಲಿ ಇಲ್ಲ. ಮಾನ್ಯ ಸದಸ್ಯರುಗಳಿಗೆ ಚುಕ್ಕೆ ಗುರುತಿನ ಪ್ರಶ್ನೆಗಳ ಮೂಲಕ ನೇರವಾಗಿ ತಮ್ಮ ಮತ ಕ್ಷೇತ್ರದ ವಿಚಾರಗಳನ್ನು ಪ್ರಶ್ನೆ ಮಾಡಿ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಇದೊಂದೇ ಅವಕಾಶ ಇರುತ್ತದೆ. ಪ್ರಶ್ನೋತ್ತರಕ್ಕೆ ಕೇವಲ 1 ಗಂಟೆ ಸಮಯ ಮಾತ್ರ ಇರುತ್ತದೆ. ಹಾಗಾಗಿ ಮಂಡಿಸುವುದು ಬೇಡ. ಮಾನ್ಯ ಸಭಾಪತಿಯವರೇ, ದಯವಿಟ್ಟು ತಾವು ಪ್ರಶ್ನೋತ್ತರವನ್ನು ಕೈಗೆತ್ತಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:-ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಒಂದು ಗಂಟೆಯ ಅವಧಿ ಒಳಗೆಯೇ ಮುಗಿಯುವಂತೆ ಸೀಮಿತಗೊಳಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು**:- ಎಲ್ಲಾ ಸದಸ್ಯರುಗಳ ಸಹಕಾರ ಇದ್ದರೆ ಹೀಗೆ ಮಾಡಬಹುದು. ಎಲ್ಲರೂ ಮಧ್ಯದಲ್ಲಿ ಎದ್ದು ನಿಂತು ಮಾತನಾಡಿದರೆ ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಯವರೇ, ನಾವು ಸಹಕಾರ ಕೊಡುತ್ತೇವೆ. ಮತ್ತೆ, ಹೀಗೆಯೇ ಸದನವನ್ನು ನಡೆಸಬೇಕೆಂದು ಪೀಠಕ್ಕೆ ಡಿಕ್ಟೇಟ್ ಮಾಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ಪ್ರಶ್ನೋತ್ತರವನ್ನು ಮಂಡಿಸುವುದಕ್ಕೆ ಅವಕಾಶ ಕೊಡದೇ, ಚುಕ್ಕೆ ಗುರುತಿನ 15 ಪ್ರಶ್ನೆಗಳ ಚರ್ಚೆಗೆ ಅವಕಾಶ ಕೊಡಬೇಕು. ನಾವೆಲ್ಲರೂ ಈ ನಿಟ್ಟಿನಲ್ಲಿ ಸಹಕಾರ ನೀಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ನಾನು ನಿಯಮ 59ರ ಅಡಿಯಲ್ಲಿ ಒಂದು ನಿಲುವಳಿ ಸೂಚನೆ ಕೊಟ್ಟಿದ್ದೇನೆ.

**ಸಭಾಪತಿಯವರು:-** ಪ್ರಶ್ನೋತ್ತರದ ನಂತರ ಅದನ್ನು ನೋಡೋಣ.

**01. <u>ಪ್ರಶ್ನೋತ್ತರಗಳು</u>**

**<u>ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು</u>**

**<u>ಪ್ರಶ್ನೆ ಸಂಖ್ಯೆ: 273</u>**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಉತ್ತರ ಸರಿಯಾಗಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರ ಏನಾದರೂ ಕ್ರಮಗಳನ್ನು ಕೈಗೊಂಡಿದೆಯೇ ಎನ್ನುವುದು ನನ್ನ ಮೊದಲನೆ ಪ್ರಶ್ನೆಯಾಗಿದೆ. ಇದಕ್ಕೆ, ಹೊಸ ಕೈಗಾರಿಕಾ ನೀತಿ 2020-25 ಜಾರಿಗೆ ತಂದಿದೆ. ಸದರಿ ನೀತಿಯಡಿ ಕೈಗಾರಿಕಾ ಸ್ಥಾಪನೆಗೆ ಈ ಕೆಳಕಂಡ ವಿವಿಧ ಪ್ರೋತ್ಸಾಹ ಮತ್ತು ರಿಯಾಯಿತಿ ನೀಡಲು ಅವಕಾಶ ಕಲ್ಪಿಸಿದೆ ಎಂದು ತಮ್ಮ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. 2020-25 ಅವಧಿಗೆ ಜಾರಿಗೆ ಬರುತ್ತದೆ ಎಂದು ಹೇಳಿದ್ದಾರೆ. ಆದರೆ ಇದುವರೆಗೂ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿತ್ತು, ಇದರಿಂದ ರಾಜ್ಯಕ್ಕೆ ಏನಾದರೂ ಅನುಕೂಲಗಳು ಆಗಿದೆಯೇ?

(ಮುಂದು . . .)

(753)22-9-2020 11.00 ಡಿಎಸ್-ಎಕೆ

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು):-**

ಇದರಿಂದ ಹೊರ ರಾಜ್ಯಗಳಿಂದ ಅಥವಾ ಹೊರ ದೇಶಗಳಿಂದ ಎಷ್ಟು ಬಂಡವಾಳ ಬಂದಿದೆ, ಎಷ್ಟು ಜನಕ್ಕೆ ಉದ್ಯೋಗ ಸೃಷ್ಟಿಯಾಗಿ ನಮ್ಮ ಕನ್ನಡಿಗರಿಗೆ ಉದ್ಯೋಗ ಸಿಕ್ಕಿದೆ ಎನ್ನುವುದು ನನ್ನ ಮುಖ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪ್ರಶ್ನೆಯಾಗಿದೆ. ಕ್ರಮ ಕೈಗೊಂಡಿದ್ದರೆ, ಇಲ್ಲಿಯವರೆಗೆ ಎಷ್ಟು ಹೊಸ ಕಾರ್ಖಾನೆಗಳು ಪ್ರಾರಂಭವಾಗಿವೆ ಅಥವಾ ಪ್ರಾರಂಭವಾಗುವ ಹಂತದಲ್ಲಿವೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಕಳೆದ 5 ವರ್ಷಗಳಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಯಿಂದ ಒಟ್ಟು 1226 ಯೋಜನೆಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಗಳಲ್ಲಿ ರೂ. 1,95,404 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, ಒಂದು ಕಡೆ ಈ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ ಎಂದು ಹೇಳುತ್ತಾರೆ, ಇಷ್ಟು ಬಂಡವಾಳ ಬರಬಹುದು ಎಂದು ಹೇಳುತ್ತಾರೆ. ಈ ಬಂಡವಾಳ ಬಂದರೆ 8,68,569 ಜನರಿಗೆ ಉದ್ಯೋಗವಕಾಶ ದೊರಕಲಿದೆ. ಅಂದರೆ ಇದುವರೆವಿಗೂ ಬಂಡವಾಳ ಬಂದಿಲ್ಲ. ಉದ್ಯೋಗಗಳು ಸೃಷ್ಟಿಯಾಗಿಲ್ಲ. ಇವತ್ತು ಈ ಕೊರೊನಾ ಎನ್ನತಕ್ಕಂಥ ಮಾರಕ ರೋಗ ಬಂದು ಯಾರ್ಯಾರೂ ಉದ್ಯೋಗದಲ್ಲಿದ್ದರೋ ಅವರು ಕೂಡ ಉದ್ಯೋಗವನ್ನು ಕಳೆದುಕೊಂಡಿದ್ದಾರೆ. ಇನ್ನು ಹೊಸ ಉದ್ಯೋಗ ಬರುವುದಕ್ಕೆ ಎಲ್ಲಿಂದ ಸಾಧ್ಯವಿದೆ? ಜೊತೆಗೆ ಕೊನೆಯಲ್ಲಿ ಕೈಗಾರಿಕಾ ಉದ್ದೇಶಕ್ಕೆ ಭೂ ಪರಿವರ್ತನೆಗೆ ಕೋರಿ ಸಲ್ಲಿಕೆಯಾದ ಅರ್ಜಿಗಳನ್ನು ಏಕಗವಾಕ್ಷಿ ಅನುಮೋದನಾ ಸಮಿತಿಯ ಒಪ್ಪಿಗೆಗೆ ಹಲವಾರು ತೊಡಕುಗಳು ಎದುರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರ ಹೇಳುತ್ತಾರೆ. ಜೊತೆಗೆ ಸುಧಾರಣೆಯನ್ನು ತರುವುದಕ್ಕೆ ಕೈಗಾರಿಕೆಗಳನ್ನು ಶೀಘ್ರವಾಗಿ ಸ್ಥಾಪಿಸುವ ಉದ್ದೇಶ ಮತ್ತು ಸರಳೀಕರಣ ಮಾಡುವ ಸಲುವಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 109ಕ್ಕೆ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 08 ಶಾಸನ 2020 ದಿನಾಂಕ:27.04.2020 ರಲ್ಲಿ ತಿದ್ದುಪಡಿಯನ್ನು ತರಲಾಗಿದೆ. ಅದರ ಮುಂದುವರೆದು ಭಾಗವಾಗಿ, ಕಲಂ 63, 79ಎ, 79ಬಿ ಹಾಗೂ 80 ರಿಂದ ವಿನಾಯಿತಿ ನೀಡಲಾಗಿದೆ. ಮಾನ್ಯ ಸಚಿವರಿಗೆ ನನ್ನ ಕಳಕಳಿ ಏನೆಂದರೆ, ಇವತ್ತು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಎಂದು ಬರುತ್ತಾರೆ, ಕೃಷಿ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಕೃಷಿಕರಿಂದ ನೇರವಾಗಿ ಮಾರಾಟವಾಗಬಾರದು, ಕೈಗಾರಿಕೋದ್ಯಮಿಗಳು, ಶ್ರೀಮಂತರು, ಬಿಸಿನೆಸ್ ಮ್ಯಾನ್‌ಗಳು ಬಂದು ನೇರವಾಗಿ ಜಮೀನನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ರೈತರು ಬೀದಿಪಾಲಾಗುತ್ತಾರೆ. ಅದಕ್ಕೆ ಕಡಿವಾಣ ಇರಲೆಂದು ಈ ಕಲಂ 79ಎ, 79ಬಿ ಇರತಕ್ಕಂಥದ್ದು. ಅಂಥವುಗಳನ್ನು ಅವರು ತೆಗೆದುಬಿಟ್ಟು ಎಲ್ಲಿಂದರಲ್ಲೇ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟರೆ ರೈತರ ಬೆನ್ನಿಗೆ ಹೊಡೆಯುವಂತಹ ಕೆಲಸವಾಗುತ್ತದೆ. ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕೆಂದರೆ ಎಲ್ಲಿ ಬಯಲು ಸೀಮೆ ಇದೆ, ಎಲ್ಲಿ ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಅಂತಹ ಜಮೀನುಗಳನ್ನು ಗುರುತಿಸಿ ಅವರಿಗೆ ಅವಕಾಶ ಮಾಡಿಕೊಡಬೇಕು. ಇಷ್ಟು ಕೋಟಿ ಅನುದಾನ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತದೆಂದು ಉತ್ತರದಲ್ಲಿ ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಆದರೆ ವಾಸ್ತವಾಂಶ ಅದಲ್ಲ. ನಾನು ಇವತ್ತು ಮಾನ್ಯ ಸಚಿವರಿಗೆ ದೂಷಣೆ ಮಾಡುತ್ತಿಲ್ಲ. ನಮ್ಮ ರಾಜ್ಯದ ಪರಿಸ್ಥಿತಿ ಏನಾಗಿದೆ ಎಂದು ಹೇಳಬಯಸುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಒಂದೊಂದೇ ಉಪ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆಯಲ್ಲಿ ಈ ರೀತಿ ಮಾತನಾಡಿದರೆ ಕಷ್ಟವಾಗುತ್ತದೆ.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳುತ್ತಿದ್ದಾರೆಯೋ ಅಥವಾ ಚರ್ಚೆ ಮಾಡುತ್ತಿದ್ದಾರೆಯೋ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗೇನು ನಾನು ಪ್ರಶ್ನೆ ಕೇಳಿದ್ದೇನೆ, ಅದನ್ನು ಬಿಟ್ಟು ಒಂದು ಪದವು ನಾನು ಹೊರಗಡೆ ಹೋಗಿಲ್ಲ. ಮಾನ್ಯ ಸಚಿವರು ಒಂದೊಂದೇ ಪ್ರಶ್ನೆ ಕೇಳಿ ಎಂದು ಹೇಳಲಿ, ನಾನು ಒಂದೊಂದೇ ಪ್ರಶ್ನೆ ಕೇಳುತ್ತೇನೆ. ಪ್ರಶ್ನೋತ್ತರವನ್ನು ಒಂದು ಗಂಟೆಯಲ್ಲಿ ಮುಗಿಸಬೇಕೆಂದು ಹೇಳುತ್ತಿದ್ದೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಚರ್ಚೆ ರೂಪದಲ್ಲಾದರೆ ಆ ಪ್ರಶ್ನೆಗೆ ಕಾಲಮಿತಿ ಇರುವುದಿಲ್ಲ. ದಯವಿಟ್ಟು ಅವರು ಪ್ರಶ್ನೆಯನ್ನು ಕೇಳಲಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ಸಮಂಜಸವಾಗಿಲ್ಲ. ಕೈಗಾರಿಕಾ ಬೆಳವಣಿಗೆಯ ಬಗ್ಗೆ ನಾವು ಹೇಳಿರುವುದಲ್ಲ, ಕೇಂದ್ರದ ಹಣಕಾಸು ಮಂತ್ರಿಗಳಾದ ಶ್ರೀಮತಿ ನಿರ್ಮಲ ಸೀತರಾಮನ್‌ರವರು ಕರ್ನಾಟಕದಲ್ಲಿ ಕೈಗಾರಿಕಾ ಬೆಳವಣಿಗೆಯಲ್ಲಿ ಕುಸಿದಿದೆ ಎಂದು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಶ್ರೀಮತಿ ನಿರ್ಮಲ ಸೀತರಾಮನ್‌ರವರು ಹೇಳಿರುವುದನ್ನು ಚರ್ಚೆ ಮಾಡೋಣ. ಆದರೆ ಅದನ್ನು ಈ ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆ ಮಾಡುತ್ತಾರೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಯಲ್ಲಿ ಇಷ್ಟು ಕೋಟಿ ಬಂಡವಾಳ ಬರುತ್ತಿದೆ, ಇಷ್ಟು ಜನಕ್ಕೆ ಉದ್ಯೋಗಾವಕಾಶ ಕಲ್ಪಿಸಿಕೊಡುತ್ತಿದ್ದೇವೆಂದು ಹೇಳಿದ್ದಾರಲ್ಲಾ ಅದು ಸುಳ್ಳು ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಸುಳ್ಳು ಎನ್ನುವಂತಹ ಶಬ್ಧವನ್ನು ಚರ್ಚೆಯಲ್ಲಿ ತೆಗೆದುಕೊಳ್ಳಬೇಕೇ ಹೊರತು ಪ್ರಶ್ನೋತ್ತರ ವೇಳೆಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನೇನು ಪ್ರಶ್ನೆ ಕೇಳಿದ್ದೇನೆ ಅಷ್ಟನ್ನು ಮಾತ್ರ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಈಗ ಮಾನ್ಯ ಸಚಿವರು ಉತ್ತರ ಕೊಡಲಿ. ಆಮೇಲೆ ನಾನು ಮಾತನಾಡುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ನಾರಾಯಣಸ್ವಾಮಿಯವರು ಏನು ಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ನಾನು ವಿವರವಾದ ಉತ್ತರ ಕೊಟ್ಟಿದ್ದೇನೆ ಮತ್ತು ಹಲವಾರು ವಿಚಾರಗಳನ್ನು ಉಪ ಪ್ರಶ್ನೆ ಕೇಳುವಂತಹ ಸಂದರ್ಭದಲ್ಲಿ ಸಬ್‌ಮಿಟ್ ಮಾಡಿದ್ದಾರೆ. ಮೊದಲನೆಯದಾಗಿ, ಈಗ 2020-2025 ರಲ್ಲಿ ಹೊಸದಾಗಿ ಕೈಗಾರಿಕಾ ನೀತಿ ಬಂದಿದೆ. ಆ ಒಂದು ಕೈಗಾರಿಕಾ ನೀತಿಯಲ್ಲಿ ಯಾವ ರೀತಿ ಇವತ್ತು ಕೈಗಾರಿಕೆಗಳು ಸ್ಥಾಪನೆಯಾಗುವುದಕ್ಕೆ ಏನೇನು ಪ್ರೋತ್ಸಾಹ ಮತ್ತು ರಿಯಾಯಿತಿ ಕೊಡಬೇಕೆಂದು ನಾನು ವಿವರವಾಗಿ ಉತ್ತರದಲ್ಲಿ ಕೊಟ್ಟಿದ್ದೇನೆ. MSME (Micro, Small and Medium Enterprises) ಘಟಕಗಳಿಗೆ ಯಾವ ರೀತಿ ಪ್ರೋತ್ಸಾಹ ಕೊಡಬೇಕೆನ್ನುವುದನ್ನು ನಾನು ಹೇಳಿದ್ದೇನೆ. ಬೃಹತ್ ಮತ್ತು ಮೆಗಾ ಕೈಗಾರಿಕೆಗಳಿಗೆ ಯಾವ ರೀತಿ ವಿನಾಯಿತಿಗಳನ್ನು ಕೊಡಲಾಗಿದೆ ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ವಿವಿಧ ವಲಯಗಳ ಕೈಗಾರಿಕಾಭಿವೃದ್ಧಿಗೆ ಕರ್ನಾಟಕ ಏರೊಸ್ಪೇಸ್ ನೀತಿ ಇರಬಹುದು, ಕರ್ನಾಟಕ ಎಲೆಕ್ಟ್ರಿಕಲ್ ವೆಹಿಕಲ್ಸ್ ಮತ್ತು ಸ್ಟೋರೇಜ್ ನೀತಿ ಇರಬಹುದು ಮತ್ತು ಕರ್ನಾಟಕ ಕೃಷಿ ವಾಣಿಜ್ಯ ಮತ್ತು ಆಹಾರ ಸಂಸ್ಕರಣಾ ನೀತಿ ಇರಬಹುದು, ಈ ರೀತಿ ಒಂದೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಇವತ್ತು ಇಡೀ ದೇಶದಲ್ಲಿ ಯಾವುದಾದರೂ ರಾಜ್ಯದಲ್ಲಿ ಒಂದು ನೀತಿ ಎಂದು ಮಾಡಿದ್ದರೆ ಬಹುಶಃ ಕರ್ನಾಟಕ ರಾಜ್ಯದಲ್ಲಿ ಮೊಟ್ಟ ಮೊದಲು ಎನ್ನುವ ಮಾತನ್ನು ಹೇಳಬಯಸುತ್ತಿದ್ದೇನೆ. 2000-2004ರ ತದನಂತರ ಯಾವುದೇ ಸರ್ಕಾರಗಳಿರಬಹುದು, ಒಂದು ಕೈಗಾರಿಕಾ ನೀತಿ ಎಂದು ಮಾಡಿರುವುದು ನಮ್ಮ ಕರ್ನಾಟಕದಲ್ಲೇ ಮೊದಲು. ಐಟಿ-ಬಿಟಿ ಗೆ ಒಂದು ನೀತಿ ಮಾಡಿರುವುದು ಕರ್ನಾಟಕದಲ್ಲಿ. ಇದನ್ನೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇರೆ ಬೇರೆ ರಾಜ್ಯಗಳು ಅನುಕರಣೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ರಾಜ್ಯದಲ್ಲಿ ಯಾರಾದರೂ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬರುತ್ತಾರೆ ಅವರಿಗೆಲ್ಲಾ ನಾವು ವಿವರಣೆ ಕೊಡುವುದಕ್ಕಿಂತ ಮುಂಚೆ ಕೈಗಾರಿಕಾ ನೀತಿಯನ್ನು ಹಿಡಿದುಕೊಂಡರೆ ಅವರಿಗೆ ಅರ್ಥವಾಗುತ್ತದೆ. ಕರ್ನಾಟಕದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಬಂಡವಾಳವನ್ನು ಹೂಡಿದರೆ ಯಾವ್ಯಾವ ಸಾಲಗಳು ಸಿಗುತ್ತವೆ ಎಂಬುದರ ಬಗ್ಗೆ ಸಾಕಷ್ಟು ಮಾಹಿತಿಗಳು ಅದರಲ್ಲಿರುತ್ತವೆ. ಈಗಾಗಲೇ ಕೈಗಾರಿಕಾ ನೀತಿಯಲ್ಲಿ ಸೌಲಭ್ಯಗಳು, ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಈಗ ಸಾಕಷ್ಟು ಕೈಗಾರಿಕೆಗಳು ಬಂಡವಾಳ ಹೂಡಿರುವುದನ್ನು ನಾವು ನೋಡಿದ್ದೇವೆ. ಕಳೆದ ಐದು ವರ್ಷಗಳಲ್ಲಿ ಇಲ್ಲಿಯವರೆಗೆ ಎಷ್ಟು ಪ್ರಾರಂಭವಾಗಿವೆ ಅಥವಾ ಪ್ರಾರಂಭವಾಗುವ ಹಂತದಲ್ಲಿವೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ಕಳೆದ 5 ವರ್ಷಗಳಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಯಿಂದ ಒಟ್ಟು 1226 ಯೋಜನೆಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಗಳಲ್ಲಿ ರೂ. 1,95,404 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 8,68,569 ಜನರಿಗೆ ಉದ್ಯೋಗಾವಕಾಶ ದೊರಕಲಿದೆ. ಈ ಯೋಜನೆಗಳಿಗೆ 29,398 ಎಕರೆ ಜಮೀನು ಅವಶ್ಯಕತೆ ಇರುತ್ತದೆ. ಇವುಗಳಲ್ಲಿ 273 ಯೋಜನೆಗಳು ಕಾರ್ಯಾರಂಭ ಮಾಡಿರುತ್ತದೆ. ಇವುಗಳಿಂದ ರೂ.28,989 ಕೋಟಿ ಬಂಡವಾಳ ಹೂಡಿಕೆಯಾಗಿದ್ದು, 1,56,497 ಜನರಿಗೆ ಉದ್ಯೋಗ ದೊರಕಿರುತ್ತದೆ. ಉಳಿದ ಯೋಜನೆಗಳು ಅನುಷ್ಠಾನದ ವಿವಿಧ ಹಂತಗಳಲ್ಲಿ ಇರುತ್ತದೆ. ಎಷ್ಟು ಪ್ರಪೋಸಲ್‌ಗಳು ಬಂದವು, ನಾವು ಎಷ್ಟು ಅಪ್ರೂವಲ್‌ಗಾಗಿ ಕೊಟ್ಟಿದ್ದೇವೆ, ಅವರು ಬಂಡವಾಳ ಹೂಡಿಕೆ ಎಷ್ಟು ಮಾಡುತ್ತಾರೆಂಬುದು ಮತ್ತು ಎಷ್ಟು ಉದ್ಯೋಗಗಳು ಸಿಗಬಹುದೆಂದು ಒಂದು ಕಡೆ ಹೇಳಿ, ಈಗಾಗಲೇ ಎಷ್ಟು ಕಾರ್ಯಾರಂಭ ಮಾಡಿದ್ದೇವೆನ್ನುವುದನ್ನು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಕೆಲವೊಂದು ಅನುಷ್ಠಾನದ ಹಂತದಲ್ಲಿರುತ್ತವೆ. ಆ ಹಿನ್ನೆಲೆಯಲ್ಲಿ ಕಳೆದ 5 ವರ್ಷದ ವರದಿಯನ್ನು ನಾನು ಸಬ್‌ಮಿಟ್ ಮಾಡಿದ್ದೇನೆ. ನೂತನವಾಗಿ ಕಾರ್ಖಾನೆಗಳನ್ನು ಸ್ಥಾಪಿಸುವ ಸಲುವಾಗಿ ಎಷ್ಟು ಹೆಕ್ಟೇರ್ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಯ ಉದ್ದೇಶಕ್ಕೆ ಭೂ ಪರಿವರ್ತಿಸಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಅನುಮೋದಿಸಿದ ಯೋಜನೆಗಳಲ್ಲಿ 299 ಯೋಜನೆಗಳಿಗೆ ಕೆಐಎಲ್‌ಆರ್ ಕಾಯ್ದೆ/ಸ್ವಂತ ಜಮೀನು/ಲೀಸ್ ಆಧಾರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದ್ದು, ಅವುಗಳಿಗೆ 19,017 ಎಕರೆ ಭೂಮಿ ಖರೀದಿ/ಭೂ ಪರಿವರ್ತನೆ ಮಾಡಲು ಅನುಮೋದನೆ ನೀಡಲಾಗಿದೆ. ಇದರ ಬಗ್ಗೆಯೂ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಮಾನ್ಯ ಸದಸ್ಯರು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಈಗೇನು Land Reforms Act

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿದ್ದುಪಡಿಯಾಗಿರುವುದರಿಂದ ಕಲಂ 79ಎ, 79ಬಿ ತೆಗೆದು ಹಾಕಿರುವುದರಿಂದ ಬಹಳಷ್ಟು ತೊಂದರೆಯಾಗುತ್ತಿದೆ.

(ಮುಂದು)

**(754) 11.10 22.09.2020 ಎಸ್‌ವಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜಗದೀಶ್ ಶೆಟ್ಟರ್ (ಮುಂದು):-** ಮತ್ತೊಂದು ಅಂಶವೆಂದರೆ ಕೃಷಿ ಭೂಮಿಯು ಕೈಗಾರಿಕೆಗಳಿಗೆ ಹೋಗುತ್ತದೆ ಎನ್ನುವುದು.

**ಶ್ರೀ ಎಸ್.ಆರ್.ಪಾಟೀಲ್:-** ಇನ್ನೂ ratification ಆಗಬೇಕಲ್ಲವೇ?

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಅದು ordinance ಆಗಿದೆ. ಸದನದಲ್ಲಿ ಆ ಬಿಲ್ ಅನ್ನು ತರುತ್ತಿದ್ದೇವೆ. ವಿಧಾನಸಭೆಯಲ್ಲಿ ಹಾಗೂ ವಿಧಾನ ಪರಿಷತ್ತಿನಲ್ಲಿ ಆ ಬಿಲ್ ಅನ್ನು ಆದಷ್ಟು ಬೇಗನೆ ಮಂಡನೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರ ಪ್ರಕಾರ 79 (ಎ) ಮತ್ತು (ಬಿ) ತೆಗೆದಿರುವುದರಿಂದ ನಡೆದಿರುವ ಚರ್ಚೆಯನ್ನು ಬಿಲ್ ತಂದ ಸಂದರ್ಭದಲ್ಲಿ ಸುದೀರ್ಘವಾಗಿ ಚರ್ಚೆ ಮಾಡೋಣ. ಒಂದು ವಿಷಯವನ್ನು ನಾನು ಸ್ಪಷ್ಟಪಡಿಸುತ್ತೇನೆ. ಕೈಗಾರಿಕೆಗಳಿಗಾಗಿ ಸಾಕಷ್ಟು ಕೃಷಿ ಭೂಮಿಯನ್ನು ತೆಗೆದುಕೊಂಡಿದ್ದಾರೆ ಎನ್ನುವ ಊಹಾಪೋಹವು ಸರಿಯಾದುದಲ್ಲ. ಕೆ.ಐ.ಎ.ಡಿ.ಬಿ. ಸಂಸ್ಥೆಯು 1966ರಲ್ಲಿ ಸ್ಥಾಪನೆಯಾಗಿದ್ದು...

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಬಸವರಾಜ ಇಟಗಿಯವರದ್ದು. ಮಾನ್ಯ ನಾರಾಯಣಸ್ವಾಮಿಯವರೇ, ನಿಮ್ಮೊಬ್ಬರಿಂದ ಪ್ರಶ್ನೋತ್ತರ ವೇಳೆಯೇ ಮುಕ್ತಾಯಗೊಳ್ಳುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಚಿವರೇ, ಕೃಷಿ ಜಮೀನನ್ನು ಯಾವುದೇ ಕೈಗಾರಿಕೆಗಾಗಿ ತೆಗೆದುಕೊಂಡಿಲ್ಲ ಎನ್ನುವಂತಹ ಮಾತನ್ನು ಹೇಳಿದಿರಿ. ಉದಾಹರಣೆಗೆ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ನರಸಾಪುರ ಎಂಬಲ್ಲಿ ಕೈಗಾರಿಕಾ ಪ್ರದೇಶವನ್ನು ಮಾಡಲಾಗಿದ್ದು, ಅದಕ್ಕೆ ಸಂಪೂರ್ಣವಾಗಿ ಕೃಷಿ ಜಮೀನನ್ನು ತೆಗೆದುಕೊಳ್ಳಲಾಗಿದೆ. ತಾವು ಹೇಳಿರುವ Single Window Clearance ಅನ್ನು ಸರಿಯಾದ ರೀತಿಯಲ್ಲಿ ಮಾಡದೆ ಇರುವುದರಿಂದ ನಮ್ಮ ರಾಜ್ಯಕ್ಕೆ ಬರುತ್ತಿದ್ದಂತಹ automobile industries ಅವಕಾಶಗಳು ಪಕ್ಕದ ತಮಿಳುನಾಡು ಮತ್ತು ಆಂಧ್ರಪ್ರದೇಶಗಳಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುತ್ತಿವೆ. ಇದರ ಬಗ್ಗೆ ಸ್ವಲ್ಪ ಗಮನ ಹರಿಸಿ Single Window Clearance ಯಲ್ಲಿ ಯಾರು ಅರ್ಜಿಯನ್ನು ಹಾಕುವರೋ ಆದಷ್ಟು ಕೂಡಲೇ ಅದನ್ನು ವ್ಯವಸ್ಥೆ ಮಾಡಬೇಕು.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ನಾರಾಯಣಸ್ವಾಮಿಯವರು ಒಳ್ಳೆಯ ಸಲಹೆಯನ್ನು ನೀಡಿದ್ದಾರೆ. ಅದನ್ನು ಗಂಭೀರವಾಗಿ ತೆಗೆದುಕೊಂಡು ಅನುಷ್ಠಾನ ಮಾಡಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:05**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ರಾಯಚೂರು ನಗರದಲ್ಲಿ ಸುಮಾರು 2015ನೇ ಸಾಲಿನಿಂದ ರೂ.380 ಕೋಟಿಗಳ ವಿವಿಧ ಕಾಮಗಾರಿಗಳು North Karnataka Urban Infrastructure Development Corporation ನಿಂದ ರೂ.117 ಕೋಟಿ, KUWSSB ರೂ.68 ಕೋಟಿ, AMRUT-I ನಿಂದ ರೂ.102 ಕೋಟಿ, AMRUT-II ನಿಂದ ರೂ.98 ಕೋಟಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಮಾನ್ಯ ನಗರಾಭಿವೃದ್ಧಿ ಸಚಿವರು ರಾಯಚೂರಿಗೆ ಬಂದಿದ್ದರು. 2016ರಿಂದ 2020ರವರೆಗೆ ಯಾವ ನಗರಾಭಿವೃದ್ಧಿ ಸಚಿವರೂ ರಾಯಚೂರಿಗೆ ಭೇಟಿ ನೀಡಲಿಲ್ಲ. ಈಗ ಮಾನ್ಯ ಸಚಿವರು ಕ್ವಾರೆಂಟೈನ್‌ನಲ್ಲಿದ್ದಾರೆ.

ಈ ಪ್ರಶ್ನೆಯನ್ನು ಏಕೆ ಕೇಳುತ್ತಿದ್ದೇನೆಂದರೆ ಪ್ರತಿನಿತ್ಯ ಎಂದಲ್ಲಾ ಒಂದು ಓಣಿಯಲ್ಲಿ ಅಗೆಯುತ್ತಾರೆ. ಅದನ್ನು ಮುಚ್ಚುವುದಿಲ್ಲ. 250 ಕಿ.ಮೀ. ಯುಜಿಡಿಯಲ್ಲಿ ಕೇವಲ 68 ಕಿ.ಮೀ. ಯುಜಿಡಿ ಮಾತ್ರ ಪ್ರಾರಂಭಿಸಲಾಗಿದೆ. ಯಾವುದೇ ನಗರದಲ್ಲಿ ಯುಜಿಡಿ ಮತ್ತು ನೀರು ಸರಬರಾಜು ಮಾಡಬೇಕೆಂದರೆ ಸಮಗ್ರವಾಗಿ ಒಂದೇ ಸಲ ಪ್ಯಾಕೇಜ್ ಅನ್ನು ತೆಗೆದುಕೊಳ್ಳಬೇಕು. ಯು.ಜಿ.ಡಿ. ಬೇರೆ, ಪೈಪ್‌ಲೈನ್ ಬೇರೆ, ಅಗೆಯುವುದೇ ಬೇರೆ. ರಸ್ತೆಯನ್ನು ತೋಡಿದ ಮೇಲೆ ಪುನಃ ಅದನ್ನು reconstruction ಮಾಡಬೇಕು. ನಗರಸಭೆಯವರು ಒಂದು ರಸ್ತೆಯನ್ನು ಮಾಡಿರುತ್ತಾರೆ. ಮರುದಿನ ಯುಜಿಡಿಯವರು ಹೋಗಿ ಅಲ್ಲಿ ತೋಡಿ ಹಾಗೆಯೇ ಬಿಟ್ಟುಬಿಡುತ್ತಾರೆ. ಪುನಃ ನಗರಸಭೆಯವರು ಆ ರಸ್ತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕೆಂದರೆ ಮತ್ತೆ ಮೂರು ವರ್ಷಗಳು ಬೇಕು. ರಾಯಚೂರಿನ ಪ್ರತಿ ವಾರ್ಡ್‌ನ ಪ್ರತಿ ಓಣಿಯಲ್ಲಿ ಜನರು ತಿರುಗಾಡಲು ಆಗುತ್ತಿಲ್ಲ. ಕಾಮಗಾರಿಯ ಗುತ್ತಿಗೆದಾರರು ಅವರ ಮನಸ್ಸಿಗೆ ಬಂದಂತೆ ಕೆಲಸ ಮಾಡುತ್ತಾರೆ. ಯಾವ ಮಂತ್ರಿಯೂ ಕೇಳುವ ಹಾಗಿಲ್ಲ. ಅವರು ದೆಹಲಿ ಮೂಲದವರು. ಇಂತಹ ದೊಡ್ಡ ಸಮಸ್ಯೆಯಿದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಸಮಸ್ಯೆಯನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದ ಮೇಲೆ ಕಾಮಗಾರಿಯು ಏಕೆ ವಿಳಂಬವಾಯಿತು ಎಂದು ದಿನಾಂಕ 11.09.2020ರಂದು ಸಂಬಂಧಪಟ್ಟ ಸಚಿವರು ಭೇಟಿ ನೀಡಿ, ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿಕಾರಿಗಳೊಂದಿಗೆ ಕೂಲಂಕಷವಾಗಿ ತನಿಖೆಯನ್ನು ಮಾಡಿದ್ದಾರೆ. ಮೂರು ವರ್ಷಗಳ ವಿಳಂಬ ಏಕೆ ಆಗಿದೆ ಎಂದು ಚರ್ಚೆ ಮಾಡಿ ಅಂತಿಮವಾಗಿ ದಿನಾಂಕ 28.02.2021ರೊಳಗೆ 24x7 ನೀರಿನ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಆದೇಶವನ್ನು ನೀಡಿದ್ದಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಈಗ ರಾಯಚೂರಿನಲ್ಲಿ 250 ಕಿ.ಮೀ. ಯುಜಿಡಿ ಇದೆ. ಈಗ ಕೇವಲ 68 ಕಿ.ಮೀ. ತೆಗೆದುಕೊಳ್ಳಲಾಗಿದೆ. ಉಳಿಕೆಯದ್ದು ಯಾರು ಮಾಡುತ್ತಾರೆ? ಅದನ್ನು ಮಾಡದೆ ಹೋದರೆ ಉಪಯೋಗವೇನು?

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಇಟಗಿಯವರೇ, ಮಾನ್ಯ ಸಚಿವರು ಎಲ್ಲವನ್ನೂ ತಮ್ಮೆದುರಿನಲ್ಲಿಯೇ ಚರ್ಚೆ ಮಾಡಿದ್ದಾರಲ್ಲವೆ?

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಚಿವರೇ, ನಮ್ಮನ್ನು ಕರೆದಿರಲಿಲ್ಲ. ನಿನ್ನೆಯೂ ಇದೊಂದು ಪ್ರಶ್ನೆ ಉದ್ಭವವಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ನೀಡುವ ಸಂದರ್ಭದಲ್ಲಿ ಉಪವಿಭಾಗಾಧಿಕಾರಿಗಳು ಎಲ್ಲಾ ಜನಪ್ರತಿನಿಧಿಗಳು ಬರಬೇಕೆಂದು ಹೇಳುತ್ತಾರೆ. ಬೇರೆ ಯಾವ ಮಂತ್ರಿಗಳು ಬಂದರೂ ನಿಮ್ಮ ಮಾಹಿತಿಗಾಗಿ ಎಂದಷ್ಟೇ ಹೇಳುತ್ತಾರೆ. ಮಾಹಿತಿ ಎಂದ ಮೇಲೆ ನಾವು ಸುಮ್ಮನೆ ಬಾಗಿಲಿನಲ್ಲಿ ನಿಲ್ಲುವುದೇ? ಮಾನ್ಯ ಲಕ್ಷ್ಮಣ ಸವದಿಯವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದು, ಅವರು ಬಂದ ಸಂದರ್ಭದಲ್ಲಿ ಎಲ್ಲಾ ಜನಪ್ರತಿನಿಧಿಗಳಿಗೂ ಬರುವುದಕ್ಕೆ ಹೇಳುತ್ತಾರೆ. ಮಾನ್ಯ ಸಿ.ಸಿ.ಪಾಟೀಲ್ ಅವರು ಬಂದಿದ್ದರು. ನಮಗೆ ಕೇವಲ ಮಾಹಿತಿಯಷ್ಟೇ ಬಂದಿತ್ತು.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರು ಬಂದ ಕೂಡಲೇ ಇವರೊಂದಿಗೆ ಸಭೆ ಮಾಡಿಸಿ, ಅವರ ಸಮಸ್ಯೆಗಳ ಕುರಿತು ಖುದ್ದಾಗಿ ಚರ್ಚೆ ಮಾಡಿಸುವಂತಹ ಕೆಲಸ ಮಾಡುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಚಿವರೇ, ಸಚಿವರ ಭೇಟಿಗಳ ಸಂದರ್ಭದಲ್ಲಿ ತಮ್ಮ ಪಕ್ಷದವರನ್ನು ಕರೆದು ಮಾತನಾಡಿ ಹೊರಟು ಹೋಗುತ್ತಾರೆ. ನಾವು ಯಾರನ್ನು ಕೇಳಬೇಕು?

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಇಟಗಿಯವರೇ, ನಿಮ್ಮ ಜೊತೆಯಲ್ಲಿಯೇ ಚರ್ಚೆ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಲಕ್ಷ್ಮಣ ಸವದಿಯವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದು, ಅವರಲ್ಲಿ ನಾನು ವಿನಂತಿ ಮಾಡುತ್ತೇನೆ. ನನಗೊಬ್ಬನಿಗೇ ಅಲ್ಲ. ಯಾರೇ ಮಂತ್ರಿಗಳು ಭೇಟಿ ನೀಡಿದಾಗಲೂ ಕೇವಲ ಮಾಹಿತಿಗಾಗಿ ಎಂದಷ್ಟೇ ಹೇಳಲಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:266**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಬಹಳ ವಿವರವಾಗಿ ನೀಡಿದ್ದಾರೆ. ಡಾ:ನಂಜುಂಡಪ್ಪ ವರದಿಯ ಪ್ರಕಾರ ಕೋಲಾರ ಜಿಲ್ಲೆಯ ಆರು ತಾಲ್ಲೂಕುಗಳು ಅತ್ಯಂತ ಹಿಂದುಳಿದ, ಬರಪೀಡಿತ ಮತ್ತು ನೀರಿಲ್ಲದೆ ಇರುವ ತಾಲ್ಲೂಕುಗಳಾಗಿವೆ. ಆ ಜಿಲ್ಲೆಯಲ್ಲಿ ಸುಮಾರು 3116 ಎಕರೆ ಕೈಗಾರಿಕಾ ವಸಾಹತು ಸ್ಥಾಪನೆ ಮಾಡಿರುವುದು ನಮಗೆ ಬಹಳ ಸಂತಸ ತಂದಿದೆ. ಸುಮಾರು 14,000 ಜನರಿಗೆ ಉದ್ಯೋಗವನ್ನು ನೀಡಲಾಗಿದೆ. ನನ್ನದೊಂದು ನೇರವಾದ ಪ್ರಶ್ನೆ. ಈಗ ಹೊಸದಾಗಿ ಕೈಗಾರಿಕಾ ವಸಾಹತನ್ನು ಕೋಲಾರ ಮತ್ತು ಮಾಲೂರಿನಲ್ಲಿ ಮಾಡಲಾಗುವುದು ಎಂದು ಮಂತ್ರಿಗಳು ಹೇಳಿದ್ದಾರೆ. ಇದಕ್ಕೆ ಪೂರಕವಾಗಿ ಶ್ರೀನಿವಾಸಪುರದಲ್ಲಿ ಏನಾದರೊಂದು ವಸಾಹತನ್ನು ಮಾಡಲು ಸಾಧ್ಯವಿದೆಯೇ? ಎರಡನೆಯದಾಗಿ ಕೆ.ಜಿ.ಎಫ್.ನಲ್ಲಿ ವಾಸ ಮಾಡುವ ಜನರಲ್ಲಿ ಶೇ.90 ಮಂದಿ ಬಡವರು. ಶೇ.80 ಮಂದಿ ಕೂಲಿ ಕಾರ್ಮಿಕರಿದ್ದಾರೆ. ಬೆಂಗಳೂರಿಗೆ ಬರುವ ರೈಲು ಒಂದು ದಿನ ನಿಂತು ಹೋದರೆ 15,000 ಜನಕ್ಕೆ ಉದ್ಯೋಗವಿರುವುದಿಲ್ಲ. ಮಾನ್ಯ ಮಂತ್ರಿಗಳು ಒಂದು ಒಳ್ಳೆಯ ಹೆಜ್ಜೆಯನ್ನು ಮುಂದಿಟ್ಟಿದ್ದಾರೆ. ಬಿ.ಜಿ.ಎಂ.ಎಲ್.ಗೆ ಸೇರಿದ ಸುಮಾರು 3200 ಎಕರೆ ಜಮೀನಿನಲ್ಲಿ ವಸಾಹತನ್ನು ಮಾಡಲು ಹೊರಟಿದ್ದಾರೆ. ಆ ಕಾರ್ಯಕ್ರಮವನ್ನು ಆದಷ್ಟು ಬೇಗ ಹಮ್ಮಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ. ಮೂರನೆಯದಾಗಿ ರೂ.3,200 ಕೋಟಿಗಳ ಬಂಡವಾಳ ಹೂಡಿಕೆಯನ್ನು ಮಾಡಿ ಬಂದಿರುವ ಕೈಗಾರಿಕೆಗಳಲ್ಲಿ ಕೋಲಾರ ಜಿಲ್ಲೆಯ ಪದವೀಧರರಿಗೆ ವಿಶೇಷವಾಗಿ ಬಿ.ಇ., ಬಿ.ಟೆಕ್., ಎಂ.ಟೆಕ್. ಮಾಡಿರುವವರಿಗೆ ಉದ್ಯೋಗಾವಕಾಶ ನೀಡಬೇಕು. ಸರ್ಕಾರ ಜಾಸ್ತಿ ಗುಟುರು ಹಾಕಿದರೆ ಅವರನ್ನು sweepers ಮುಂತಾದ unskilled labours ಗಳಾಗಿ ತೆಗೆದುಕೊಂಡಿರುವುದಾಗಿ ಪಟ್ಟಿಯನ್ನು ನಮಗೆ ತೋರಿಸುತ್ತಾರೆ. ಇದಕ್ಕಾಗಿ ಒಂದು ಮೇಲುಸ್ತುವಾರಿ ಸಮಿತಿಯನ್ನು ಮಾಡಿ ಯಾವ ಕಾರ್ಖಾನೆ ಯಾವ ತಾಲ್ಲೂಕು ಅಥವಾ ಜಿಲ್ಲೆಯಲ್ಲಿ ಬರುತ್ತದೆಯೋ ಅಲ್ಲಿರುವ ಪರಿಣಿತರಿಗೆ ಅಂದರೆ trained ಅವರಿಗೆ ಶೇ.25 ಮತ್ತು untrained ಅವರಿಗೆ ಶೇ.80 ಮೀಸಲಾತಿ ನೀಡುವ ಬಗ್ಗೆ monitor ಮಾಡಬೇಕು. ದಯಮಾಡಿ ಮಾನ್ಯ ಸಚಿವರು ಸಕಾರಾತ್ಮಕವಾಗಿ ಉತ್ತರವನ್ನು ನೀಡಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ಕೇಳಿರುವ ಪ್ರಶ್ನೆಗೆ ಸುದೀರ್ಘವಾದಂತಹ ಉತ್ತರವನ್ನು ಕೊಟ್ಟಿರುತ್ತೇನೆ. ಬೇರೆ ವಿಚಾರಗಳ ಹೆಚ್ಚಿನ ವಿವರಗಳಿಗೆ ಹೋಗದೆ ಬಹಳ ಮುಖ್ಯವಾಗಿ ಕೋಲಾರ ಜಿಲ್ಲೆಯು ಬಹಳ ಹಿಂದುಳಿದ ಹಾಗೂ ಸಮಸ್ಯೆಗಳಿರುವ ಜಿಲ್ಲೆ ಎಂಬ ಹಣೆಪಟ್ಟಿಯಿಂದ ಹೊರತಾಗಿದೆ. ಇತ್ತೀಚಿನ ದಿನಗಳಲ್ಲಿ ಅಲ್ಲಿಗೆ ಹೆಚ್ಚು investors ಬರುತ್ತಿದ್ದಾರೆ. ಹೆಚ್ಚು ಕೈಗಾರಿಕೆಗಳು ಬರುತ್ತಿವೆ. ಹೆಚ್ಚು ಉದ್ಯೋಗಾವಕಾಶಗಳು ಸಿಗುತ್ತಿವೆ. ಇದಕ್ಕೆ ಪೂರಕವಾಗಿ ನಾನು ಕೈಗಾರಿಕಾ ಸಚಿವನಾದ ಮೇಲೆ ಯೋಚನೆ ಮಾಡಿದ್ದೇನೆಂದರೆ ಬಿ.ಜಿ.ಎಂ.ಎಲ್. ಮುಚ್ಚಿ ಹೋಗಿದೆ. ಅವರಿಗೆ ಸುಮಾರು 12,000 ಎಕರೆಯನ್ನು ಕೊಡಲಾಗಿತ್ತು. ಅದರಲ್ಲಿ ಸುಮಾರು 3,212 ಎಕರೆಯನ್ನು ಅವರು ಉಪಯೋಗ ಮಾಡಲೇ ಇಲ್ಲ. ಮೈನಿಂಗ್‌ಗಾಗಲೀ ಅಥವಾ ಇನ್ನಿತರ ಯಾವುದೇ ಉದ್ದೇಶಕ್ಕಾಗಿ ಉಪಯೋಗ ಮಾಡಲೇ ಇಲ್ಲ. ಹೀಗಾಗಿ ನಾವು ಕೈಗಾರಿಕಾ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಸಭೆ ಮಾಡಿ 3,212 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ. ಗೆ ಹಸ್ತಾಂತರ ಮಾಡುವಂತೆ ಕೇಳಿದ್ದೇವೆ. ಇಂದು ಕೇಂದ್ರ ಸರ್ಕಾರದಲ್ಲಿ ಶ್ರೀ ಪ್ರಹ್ಲಾದ ಜೋಷಿಯವರು ಅದಕ್ಕೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಾಗಿದ್ದಾರೆ. ಅವರಲ್ಲಿ ನಾನು ಮನವಿ ಮಾಡಿದೆನು. 3200 ಎಕರೆಯನ್ನು ಯಾವುದಕ್ಕೂ ಬಳಸಿಲ್ಲ.

**(...ಮುಂದು)**

**(ಸಭಾಪತಿಯವರ ಉಪಸ್ಥಿತಿ)**

(755), 11.20, 22.9.2020 KG RN

**ಶ್ರೀ ಜಗದೀಶ ಶೆಟ್ಟರ್ (ಮುಂದು):-**

ನಮಗೆ industry purpose ಗೆ ಕೊಟ್ಟರೆ, ಅಲ್ಲಿ ಒಂದು Industrial Township ಮಾಡುತ್ತೇವೆ. ಅಲ್ಲಿ Chennai ಮತ್ತು Bengaluru Express Highway ಬರುತ್ತಿದೆ. ಅದರ ಸುತ್ತಮುತ್ತಲೂ ಈ ಜಮೀನು ಇದೆ. ಆ ಹಿನ್ನೆಲೆಯಲ್ಲಿ, ಕೊಡಬೇಕೆಂದು request ಮಾಡಿದಾಗ, ಅದಕ್ಕೆ ಅವರು ಪೂರಕವಾಗಿ positive ಆಗಿ response ಕೊಟ್ಟರು. ಅವರು ಬೆಂಗಳೂರಿಗೆ ಬಂದಿದ್ದ ಸಂದರ್ಭದಲ್ಲಿ ನಮ್ಮ ಮುಖ್ಯ ಮಂತ್ರಿಗಳ ಜೊತೆಗೆ ಒಂದು ವಿಶೇಷ ಸಭೆಯನ್ನು ಮಾಡಿದ್ದೇವೆ. ಆ ಸಭೆಯಲ್ಲಿ ಒಂದು ನಿರ್ಧಾರವಾಗಿತ್ತು. ಅದು ಏನೆಂದರೆ, Exploration survey be taken by the Mineral Exploration Corporation Ltd.,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(MECL) at their cost to be completed within six months of the entire unexplored area of BGML. ಮಾನ್ಯ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಷಿಯವರು ಸರ್ವೆ ಮಾಡುವುದಕ್ಕೆ ಆದೇಶ ಮಾಡಿದ್ದಾರೆ. ಅದರ ಪ್ರಕಾರ, ಸರ್ವೆ ಮಾಡಿದ ಮೇಲೆ ಅಲ್ಲಿ ಯಾವುದೇ ರೀತಿಯ mining ಮತ್ತೊಂದು activities ಮಾಡುವುದಕ್ಕೆ ಸಾಧ್ಯವಿಲ್ಲವೆಂದು ವರದಿ ಬಂದರೆ, ಅವರು 3200 ಎಕರೆ ಜಮೀನನ್ನು KIADB ಗೆ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಇದು ಬಹಳ ಒಂದು positive ಆದಂತಹ signal ಎಂದು ಹೇಳುವುದಕ್ಕೆ ಬಯಸುತ್ತೇನೆ. ಬಹುಶಃ ಅದು ಏನಾದರೂ ಬಂದರೆ, ಕೋಲಾರ ಜಿಲ್ಲೆಯಿಂದ ಬೆಂಗಳೂರಿಗೆ ಸುಮಾರು 10 ರಿಂದ 15 ಸಾವಿರ ಜನರು ನೌಕರಿ ಸಲುವಾಗಿ ಬರುತ್ತಿದ್ದಾರೆ. ಇದೆಲ್ಲವೂ ತಪ್ಪಲಿಕ್ಕೆ ಸಾಧ್ಯವಿದೆ. ಆಗ ಅವರೆಲ್ಲರಿಗೂ ಕೋಲಾರದಲ್ಲಿಯೇ ಉದ್ಯೋಗ ಸಿಗುವಂತಹ ಸಾಧ್ಯತೆ ಇದೆ. ಸುಮಾರು 3200 ಎಕರೆ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳನ್ನು ಮಾಡಿದರೆ, ಈಗ Chennai ಮತ್ತು Tamil Nadu ಅಕ್ಕಪಕ್ಕಗಳಿಗೆ ಹೋಗುವಂತಹ ಕೈಗಾರಿಕೆಗಳಿಗೆ ಇಲ್ಲಿಯೇ ಅವಕಾಶ ಸಿಗುತ್ತದೆ. ನಾವು ಆ ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು employment ಬಗ್ಗೆ ಹೇಳಿದ್ದಾರೆ. Industrial Policy ನಲ್ಲಿ ಕನ್ನಡಿಗರಿಗೆ ಅವಕಾಶ ಕೊಡಬೇಕೆಂದು ಸ್ಪಷ್ಟವಾಗಿ ಹೇಳಿದ್ದೇವೆ. 'ಸಿ' ಮತ್ತು 'ಡಿ' ವೃಂದದ ಹುದ್ದೆಗಳನ್ನು 100% ರಷ್ಟು ಸ್ಥಳೀಯರಿಗೆ ಕೊಡಬೇಕು. ಅಲ್ಲದೇ, ಉನ್ನತ ಹುದ್ದೆಗಳಲ್ಲಿಯೂ ಸಹ 70% ರಷ್ಟು ಹುದ್ದೆಗಳನ್ನು ನಮ್ಮವರಿಗೆ ಕೊಡಬೇಕೆಂದು Industrial Policy ಯಲ್ಲಿದೆ. ಅದನ್ನು ಅನುಷ್ಠಾನ ಮಾಡುವುದಕ್ಕೆ ಏನೇನು ಕ್ರಮಗಳನ್ನು ಮಾಡಬೇಕೋ, ಅವುಗಳನ್ನು ಕೈಗೊಳ್ಳುವುದಕ್ಕೆ ತಯಾರಿದ್ದೇವೆಂದು ಸ್ಪಷ್ಟವಾಗಿ ಹೇಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 201**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಉತ್ತರವನ್ನು ಬಹಳ ದೊಡ್ಡದಾಗಿ ಕೊಟ್ಟಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಟ್ಟಿರುವುದನ್ನು ನೋಡಿದರೆ, ಇಲ್ಲಿ ಒಂದು abstract ಕೊಟ್ಟಿದ್ದರೆ ಸಾಕಾಗಿತ್ತು ಅನಿಸುತ್ತದೆ. ಇದರ ಜೊತೆಗೆ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಅನುದಾನ ಕೊಡಲಾಗಿದೆ ಎಂಬ ಬಗ್ಗೆ abstract ಅನ್ನು ಕೊಟ್ಟಿದ್ದರೆ, ಬೇಕಾದಷ್ಟು ಮಾಹಿತಿ ಆಗುತ್ತಿತ್ತು. ಆಗ ನಾವು ತಕ್ಷಣ ಕೇಳಬಹುದಾಗಿತ್ತು. ಆದರೂ ಸಹ, ಹೂ ಬೆಳೆಗಾರರಿಗೆ ಒಂದು ಹೆಕ್ಟೇರ್‌ಗೆ 25 ಸಾವಿರ ರೂಪಾಯಿಗಳ ಪರಿಹಾರವನ್ನು ಸಂಕಷ್ಟರಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ, ಇದರಲ್ಲಿ mention ಮಾಡಿರುವಂತಹದ್ದನ್ನು ಒಂದು ಹೇಕ್ಟರ್‌ನ್ನು ತೋರಿಸಲಿ. ಒಂದು ಹೇಕ್ಟರ್‌ನಲ್ಲಿ 5 ಎಕರೆ ಇದ್ದರೂ ಸಹ, ರೈತನಿಗೆ ಒಂದು ಎಕರೆಗೆ ಕೊಟ್ಟಿದ್ದಾರೆ. ಈ ರೀತಿ ಸರ್ಕಾರ ಹೇಳುವುದು ಒಂದು, ಮಾಡುವುದು ಇನ್ನೊಂದಾಗಿದೆ. ಹೂ ಬೆಳೆಗಾರರಿಗೆ 25 ಸಾವಿರ ರೂಪಾಯಿಗಳನ್ನು ಒಂದು ಹೇಕ್ಟರ್‌ಗೆ ಸಂಕಷ್ಟದಲ್ಲಿ ಪರಿಹಾರವಾಗಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಾನು ಹೇಳುತ್ತಿರುವಂತಹ ವಿಷಯ ಕೋವಿಡ್ ಸಂದರ್ಭದದ್ದು. ಆ ಸಂದರ್ಭದಲ್ಲಿ ರೈತರಿಗೆ ಹಣ್ಣು ತರಕಾರಿಗಳು ಸಾಕಷ್ಟು ನಷ್ಟವಾಗಿತ್ತು. ಇದನ್ನು ನಾವು ಪ್ರತಿ ದಿವಸ ಟಿ.ವಿಯಲ್ಲಿ ನೋಡುತ್ತಿದ್ದೇವು. ಸಾಕಷ್ಟು ಹೂವು ಹಣ್ಣುಗಳು ಕೊಳೆತು ಗೊಬ್ಬರವಾಗಿದೆ. ಇದರಿಂದ ಸಾಕಷ್ಟು ರೈತರು ಸಂಕಷ್ಟಕ್ಕೆ ಸಿಲುಕಿದರು. ಸಾಕಷ್ಟು ರೈತರಿಗೆ ಊಟಕ್ಕೆ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಂತಹ ಸಂದರ್ಭದಲ್ಲಿ ಸರ್ಕಾರ ರೈತರಿಗೆ ಏನು ಪರಿಹಾರ ಕೊಟ್ಟಿದ್ದಾರೆ ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ತರಕಾರಿ ಮತ್ತು ಹಣ್ಣು ಬೆಳೆಗಾರರಿಗೆ ಪ್ರತಿ ಹೇಕ್ಟರ್‌ಗೆ 15 ಸಾವಿರ ರೂಪಾಯಿಗಳನ್ನು ಕೊಟ್ಟಿದೇವೆಂದು ಹೇಳಿದ್ದಾರೆ. ಜಿಲ್ಲಾವಾರು ಪರಿಹಾರ ಕೊಟ್ಟಿರುವಂತಹ ಮಾಹಿತಿ ಇಲ್ಲಿದೆ. ಆದರೆ, ನಾನು ಇದನ್ನು ನೋಡುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು abstract ಕೊಡಬಹುದಾಗಿತ್ತು. ಮಾನ್ಯ ಸಭಾಪತಿಯವರೇ, ಅವರು ಇದರಲ್ಲಿರುವಂತಹ ಒಂದೇ ಒಂದು ಹೇಕ್ಟರ್‌ನ ಹೆಸರನ್ನು ತೋರಿಸಲಿ? ಏಕೆ ಈ ರೀತಿ ಮಾಡುತ್ತಾರೆ? ನಮ್ಮ ರಾಜ್ಯದ ಜನರು ಕೇಂದ್ರ ಸರ್ಕಾರ ಪ್ರಕಟಿಸಿದ್ದ 20 ಲಕ್ಷ ಕೋಟಿ ರೂಪಾಯಿಗಳು ಬರುತ್ತದೆ ಎಂದು ಬಹಳಷ್ಟು ನಿರೀಕ್ಷೆ ಮಾಡಿದ್ದರು. ಆದರೆ, ಮಾನ್ಯ ಸಚಿವರು ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಈ ಕಾರ್ಯಕ್ರಮಕ್ಕಾಗಿ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಅನುದಾನ ಬಿಡುಗಡೆಯಾಗಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಯಾವುದಕ್ಕೂ ಆಗಿಲ್ಲವೆಂದು ಕೊಟ್ಟಿದ್ದಾರೆ. ಈ ರೀತಿ ಇದ್ದಾಗ ರೈತರ ಸಂಕಷ್ಟಕ್ಕೆ ಯಾವ ಸರ್ಕಾರ ಬಂದಿದೆ. "ಮೂಗಿಗೆ ತುಪ್ಪ ಸವರಿಬಿಟ್ಟು ಸುಮ್ಮನೆ ಹೋಗಿಬಿಡುತ್ತಾರೆ" ಎಂಬ ಗಾದೆ ಮಾತಿದೆ. ಅವರು ಕೇವಲ ತುಪ್ಪದ ವಾಸನೆ ನೋಡಿಕೊಂಡು ಇರಬೇಕಷ್ಟೆ. ಆ ರೀತಿ ಆಯಿತು ಇದು.

**ಶ್ರೀ ಕೆ.ಸಿ.ನಾರಾಯಣಗೌಡ:–** ಮಾನ್ಯ ಸಭಾಪತಿಯವರೇ, ನಾವು ಯಾವುದೇ ಕಾರಣಕ್ಕೂ ಹಣ್ಣು ತರಕಾರಿಗಳನ್ನು ಕೊಳೆಯುವುದಕ್ಕೆ ಬಿಟ್ಟಿರಲಿಲ್ಲ. ಎರಡು ತಿಂಗಳ ಕಾಲ Hopcoms ಅನ್ನು ಹಳ್ಳಿ, ಹಳ್ಳಿಯಲ್ಲಿ, ತಾಲ್ಲೂಕುವಾರು ತೆರೆದು, ಅದನ್ನು ರೈತರಿಂದ ಪಡೆದು ಗ್ರಾಹಕರಿಗೆ ತಲುಪಿಸುವಂತಹ ಕೆಲಸವನ್ನು ಮಾಡಿದ್ದೇವೆ. ಆದರೂ ಸಹ, ರೈತರಿಗೆ ಸ್ವಲ್ಪ ಅನ್ಯಾಯವಾಗಿದೆ. ಆ ಕಾರಣಕ್ಕೆ ಹೂ ಬೆಳೆದವರಿಗೆ ಪ್ರತಿ ಹೇಕ್ಟರ್‌ಗೆ 25 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ. ಇವರು ಹಣ್ಣುಗಳಿಗೆ ಪರಿಹಾರ ಕೇಳಿರಲಿಲ್ಲ. ಆದರೂ ಸಹ, ನಾವು ಕೊಟ್ಟಿದ್ದೇವೆ. ನಮ್ಮ ರಾಜ್ಯದಿಂದ ತರಕಾರಿಗಳನ್ನು ಕೇರಳ ಮತ್ತು ಗುಜರಾತಿನಿಂದ ಹಿಡಿದು ಪ್ರತಿಯೊಂದು ರಾಜ್ಯಕ್ಕೂ ಕಳುಹಿಸಿಕೊಟ್ಟಿದ್ದೇವೆ. ಪ್ರತಿ ದಿವಸ 8 ಸಾವಿರ ಟನ್‌ಗಳಷ್ಟು ತರಕಾರಿಗಳನ್ನು ಸರಬರಾಜು ಮಾಡಿದ್ದೇವೆ. 150 ಟನ್‌ಗಿಂತ ಹೆಚ್ಚಾಗಿ Hopcoms ನಲ್ಲಿ ಬಿಕರಿ ಆಗಿದೆ. ಇದಕ್ಕೆ ಕೆಲವು ಶಾಸಕರು ಸಹ ಅವರ ಸ್ವಂತ ಹಣದಿಂದ ಸಹಾಯ ಮಾಡಿದ್ದಾರೆ, ಇದನ್ನು ರೈತರಿಗೆ ಅನ್ಯಾಯವಾಗದ ರೀತಿಯಲ್ಲಿ ಅಳವಡಿಸಿದ್ದೇವೆ. ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ರೈತರಿಗೆ ಯಾವುದೇ ರೀತಿಯಲ್ಲೂ ಅನ್ಯಾಯವಾಗದ ರೀತಿಯಲ್ಲಿ ಕಾಪಾಡಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಭಾರತ ಸರ್ಕಾರದಿಂದ ಬರುವ ಅನುದಾನದ ಬಗ್ಗೆ ಕೇಳಿದ್ದಾರೆ. ಆದರೆ, ಇದುವರೆಗೂ ಆ ರೀತಿಯ ಅನುದಾನ ಯಾವುದು ಬಂದಿಲ್ಲ. ಒಂದು ವೇಳೆ, ಅನುದಾನ ಬಂದರೆ, ಖಂಡಿವಾಗಿ ರೈತರಿಗೆ ಶಕ್ತಿ ತುಂಬುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು lockdown ಸಂದರ್ಭದಲ್ಲಿ 8 ಟನ್‌ಗಳಷ್ಟು ತರಕಾರಿಗಳನ್ನು ಹೊರ ರಾಜ್ಯಗಳಿಗೆ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಆದರೆ, ಆ ಸಂದರ್ಭದಲ್ಲಿ transportation ಸಂಪೂರ್ಣವಾಗಿ ಬಂದ್ ಆಗಿತ್ತು. ಹಾಗಾದರೆ, ಇವರು ಆ ಸಮಯದಲ್ಲಿ ಎಲ್ಲಿಂದ ಕಳುಹಿಸಿಕೊಟ್ಟರು?

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು Hopcoms ಪ್ರತಿ ತಾಲ್ಲೂಕ್, ಪ್ರತಿ ಹಳ್ಳಿ, ಹಳ್ಳಿಗೂ ಬಂದಿದೆ ಎಂದು ಹೇಳಿದ್ದಾರೆ. ಇಡೀ ಜಿಲ್ಲೆಗೆ ಒಂದು Hopcom ಆಗಿ ಅದರಲ್ಲಿ 2 ರಿಂದ 3% ರಷ್ಟು ಹಣ್ಣುಗಳನ್ನು ಮತ್ತು ಕಾಯಿ ಪಲ್ಯೆಗಳನ್ನು procure ಮಾಡಿದ್ದಾರೆ. ನಮ್ಮ ಜಿಲ್ಲೆ ಬಹುತೇಕ ತೋಟಗಾರಿಕೆ ಜಿಲ್ಲೆಯಾಗಿದೆ. ಆ ಜಿಲ್ಲೆಯಲ್ಲಿ ದಾಳಿಂಬೆ, ದ್ರಾಕ್ಷಿ ಮತ್ತು ನಿಂಬೆ ಹಣ್ಣುಗಳನ್ನು ಆ ಸಂದರ್ಭದಲ್ಲಿ ತೆಗೆದುಕೊಂಡು ಬಂದು ರಸ್ತೆಗೆ ಸುರಿದಿದ್ದಾರೆ. Hopcom has become incapable to procure entire produce produced by the farmers. ಬಾಗಲಕೋಟೆ ಜಿಲ್ಲೆಯಲ್ಲಿ ಒಂದು Hopcom ಸೆಂಟರ್‌ನ್ನು ಮಾತ್ರ ತೆರೆದಿದ್ದಾರೆ. ಬಹುತೇಕವಾಗಿ ಕಣ್ಣೀರಿನಲ್ಲಿ ಕೈತೊಳೆದುಕೊಳ್ಳುವಂತಹ ಪರಿಸ್ಥಿತಿ ರೈತರಿಗೆ ಉಂಟಾಗಿದೆ. ರೈತರು ಬೆಳೆದಂತಹ ಹಣ್ಣು ತರಕಾರಿಗಳು 100ಕ್ಕೆ 95% ರಷ್ಟು ಹಾಳಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಸವಿಸ್ತಾರವಾಗಿ ಹೇಳಿದ್ದಾರೆ. ಆದರೆ, ರೈತರು ಬೆಳೆದಂತಹ ಹಣ್ಣು ತರಕಾರಿಗಳನ್ನು ಯಾರು ಕೊಂಡುಕೊಳ್ಳುವವರು ಇಲ್ಲದೆ ಹಾಗೆಯೇ ತೋಟಗಳಲ್ಲಿಯೇ ಕೊಳೆತು ಹೋಗಿವೆ. Lockdown time ನಲ್ಲಿ transportation ಇರಲಿಲ್ಲ. ಆದರೆ, ಆ ಸಂದರ್ಭದಲ್ಲಿ ತರಕಾರಿಗಳನ್ನು ಬೇರೆ ರಾಜ್ಯಗಳಿಗೆ ಯಾವ ರೀತಿ ಕಳುಹಿಸಿಕೊಟ್ಟರು ಎಂಬುದು ಅರ್ಥವಾಗುತ್ತಿಲ್ಲ. ಈ ರೀತಿಯ ತಪ್ಪು ವರದಿಗಳನ್ನು ಕೊಡಬಾರದು.

**ಡಾ||ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಒಂದು ರೂಪಾಯಿ ಕೊಟ್ಟಿಲ್ಲ. ನಮ್ಮ ಸರ್ಕಾರ ಮೊದಲನೇ ಬಾರಿಗೆ ಸರ್ಕಾರ ಹೂ ಬೆಳೆಗಾರರಿಗೆ ಪರಿಹಾರ ಕೊಟ್ಟಿದೆ.

**ಶ್ರೀ ಕೆ.ಸಿ.ನಾರಾಯಣಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಆ ಸಂದರ್ಭದಲ್ಲಿ lockdown ಇತ್ತು ಯಾವ ರೀತಿ ಸರಬರಾಜು ಮಾಡಿದ್ದರು ಎಂದು ಹೇಳುತ್ತಿದ್ದಾರೆ, ಆದರೆ, ಒಂದು ವಾರದ ಮಟ್ಟಿಗೆ ಮಾತ್ರ transportation lockdown ಆಗಿತ್ತು. ಒಂದು ವಾರದಲ್ಲಿ export ಅನ್ನು ಸಹ ಮಾಡಿದ್ದೇವೆ. ಅದನ್ನು ಮಾನ್ಯ ಸದಸ್ಯರು ಗುರುತಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹಣ್ಣು ತರಕಾರಿಗಳನ್ನು ಸರಬರಾಜು ಮಾಡಿದ್ದೇವೆ. ರೈತರ ತೋಟಗಳಿಂದ ಹಣ್ಣು ತರಕಾರಿಗಳನ್ನು ಸಂಗ್ರಹ ಮಾಡಿದ್ದೇವೆ. ನಮ್ಮ ಸರ್ಕಾರ ನಿಜವಾಗಲೂ ರೈತರಿಗೆ ಒಳ್ಳೆಯ ಕೆಲಸವನ್ನು ಮಾಡಿದೆ.

ಮುಂದು.,

(756)22-09-2020(11-30)ಎಂವಿ-ವಿಕೆ

**(ಸಭಾಪತಿಯವರ ಉಪಸ್ಥಿತಿ)**

**ಡಾ॥ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಹೂವು, ಹಣ್ಣು ಮತ್ತು ತರಕಾರಿ ಎಲ್ಲದಕ್ಕೂ ಸಹ ರೈತರಿಗೆ ಹಣ ಕೊಟ್ಟಿದ್ದಾರೆ ಮತ್ತು ಆ ಹಣ ರೈತರಿಗೆ ಸೇರಿದೆ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ವಿಷಯವನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ದ್ರಾಕ್ಷಿಯನ್ನು ಕೇವಲ ಹತ್ತು ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ):-** ಮಾನ್ಯ ಸಭಾಪತಿಯವರೇ, ಲಾಕ್‌ಡೌನ್ ಆದಂತಹ ಸಂದರ್ಭದಲ್ಲಿ, ಸಾರಿಗೆ ಇಲಾಖೆ ವತಿಯಿಂದ Helpline ಅನ್ನು ಪ್ರಾರಂಭ ಮಾಡಿದ ಮೇಲೆ ಪ್ರತಿಯೊಂದು ಹಳ್ಳಿಗಳಿಂದ ನಮಗೆ ಫೋನ್ ಬಂದಿದೆ. ರಾಜ್ಯದಲ್ಲಿನ ಕಾಯಿಪಲ್ಯ ಮತ್ತು ಹಣ್ಣು-ಹಂಪಲಗಳನ್ನು ಯಾರ್‍ಯಾರು ಬೆಳೆದಿದ್ದಾರೆ ಮತ್ತು ಅದನ್ನು ಎಲ್ಲೆಲ್ಲಿಗೆ ತೆಗೆದುಕೊಂಡು ಹೋಗಬೇಕು ಮತ್ತು ಅದನ್ನು ತಲುಪಿಸುವುದಕ್ಕೆ ಎಂದು. ಆಗ ಪ್ರತಿಯೊಂದು ಹಳ್ಳಿಗಳಿಗೂ ವಾಹನಗಳನ್ನು ಕಳುಹಿಸಿಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಮಹಾರಾಷ್ಟ್ರ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೋವಾ ರಾಜ್ಯಗಳಿಗೆ ಮತ್ತು ನಮ್ಮ ರಾಜ್ಯದ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಿಗೂ ಸಹ ಕಾಯಿಪಲ್ಯ ಮತ್ತು ಹಣ್ಣು-ಹಂಪಲಗಳನ್ನು ಕಳುಹಿಸಿಕೊಡುವಂತಹ ಕೆಲಸವನ್ನು ಸಾರಿಗೆ ಇಲಾಖೆ ವತಿಯಿಂದಲೂ ಸಹ ಮಾಡಿದ್ದೇವೆ. ಅದು ತಮಗೆ ಗೊತ್ತಿರಲಿ.

**ಸಭಾಪತಿಯವರು:-** ಮಾನ್ಯ ಸಚಿವರೇ **ಈ ವಿಷಯವನ್ನು ಅರ್ಧಗಂಟೆ ಚರ್ಚೆಗೆ ತೆಗೆದುಕೊಂಡಾಗಿದೆ.**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ಚಿಕ್ಕ ಹೆಣ್ಣು ಮಗು, WhatsApp ನಲ್ಲಿ ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಗಳನ್ನು ಖಂಡಿಸುತ್ತಾರೆ.

**ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಖರೀದಿ ಮಾಡಿ, Kisan Rail ಅನ್ನು ಬಿಟ್ಟು ದೇಶದ ಮೂಲೆಮೂಲೆಗೂ ತಲುಪಿಸುವಂತಹ ಕೆಲಸವನ್ನು ಮಾಡಿದ್ದೇವೆ.

**(ಗೊಂದಲ)**

**ಡಾ॥ನಾರಾಯಣ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಬ್ಬ ಹೆಣ್ಣು ಮಗಳ ಬಗ್ಗೆ ಕೇಳುತ್ತಿದ್ದಾರೆ. ನಾವು ನೇರವಾಗಿ ಆ ಹೆಣ್ಣು ಮಗಳ ಮನೆಗೆ ಹೋಗಿ ಅನುದಾನವನ್ನು ನೀಡಿ, ಅವರ ಬಳಿ ಇದ್ದಂತಹ ತರಕಾರಿ ಮತ್ತು ಈರುಳ್ಳಿಯನ್ನು ಖರೀದಿ ಮಾಡುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ದಯವಿಟ್ಟು ಅವರು ತಾಳ್ಮೆಯಿಂದ ಕೇಳಿಸಿಕೊಳ್ಳಲಿ.

**(ಗೊಂದಲ)**

**ಡಾ॥ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸದಸ್ಯರು ಮಾನ್ಯ ಸಚಿವರು ನೀಡುತ್ತಿರುವ ಉತ್ತರವನ್ನು ಕೇಳಿಸಿಕೊಳ್ಳಲಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಈಗ 25 ಸಾವಿರ ರೂಪಾಯಿಗಳನ್ನು ಯಾರಿಗೆ ಕೊಟ್ಟಿದ್ದಾರೆಂದು ಅದರ ಪಟ್ಟಿ ನೀಡಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ ಮೊದಲು ಪ್ರಶ್ನೋತ್ತರವನ್ನು ಮುಗಿಸುತ್ತೇನೆ. ಈಗ ಮಾನ್ಯ ಹೆಚ್.ಎಂ.ರಮೇಶ್ ಗೌಡರವರು ತಮ್ಮ ಪ್ರಶ್ನೆ ಕೇಳುವುದು.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಇನ್ನು ನನಗೆ ಉತ್ತರ ಬಂದಿಲ್ಲ.

**ಸಭಾಪತಿಯವರು:–** ಇನ್ನು ಉತ್ತರ ಏಕೆ ಬಂದಿಲ್ಲ? ಉತ್ತರ ಅಲ್ಲಿ ಇರಬಹುದು ನೋಡಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ನಿನ್ನೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಒಂದಕ್ಕೂ ಸಹ ಉತ್ತರ ಬಂದಿಲ್ಲ. ಇದು ಒಂದು ಬಾರಿಯಲ್ಲ, ಪ್ರತಿ ಬಾರಿಯೂ ಸಹ ಇದೇ ರೀತಿ ಆಗುತ್ತದೆ.

**ಸಭಾಪತಿಯವರು:–** ನಿನ್ನೆಯ ವಿಷಯವನ್ನು ಬಿಟ್ಟು. ಇವತ್ತಿನ ವಿಷಯದ ಬಗ್ಗೆ ಹೇಳಿ. ನಿಮ್ಮ ಪ್ರಶ್ನೆ ಸಂಖ್ಯೆಯನ್ನು ಹೇಳಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಈಗ ಕೊಡುತ್ತಿದ್ದಾರೆ. ಅದನ್ನು ಓದುವುದಕ್ಕೆ ಸ್ವಲ್ಪ ಸಮಯಾವಕಾಶ ಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 163**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ಸುಬ್ರಮಣಿ.ಎಂ.ಪಿ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದೀರ್ಘವಾದ ಉತ್ತರವನ್ನು ನೀಡಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ಮತ್ತು ಅದರ ಜೊತೆಗೆ ಕೆಲವು ಸಲಹೆಗಳನ್ನು ನೀಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಈಗ ಮಡಿಕೇರಿಯಲ್ಲಿ ಮಳೆ ಇರುವಂತಹ ಸಂದರ್ಭ. ಮಾನ್ಯ ಸಚಿವರು ಉತ್ತರದಲ್ಲಿ ಏನು ಕೊಟ್ಟಿದ್ದಾರೆ ಆ ಕೆಲಸಗಳನ್ನು ಈಗ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಬೇಕಾದಂತಹ ವ್ಯವಸ್ಥೆಗಳನ್ನು ಮಾಡಿಕೊಂಡು, ಆದಷ್ಟು ಬೇಗ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಮಾಡಿಕೊಡಬೇಕು. ಏಕೆಂದರೆ, ಮಡಿಕೇರಿಯಲ್ಲಿ ಪ್ಲಾಸ್ಟಿಕ್ ಪೂರ್ತಿ ನಿಷೇಧವಾಗಿದೆ ಅದು ಪೂರ್ಣ ನಿಷೇಧವಾಗುವಂತೆ ಮಾಡಬೇಕು. ಜೊತೆಗೆ ಕಸ ಹಾಕುವುದರಿಂದ ಯಾವ ಭಾಗದಲ್ಲಿ ತೊಂದರೆಯಾಗಿದೆ ಎಂದರೆ, ಮಾನ್ಯ ಸದಸ್ಯರಾದಂತಹ ಶ್ರೀಮತಿ ವೀಣಾ ಅಚ್ಚಯ್ಯನವರು ಇದ್ದಾರೆ. ಅವರ ಮನೆಯ ಭಾಗದಲ್ಲಿ ಹುಳುಗಳು ಮತ್ತು ಕೀಟಗಳು ಇದ್ದು, ಆ ಭಾಗದ ಜನ ಚಳುವಳಿ ಮಾಡುವಂತಹ ಪರಿಸ್ಥಿತಿ ಬಂದಿದೆ ಹಾಗೂ ಕೆಲವರು ಕೋರ್ಟ್‌ಗೂ ಸಹ ಹೋಗಿದ್ದಾರೆ. ಹಾಗಾಗಿ ಅದನ್ನು ಆದಷ್ಟು ಶೀಘ್ರವಾಗಿ ವೈಜ್ಞಾನಿಕ ರೀತಿಯಲ್ಲಿ ಮಾಡಿಕೊಡಬೇಕೆಂದು ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಡಾ॥ನಾರಾಯಣ ಗೌಡ:-** ಮಾನ್ಯ ಸಭಾಪತಿಯವರೇ, 18ನೇ ತಾರೀಖಿನಂದು video conference ಮಾಡಿ, ಪ್ರತಿಯೊಂದು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಅದಕ್ಕೆ ಐದು ಕೋಟಿ ರೂಪಾಯಿಗಳನ್ನು ಇಟ್ಟು, ಕೋವಿಡ್-19 ಇದ್ದುದ್ದರಿಂದ ಸ್ವಲ್ಪ ತಡವಾಗಿದೆ. ಇಬ್ಬರು ಮಾನ್ಯ ಸದಸ್ಯರುಗಳ ನೇತೃತ್ವದಲ್ಲಿ ಅದನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸುತ್ತೇವೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಮಾನ್ಯ ಸಚಿವರಿಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ.

**ಸಭಾಪತಿಯವರು:-** ಇಲ್ಲಿಗೂ ಆಗಬೇಕು, ಅಲ್ಲಿಗೂ ಆಗಬೇಕು ಮತ್ತು ಮಹಿಳೆಯರಿಗೂ ಆಗಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 224**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳುವುದು ಬಹಳ ಸಣ್ಣ ಪ್ರಶ್ನೆ. ಬೀದರ್ ನಗರ ಸಭೆಯಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸರ್ಕಾರದಿಂದ ಮಂಜೂರಾದ ಹುದ್ದೆಗಳು ಎಷ್ಟು ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ಎಂದು. ಇದಕ್ಕೆ ಪೂರಕವಾಗಿ ಸರಿಯಾಗಿ ಕೆಲಸವಾಗುತ್ತಿಲ್ಲ ಮತ್ತು ಸರಿಯಾದ ರೀತಿಯಲ್ಲಿ ಕರ ವಸೂಲಾತಿ ಆಗುತ್ತಿಲ್ಲ ಎಂಬ ಕಾರಣದಿಂದ ಕೇಳಿದ್ದೇನೆ. ಮಾನ್ಯ ಸಚಿವರು ಸಂಪೂರ್ಣವಾಗಿ ಉತ್ತರವನ್ನು ನೀಡಿದ್ದಾರೆ. ಅದರಲ್ಲೂ ಮುನ್ಸಿಪಾಲಿಟಿಗಳಲ್ಲಿ ಯಾವ ಹುದ್ದೆಗಳು ಅಗತ್ಯವಿದೆಯೋ ಆ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಸಂಖ್ಯೆ ತುಂಬಾ ಕಡಿಮೆ ಇದೆ. ಮಾನ್ಯ ಮಂತ್ರಿಗಳು ಕೊಟ್ಟಿರುವಂತಹ ಉತ್ತರದಲ್ಲಿ ನೀರು ಸರಬರಾಜು ಸಹಾಯಕರು 33 ಹುದ್ದೆಗಳಲ್ಲಿ ಕೇವಲ 7 ಜನರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಅಲ್ಲಿ 26 ಹುದ್ದೆಗಳು ಖಾಲಿಯಿದೆ. ಸಹಾಯಕ ನೀರು ಸರಬರಾಜು ಅಪರೇಟರ್ 33 ಹುದ್ದೆಗಳಲ್ಲಿ ಕೇವಲ 7 ಜನರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಅಲ್ಲಿ 26 ಹುದ್ದೆಗಳು ಖಾಲಿಯಿವೆ. ಸ್ಯಾನಿಟರಿ ಸೂಪರ್‌ವೈಸರ್ 22 ಹುದ್ದೆಗಳಲ್ಲಿ ಕೇವಲ ಒಬ್ಬರು ಮಾತ್ರ ಇದ್ದಾರೆ 21 ಹುದ್ದೆಗಳು ಖಾಲಿಯಿವೆ. ಸೀನಿಯರ್ ವಾಲ್ವ್‌ಮೇನ್ 13 ಹುದ್ದೆಗಳಲ್ಲಿ 13 ಹುದ್ದೆಗಳು ಸಹ ಖಾಲಿಯಿವೆ ಅಲ್ಲಿ ಒಬ್ಬರು ಸಹ ಇಲ್ಲ. ಪೌರಕಾರ್ಮಿಕರ 576 ಹುದ್ದೆಗಳಲ್ಲಿ 256 ಜನರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಅಲ್ಲಿ 320 ಹುದ್ದೆಗಳು ಖಾಲಿಯಿವೆ. ನಾನು ಮಾನ್ಯ ಸಚಿವರಿಗೆ ಕೈಮುಗಿದು ವಿನಂತಿ ಮಾಡುತ್ತೇನೆ. ಮುನ್ಸಿಪಾಲಿಟಿ ಕಡೆಯಿಂದ ಸ್ವಚತೆ ಮತ್ತು ನೀರು ಸರಬರಾಜು ಸರಿಯಾಗಿ ಆಗಬೇಕು. ಇಡೀ ಜಿಲ್ಲೆಯಲ್ಲಿ ಅದಕ್ಕೆ ಬೇಕಾದಂತಹ ಸಿಬ್ಬಂದಿಯ ಕೊರತೆ ತುಂಬಾ ಇದೆ. ದಯವಿಟ್ಟು ಮಾನ್ಯ ಸಚಿವರು ಬೀದರ್ ಜಿಲ್ಲೆಗೆ ಬಂದು ಸವಿಸ್ತಾರವಾಗಿ ಮತ್ತು ಕೂಲಂಕಷವಾಗಿ ಪರಿಶೀಲಿಸಿ ಆದಷ್ಟು ಬೇಗ ಈ ಕೆಲಸವನ್ನು ಸರಿಯಾಗಿ ನಿರ್ವಹಿಸುವಂತೆ ಮತ್ತು ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವಂತಹ ಒಂದು ಪ್ರಯತ್ನ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಕೆ.ಪಿ.ಎಸ್.ಸಿ.ಗೆ ನೀಡಿದ್ದೇವೆಂದು. ಆದರೆ, ಆ ಹುದ್ದೆಗಳು ನಾನು ಹೇಳುತ್ತಿರುವಂತಹ ಹುದ್ದೆಗಳಲ್ಲ. ಆ ಹುದ್ದೆಗಳು 'ಡಿ' ದರ್ಜೆಯ ಹುದ್ದೆಗಳು. ಈಗ 'ಬಿ' ದರ್ಜೆಯ ಹುದ್ದೆಗಳನ್ನು ಬಿಟ್ಟು ಬೇರೆ ಯಾವ ಹುದ್ದೆಗಳು ಸಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆ.ಪಿ.ಎಸ್.ಸಿ.ಗೆ ಹೋಗುವುದಿಲ್ಲ. ಹಾಗಾಗಿ ದಯವಿಟ್ಟು ಆದಷ್ಟುಬೇಗ ಸರ್ಕಾರ ಈ ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸ ಆಗಬೇಕೆಂದು ಕೈಮುಗಿದು ವಿನಂತಿ ಮಾಡುತ್ತೇನೆ.

**ಡಾ||ನಾರಾಯಣ ಗೌಡ:–** ಮಾನ್ಯ ಸಭಾಪತಿಯವರೇ, ಶೀಘ್ರದಲ್ಲಿ 30 ಜನರನ್ನು ತೆಗೆದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅನುಮತಿಯನ್ನು ನೀಡಿದ್ದೇವೆ. ಇನ್ನು 558 ಜನರನ್ನು ತೆಗೆದುಕೊಳ್ಳುವುದಕ್ಕೆ ಕೆ.ಪಿ.ಎಸ್.ಸಿ.ಗೆ ಕಳುಹಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅತೀ ಶೀಘ್ರದಲ್ಲೇ ಇದನ್ನು ಪರಿಹರಿಸುತ್ತೇವೆಂದು ಹೇಳುತ್ತೇನೆ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, 'ಡಿ' ದರ್ಜೆಯ ಹುದ್ದೆಗಳನ್ನು ಸ್ಥಳೀವಾಗಿ ಭರ್ತಿ ಮಾಡಬೇಕು. ಮಾನ್ಯ ಸಚಿವರು ಒಂದು ಬಾರಿ ಬೀದರ್ ಜಿಲ್ಲೆಗೆ ಬರಬೇಕು.

**ಡಾ||ನಾರಾಯಣ ಗೌಡ:–** ಮಾನ್ಯ ಸಭಾಪತಿಯವರೇ, ಕೋವಿಡ್–19 ಇದ್ದುದ್ದರಿಂದ ಯಾವುದೇ ಹುದ್ದೆಗಳನ್ನು ಸಹ ಭರ್ತಿ ಮಾಡುವುದಕ್ಕೆ ಆಗಲಿಲ್ಲ. ಶೀಘ್ರದಲ್ಲೆ ನೇಮಕಾತಿಯನ್ನು ಮಾಡಿ ಸಮಸ್ಯೆಯನ್ನು ಪರಿಹರಿಸುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 07**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಸಚಿವರು ನೀಡಿರುವ ಉತ್ತರವನ್ನು, ಯಾರು ಉತ್ತರವೆಂದು ಹೇಳುವುದಿಲ್ಲ. ಆಡಳಿತ ಪಕ್ಷದವರು ಒಂದು ರೇಷನ್ ಕಾರ್ಡ್ ಇದ್ದರೆ ದೇಶದಲ್ಲಿ ಎಲ್ಲಿ ಬೇಕಾದರೂ ಸಹ ರೇಷನ್ ತೆಗೆದುಕೊಳ್ಳಬಹುದು ಎಂದು ಹೇಳುತ್ತಾರೆ. ಇವರು ಕೊಟ್ಟಿರುವಂತಹ ಉತ್ತರದಲ್ಲಿ ಐದು ಕಾಲಂಗಳನ್ನು ನೀಡಿದ್ದಾರೆ. ಐದನೇ ಕಾಲಂನಲ್ಲಿ ಅಕ್ರಮ ಎಸಗಿದ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಕೈಗೊಳ್ಳಲಾದ ಕ್ರಮ ಎಂದು ಇದೆ. ಕ್ರಮ ಸಂಖ್ಯೆ.31, ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ನ್ಯಾಯಬೆಲೆ ಅಂಗಡಿ ಪ್ರಾಧಿಕರಣದಾರರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೊರೋನಾ ವೈರಸ್ ಸಂದರ್ಭದಲ್ಲಿ ಪಡಿತರ ಚೀಟಿದಾರರಿಗೆ ಉಚಿತವಾಗಿ ಆಹಾರ ಧಾನ್ಯಗಳನ್ನು ವಿತರಿಸಲು ಬಿಡುಗಡೆ ಮಾಡಿರುವ ಅಕ್ಕಿಯನ್ನು ಅಕ್ರಮವಾಗಿ ಮಾರಾಟ ಮಾಡಿಕೊಂಡು ಅವ್ಯವಹಾರ ನಡೆಸಿ ಸರ್ಕಾರ ಮತ್ತು ಸಾರ್ವಜನಿಕರಿಗೆ ವಂಚಿಸಿರುತ್ತಾರೆ ಎಂದು. ಇದು ಏನು ಕ್ರಮ ಸ್ವಾಮಿ? ಒಂದು ಕಡೆ ಅವರ ಐದು ಸಾವಿರ ರೂಪಾಯಿಗಳ deposit ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಅವರಿಗೆ ಎರಡು ಸಾವಿರ ರೂಪಾಯಿಗಳ ದಂಡ ಹಾಕಿ ಅವರು ಅಂಗಡಿಯನ್ನು ತೆರೆಯುವುದಕ್ಕೆ ಅನುಮತಿ ನೀಡುತ್ತೀರಿ. ನೀವು ಆಹಾರದ ಸರಬರಾಜಿನಲ್ಲಿ ಅದೆಷ್ಟು ದುಡ್ಡು ಮಾಡಬೇಕೆಂದು ಇದ್ದಾರೆ. ಎಲ್ಲಿ ನೋಡಿದರು ಸಹ ಭ್ರಷ್ಟಾಚಾರ ಮತ್ತು ಅವ್ಯವಹಾರ. ಕೊರೋನಾ ಕಾಲದಲ್ಲಿ ನಾವು ಸಾವಿರಾರು ಕ್ವಿಂಟಲ್ ಅಕ್ಕಿಗಳನ್ನು ಹಿಡಿದುಕೊಂಡು ರಾತ್ರೋರಾತ್ರಿ ಧರಣಿ ಕುಳಿತುಕೊಂಡೆವು. ಸರ್ಕಾರ ಕೊಟ್ಟಿರುವ ಚೀಟಿಗಳಿಗೆ ಬಿ.ಜೆ.ಪಿ.ಯವರು ಪೋಸ್ಟರ್‌ಗಳನ್ನು ಅಂಟಿಸಿಕೊಂಡು ಜನಪ್ರತಿನಿಧಿಗಳು ವ್ಯವಹಾರ ಮಾಡಿದರು. ಇದನ್ನೆಲ್ಲಾ ಹೇಳುವವರು ಮತ್ತು ಕೇಳುವವರು ಯಾರು ಇಲ್ಲವೇ? ನೀವು ಸರ್ಕಾರಿ ಅಧಿಕಾರಿಗಳಿಗೆ ಎಲ್ಲವನ್ನು ಸಹ ಬಿಟ್ಟುಕೊಟ್ಟಿದ್ದೀರಾ? ಅವರು ಏನು ಬರೆದುಕೊಟ್ಟಿದ್ದಾರೆ ಅದೇ ಇದು. ಇದು ಒಂದು ಉತ್ತರವೇ?

**(ಮುಂದು...)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(757) 22.09.2020 11.40 LL-VK

**ಸಭಾಪತಿಯವರ ಉಪಸ್ಥಿತಿ**

**ಶ್ರೀ ಸಿ.ಟಿ. ರವಿ (ಪ್ರವಾಸೋದ್ಯಮ ಸಚಿವರು) (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವುದೇ ಬಹಳ ಸರಳವಾದ ಪ್ರಶ್ನೆ. ಆ ಪ್ರಶ್ನೆಗೆ ಅನುಬಂಧದಲ್ಲಿ ಜಿಲ್ಲಾವಾರು ಸಹಿತ ಉತ್ತರವನ್ನು ಕೊಟ್ಟಿದ್ದೇವೆ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಆದರೆ, ಇದರಲ್ಲಿ ಕ್ರಮ ತೆಗೆದುಕೊಂಡಿರುವುದು ಸರಿಯಲ್ಲವೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಇದು ರಾಜಕೀಯ ವೇದಿಕೆ ಅದಲ್ಲವೆಂದು ನಾನು ಅಂದುಕೊಂಡಿದ್ದೇನೆ. ಆದಾಗ್ಯೂ, ಮಾನ್ಯ ಸದಸ್ಯರಿಗೆ ರಾಜಕೀಯ ಪ್ರಶ್ನೆಗಳಿದ್ದು, ಹೊರಗಡೆ ಅವರು ಪ್ರಶ್ನೆ ಕೇಳಿದರೆ ಅದಕ್ಕೆ ನಾವು ಉತ್ತರ ನೀಡುತ್ತೇವೆ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇದು ರಾಜಕೀಯ ವೇದಿಕೆ ಅಲ್ಲದೇ ಇದ್ದರೂ...

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಸಮಾಧಾನವಾಗಿ ಕೇಳಿದಾಗ, ಉತ್ತರವನ್ನು ಸಹ ಸಮಾಧಾನವಾಗಿ ಕೇಳಬೇಕು. ಉಪ ಪ್ರಶ್ನೆ ಕೇಳುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶವಿದೆ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಆಯಿತು ಮಾನ್ಯ ಸಚಿವರು ಉತ್ತರ ನೀಡಲಿ.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಅಕ್ರಮ ಎಸಗಿದ 7 ಅಂಗಡಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಅಮಾನತ್ತುಗೊಳಿಸುವಂತಹ ಕ್ರಮ ಕೈಗೊಂಡಿದೆ. 531 ಪಡಿತರ ಅಂಗಡಿಗಳಿಗೆ ನೋಟಿಸ್ ನೀಡಿದೆ. 183 ಅಂಗಡಿಯವರ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕುವಂತಹ ಕೆಲಸ ಮಾಡಿದೆ. ಇದರ ಮೇಲೆ ಪಾರದರ್ಶಕವಾದಂತಹ ವ್ಯವಸ್ಥೆಯನ್ನು ಭಾರತ ಸರ್ಕಾರ ಮೊದಲ ಬಾರಿಗೆ ರೂಪಿಸಿದೆ. ಅದಕ್ಕಾಗಿ, ಆಧಾರ್ ಕಾರ್ಡ್ ಮತ್ತು ಮೊಬೈಲ್ ಸಂಖ್ಯೆಯನ್ನು link ಮಾಡಿದೆ. ಹಾಗೆಯೇ ಓ.ಟಿ.ಪಿ. ಮೂಲಕ ಅಂದರೆ, ಅವರನ್ನು ಖಾತ್ರಿಗೊಳಿಸಬೇಕು. ಈ ಮೊದಲು, ಓ.ಟಿ.ಪಿ. ಬರಬೇಕು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ Online ನಲ್ಲಿ ಹೆಬ್ಬೆಟ್ಟು ಗುರುತು(ತಂಬ್) ನೀಡಬೇಕು. ಎರಡೂ ಇಲ್ಲದೇ ಇದ್ದರೆ, Network ತೊಂದರೆ ಇದ್ದು, ಅನುಮತಿ ತೆಗೆದುಕೊಂಡರೆ ಶೇಕಡ 2 ರಷ್ಟು ಪ್ರತಿ ಅಂಗಡಿಯಲ್ಲಿ ನೇರವಾಗಿ ಅವರು ತೂಕ ಮಾಡಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಹಾಗಾಗಿ, ಈಗ ಕೇಂದ್ರಿಕೃತವಾದ ಅಕ್ರಮಕ್ಕೆ ಸಾಧ್ಯತೆಗಳಿರುವುದಿಲ್ಲ. Retail ಆಗಿ ಯಾರಾದರೂ ಪಡಿತರದಾರ/ಗ್ರಾಹಕನೇ ವಾಪಸ್ಸು ಮಾರಾಟ ಮಾಡಿದರೆ, ಅದನ್ನು ತಡೆಯುವ ಸ್ಥಿತಿಯಲ್ಲಿ ಇಲ್ಲ. ಆದರೆ, ಈ ಮೊದಲು warehouse ನಿಂದಲೇ ನೇರವಾಗಿ transfer ಆಗುತ್ತಿದ್ದ ಕಾಲ ಬೇರೆ. ಈಗ ಆ ಕಾಲ ಇರುವುದಿಲ್ಲ. ಈಗ ಇರುವುದು ಪ್ರಾಮಾಣಿಕ ವ್ಯವಸ್ಥೆಯನ್ನು ರೂಪಿಸಿರುವ ಕಾಲ. ಹಾಗಾಗಿ, ಈಗ ಅದಕ್ಕೆ ಅವಕಾಶವಿರುವುದಿಲ್ಲ. ಮಾನ್ಯ ಸದಸ್ಯರು ಹೇಳಿರುವುದು ಆ ಕಾಲದಲ್ಲಿ. ಅದನ್ನು ಅವರ ಕಾಲ ಅಥವಾ ಯಾರ ಕಾಲ ಎಂದಾದರೂ ಅಂದುಕೊಳ್ಳಬಹುದು. ನಮ್ಮ ಕಾಲದಲ್ಲಿ ಅದು ನಡೆಯುವುದಿಲ್ಲ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟಿರುವುದು ಯಾರ ಕಾಲದಲ್ಲಿ?

**(ಗೊಂದಲ)**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಕೆ.ಸಿ. ಕೊಂಡಯ್ಯನವರದ್ದು.

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಪಡಿತರ ಅಕ್ಕಿಯನ್ನು ಗೋದ್ರಾಮುಗಳಲ್ಲಿ ಪ್ಯಾಕ್ ಮಾಡಿ, ತಮ್ಮ ಭಾವಚಿತ್ರವನ್ನು ಅಂಟಿಸಿ ವಿತರಣೆ ಮಾಡಿರುತ್ತಾರೆ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅಕ್ರಮ ಎಸಗಿದಂತಹ ಅಂಗಡಿಗಳ ತನಿಖೆ ಮಾಡಿ, ಸಂಬಂಧಪಟ್ಟ ಅಧಿಕಾರಿಯನ್ನು suspend ಮಾಡುವುದಕ್ಕೆ ಈ ಸರ್ಕಾರಕ್ಕೆ ಏನಾಗಿದೆ?

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಕ್ಕಿಯನ್ನು ಕಾಳಸಂತೆಯಲ್ಲಿ ಪ್ಯಾಕ್ ಮಾಡಿ, ಬಡವರಿಗೆ ವಿತರಣೆ ಮಾಡುವಾಗ ತಮ್ಮ ಭಾವಚಿತ್ರಗಳನ್ನು ಅಂಟಿಸಿ ವಿತರಣೆ ಮಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಶ್ರೀ ಆಯನೂರು ಮಂಜುನಾಥ:–** ಮಾನ್ಯ ಸಭಾಪತಿಯವರೇ, ಎಲ್ಲಾ ಪ್ರಶ್ನೆಗೂ ಆ ಕಡೆಯಿಂದ ಅವರು ಒಬ್ಬರೇ ಮಾತನಾಡಿದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–** ನಾನು ಮುಂದಿನ ಪ್ರಶ್ನೆ ಕರೆದಾಯಿತು.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾವು ಮಾತನಾಡುತ್ತಿಲ್ಲ. ನಮ್ಮ ಪ್ರಶ್ನೆ ಕೇಳುತ್ತಿದ್ದೇವೆ. ಅದಕ್ಕೆ ಅವರು ಸರಿಯಾದ ಉತ್ತರ ನೀಡುತ್ತಿಲ್ಲ. ನಾವು ಪ್ರಶ್ನೆ ಕೇಳಿದರೆ, ಅದಕ್ಕೆ ಅವರು ರಾಜಕೀಯ ಉತ್ತರ ನೀಡುತ್ತಿದ್ದಾರೆ. ಮಾನ್ಯ ರವಿಯವರು ಬಹಳ ಚಾಣಾಕ್ಷರಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ನಾನು ಮುಂದಿನ ಪ್ರಶ್ನೆಗೆ ಹೋಗುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕೊಂಡಯ್ಯನವರನ್ನು ಹೊರತುಪಡಿಸಿ, ತಾವು ಮಾತನಾಡಿದ್ದು ಯಾವುದು ರೆಕಾರ್ಡ್‌ಗೆ ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ನಡೆವಳಿಯನ್ನು ದಾಖಲು ಮಾಡಿರುವುದಿಲ್ಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 170**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಸಿ. ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆ ಕೈಗಾರಿಕೆಗೆ ಸಂಬಂಧಪಟ್ಟಿದ್ದರೂ ಸಹ, ನಿರ್ದಿಷ್ಟವಾಗಿ ಕೊರೊನಾ ಹಿನ್ನೆಲೆಯಲ್ಲಿ ಚೀನಾ ದೇಶದಿಂದ ಭಾರತ ದೇಶದ ಕಡೆ ಮುಖ ಮಾಡಿರುವ ಕೈಗಾರಿಕೆಗಳ ಬಗ್ಗೆ ನಾನು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು, ದಿನಾಂಕ:05.05.2020 ರಲ್ಲಿ ಶ್ರೀ ನಂದನ್ ನೀಲಕೇಣಿ ಮತ್ತು ಶ್ರೀಮತಿ ಕಿರಣ್ ಮಜುಂದಾರ್ ಷಾ ರವರ ಸಮಿತಿಯನ್ನು ಮಾಡಿದ್ದಾರೆ. ಇವೊತ್ತಿನ ದಿವಸ ಚೀನಾ ಮತ್ತು ಭಾರತದ ಭಾಂದವ್ಯ ಕಡಿತಗೊಳ್ಳುತ್ತಿದೆ. ಆ ಹಿನ್ನೆಲೆಯಲ್ಲಿ ಇದನ್ನು ಟ್ಯಾಪ್ ಮಾಡುವುದಕ್ಕಾಗಿ ನಾನು ಪ್ರಶ್ನೆ ಕೇಳಿದ್ದೇನೆ. ಬೇರೆ ವಿಷಯಗಳು ಸಾಕಷ್ಟಿವೆ, ಅವುಗಳನ್ನು ಚರ್ಚೆ ಬಂದಾಗ ಹೇಳುತ್ತೇನೆ. ಉದಾಹರಣೆಗೆ, ಈ ಕೊರೊನಾ ಬಂದಾಗಿನಿಂದಲೂ, face mask, face shield, temperature meter and oximeter ಇವೆಲ್ಲವನ್ನೂ ಇವೊತ್ತಿವರೆಗೂ ನಾವು ಚೈನಾದಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರು identify ಮಾಡಿ ಯಾವ ವಸ್ತುಗಳನ್ನು ನಾವು ಚೀನಾದಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ ಎಂಬುದನ್ನು ಪಟ್ಟಿ ಮಾಡಿ, ಅದಕ್ಕೆ ಅನುಗುಣವಾಗಿ ಆ ವಸ್ತುಗಳನ್ನು ನಮ್ಮಲ್ಲಿ ತಯಾರು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇವೊತ್ತಿನ ದಿವಸ ಕೈಗಾರಿಕಾ ನೀತಿ ಮಾಡುತ್ತಿದ್ದಾರೆ. ಅದು ಯಾವ ಕಾಲಕ್ಕೆ ಮುಕ್ತಾಯವಾಗುತ್ತದೆ? ಕೈಗಾರಿಕೆಗಳಿಗೆ ಭೂಮಿ ಹಂಚಿಕೆ ಮಾಡುವುದು ಹೈ ಪವರ್ ಕಮಿಟಿ ಮಾಡುವುದು ಮುಂತಾದವು ಆಗುತ್ತದೆ. ಇಷ್ಟರೊಳಗೆ ಕಾಲ ಮುಗಿದು ಹೋಗುತ್ತದೆ. ಆದಕಾರಣ, ತಮ್ಮ ಇಲಾಖೆಯಿಂದ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ, ನಾವು ಚೀನಾ ದೇಶದಿಂದ ಯಾವ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತೇವೆ. ಅವುಗಳಿಗೆ ಅನುಗುಣವಾಗಿ ತಕ್ಷಣವೇ ಮುಂದಿನ 2-3 ತಿಂಗಳಿನಲ್ಲಿ ನಮ್ಮ ದೇಶದಲ್ಲಿ ಉತ್ಪಾದನೆ ಮಾಡಬಹುದೇ ಎಂಬುದನ್ನು ಏನಾದರೂ ಗುರುತಿಸಿದ್ದರೆ ಅದನ್ನು ದಯಮಾಡಿ ತಿಳಿಸಬೇಕೆಂದು ಕೋರುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ಕೊಂಡಯ್ಯನವರು ಬಹಳ ಮುಖ್ಯವಾಗಿ ಕೊರೊನಾ ಹಿನ್ನೆಲೆಯಲ್ಲಿ ಇಡೀ ಜಗತ್ತಿನಲ್ಲಿ ಯಾವ ವಾತಾವರಣ ನಿರ್ಮಾಣವಾಗಿದೆ ಮತ್ತು ಅದರಲ್ಲಿ ಚೀನಾ ದೇಶದ ವಿರುದ್ಧ ಒಂದು ಆಕ್ರೋಶ ಇದೆ. ಅದರಲ್ಲಿ ಅಮೆರಿಕಾ ಮತ್ತು ಜಪಾನ್‌ನಂತಹ ದೇಶಗಳು, ಇವೊತ್ತಿನ ದಿವಸ ಚೀನಾ ದೇಶದಲ್ಲಿ ತಮ್ಮ Multinational Companies ಗಳು ಏನಿವೆ ಅವುಗಳನ್ನು ಚೀನಾದಿಂದ ಹೊರಗಡೆ ತರುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಯತ್ನ ನಡೆಯುತ್ತಿದೆ. ಆ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ಸಹ ಪೂರಕವಾಗಿ ಕೆಲವೊಂದು ಕ್ರಮಗಳನ್ನು ಕೈಗೊಂಡಿದೆ ಎಂಬುದರ ಬಗ್ಗೆ ವಿವರವಾಗಿ ಉತ್ತರದಲ್ಲಿ ಹೇಳಿದ್ದೇನೆ. ಬಹಳ ಮುಖ್ಯವಾಗಿ, ಮಾನ್ಯ ಸದಸ್ಯರು ಹೇಳಿದಂತೆ, ಅಧಿಕಾರಿಗಳ ನೇತೃತ್ವದಲ್ಲಿ ಅಂದರೆ, ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಪಡೆಯನ್ನು ನಾವು ಈಗಾಗಲೇ ರಚನೆ ಮಾಡಿದ್ದೇವೆ. ಅದರಲ್ಲಿ ಮುಖ್ಯ ಕಾರ್ಯದರ್ಶಿಯವರು, Foreign Delegates ಮತ್ತು ಬೇರೆ ಬೇರೆ ದೇಶಗಳ ಸದಸ್ಯರು ಇರುತ್ತಾರೆ. ಅವರೆಲ್ಲರೂ ಸೇರಿ ಈಗಾಗಲೇ ಹಲವಾರು ಸಭೆಗಳನ್ನು ಮಾಡಿದ್ದಾರೆ ಮತ್ತು ಎಷ್ಟೋ ಕಂಪನಿಗಳ ಜೊತೆ interaction ಮಾಡಿದ್ದಾರೆ. ಹೊಸ ಕೈಗಾರಿಕೆ ನೀತಿ ಅದು ನಿರಂತರವಾಗಿ ನಡೆಯುವಂತಾಗಿದೆ. ಮಾನ್ಯ ಸದಸ್ಯರ ಪ್ರಶ್ನೆಯೂ ಸಹ ನಿರ್ದಿಷ್ಟವಾಗಿ ಚೀನಾ ದೇಶದಿಂದ ಬರುವಂತಹ ಕಂಪನಿಗಳ ಬಗ್ಗೆ ಇದೆ. ಅದರ ಬಗ್ಗೆ, ಈಗಾಗಲೇ ಎಲ್ಲಾ ದೇಶಗಳ ಜೊತೆ ಅಂದರೆ, ಚೀನಾ ದೇಶದಲ್ಲಿ ಯಾವ ದೇಶದವರು ತಮ್ಮ ಕಂಪನಿಗಳನ್ನು ಸ್ಥಾಪನೆ ಮಾಡಿದ್ದಾರೆ, ಅಂತಹ ದೇಶಗಳ ಜೊತೆ ಹಾಗೂ ಅವರ ಪ್ರತಿನಿಧಿಗಳ ಜೊತೆ ನಮ್ಮ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಹಾಗೂ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಮತ್ತು Webinar ಮುಖಾಂತರ ಮತ್ತು ಇನ್ನಿತರ ರೀತಿಯಿಂದ ಹಲವಾರು ಸಭೆಗಳನ್ನು ಮಾಡಿದ್ದಾರೆ. ಜೊತೆಗೆ, ಕೆಲವೊಂದು ಪ್ರಸ್ತಾವನೆಯನ್ನು ತರುವಂತಹ ಪ್ರಯತ್ನಗಳು ಸಹ ನಡೆಯುತ್ತಿದೆ. ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಏಕೆಂದರೆ, ಮಾರ್ಚ್ ತಿಂಗಳಿನಲ್ಲಿ ಅಧಿವೇಶನ ಮುಕ್ತಾಯವಾದ ನಂತರ ಕೊರೊನಾ ಹೆಚ್ಚಳವಾಗಿದ್ದರಿಂದ 4-5 ತಿಂಗಳು lockdown ಆಗಿರುತ್ತದೆ. ಅದಾದ ಮೇಲೆ ಈ ವಿಷಯದಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ ಹಾಗೂ ಇದರಲ್ಲಿ ಒಂದಿಷ್ಟು ಒಳ್ಳೆಯ ಪ್ರತಿಕ್ರಿಯೆ ಸಹ ಬರುತ್ತಿದೆ. ಅದಕ್ಕಾಗಿ, ನಾವು ನಮ್ಮ ದೇಶಕ್ಕೆ ಬರುವಂತಹ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡುವಂಥದ್ದು, tax concessions ಕೊಡುವಂಥದ್ದು, ಎಲ್ಲಾದರ ಬಗ್ಗೆ ಪ್ರಸ್ತಾವನೆ ಕೊಟ್ಟಿದ್ದೇವೆ. ಆದಾಗ್ಯೂ, ಮೊದಲು ಕಂಪನಿಗಳು ನಮ್ಮ ದೇಶಕ್ಕೆ ಬರಬೇಕಾಗುತ್ತದೆ. ಅದಕ್ಕೆ ಪೂರಕವಾದಂತಹ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಆದಷ್ಟು ಬೇಗ ಅದಕ್ಕೆ ಎಲ್ಲಾ ರೀತಿಯಿಂದ ಪ್ರಯತ್ನ ಮಾಡಿ, ಹೆಚ್ಚು ಹೂಡಿಕೆದಾರರು, ಅದರಲ್ಲಿಯೂ ಚೀನಾ ದೇಶದಲ್ಲಿರುವ ಇತರ ದೇಶಗಳ ಕಂಪನಿಗಳು ಇಲ್ಲಿಗೆ ಬರುವುದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 242**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ. ಆದರೆ, 2015ನೇ ಸಾಲಿನಲ್ಲಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ಜಂಟಿಯಾಗಿ ಒಂದು ಏರೋಸ್ಪೇಸ್ ಕಾಮನ್ ಫಿನಿಷಿಂಗ್ ಫೆಸಿಲಿಟಿ (ಎ.ಸಿ.ಎಫ್.ಎಫ್) ಎಂಬ ನೂತನ ಯೋಜನೆಯನ್ನು ಇಡೀ ಭಾರತ ದೇಶದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ತರಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಒಡಂಬಡಿಕೆಯಲ್ಲಿ ಸುಮಾರು 90 ಕೋಟಿ ಅಂದಾಜು ವೆಚ್ಚದಲ್ಲಿ, ಅಂದರೆ, ಇದರಲ್ಲಿ ಕೇಂದ್ರ ಸರ್ಕಾರದ್ದು 42.69 ಕೋಟಿ ಹಾಗೂ ರಾಜ್ಯ ಸರ್ಕಾರದ್ದು 47.81 ಕೋಟಿ ರೂಪಾಯಿಗಳಾಗಿರುತ್ತದೆ. ಈ ಯೋಜನೆ ಮಂಜೂರಾತಿಯಾಗಿ ಸಚಿವ ಸಂಪುಟದ ಅನುಮೋದನೆ ಸಹ ಆಗುತ್ತದೆ. ನಂತರ, 4 ಏಜೆನ್ಸಿಗಳಿಗೆ ವಹಿಸಲು work order ಗೆ ದಿನಾಂಕ:18.03.2017 ರಲ್ಲಿ ಅನುಮೋದನೆ ನೀಡುತ್ತದೆ. ಅದರಂತೆ, ಕೆಲಸ ಕೂಡ ಪ್ರಾರಂಭವಾಗುತ್ತದೆ. ತದನಂತರ, ಇದನ್ನು ಸಂಪೂರ್ಣವಾಗಿ ನಮ್ಮ ಇಲಾಖಾ ಅಧಿಕಾರಿಗಳ ವೈಫಲ್ಯತೆಯಿಂದ ಈ ಯೋಜನೆಯನ್ನು ಕೈಬಿಟ್ಟು ದಿನಾಂಕ:18.03.2019ರಲ್ಲಿ ಕೇಂದ್ರ ಸರ್ಕಾರಕ್ಕೆ ಬಡ್ಡಿ ಸಮೇತ ಹಣವನ್ನು ವಾಪಸ್ಸು ಕೊಡುತ್ತಾರೆ. ಮಾನ್ಯ ಸಚಿವರು ಇದನ್ನು ಬಹಳ ದೀರ್ಘವಾಗಿ ಗಮನಿಸಬೇಕು. ಇವೊತ್ತಿನ ದಿವಸ ಭಾರತ ದೇಶದಲ್ಲಿ, ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ಗುಡಿ ಕೈಗಾರಿಕೆಗಳ ಪುನಃಶ್ಚೇತನಕ್ಕೂ ಸೇರಿದಂತಹ ಒಂದು ನೂತನವಾದ ಯೋಜನೆಯನ್ನು ನಮ್ಮ ಕರ್ನಾಟಕ ರಾಜ್ಯಕ್ಕೆ ಕೊಡುತ್ತಾರೆ. ಅದನ್ನು ನಮ್ಮ ರಾಜ್ಯ ಸರ್ಕಾರ ಅಳವಡಿಸಿಕೊಂಡು, work order ಕೊಟ್ಟು ಹಾಗೂ ಇನ್ನಿತರ ಎಲ್ಲಾ ಕೆಲಸಗಳನ್ನು ಮಾಡಿ, ಕೊನೆಗೆ ಆ ಯೋಜನೆಯನ್ನು ಸಂಪೂರ್ಣವಾಗಿ ರದ್ದು ಮಾಡುತ್ತಾರೆ. ಇದಕ್ಕೆ ನಮ್ಮ ಇಲಾಖಾಧಿಕಾರಿಗಳ ವೈಫಲ್ಯ ಕಾರಣವೇ ಅಥವಾ ಬೇರೆ ಕಾರಣವಿದೆಯೇ? ಈ ಯೋಜನೆ ನಮ್ಮ ರಾಜ್ಯಕ್ಕೆ ಬಾರದೇ ಇದ್ದುದರಿಂದ, ಇವೊತ್ತಿನ ದಿವಸ ನಮ್ಮ ರಾಜ್ಯಕ್ಕೆ ಎಷ್ಟು ನಷ್ಟವಾಗಿದೆ? ಈಗಾಗಲೇ ಮಾನ್ಯ ಸಚಿವರು ಮಾತನಾಡುತ್ತಾ, ಕೈಗಾರಿಕೆಗಳನ್ನು ದೊಡ್ಡದು ಮಾಡುವುದಕ್ಕೆ ಚೀನಾ ದೇಶದಿಂದ ಎಲ್ಲರನ್ನೂ ಕರೆದುಕೊಂಡು ಬರುತ್ತೇವೆ. ನಮ್ಮ ರಾಜ್ಯವನ್ನು ಹೇಗೆ ಮಾಡುತ್ತೇವೆಂಬ ಬಗ್ಗೆ ಅವರ ಭಾಷಣ ಏನು? ಇಂತಹ ಒಂದು ಮಹತ್ವದ ಯೋಜನೆಯನ್ನು ಇಲಾಖಾ ಅಧಿಕಾರಿಗಳು ಬಲಿ ಕೊಟ್ಟಿದ್ದಾರಲ್ಲ, ಅದರ ಬಗ್ಗೆ ಏನಾದರೂ ಒಂದು ತನಿಖೆ ಮಾಡಿದ್ದಾರೆಯೇ?

(ಮುಂದುವರೆದಿದೆ...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(758)22.09.2020/11.50/ವೈಎಲ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಇಂತಹ ಒಂದು ಮಹತ್ವದ ಯೋಜನೆಯನ್ನು ಇಲಾಖಾಧಿಕಾರಿಗಳು ಬಲಿ ಕೊಟ್ಟಿರುವ ಬಗ್ಗೆ ಏನಾದರೂ ತನಿಖೆ ಮಾಡಲಾಗಿದೆಯೇ?

**ಶ್ರೀ ಎನ್.ಅಪ್ಪಾಜಿಗೌಡ:-** ಯಾರು ಇದಕ್ಕೆ ಹೊಣೆ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ದಿನಾಂಕ: 22.09.2017 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ (ACFF) Aerospace Common Finishing Facility ಕಾಮಗಾರಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ, ACFF ತಾಂತ್ರಿಕ ಸಮಿತಿಯನ್ನು ಪುನರ್ ರಚಿಸಿ, ಸದರಿ ಯೋಜನೆಯನ್ನು ಪುನರ್ ಪರಿಶೀಲಿಸುವವರೆಗೂ ಕಾಮಗಾರಿಯನ್ನು ಕೂಡಲೇ ನಿಲ್ಲಿಸುವಂತೆ ನಿರ್ದೇಶಿಸುತ್ತೇನೆ ಎಂದು ಅಪರ ಮುಖ್ಯ ಕಾರ್ಯದರ್ಶಿಯವರು ಉತ್ತರ ನೀಡಿದ್ದಾರೆ. ವರ್ಕ್ ಆರ್ಡರ್ ಎಲ್ಲಾ ನೀಡಿದ ಮೇಲೆ ತಾಂತ್ರಿಕ ಸಮಿತಿಯ ಅಭಿಪ್ರಾಯ ತೆಗೆದುಕೊಂಡು, ಸಚಿವ ಸಂಪುಟ ಸಭೆಯಲ್ಲಿ ಅಭಿಪ್ರಾಯ ತೆಗೆದುಕೊಂಡು ಎರಡೂ ಸರ್ಕಾರದಿಂದ ಹಣ ಬಿಡುಗಡೆಯಾಗಿ ಕೆಲಸ ಪ್ರಾರಂಭಗೊಂಡ ನಂತರ ಸದರಿ ಯೋಜನೆಯನ್ನು ಪುನರ್ ಪರಿಶೀಲಿಸುವಂತೆ ಕಾಮಗಾರಿಯನ್ನು ಕೂಡಲೇ ನಿಲ್ಲಿಸುವಂತೆ ಅಪರ ಮುಖ್ಯ ಕಾರ್ಯದರ್ಶಿಯವರು ಮಾಡಿದ್ದಾರೆ. ಮುಂದುವರೆದು, ದಿನಾಂಕ: 11.12.2018 ರಂದು ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೆ: ಹೆಚ್.ಎ.ಎಲ್ ಹಾಗೂ ಮೆ: ಬೋಯಿಂಗ್ ಹಾಗೂ ಇನ್ನಿತರ ಕಂಪನಿಗಳ ಸಹಯೋಗದೊಂದಿಗೆ ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿತ್ತು. ದಿನಾಂಕ: 08.01.2019 ರಂದು ನಡೆದ ಸಭೆಯಲ್ಲಿ ಮೆ: ಹೆಚ್.ಎ.ಎಲ್ ಹಾಗೂ ಮೆ: ಬೋಯಿಂಗ್‌ರವರು ಏರೋಸ್ಪೇಸ್ ಕಾಮನ್ ಫಿನಿಷಿಂಗ್ ಫೆಸಿಲಿಟಿ ಅನ್ನು ವಹಿಸಿಕೊಳ್ಳಲು ಕೋರಲಾಗಿತ್ತು. ಇದರ ಬಗ್ಗೆ ಸದರಿಯವರಿಂದ ಪ್ರತಿಕ್ರಿಯೆ ಬಂದಿರುವುದಿಲ್ಲ. ಹಾಗಾಗಿ ಈ ಕೈಗಾರಿಕೆಗಳು ಆಸಕ್ತಿ ತೋರಿಸಿರುವುದಿಲ್ಲ ಎಂದು ಉತ್ತರ ನೀಡಿದ್ದಾರೆ. ಹಾಗಾದರೆ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇವರನ್ನು ಕೇಳಿಕೊಂಡು ನಿರ್ಧಾರ ತೆಗೆದುಕೊಳ್ಳುತ್ತದೆಯೇ? ಅವರು ಏನಾದರೂ ವಹಿಸಿಕೊಳ್ಳುವುದಿಲ್ಲ, ಮಾಡುವುದಿಲ್ಲವೆಂದರೆ ಅದನ್ನು ಅಲ್ಲಿಯೇ ಕೈಬಿಡಲಾಗುತ್ತದೆಯೇ? ಇದನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ಹಂತದಲ್ಲಿ ಕೇಳುತ್ತೀರಿ? 2018ನೇ ಸಾಲಿನಲ್ಲಿ ಯಾವಾಗ ಯೋಜನೆ ಪ್ರಾರಂಭಗೊಂಡಿದೆ? ಇದು ಇಲಾಖಾಧಿಕಾರಿಗಳ ನಿರ್ಲಕ್ಷ್ಯ ಅಲ್ಲವೇ? ಈ ಯೋಜನೆಯಿಂದಾಗಿ ಇಂಜಿನಿಯರ್ಸ್, ಸಿ.ಇ.ಓ., ಅಪರ ಮುಖ್ಯ ಕಾರ್ಯದರ್ಶಿಯವರ ಧೋರಣೆಯಿಂದ ಈ ರಾಜ್ಯಕ್ಕೆ ಅನ್ಯಾಯವಾಗಲಿಲ್ಲವೇ? ಇದರಲ್ಲಿ ಬಹಳ ಪಟ್ಟಬದ್ಧ ಹಿತಾಸಕ್ತಿ ಇದೆ. ಇವರೆಲ್ಲರೂ ಸಹ ಸೇರಿ ಒಟ್ಟಾಗಿ ಖಾಸಗಿ ಕಂಪನಿಯನ್ನು ಪ್ರಾರಂಭ ಮಾಡಬೇಕೆಂಬ ಉದ್ದೇಶದಿಂದ ಈ ಯೋಜನೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಿ ಕೇಂದ್ರ ಸರ್ಕಾರಕ್ಕೆ ಹಿಂದಿರುಗಿಸಲಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ನೀಡುತ್ತಾರೆ. 5 ನಿಮಿಷ ಪ್ರಶ್ನೆಗೆ ಸಮಯವಾಗಿದೆ. ಉತ್ತರಕ್ಕೂ 5 ನಿಮಿಷ ಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ದಯಮಾಡಿ ಇದರ ಬಗ್ಗೆ ತನಿಖೆಯಾಗಬೇಕು. ಇಂತಹ ಒಂದು ಮಹತ್ವದ ಯೋಜನೆಯನ್ನು ಕೈಬಿಡಲು ಯಾವ ಕಾರಣಕ್ಕೂ ಅವಕಾಶ ಮಾಡಿಕೊಡಬಾರದು. ಅವರಲ್ಲಿ ಬದ್ಧತೆ, ಪ್ರಾಮಾಣಿಕತೆ ಇದ್ದರೆ ತನಿಖೆ ಮಾಡಿಸಿ. ಇದಕ್ಕೆ ಬಿಡುಗಡೆಯಾದ ಹಣದಲ್ಲಿ ಅಧಿಕಾರಿಗಳು ಭ್ರಷ್ಟಚಾರ ಮಾಡಿದ್ದಾರೆ. ದಯವಿಟ್ಟು ಮಾನ್ಯ ಸಚಿವರು ಉತ್ತರ ನೀಡಬೇಕು.

**ಶ್ರೀ ಜಗದೀಶ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏತಕ್ಕೆ ಇಷ್ಟೊಂದು ಭಾವೋದ್ವೇಗಕ್ಕೊಳಗಾದರೋ ಗೊತ್ತಿಲ್ಲ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಇದು ಸತ್ಯದ ವಿಚಾರ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸ್ವಲ್ಪ ತಾಳ್ಮೆಯಿಂದ ಉತ್ತರ ಕೇಳಲಿ. ಆನಂತರ ಏನಾದರೂ ಮಾತನಾಡಬಹುದಲ್ಲವೇ? ಪ್ರಶ್ನೆ ಕೇಳಿದ್ದು, ಸಚಿವರು ಉತ್ತರ ನೀಡಲಿ.

**ಶ್ರೀ ಜಗದೀಶ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಏರೋಸ್ಪೇಸ್ ಪಾರ್ಕ್‌ನಲ್ಲಿ ಏರೋಸ್ಪೇಸ್ ಕಾಮನ್ ಫಿನಿಷಿಂಗ್ ಫೆಸಿಲಿಟಿ,...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರಮೇಶ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರ ಉತ್ತರ ಏನೆಂಬುದು ಗೊತ್ತಿದೆ. ಸರ್ಕಾರವು ಈ ಸದನವನ್ನು ನಡೆಯುವುದಕ್ಕೆ ಬಿಡುತ್ತಿಲ್ಲ.

(ಗೊಂದಲ)

**ಶ್ರೀ ಜಗದೀಶ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರೇ, ನಾನು ಉತ್ತರ ನೀಡಬೇಕೇ, ಬೇಡವೇ ಎಂಬುದನ್ನು ತಾವೇ ಹೇಳಬೇಕು. ಅವರು ಮಾತನಾಡುವಾಗ ನಾನು ಸುಮ್ಮನೆ ಕುಳಿತುಕೊಂಡು ತಾಳ್ಮೆವಹಿಸಿದ್ದೇನೆ. ನಾನು ಉತ್ತರ ನೀಡುವಾಗ ಅವರು ಸಹ ತಾಳ್ಮೆವಹಿಸಿದರೆ ತುಂಬಾ ಒಳ್ಳೆಯದು. ಏರೋಸ್ಪೇಸ್ ಕಾಮನ್ ಫಿನಿಷಿಂಗ್ ಫೆಸಿಲಿಟಿ (ಎ.ಸಿ.ಎಫ್.ಎಫ್) ಅನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿರುವುದು. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ರೂ.90.50 ಕೋಟಿಗಳಿಗೆ ಟೆಂಡರ್ ಅಧಿಸೂಚನೆ ಹೊರಡಿಸಿ; Aircraft Metal Components and Aircraft Rapid Prototyping components, Aircraft Electrical and Electronic components, Aircraft advanced Composite Materials and Aircraft Painting and Finishing, ಈ ರೀತಿ 4 ವಿಭಾಗಗಳಾಗಿ ಮಾಡಿ ಗುತ್ತಿಗೆ ನೀಡಲಾಗಿದೆ. ದಿನಾಂಕ: 18.03.2017 ಮತ್ತು 20.03.2017 ರಂದು ಟೆಂಡರ್ ವರ್ಕ್ ಆರ್ಡರ್ ನೀಡಿದರು. ಒಂದು ಸ್ಪಷ್ಟವಾದ ವಿಚಾರವನ್ನು ಹೇಳುತ್ತಿದ್ದೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾನು ಕೈಗಾರಿಕಾ ಸಚಿವನಾದ ಮೇಲೆ ಇವೆಲ್ಲಾ ನಡವಳಿಗಳು ಆಗಿಲ್ಲ. ಈಗಾಗಲೇ ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಏನೇನೋ ಆಗಿದೆ, ದೊಡ್ಡದಾಗಿ ಭಾಷಣ ಮಾಡುತ್ತೀರಿ ಎಂದು ಹೇಳಿದರು. ನಾವು ಭಾಷಣ ಮಾಡಿದ ಮೇಲೆ ರದ್ದಾಗಿಲ್ಲ. ಹೊಸ ಕೈಗಾರಿಕಾ ನೀತಿ ಬಂದ ಮೇಲೆ ರದ್ದಾಗಿರುವುದಿಲ್ಲ. ಅವರ ಹತ್ತಿರ ಸಹ ಮಾಹಿತಿ ಇರುತ್ತದೆ, ಹಿಂದೆ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದಾಗ ಆಗಿರುವುದು. ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮಂಜೂರು ಮಾಡಿ, ಚರ್ಚೆಯಾಗಿ ರದ್ದಾಗಿದ್ದು, ಅಂದಿನ ಸರ್ಕಾರ ಅಧಿಕಾರದಲ್ಲಿದ್ದಾಗಲೇ ಹಣದ ಮಾಹಿತಿ ಇದೆ. ಈ ಹಿನ್ನೆಲೆಯಲ್ಲಿ, Modified Industrial Infrastructure Upgradation Scheme ನಿಯಮಾವಳಿಯಂತೆ ಸದರಿ ಯೋಜನೆಯನ್ನು ಮಾರ್ಚ್ 2017ಕ್ಕೆ ರಂದು ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದಾಗ ಕೇಂದ್ರ ಸರ್ಕಾರದವರು ಸ್ಥಗಿತಗೊಳಿಸಿದರು. ಆ ಯೋಜನೆಯನ್ನು ದಿನಾಂಕ: 31.03.2019 ರಂದು ಅಂದಿನ ಸರ್ಕಾರ ಪೂರ್ಣಗೊಳಿಸಬೇಕಾಗಿತ್ತು. ಆ ಸಂದರ್ಭದಲ್ಲಿ ಏತಕ್ಕೆ ಯೋಜನೆಯನ್ನು ಪೂರ್ಣಗೊಳಿಸಲಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ದಿನಾಂಕ: 31.03.2019 ರೊಳಗಾಗಿ ಪೂರ್ಣಗೊಳ್ಳದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವುದರಿಂದ ಕೇಂದ್ರ ಸರ್ಕಾರ ಏರೋಸ್ಪೇಸ್ ಕಾಮನ್ ಫಿನಿಷಿಂಗ್ ಫೆಸಿಲಿಟಿಯ ಯೋಜನೆಯನ್ನು ಹಿಂದಕ್ಕೆ ತೆಗೆದುಕೊಂಡ ಮೇರೆಗೆ ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು. ಠೇವಣಿ ಇರಿಸಿದ ರೂ.12.00 ಕೋಟಿಗಳನ್ನು ವಾಪಸ್ಸು ನೀಡಿ ಎಂದು ಆದೇಶ ಮಾಡಿದ ಮೇಲೆ ಅಂದಿನ ಸರ್ಕಾರ ಅಧಿಕಾರದಲ್ಲಿದ್ದಾಗಲೇ ಆ ಹಣವನ್ನು ವಾಪಸ್ಸು ಮಾಡಲಾಗಿತ್ತು. ಆದರೂ ಆ ಸಂದರ್ಭದಲ್ಲಿದ್ದಂತಹ ಅಪರ ಮುಖ್ಯ ಕಾರ್ಯದರ್ಶಿಗಳು ಹೆಚ್ಚಿನ ಪ್ರಯತ್ನ ಮಾಡಿದರು. ಇದರ ಮುಖ್ಯ ಉದ್ದೇಶ ಏರೋಸ್ಪೇಸ್ ಕಾಮನ್ ಫಿನಿಷಿಂಗ್ ಫೆಸಿಲಿಟಿ ಯೋಜನೆಯು ಭಾರತದಲ್ಲಿಯೇ ಪ್ರಥಮ ಯೋಜನೆಯಾಗಿದ್ದು, ಏರೋಸ್ಪೇಸ್ ಉದ್ಯಮಿಗಳಿಗೆ ಒಂದೇ ಕಡೆ ತಮ್ಮ ಉತ್ಪನ್ನಗಳಿಗೆ ಸಾಮಾನ್ಯ ಮೂಲ ಸೌಕರ್ಯವನ್ನು ಒದಗಿಸುವ ಯೋಜನೆಯಾಗಿದೆ. ಆದರೆ, ಈ ಯೋಜನೆ ಪೂರ್ಣಗೊಳ್ಳಲಿಲ್ಲ. ಅಲ್ಲಿ ಇದ್ದಂತಹ ಮೆ:ಹೆಚ್.ಎ.ಎಲ್ ಹಾಗೂ ಮೆ: ಬೋಯಿಂಗ್‌ರವರಿಗೆ ಏರೋಸ್ಪೇಸ್ ಕಾಮನ್ ಫಿನಿಷಿಂಗ್ ಫೆಸಿಲಿಟಿ ಯೋಜನೆಯನ್ನು ಕೊಡಲಾಗಿತ್ತು. ಆದರೆ, ಆ ಒಂದು ಕೈಗಾರಿಕೆಗಳು ತಮ್ಮ Industry ಗಳಲ್ಲಿಯೇ ಈ ಒಂದು ಸೌಕರ್ಯವನ್ನು ಅಳವಡಿಸಿಕೊಂಡಿದ್ದಾರೆ. ಇದರಿಂದಾಗಿ ಅವರು ಈ ಯೋಜನೆಯನ್ನು ಹೆಚ್ಚಿನ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು, ಸವಲತ್ತನ್ನು ತೆಗೆದುಕೊಳ್ಳಬೇಕೆಂಬುದರ ಕಡೆಗೆ ಆಸಕ್ತಿವಹಿಸಲಿಲ್ಲ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಯೋಜನೆಯನ್ನು ರದ್ದು ಮಾಡಿ, ಹಣವನ್ನು ವಾಪಸ್ಸು ತೆಗೆದುಕೊಂಡಿದ್ದರಿಂದ ಎಷ್ಟೇ ಪ್ರಯತ್ನ ಮಾಡಿದರೂ ಅದು ಕಾರ್ಯಗತವಾಗಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಹೇಳಿದ ಹಾಗೆ ಆ ಸಂದರ್ಭದಲ್ಲಿದ್ದಂತಹ ಅಪರ ಮುಖ್ಯ ಕಾರ್ಯದರ್ಶಿಯವರು ಸಭೆ ನಡೆಸಿ ಚಾಲನೆ ಮಾಡಿ, ಕಾರ್ಯಗತಗೊಳಿಸುವುದಕ್ಕೆ ಎಲ್ಲಾ ಪ್ರಯತ್ನ ಮಾಡಿದ್ದಾರೆ. ಇವತ್ತು ಎಲ್ಲಿಯೋ ಒಂದು ಕಡೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಹಿಂದಿನ ಸರ್ಕಾರದ ನಡವಳಿಯನ್ನು ನೋಡಿದರೆ, ಆ ರೀತಿ ಆಗಿಲ್ಲ. ಕೇಂದ್ರ ಸರ್ಕಾರ ನಿಗದಿತ ಸಮಯದೊಳಗೆ ಕೆಲಸ ಮಾಡದೇ ಇರುವುದಕ್ಕೆ ಮತ್ತು ಈ ಸೌಕರ್ಯವನ್ನು ಉಪಯೋಗ ಮಾಡುವುದಕ್ಕೆ ಅಲ್ಲಿ ಇದ್ದಂತಹ ಕೈಗಾರಿಕೆಗಳು ನಿರಾಸಕ್ತಿ ತೋರಿಸಿದ್ದರಿಂದ ಈ ಯೋಜನೆ ವಾಪಸ್ಸು ಹೋಗಿದೆಯೆ ಹೊರತು, ಅದರ ಪ್ರಕಾರ ಸಿಗಬೇಕಾದ ಮೂಲಭೂತ ಸೌಕರ್ಯವೇನಿದೆ ಅದೆಲ್ಲವೂ ಅಲ್ಲಿ ಸಿಗುತ್ತಿತ್ತು. ಈ ಹಿನ್ನೆಲೆಯಿಂದ ಇವತ್ತು ಈ ರೀತಿ ಆಗಿದೆಯೆ ಹೊರತು ಬೇರೆ ಕಾರಣವಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ.

**ಸಭಾಪತಿಯವರು:–** ಆಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಸ್ವಲ್ಪ ಮಾತನಾಡಬೇಕು.

**ಸಭಾಪತಿಯವರು:–** ನಿಮ್ಮ ಪ್ರಶ್ನೋತ್ತರ ಅವಧಿಯ ಸಮಯ ಮುಕ್ತಾಯವಾಗಿದೆ. ಮಾತನಾಡುವುದಕ್ಕೆ ಏನೂ ಇಲ್ಲ. 4

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ಇದೆಲ್ಲಾ ಮಾಡಿರುವುದರಿಂದ ಇಂತಹ ಮಹತ್ವದ ಯೋಜನೆ ಕೈಬಿಟ್ಟು ಹೋಗಿತ್ತು ಎಂದು ಹೇಳಿದರು. ಆದರೆ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಏನಾದರೂ ತನಿಖೆ ಮಾಡಿದ್ದಾರೆಯೇ? ಇಲಾಖಾ ಅಧಿಕಾರಿಗಳನ್ನು defend ಮಾಡಿಕೊಳ್ಳುತ್ತಿದ್ದು, ಇಲಾಖಾ ಅಧಿಕಾರಿಗಳು ಉತ್ತರದಲ್ಲಿ ಏನೆಂದು ಬರೆದಿದ್ದಾರೆ? ಈ ಯೋಜನೆಯನ್ನು ಮುಂದುವರೆಸಬಾರದು, ಸ್ಥಗಿತಗೊಳಿಸಬೇಕೆಂದು ಅಪರ ಮುಖ್ಯ ಕಾರ್ಯದರ್ಶಿಯವರು ಬರೆಯುತ್ತಾರೆ. ಇದರ ಬಗ್ಗೆ ಇಷ್ಟೊಂದು ಕಳಕಳಿ ಇರುವವರು ತನಿಖೆ ಮಾಡಿದ್ದಾರೆಯೇ? ಇಲಾಖಾ ಅಧಿಕಾರಿಗಳು ಭ್ರಷ್ಟಚಾರ ಮಾಡಿಲ್ಲವೇ? ಈ ಯೋಜನೆ ಮಧ್ಯದಲ್ಲಿಯೇ ನಿಲ್ಲುವುದಕ್ಕೆ ಅವರ ಹಸ್ತಕ್ಷೇಪ ಇಲ್ಲವೇ? ಇದರ ಬಗ್ಗೆ ತನಿಖೆ ಮಾಡುತ್ತಾರೆಯೇ ಎಂಬುದನ್ನು ದಯವಿಟ್ಟು ಹೇಳಬೇಕು. ಹಿಂದಿನ ಸರ್ಕಾರ ಮಾಡಿತ್ತು. ಆದರೆ, ಮುಂದಿನ ಸರ್ಕಾರ ಇಂತಹ ಮಹತ್ವದ ಯೋಜನೆ ಕೈತಪ್ಪಿರುವ ಬಗ್ಗೆ ತನಿಖೆ ಮಾಡುತ್ತಾರೆಯೇ ಎಂಬುದನ್ನು ಹೇಳಲಿ. ಹಿಂದಿನ ಸರ್ಕಾರ ಏನು ತಪ್ಪು ಮಾಡಿದೆ ಎಂಬುದನ್ನು ಹೇಳಲಿ. ಇಲಾಖಾ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಯೇ, ತನಿಖೆ ಮಾಡುತ್ತಾರೆಯೇ ಎಂಬುದನ್ನು ಹೇಳಲಿ.

(ಗೊಂದಲ)

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಜಾರಿಕೊಳ್ಳುತ್ತಿದ್ದಾರೆ, ಉತ್ತರ ನೀಡಲಿ.

**ಶ್ರೀ ಜಗದೀಶ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಸ್ಪಷ್ಟವಾಗಿ ಉತ್ತರ ನೀಡಿದ್ದೇನೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಏತಕ್ಕೆ ತನಿಖೆ ಮಾಡುವುದಕ್ಕಾಗುವುದಿಲ್ಲವೇ? ಕೇಂದ್ರದಲ್ಲಿಯು ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿಲ್ಲವೇ? ತಪ್ಪು ಮಾಡಿರುವ ಇಲಾಖಾ ಅಧಿಕಾರಿಗಳನ್ನು ವಹಿಸಿಕೊಂಡು ಉತ್ತರ ನೀಡುತ್ತಾರೆ. ನಾಚಿಕೆ ಆಗಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ.

(ಗೊಂದಲ)

ಸದನದ ಮೂಲಕ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಹೇಳುವ ಯಾವ ಮಾತು ಕಡತಕ್ಕೆ ಹೋಗಬಾರದು. ಪ್ರಶ್ನೋತ್ತರ ಅವಧಿಯಲ್ಲಿ ಮನಸ್ಸಿಗೆ ಬಂದ ಹಾಗೆ ಮಾತನಾಡುತ್ತಾರೆ.

(ಗೊಂದಲ)

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಸಭಾನಾಯಕರೇ ಎಲ್ಲದ್ದಕ್ಕೂ ಮಾತನಾಡುವುದಾದರೆ ಸಚಿವರು ಏತಕ್ಕೆ ಸದನದಲ್ಲಿ ಇರಬೇಕು?

(ಗೊಂದಲ)

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಸಚಿವರು ಅಧಿಕಾರಿಗಳ ರಕ್ಷಣೆ ಮಾಡುತ್ತಿದ್ದಾರೆ. ಅವರಿಗೆ ನಾಚಿಕೆಯಾಗಬೇಕು.

**ಶ್ರೀ ಜಗದೀಶ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಷಯದ ಬಗ್ಗೆ ವಿಚಾರ ಮಾಡಿದ್ದೇವೆ. ಮಾನ್ಯ ಬಸವರಾಜ ಹೊರಟ್ಟಿಯವರು ಮಧ್ಯಪ್ರವೇಶಿಸಿದ್ದಾರೆ. ಅದರ ಬಗ್ಗೆ ಹಿಂದಿನ ಕಡತವನ್ನು ತೆಗೆಸಿ ಅದರ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜಗದೀಶ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ತನಿಖೆಯಾದ ಮೇಲೆ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮಕೈಗೊಳ್ಳುತ್ತೇವೆ.

**ಶ್ರೀ ಎಸ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಹೋದ ವರ್ಷ ಸದನದಲ್ಲಿ ಇದೇ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ.

(ಮುಂದು) ...

(759) 22.09.2020 12.00 ಟಿ.ಸಿ.ಹೆಚ್-ಬಿಎನ್ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-** ತನಿಖೆ ಮಾಡಿದ ನಂತರ ಕ್ರಮ ತೆಗೆದುಕೊಳ್ಳಬೇಕಲ್ಲವೇ? ಯಾರು ತಪ್ಪು ಮಾಡಿದ್ದಾರೆಂದು ಗೊತ್ತಾಗಬೇಕಲ್ಲವೇ?

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.257**

**(ಉತ್ತರ ಲಗತ್ತಿಸಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಮಾನ್ಯ ಸಚಿವರ ಮೇಲೆ pressure ಇರಬಹುದೆಂದು ನನಗೆ ಏಕೋ ಅನುಮಾನ ಮೂಡುತ್ತಿದೆ. ಏಕೆಂದರೆ, 2014 ಫೆಬ್ರವರಿಯಲ್ಲಿ ಕ್ಯಾಬಿನೆಟ್‌ನಲ್ಲಿ ಆದೇಶವಾಗಿದೆ. ಆ ಆದೇಶದ ಪ್ರಕಾರ ನಾವು ಜಮೀನನ್ನು ಕೊಡುತ್ತೇವೆಂದು ಹೇಳಿದ್ದರು. ಹಿಂದಿನ ಅಧಿವೇಶನದಲ್ಲಿ ಈ ಸಂಬಂಧ ಸಚಿವ ಸಂಪುಟದಲ್ಲಿ ಆದೇಶವಾಗಿದೆ. ಮುಂಬರುವ ದಿನಗಳಲ್ಲಿ ಈ ಕಾರ್ಯ ಬೇಗ ಮುಗಿಸಲಾಗುವುದೆಂದು ಹೇಳಿದ್ದರು. ಆದರೆ ಈಗ ಅವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ಜಮೀನು ಹಸ್ತಾಂತರಿಸಲು ಪರಿಶೀಲನೆಯಲ್ಲಿದೆ ಎಂದು ಕೊಟ್ಟಿದ್ದಾರೆ. ಅದಕ್ಕೆ ನನಗೆ ಅನುಮಾನ ಮೂಡುತ್ತಿದೆ.

**ಸಭಾಪತಿಯವರು:–** ಏಕೆ ಅನುಮಾನ ಮೂಡುತ್ತದೆ?

**ಶ್ರೀ ಅರವಿಂದ ಕುಮಾರ್ ಅರಳಿ:–** ಏಕೆಂದರೆ, ಹಿಂದಿನ ಅಧಿವೇಶನದಲ್ಲಿ ಕ್ಲಿಯರ್ ಆಗಿ ಹೇಳಿದ್ದರು. ಇನ್ನೊಂದು ವಿಚಾರದ ಬಗ್ಗೆ ಹೇಳುವುದಾದರೆ, ಈ ಜಮೀನು ಸಿಗದಿದ್ದರೆ ಐ.ಸಿ.ಎ.ಆರ್.ನವರು inspection ಗೆ ಬರುತ್ತಾರೆ. ಆ ಸಮಯದಲ್ಲಿ ಈ ಜಮೀನು ಇರಲಿಲ್ಲವೆಂದರೆ ಮುಂಬರುವ ದಿನಗಳಲ್ಲಿ ಮಾನ್ಯತೆಯನ್ನು ರದ್ದುಪಡಿಸುವ chances ಜಾಸ್ತಿ ಇದೆ. ಆದರೆ ಇವರು ಏನು ಹೇಳುತ್ತಿದ್ದಾರೆಂದರೆ, ಯಾವುದೇ ಅಂತಹ ಆತಂಕವಿಲ್ಲವೆಂದು ಹೇಳುತ್ತಾರೆ. ಆದರೆ ತೇರ್ಗಡೆಯಾದಂತಹ 500–600 ವಿದ್ಯಾರ್ಥಿಗಳಿದ್ದಾರೆ, ಅದರಲ್ಲಿ ಕೆಲವು ವಿದ್ಯಾರ್ಥಿಗಳು ಉದ್ಯೋಗದಲ್ಲಿದ್ದಾರೆ. ಈ ಮಾನ್ಯತೆ ರದ್ದಾದರೆ, ಅವರ ಪದವಿಗೆ ಧಕ್ಕೆ ಆಗಬಹುದು ಎಂಬ ಆತಂಕದಲ್ಲಿದ್ದಾರೆ. ಈ ಹಿನ್ನೆಲೆಯಲ್ಲಿ ಬೀದರ್ ತೋಟಗಾರಿಕೆ ಮಹಾವಿದ್ಯಾಲಯಕ್ಕೆ ಜಮೀನನ್ನು ಯಾವಾಗ ಕೊಡುತ್ತೀರಿ ಎಂದು ಹೇಳಬೇಕು.

**ಶ್ರೀ ಕೆ.ಸಿ.ನಾರಾಯಣಗೌಡ (ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಅರವಿಂದ ಕುಮಾರ್ ಅರಳಿಯವರು ಪ್ರಶ್ನೆ ಕೇಳಿದ್ದಾರೆ. ಆ ಸಂದರ್ಭದಲ್ಲಿ ಏನಾಗಿತ್ತು ಎಂದರೆ, ರೂ.2.24 ಕೋಟಿ ಹಣವನ್ನು ಕಟ್ಟಬೇಕಾಗಿತ್ತು. ಆ ಹಣವನ್ನು ಕಟ್ಟುವುದಕ್ಕೆ ಬರುವುದಿಲ್ಲವೆಂದು ಮಾನ್ಯ ಉಪ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಅಧಿಕಾರಿಗಳೆಲ್ಲಾ ಚರ್ಚೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದೆವು. ಹಣ ಕೊಡುವುದಕ್ಕೆ ಬರುವುದಿಲ್ಲ ಎನ್ನುವುದಕ್ಕೋಸ್ಕರ ಈಗ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಶೀಘ್ರದಲ್ಲಿ ಅದಕ್ಕೆ free of cost ಜಮೀನನ್ನು ಕೊಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇವೆ. Free of cost ಮಾಡಬೇಕಾದರೆ, ಅವರ ನೇತೃತ್ವದಲ್ಲಿ ಮಾಡಬೇಕಾಗುತ್ತದೆ. ಏಕೆಂದರೆ, ನನಗೆ ಎರಡು ಇಲಾಖೆಗಳು ಇರುವುದರಿಂದ ನಾನು promise ಮಾಡುತ್ತಿದ್ದೇನೆ. ಶೀಘ್ರದಲ್ಲಿ ಅದನ್ನು ಮಾಡುತ್ತೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:–** ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.208**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಸಹಕಾರ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾಹಿತಿ ಪಡೆಯಲು ಕಾಲಾವಕಾಶ ಕೋರುತ್ತಿದ್ದೇವೆ. ಮಾನ್ಯ ಸಹಕಾರ ಸಚಿವರು ಕಾಲಾವಕಾಶ ಕೇಳಿದ್ದಾರೆ. ಮುಂದೆ ಪ್ರಶ್ನೆಗೆ ಉತ್ತರ ಕೊಡಿಸಲಾಗುವುದು.

**ಸಭಾಪತಿಯವರು:–** ಕಾಲಾವಕಾಶ ಏಕೆ ಕೋರಿದ್ದಾರೆಂದು ಹೇಳಬೇಕಲ್ಲವೇ? ಸರ್ಕಾರಕ್ಕೆ ಉತ್ತರ ಒದಗಿಸಲು ಸಾದ್ಯವಾಗದಿದ್ದಕ್ಕೆಲ್ಲಾ ಕಾಲಾವಕಾಶ ಕೇಳಿದ್ದಾರೆಂದು ಹೇಳಿದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರು ಸಮಯ ಕೇಳಿದ್ದಾರೆ. ಈ ಸದನ ಮುಗಿಯುವುದರೊಳಗೆ ಮಾನ್ಯ ಸದಸ್ಯರಿಗೆ ಉತ್ತರ ಕೊಡಿಸುತ್ತೇನೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, last time ಇದೇ ರೀತಿ ಹೇಳಿದರು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.202**

**(ಉತ್ತರ ಲಗತ್ತಿಸಿದೆ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಸಚಿವರು ಬಹಳ ಅಸಮರ್ಪಕವಾದಂತಹ ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಭಾಪತಿಯವರೇ, ತಾವು ದೊಡ್ಡ ಮನಸ್ಸು ಮಾಡಿ, ಸ್ವಲ್ಪ ಸುಧೀರ್ಘವಾಗಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಏಕೆಂದರೆ, ಪ್ರಶ್ನೋತ್ತರ ವೇಳೆಯಲ್ಲಿ ನಾವೇನಾದರೂ ಮಾನ್ಯ ಸಚಿವರಿಗೆ ಉತ್ತರ ಸಮರ್ಪಕವಾಗಿಲ್ಲವೆಂದು ಕೇಳಿದರೆ, ಅಲ್ಲಿ ಸದಸ್ಯರು ನಿಂತುಕೊಂಡು ಗದ್ದಲ ಮಾಡಿದರೆ, ಸದನದ ಸಮಯ ಹಾಳಾಗುತ್ತದೆ. ಹಾಗಾಗಿ, ದಯಮಾಡಿ, ಅವರು ಆಡಳಿತ ಪಕ್ಷದಲ್ಲಿದ್ದಾರೊ, ವಿರೋಧಪಕ್ಷದಲ್ಲಿದ್ದಾರೊ ಅವರಿಗೆ ಗೊತ್ತಿಲ್ಲ. ಹಾಗಾಗಿ, ತಾವು ಸರಿಯಾದ ರೀತಿಯಲ್ಲಿ ಕಾಲಾವಕಾಶ ಕೊಡಬೇಕು. ಸದರಿ ಬಿ.ಪಿ.ಎಲ್. ಕಾರ್ಡ್‌ದಾರರು ಪಡಿತರಗಳನ್ನು ಪಡೆಯಬೇಕಾದಲ್ಲಿ ಕನಿಷ್ಠ 10–15 ಕಿಲೋಮೀಟರ್ ತೆರಳಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ನಾನು ಪ್ರಶ್ನೆ ಕೇಳಿದ್ದೆನು.

**ಸಭಾಪತಿಯವರು:–** ಶ್ರೀ ಹೆಚ್.ಎಂ.ರಮೇಶ್‌ಗೌಡರವರೇ, ನೀವು ಪ್ರಶ್ನೆ ಮಾತ್ರ ಕೇಳಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಅವರು ಆ ರೀತಿ ಉತ್ತರ ಕೊಟ್ಟಿದ್ದಾರೆಂದರೆ, ಅದನ್ನು ತಾವು ಸಹ ನೋಡಬೇಕು. ರಾಜ್ಯದಲ್ಲಿನ ಬಿ.ಪಿ.ಎಲ್. ಪಡಿತರ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಸಾಕಷ್ಟು ಸಂಖ್ಯೆಯ ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. 10–15 ಕಿಲೋಮೀಟರ್ ದೂರದಲ್ಲಿರುವ ನ್ಯಾಯಬೆಲೆ ಅಂಗಡಿಗಳಿಂದ ಪಡಿತರ ಫಲಾನುಭವಿಗಳು ಪಡಿತರ ಪಡೆಯುತ್ತಿರುವ ಬಗ್ಗೆ ಯಾವುದೇ ದೂರುಗಳು ಇರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅಂದರೆ, ಈ ರಾಜ್ಯದಲ್ಲಿ ಒಟ್ಟಾರೆಯಾಗಿ ಎಷ್ಟು ನ್ಯಾಯಬೆಲೆ ಅಂಗಡಿಗಳಿವೆಯೆಂದು ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಈಗ ಹೊಸಕೋಟೆ ತಾಲ್ಲೂಕಿನಲ್ಲಿ ದೊಡ್ಡರಾಲಗೆರೆ ಎಂಬಲ್ಲಿ ಒಂದು ನ್ಯಾಯಬೆಲೆ ಇದೆ. ಅಲ್ಲಿಂದ ನಗರೇನಹಳ್ಳಿ ಮತ್ತು ದೊಡ್ಡ ಕೋಲಿಗದಿಂದ 17 ಕಿಲೋಮೀಟರ್ ದೂರ ಇದೆ. ಅಲ್ಲಿ ಒಂದೇ ಒಂದು ನ್ಯಾಯಬೆಲೆ ಅಂಗಡಿ ಕೂಡ ಇಲ್ಲ. ಆದರೆ ಅವರು ನಮಗೆ ಮಾಹಿತಿಯೇ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅಂದರೆ ಅಧಿಕಾರಿಗಳು ಯಾವ ರೀತಿ ಕಾರ್ಯ ನಿರ್ವಹಿಸುತ್ತಿದ್ದಾರೆಂದರೆ, ಯಾವುದೋ ಒಂದು ಚುಕ್ಕೆ ಗುರ್ತಿನ ಪ್ರಶ್ನೆ ಬಂದಾಗ ರಾತ್ರೋರಾತ್ರಿ ಯಾವುದೋ ಒಂದು ಮಾಹಿತಿಯನ್ನು ಸಿದ್ದಪಡಿಸಿ ಕೊಡಬಹುದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಟಿ.ರವಿ, (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು) (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಟ್ಟು 19,962 ಸರ್ಕಾರಿ ನ್ಯಾಯ ಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಇಲ್ಲಿ ಮಾನ್ಯ ಸದಸ್ಯರು ಹೇಳಿರುವುದು ಕನಿಷ್ಠ 10-15 ಕಿಲೋ ಮೀಟರ್ ದೂರದಲ್ಲಿರುವಂತಹ ನ್ಯಾಯಬೆಲೆ ಅಂಗಡಿಗಳಿಗೆ ಸಂಬಂಧಪಟ್ಟಂತೆ, ಯಾವುದೇ ದೂರುಗಳು ಬಂದಿಲ್ಲ. ಒಂದು ವೇಳೆ ದೂರುಗಳು ಬಂದರೆ, ನೀವು ಹೇಳಿದಂತೆ, ಹೊಸಕೋಟೆ ತಾಲ್ಲೂಕ್‌ನ್ನು ಗಮನದಲ್ಲಿಟ್ಟುಕೊಂಡು ಈಗ ಏನಾಗುತ್ತದೆಂದರೆ, ನ್ಯಾಯ ಬೆಲೆ ಅಂಗಡಿಯವರು ದೂರದಲ್ಲಿರುವ ಊರುಗಳಿಗೆ ಉಪ ಕೇಂದ್ರಗಳನ್ನು ತೆರೆದು ಪಡಿತರವನ್ನು ವಿತರಣೆ ಮಾಡುತ್ತಿರುತ್ತಾರೆ. ಆ ಉಪ ಕೇಂದ್ರಗಳಲ್ಲಿ ಪಡಿತರವನ್ನು ವಿತರಣೆ ಮಾಡುತ್ತಿರುವುದರಿಂದ ದೂರುಗಳು ಇರುವುದಿಲ್ಲ. ಮುಂಚೆ ಒಂದು ನ್ಯಾಯಬೆಲೆ ಅಂಗಡಿ ಇರಬೇಕಾದರೆ, ಕನಿಷ್ಠ 500 ಕಾರ್ಡ್‌ಗಳು ಇರಬೇಕಾಗಿತ್ತು. ಈಗ 100 ಕಾರ್ಡ್‌ಗಳಿಗೂ ಸರ್ಕಾರಿ ನ್ಯಾಯಬೆಲೆ ಅಂಗಡಿಗಳನ್ನು ಕೊಡುವಂತಹ ಅಧಿಕಾರವನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕೊಟ್ಟಿದೆ. ಯಾವುದಾದರೂ ನಿರ್ದಿಷ್ಟ ಪ್ರದೇಶದಲ್ಲಿ ದೂರದಲ್ಲಿರುವ ಗ್ರಾಮಗಳಿವೆಯೆಂದು ಕಂಡುಬಂದಲ್ಲಿ, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿಯನ್ನು ಕೊಡುವುದಕ್ಕೆ ಅಧಿಕಾರವನ್ನು ಕೊಟ್ಟಿದೆ. ಮಾನ್ಯ ಸದಸ್ಯರು ಹೊಸಕೋಟೆ ತಾಲ್ಲೂಕಿನ ಒಂದು ಗ್ರಾಮದ ಬಗ್ಗೆ ಹೇಳಿದ್ದಾರೆ. ಆ ಬಗ್ಗೆಯೂ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಕೊಟ್ಟು, ಅಗತ್ಯವಿದ್ದರೆ, 100 ಕಾರ್ಡ್‌ಗಳಿಗಿಂತಲೂ ಹೆಚ್ಚು ಕಾರ್ಡ್‌ಗಳಿದ್ದರೆ, ಆ ಗ್ರಾಮದಲ್ಲಿಯೇ ಸರ್ಕಾರಿ ನ್ಯಾಯಬೆಲೆ ಅಂಗಡಿಯನ್ನು ತೆರೆಯುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆ. ಪಡಿತರ ವಿತರಣೆ ಪ್ರತಿಯೊಬ್ಬರಿಗೂ ತಲುಪಬೇಕು. ಒಬ್ಬ ಕಾರ್ಡ್‌ದಾರ ದೇಶದ ಯಾವುದೇ ಭಾಗದಲ್ಲೂ ಇದ್ದರೂ ಕೂಡ ಪಡಿತರ ತೆಗೆದುಕೊಳ್ಳುವಂತಹ ಸರಳೀಕೃತ ವ್ಯವಸ್ಥೆಯನ್ನು ಮಾಡಿದ್ದೇವೆ. ಅವರಿಗೆ ಹತ್ತಿರದ ಕೇಂದ್ರ ಎಲ್ಲಿದೆ, ಅಲ್ಲೇ ಪಡಿತರವನ್ನು ಖರೀದಿ ಮಾಡಬಹುದು. ಅಸ್ಸಾಂ ರಾಜ್ಯದವನು ಪಡಿತರ ಕಾರ್ಡ್ ಹೊಂದಿದ್ದರೆ, ಕರ್ನಾಟಕದಲ್ಲೂ ಖರೀದಿ ಮಾಡಬಹುದು. ಕರ್ನಾಟಕದವನು ದೆಹಲಿಯಲ್ಲಿ ಪಡಿತರವನ್ನು ಖರೀದಿ ಮಾಡಬಹುದು. ಅವರು ಎಲ್ಲಿ ವಾಸವಾಗಿರುತ್ತಾರೊ ಅಲ್ಲಿಯೇ ಪಡಿತರವನ್ನು ಖರೀದಿ ಮಾಡಬಹುದು. ಹಾಗಾಗಿ, ಪಡಿತರ ವ್ಯವಸ್ಥೆಯನ್ನು ಸರಳೀಕೃತಗೊಳಿಸಿರುವುದರಿಂದ, ಇದಕ್ಕೆ ಆತಂಕಪಡಬೇಕಾದ ಅವಶ್ಯಕತೆಯಿಲ್ಲ. ಅವರಿಗೆ ಹತ್ತಿರದ ಕೇಂದ್ರ ಯಾವುದು ಇದೆ, ಆ ಹತ್ತಿರದ ಕೇಂದ್ರದಲ್ಲಿಯೇ ಪಡಿತರವನ್ನು ಖರೀದಿಸಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಗೋವಿಂದರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಬಹಳ ಸರಳವಾದ ಪ್ರಶ್ನೆಯನ್ನು ಕೇಳಿದ್ದಾರೆ. 17 ಕಿಲೋಮೀಟರ್ ದೂರದಲ್ಲಿ ನ್ಯಾಯಬೆಲೆ ಅಂಗಡಿ ಇಲ್ಲ, ಅದನ್ನು ಮಾಡಿಕೊಡಲಾಗುವುದೆಂದು ಹೇಳಿದರೆ ಸಾಕು.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಪ್ರಶ್ನೆಯನ್ನು ಸರಳವಾಗಿಯೇ ಕೇಳಿದ್ದಾರೆ. ಯಾವುದಾದರೂ ನಿರ್ದಿಷ್ಟ ಪ್ರದೇಶದಲ್ಲಿ ನ್ಯಾಯಬೆಲೆ ಅಂಗಡಿ ಇಲ್ಲದಿದ್ದರೆ, 100 ಕಾರ್ಡ್‌ಗಳು ಇದ್ದರೆ ಸಾಕು ಜಿಲ್ಲಾಧಿಕಾರಿಯವರಿಗೆ ಹೊಸ ನ್ಯಾಯಬೆಲೆ ಅಂಗಡಿಗಳಿಗೆ ಅನುಮತಿ ಕೊಡಿ ಎಂದು ಅಧಿಕಾರ ಕೊಡಲಾಗಿದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ತಾವೇ ಹೇಳಿರುವಂತೆ ನಮ್ಮ ರಾಜ್ಯದಲ್ಲಿ 19,962 ನ್ಯಾಯಬೆಲೆ ಅಂಗಡಿಗಳಿವೆಯೆಂದು ಹೇಳುತ್ತಿದ್ದೀರಿ. ಯಾವುದೂ ನ್ಯಾಯಬೆಲೆ ಅಂಗಡಿ ಕೂಡ 10–15 ಕಿಲೋಮೀಟರ್ ದೂರದಲ್ಲಿ ಇಲ್ಲವೆಂದು ಹೇಳುತ್ತಿದ್ದೀರಿ. ನಾನು ಈಗಾಗಲೇ ಅದಕ್ಕೆ ಒಂದು ಉದಾಹರಣೆಯನ್ನು ಕೂಡ ಕೊಟ್ಟಿದ್ದೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ದೂರದಲ್ಲಿ ಇಲ್ಲವೆಂದು ಹೇಳಲಿಲ್ಲ. ದೂರುಗಳು ಬಂದಿಲ್ಲವೆಂದು ಹೇಳಿದೆನು.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ ಹೇಳಿ. ಹಾಗಾದರೆ, ಯಾರು ದೂರು ಕೊಟ್ಟಿದ್ದಾರೆ, ಅದನ್ನು ಮಾನ್ಯ ಸಭಾಪತಿಯವರಿಗೆ ಕೊಡುತ್ತೇನೆ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಮಾನ್ಯ ಸಚಿವರು ಹೇಳಲಿ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಆ ನಿರ್ದಿಷ್ಟವಾಗಿರತಕ್ಕಂಥ ಪ್ರಕರಣಗಳ ಬಗ್ಗೆ ಏನಾದರೂ ಹೇಳಿದರೆ, ಅಲ್ಲಿ 100ಕ್ಕಿಂತಲೂ ಹೆಚ್ಚು ಕಾರ್ಡ್‌ಗಳಿದ್ದರೆ, ಅಲ್ಲಿ ನ್ಯಾಯಬೆಲೆ ಅಂಗಡಿಯನ್ನು ತೆರೆಯುವಂತಹ ಕೆಲಸವನ್ನು ತಕ್ಷಣದಲ್ಲೇ ಮಾಡುತ್ತೇವೆ. ಹಾಗೆಯೇ ಯಾವುದೇ ಪ್ರದೇಶದಲ್ಲಿ ಯಾವುದೇ ಕಾರ್ಡ್‌ದಾರ ರಾಜ್ಯ ಮತ್ತು ದೇಶದ ಯಾವುದೇ ಮೂಲೆಯಲ್ಲಿ ಬೇಕಾದರೂ ಅವನು ಪಡಿತರ ತೆಗೆದುಕೊಳ್ಳುವಂತಹ ಒಂದು ಹೊಸ ಅವಕಾಶವನ್ನು ಭಾರತ ಸರ್ಕಾರ ಮಾಡಿಕೊಟ್ಟಿದೆ. ಹಾಗಾಗಿ, ಅವರು ಆತಂಕಪಡುವ ಅವಶ್ಯಕತೆಯಿಲ್ಲ. ಹತ್ತಿರದ ಕೇಂದ್ರ ಎಲ್ಲಿದೆ, ಅಲ್ಲಿಗೆ ಅವರು ಹೋಗಿ ಅವರು ಕಾರ್ಡ್ ಕೊಟ್ಟು ಖರೀದಿಸಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಸರ್ಕಾರಕ್ಕೆ ದೂರು ಕೊಟ್ಟಿರುವಂತಹ ಅರ್ಜಿಗಳನ್ನು ನಾನು ತಮಗೆ ಕೊಡುತ್ತೇನೆ. ಮಾನ್ಯ ಸಭಾಪತಿಯವರೇ, ಇವರು ಈ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ, ಇದನ್ನು ಹಕ್ಕುಚ್ಯುತಿಗೆ ನೀವು ವರ್ಗಾವಣೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳುತ್ತಿದ್ದೇನೆ. ಇದನ್ನು ತಾವು ಪರಿಗಣಿಸಬೇಕು. ಏಕೆಂದರೆ, ಅಧಿಕಾರಿಗಳು ಸದನಕ್ಕೆ ಹಾರಿಕೆ ಉತ್ತರವನ್ನು ಕೊಟ್ಟಿದ್ದಾರೆ. ಅವರು ಹೇಳುತ್ತಿರುವುದು ಸುಳ್ಳು ಎಂದು ನಮ್ಮ ಕಣ್ಣಿಗೆ ಕಾಣಿಸುತ್ತಿದೆ. ಹಾಗಾದರೆ, ಹಕ್ಕುಚ್ಯುತಿಗೆ ಈ ಪ್ರಶ್ನೆಯನ್ನು ಪರಿಗಣಿಸಿ.

**ಸಭಾಪತಿಯವರು:–** ಸರಿ.

**ಶ್ರೀ ಸಿ.ಟಿ.ರವಿ:–** ಶ್ರೀ ಹೆಚ್.ಎಂ.ರಮೇಶ್‌ಗೌಡರವರೇ, ನೀವು ನಮಗೆ ನಿರ್ದಿಷ್ಟವಾದಂತಹ ಪ್ರಕರಣಗಳಿದ್ದರೆ ಕೊಡಿ. ಅದರಲ್ಲಿ ಸತ್ಯಾಸತ್ಯತೆಯನ್ನು ಪರಿಶೀಲನೆ ಮಾಡಿಸಲಾಗುವುದು. ನಿಮ್ಮ ಆರೋಪದಲ್ಲಿ ಸತ್ಯ ಇದ್ದರೆ ನಾವು ಯಾರನ್ನೂ ರಕ್ಷಣೆ ಮಾಡುವಂತಹ ಪ್ರಶ್ನೆಯೇ ಇಲ್ಲ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ನಾನು ಇಲ್ಲೇ ತಮಗೆ ಆ ಅರ್ಜಿಗಳನ್ನು ಕೊಡುತ್ತೇನೆ.

**ಶ್ರೀ ಸಿ.ಟಿ.ರವಿ:–** ಶ್ರೀ ಹೆಚ್.ಎಂ.ರಮೇಶ್‌ಗೌಡರವರೇ, ಆಯಿತು ಒದಗಿಸಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಈಗ ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರಲ್ಲಾ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಅದು ಶ್ರೀ ಹೆಚ್.ಎಂ.ರಮೇಶ್‌ಗೌಡರವರ ಆರೋಪ ಅಷ್ಟೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಚಿವರೇ, ಅದನ್ನು ಮಾನ್ಯ ಸಭಾಪತಿಯವರಿಗೆ ಕೊಡುತ್ತೇನೆ.

**ಶ್ರೀ ಸಿ.ಟಿ.ರವಿ:–** ಆಯಿತು, ಕೊಡಿ.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(760)22.9.2020/12.10/ಎಂ.ಎಂ–ಜಿ.ಆರ್**

(ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 249**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ಇದನ್ನು ಸದನದಲ್ಲಿ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಮೈಸೂರು ಲ್ಯಾಂಪ್ಸ್ ಉದ್ಯಮದ ಬೆಂಗಳೂರಿನ ಮಲ್ಲೇಶ್ವರಂ ಮತ್ತು ಯಶವಂತಪುರದಲ್ಲಿರುವ ಸುಮಾರು 22 ಎಕರೆ ಜಮೀನನ್ನು ಸರ್ಕಾರ ನೇರವಾಗಿ ವಶಕ್ಕೆ ತೆಗೆದುಕೊಳ್ಳದೇ ಕಂಪನಿಗೆ ಏಕೆ ಕೊಟ್ಟಿದ್ದೀರಿ? ಇವತ್ತು ಅದು ಒಂದು ಎಕರೆಗೆ 10 ಕೋಟಿ ರೂಪಾಯಿಗೂ ಹೆಚ್ಚು ಬೆಲೆಬಾಳುವ ಜಾಗವಾಗಿದೆ.

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಬಸವರಾಜ ಹೊರಟ್ಟಿಯವರೇ, ಅಲ್ಲಿ 30 ರಿಂದ 50 ಕೋಟಿ ರೂಪಾಯಿಗಳ ಬೆಲೆ ಇದೆ 10 ಕೋಟಿಗೆ ಎಲ್ಲಿ ಸಿಗುತ್ತದೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಂಥಹದ್ದನ್ನು ಸರ್ಕಾರ ನೇರವಾಗಿ ತನ್ನ ವಶಕ್ಕೆ ತೆಗೆದುಕೊಳ್ಳುವ ಬದಲಾಗಿ ಕಂಪನಿಯವರಿಗೆ ಕೊಟ್ಟಿದ್ದಾರೆ. ನಾಳೆ ಕಂಪನಿಯ ಆಡಳಿತ ಮಂಡಳಿಯು ಯಾರಿಗೆ ಬೇಕಾದರೂ ಅದನ್ನು ಮಾರಬಹುದು. ಯಾರು ಬೇಕಾದರೂ ಅದನ್ನು ತೆಗೆದುಕೊಳ್ಳಬಹುದು. ನೀವು ನೇರವಾಗಿ ಸರ್ಕಾರಕ್ಕೆ ಏಕೆ ತೆಗೆದುಕೊಂಡಿಲ್ಲ? ಪ್ರತಿ ಬಾರಿ ಆಯ್ಕೆಯಾದಾಗಲೂ ನಿಮ್ಮ ಸರ್ಕಾರ ಯಾವಾಗಲೂ ಇಂತಹದ್ದನ್ನೇ ಹುಡುಕುತ್ತಿರುತ್ತದೆ. ಇಂತಹದ್ದನ್ನೇ ಹುಡುಕುವುದು, ಬೇರೆ ಯಾವುದೋ ಖಾಸಗಿಯವರಿಗೆ ಕೊಡುವುದು ಆಗಬಾರದು. ಬೆಂಗಳೂರಿನಲ್ಲಿ ಒಂದು ಕಡೆ 22 ಎಕರೆ ಜಾಗ ಯಾವುದಾದರೂ ಖಾಲಿ ಇರುವುದಾದರೆ ನನಗೆ ಹೇಳಿ. ನೀವು ನೇರವಾಗಿ ಸರ್ಕಾರಕ್ಕೆ ತೆಗೆದುಕೊಳ್ಳಿ. ಸರ್ಕಾರಕ್ಕೆ ತೆಗೆದುಕೊಳ್ಳುವುದನ್ನು ಬಿಟ್ಟು ಕಂಪನಿಯವರಿಗೆ ಏಕೆ ಕೊಡುತ್ತೀರಿ? ಕಂಪನಿಯವರಿಗೆ ಕಂಪನಿಯ ಅಧಿಕಾರವಿರುತ್ತದೆ ಅವರು ಏನು ಬೇಕಾದರೂ ಮಾಡುತ್ತಾರೆ. ಮೈಸೂರು ಮಹಾರಾಜರು ಕೊಟ್ಟಂತಹ 1936ರಲ್ಲಿ ಪ್ರಾರಂಭವಾದಂತಹ ಉದ್ಯಮವನ್ನು ಕಂಪನಿಗೆ ಕೊಡುವ ಬದಲು ನೇರವಾಗಿ ಸರ್ಕಾರಕ್ಕೆ ಏಕೆ ತೆಗೆದುಕೊಳ್ಳುವುದಿಲ್ಲ? ನಿಮ್ಮ ಆದೇಶದಲ್ಲಿ clear cut ಇದೆ. M/s.KSMCL ಗೆ ಕೊಟ್ಟಿದ್ದೇವೆ ಎಂದು ಇದೆ. ನಿಮ್ಮ ಆದೇಶದ ದಿನಾಂಕ 20.3.2020ದಲ್ಲಿ *"The scheme of the amalgamation is approved with the condition that the assets of the Transferor Company i.e., Mysore*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*Lamp Works Limited after taking over by the transferee Company i.e., M/s.KSMCL should be taken over by the Government and the assets should be utilised for the public purpose."* ಎಂದಿದೆ. ನೀವು M/s.KSMCL ಗೆ ಏತಕ್ಕೆ ಕೊಡುತ್ತೀರಿ? M/s.KSMCL ನಿಂದ ಗಣಿಗಾರಿಕೆ ಮಾಡುವಾಗ ಬೇಕಾದ್ದೆಲ್ಲಾ ಮಾಡಿದರು ಅವರು ಸರ್ಕಾರದ ಮಾತನ್ನು ಕೇಳಿದರೇ? ಯಾವ ಐ.ಪಿ.ಎಸ್., ಅಧಿಕಾರಿಯನ್ನು ನೀವು ಸಸ್ಪೆಂಡ್ ಮಾಡುವುದಕ್ಕೆ ಆಗಲಿಲ್ಲ ನೇರವಾಗಿ ಅವರೆಲ್ಲಾ ಇದನ್ನು ಮಾಡಿಕೊಂಡು ಹೋದರು. ಅದಕ್ಕೆ ನಾನು ಹೇಳುವುದೇನೆಂದರೆ, ಮಲ್ಲೇಶ್ವರಂನಲ್ಲಿ 22 ಎಕರೆ ಇರುವಂತಹ ಭೂಮಿಯನ್ನು ನೀವು ಕಂಪನಿಗೆ ಏತಕ್ಕೆ ಕೊಡುತ್ತೀರಿ? ಸರ್ಕಾರ ವಶಕ್ಕೆ ತೆಗೆದುಕೊಳ್ಳಲಿ. ಕಂಪನಿಗೆ ಕೊಟ್ಟರೆ ಅವರು ಅವರಿಗೆ ಬೇಕಾದವರಿಗೆ ಕಂಪನಿಯಲ್ಲಿ ಒಂದು ಮೀಟಿಂಗ್ ಮಾಡಿ Board of Directors ತೀರ್ಮಾನ ಮಾಡಿ ಯಾರಿಗೆ ಬೇಕಾದರೂ ಕೊಡಬಹುದು. ಅದಕ್ಕೆ ನನ್ನ ಒತ್ತಾಯವೇನೆಂದರೆ, ಇದರ ಬೆಲೆ ಸುಮಾರು 1,300 ಕೋಟಿ ರೂಪಾಯಿ ಆಗುತ್ತದೆ. ಇಂತಹ ಜಮೀನನ್ನು ದಯಮಾಡಿ ನೀವು ಸರ್ಕಾರಕ್ಕೆ ತೆಗೆದುಕೊಳ್ಳಬೇಕು. ನಮ್ಮಂತಹವರಿಗೆ ಕೊಡುವುದಕ್ಕೆ ಬರುವುದಿಲ್ಲ. ಅದಕ್ಕೆ ನಾನು ನೇರವಾಗಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಮೈಸೂರು ಲ್ಯಾಂಪ್ಸ್ ಉದ್ಯಮದ ಬಗ್ಗೆ ಬಹಳ ವಿವರವಾದ ಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಕೊನೆಯದಾಗಿ ಅವರು ಬಹಳ ಸೀಮಿತವಾಗಿ ಉಪ ಪ್ರಶ್ನೆ ಕೇಳಿದ್ದು ಮೈಸೂರು ಲ್ಯಾಂಪ್ಸ್ ಉದ್ದಿಮೆಯನ್ನು ಈಗಾಗಲೇ ಮುಚ್ಚಲಾಗಿದೆ. ಅದನ್ನು ಇವತ್ತು Karnataka State Minerals Corporation Limited ಇವರಿಗೆ ಏಕೆ ಕೊಟ್ಟಿದ್ದೀರಿ ಎನ್ನುವ ಪ್ರಶ್ನೆ ಇದೆ. 79 ಕಾರ್ಮಿಕರ ಬಗ್ಗೆ ತಂಟೆ ಇತ್ತು ಮತ್ತು ಇನ್ನಿತರ ಹಲವಾರು ಪ್ರಕರಣಗಳು ಹೈಕೋರ್ಟ್ ಮುಂದೆ ಇದ್ದಂತಹ ಸಂದರ್ಭದಲ್ಲಿ ಅಲ್ಲಿ ನೇರವಾಗಿ ಸರ್ಕಾರ ತೆಗೆದುಕೊಳ್ಳಲಾರದೇ, ಮತ್ತೊಂದು Karnataka State Minerals Corporation Limited is also under the control of the State Government only. ಅದು ಬೇರೆ ಯಾವುದೋ ಖಾಸಗಿಯವರ ನಿಯಂತ್ರಣದಲ್ಲಿರುವುದೋ ಮತ್ತೊಂದಲ್ಲ ಅದು ಸರ್ಕಾರದ್ದೇ ಒಂದು ಅಂಗ. ಅದರ ಸಲುವಾಗಿ ಕ್ಯಾಬಿನೆಟ್‌ನಲ್ಲಿ ಸಾಕಷ್ಟು ಚರ್ಚೆಯಾಗಿ ಇವತ್ತು ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಬಗ್ಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋರ್ಟ್‌ನಲ್ಲಿ ಪ್ರಕರಣ ಇರುವುದರಿಂದ ಮತ್ತು ಇನ್ನೂ ಹಲವಾರು ವಿಷಯಗಳು ಇತ್ಯರ್ಥವಾಗುವ ದೃಷ್ಟಿಯಿಂದ ಯಾವುದಾದರೂ ಕಂಪನಿಯಲ್ಲಿ ಇದ್ದಾಗ, ಇದರ ಬಗ್ಗೆ ಚರ್ಚೆ ಮಾಡಿ ಅದರ disputes ಅನ್ನು ಸರಿ ಮಾಡಬಹುದು ಎನ್ನುವ ಕಾರಣದ ಮೇಲೆ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿ ಷೇರುಗಳನ್ನು ಅಲ್ಲಿ ಖರೀದಿ ಮಾಡುವುದಕ್ಕೆ ಒಂದು ನಿರ್ಧಾರವನ್ನು ಕೈಗೊಳ್ಳಲಾಗಿದೆ ಮತ್ತು ಸಾಕಷ್ಟು ಷರತ್ತುಗಳನ್ನು ಹಾಕಲಾಗಿದೆ. ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದ ಜಾಗ ಬಹಳ ಬೆಲೆಬಾಳುವ ಜಾಗವದು, ನಗರದ ಹೃದಯಭಾಗದಲ್ಲಿರುವುದು. ಹಾಗಾಗಿ ಅಲ್ಲಿ ಹಸ್ತಾಂತರ ಮಾಡುವುದು ಮತ್ತೊಂದು ಆಗುವಂತಹ ಪ್ರಶ್ನೆಯಲ್ಲ. ಇದು ಪಬ್ಲಿಕ್ ಕಂಪನಿಯಾಗಿದೆ. ಅದು ಕೂಡ ಪಬ್ಲಿಕ್ ಕಂಪನಿಯೇ ಮತ್ತು ಸರ್ಕಾರದ ನಿಯಂತ್ರಣದಲ್ಲಿ ಇರುವಂತಹದ್ದು ಆಗಿದೆ. ಹೀಗಾಗಿ ಸರ್ಕಾರದ ದೃಷ್ಟಿಕೋನವಿಲ್ಲದೇ, ಸರ್ಕಾರದ ಗಮನಕ್ಕೆ ಬರಲಾರದೇ ಈ ಭೂಮಿ ಎಲ್ಲಿಯೂ ಹಸ್ತಾಂತರವಾಗುವ ಪ್ರಶ್ನೆಯೇ ಇಲ್ಲ. ಇದು ದುರುಪಯೋಗವಾಗುತ್ತದೆ ಅಥವಾ ಮತ್ತೊಂದು ಆಗುತ್ತದೆ ಎನ್ನುವಂತಹ ಕೆಲವು ವಿಚಾರಗಳನ್ನು ಹೇಳಿದ್ದಾರೆ ಆ ರೀತಿ ಆಗುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಕೋರ್ಟ್‌ನಲ್ಲಿ ಪ್ರಕರಣ ಇದ್ದುದರಿಂದ ಆ ಹಿನ್ನೆಲೆಯಲ್ಲಿ ಇದರ ಬಗ್ಗೆ ನಿರ್ಧಾರವನ್ನು ಕೈಗೊಳ್ಳಲಾಗಿದೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕೋರ್ಟ್‌ನಲ್ಲಿ ಪ್ರಕರಣ ಇರಬಹುದು. Labour dispute ಬಗ್ಗೆ ಪ್ರಕರಣ ಇರಬಹುದು. ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್, 1936ರಲ್ಲಿ ಇಡೀ ದೇಶದಲ್ಲಿ ಎರಡೇ ಕಂಪನಿ ಬೆಂಗಾಲ್ ಬಲ್ಬ್ ಕಂಪನಿ ಮತ್ತು ಇದು ಮೊದಲನೇ ಕಂಪನಿ ಎಂದರೂ ತಪ್ಪಾಗುವುದಿಲ್ಲ. ಇಂತಹ ಪ್ರತಿಷ್ಠಿತ ಕಂಪನಿ ಬಂದ್ ಆಗಿದೆ. 22 ಎಕರೆ ಬೆಂಗಳೂರಿನ ಹೃದಯ ಭಾಗದಲ್ಲಿರುವಂತಹದ್ದು ಅದಕ್ಕೆ ಎಕರೆಗೆ 40 ಕೋಟಿ 50 ಕೋಟಿ ರೂಪಾಯಿ ಇರುವಂತಹ ಅತ್ಯಂತ ಬೆಲೆಯುಳ್ಳ ಭೂಮಿ ಇದು. ಇದನ್ನು ನೀವು Karnataka State Minerals Corporation Limited (MML) ಗೆ ಕೊಟ್ಟಿರಿ. It is a Public Undertaking Company. I do agree. ದೇಶದಲ್ಲಿ ಎಲ್ಲವೂ ದೊಡ್ಡ ದೊಡ್ಡ Public Undertaking Companies ಎಲ್ಲಾ ಮಾರಾಟವಾಗಿ ಹೋಗುತ್ತಿದೆ. ಅಲ್ಲಿ ಸರ್ಕಾರ disinvestment ಮಾಡುವುದು, ಖಾಸಗಿಯವರ ಪಾಲಾಗುವುದು ಇದನ್ನು ಖಾಸಗಿಯವರು ನೇರವಾಗಿ ಸರ್ಕಾರಕ್ಕೆ ಕೊಡಲಾರದೇ ಇದನ್ನು Karnataka State Minerals Corporation Limited (MML) ಮುಂದು ಮಾಡಿ ಅದರ ಮುಖಾಂತರ ಮಾರಾಟ ಮಾಡುವಂತಹ ಹೊಂಚು ಎನ್ನುವಂತಹ ಮಾತನ್ನು ಹೇಳಬೇಕಾಗಿದೆ. ದಯಮಾಡಿ ಇದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಪ್ಪಾಗಿ ಭಾವಿಸಬೇಡಿ. ಸರ್ಕಾರ 22 ಎಕರೆ ಏನಿದೆ ಈ ಜಮೀನು ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್‌ಗೆ ಸೇರಿದ್ದು ಬೆಂಗಳೂರಿನ ಹೃದಯ ಭಾಗದಲ್ಲಿರುವಂತಹ ಅತ್ಯಂತ ಬೆಲೆಯುಳ್ಳ prime locality ಯಲ್ಲಿರುವ prime land. The Government should take it into its possession directly. Via media ಎಂದು ಹೇಳಿ Karnataka State Minerals Corporation Limited (MML) ಏಕೆ ಕೊಡಬೇಕು? Public Undertaking Company ಎಂದು ಹೇಳಿ ಅದರ ಹೆಸರಿನಲ್ಲಿ ಮಾಡುವುದು, ಮುಂದೆ Public Undertaking Company ಯಲ್ಲಿ ಸರ್ಕಾರದ ಷೇರು ಇದೆಯಲ್ಲ, ಆ ಷೇರನ್ನು disinvest ಮಾಡುವುದು, ಖಾಸಗಿಯವರಿಗೆ ಮಾರುವುದು. ಸರ್ಕಾರದ ಮೇಲೆ ಏನೂ ಆಪಾದನೆ ಬರಬಾರದು ಎನ್ನುವುದಕ್ಕೆ ಹೀಗೆ ಮಾಡಲಾಗಿದೆಯೇ? ಇದೊಂದು ದೊಡ್ಡ scam. ನನ್ನ ದೃಷ್ಟಿಯಲ್ಲಿ ಇದೊಂದು ದೊಡ್ಡ ಷಡ್ಯಂತ್ರ ಎಂದು ಹೇಳಬಯಸುತ್ತೇನೆ. ದಯಮಾಡಿ ತಾವು Karnataka State Minerals Corporation Limited (MML) ಗೆ ಈ ಜಮೀನನ್ನು ವರ್ಗಾವಣೆ ಮಾಡುವಂತಹ ನಿರ್ಣಯ ಕೈಗೊಂಡಿದ್ದೀರಿ, ಕೋರ್ಟ್‌ನಲ್ಲಿರುವಂತಹ ವಿವಾದ ಬೇರೆಯೇ ಇದೆ, ಇದರ ವಿವಾದ ಇಲ್ಲ. ಅಲ್ಲಿನ ಕಾರ್ಮಿಕರು voluntary retirement ಸಲುವಾಗಿ dispute ಹಾಕಿರಬಹುದು. Under the Industrial Disputes Act ಕೆಳಗೆ ಕೋರ್ಟ್‌ನಲ್ಲಿ ಪ್ರಕರಣ ಇರಬಹುದು. ಆದರೆ Karnataka State Minerals Corporation Limited (MML) ನವರಿಗೆ ಕೊಟ್ಟು, ಅದನ್ನು ಬೇರೆಯವರಿಗೆ ಮಾರಾಟ ಮಾಡುವಂತಹ ಒಂದು ದೊಡ್ಡ ಹುನ್ನಾರ ಎಂದು ಹೇಳಬಯಸುತ್ತೇನೆ. ದಯಮಾಡಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್‌ಗೆ ಸೇರಿದ 22 ಎಕರೆ ಜಮೀನು ಏನಿದೆ ಅದನ್ನು ನೇರವಾಗಿ ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಲಿ ಎಂದು ಹೇಳಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇದೊಂದೇ ಅಲ್ಲ, 307.82 ಹಾಗೂ 309.12 ಚ.ಮೀ ವಿಸ್ತೀರ್ಣದ ಹೆಚ್.ಐ.ಜಿ., ಬಂಗಲೆಗಳಿವೆ. ಇನ್ನೊಂದು ಮುಂಬೈನ Worli Industrial Properties Private Limited ನಲ್ಲಿ 879 ಚದರಡಿಯ ಕಛೇರಿ ಮತ್ತು ಅಹಮದಾಬಾದ್‌ನ GT Association ನಲ್ಲಿ ಒಟ್ಟು 1043 ಚದರಡಿಯ ಜಾಗ ಹಾಗೂ 300

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚದರಡಿಯ (lower basement) ಜಾಗ ಹಾಗೂ ಕಟ್ಟಡ, ಯಂತ್ರೋಪಕರಣಗಳಿವೆ. ನೀವು ಹೇಳುವುದನ್ನು ಉತ್ತರ ಹೇಳಿದೆ. ಯಾವ ಕೋರ್ಟ್ ಎಂದು ನಾನು ಹೇಳುತ್ತೇನೆ. ಯಾವ ಕೋರ್ಟ್ ಕೂಡ ಸರ್ಕಾರದ ಸ್ವತ್ತನ್ನು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಕಂಪನಿಗೆ ಕೊಟ್ಟರೆ; ಈಗ ಒಂದು ವಿಶ್ವವಿದ್ಯಾನಿಲಯವಿದೆ ಅದಕ್ಕೆ ಬೇಕಾದರೆ ನಾವು ತೀರ್ಮಾನ ತೆಗೆದುಕೊಳ್ಳಬಹುದು. ಹಿಂದೆ ಶ್ರೀಮತಿ ಜಾರ್ಜ್ ಎಂಬ ಒಬ್ಬ ಐ.ಪಿ.ಎಸ್ ಅಧಿಕಾರಿಯೊಬ್ಬಳು ಅದನ್ನು ಮಾರಿಕೊಂಡರು. ಈಗ ನಿಮ್ಮ N.G.E.F., ಏನಾಗಿದೆ? ಅದಕ್ಕೆ ನಾನು ಹೇಳುತ್ತೇನೆ ಸರ್ಕಾರ ಜಮೀನು ತೆಗೆದುಕೊಂಡರೆ ಯಾವ ಕೋರ್ಟ್ ಕೂಡ ಅಡ್ಡಿ ಬರುವುದಿಲ್ಲ. ಸಾರ್ವಜನಿಕರಿಗೆ ಒಳ್ಳೆಯ ಕೆಲಸ ಮಾಡುವುದಕ್ಕೆ ಕೋರ್ಟ್‌ಗಳು ಏತಕ್ಕೆ ಅಡ್ಡಿಗೆ ಬರುತ್ತದೆ? ನಾನು ನೇರವಾಗಿ ಹೇಳುತ್ತೇನೆ, ಸರ್ಕಾರದಲ್ಲಿ ಷಡ್ಯಂತ್ರ ಆಗುತ್ತಿದೆ, ಅನಾವಶ್ಯಕವಾಗಿ ತಾವು ಕೆಟ್ಟ ಹೆಸರನ್ನು ತೆಗೆದುಕೊಳ್ಳಬೇಡಿ ಇದರ ಹಿಂದೆ ಬೇರೆ ಬೇರೆ ಉದ್ದೇಶಗಳಿವೆ. ಸರ್ಕಾರ Whatever decision that has been given by the Court is binding on the Government also. ಎಲ್ಲರಿಗೂ ಇರುತ್ತದೆ ಇದನ್ನು ಮಾಡಿ. ಇದು ಬಹಳ ಮಹತ್ವದ್ದಾಗಿದೆ. ಸಾವಿರಾರು ಕೋಟಿ ಸರ್ಕಾರದ ಆಸ್ತಿಯನ್ನು ಎಲ್ಲೆಲ್ಲಿಗೋ ಕೊಟ್ಟರೆ, ನಾಳೆ ನೀವು ಇರುತ್ತೀರಿ ಹೋಗುತ್ತೀರಿ ನಾವು ಕೂಡ ಇರುತ್ತೇವೆ ಹೋಗುತ್ತೇವೆ, ಯಾವುದಾದರೂ ಖಾಸಗಿಯವರಿಗೆ ಮಾರಿಬಿಟ್ಟರೆ ಏನೂ ಮಾಡುವುದಕ್ಕೆ ಅಧಿಕಾರ ಇರುವುದಿಲ್ಲ. ಬೇಕಾದರೆ ನಾನು ಬರೆದುಕೊಡುತ್ತೇನೆ, ನಾನು ಎಲ್ಲವನ್ನೂ ಓದಿಕೊಂಡು ಬಂದಿದ್ದೇನೆ. ದಯಮಾಡಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ತೀರ್ಮಾನ ಮಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ ಇದು ಬಹಳ ಗಂಭೀರವಾದಂತಹ ವಿಚಾರವಾಗಿದೆ. ದಯವಿಟ್ಟು ಯಾವುದೇ ಕೋರ್ಟ್ ಆದೇಶವು ಕೂಡ ಸರ್ಕಾರ ವಾಪಸ್ ತೆಗೆದುಕೊಳ್ಳುವುದಕ್ಕೆ ಅಡ್ಡಿ ಬರುವುದಿಲ್ಲ. ದಯವಿಟ್ಟು ಇದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು.

**ಶ್ರೀ ಕೆ. ಗೋವಿಂದರಾಜು:-** ಇದನ್ನು ಸರ್ಕಾರದ ಕಛೇರಿ ಮಾಡಬಹುದು ಅಥವಾ ಮಂತ್ರಿಗಳ ನಿವಾಸಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ ಅದನ್ನು ವಾಪಸ್ ತೆಗೆದುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, ಏನಾದರೂ ಮಾಡಿ ದಯವಿಟ್ಟು ಅದನ್ನು ವಾಪಸ್ ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ. ಗೋವಿಂದರಾಜು:-** ಇದನ್ನು ತೆಗೆದುಕೊಂಡು ಮಂತ್ರಿ ನಿವಾಸವನ್ನಾಗಿ ಮಾಡಿ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ AIIMS (All India Institute of Medical Sciences) ಮಾದರಿಯಲ್ಲಿ Health University ಮಾಡಬಹುದು.

**ಶ್ರೀ ಕೆ. ಗೋವಿಂದರಾಜು:-** ಆಸ್ಪತ್ರೆಗಳನ್ನು ಮತ್ತು ಸರ್ಕಾರಿ ಕಛೇರಿಗಳನ್ನು ಮಾಡಬಹುದು.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಚಿವರೇ, ನಿಮ್ಮ ತಂದೆ ಭಾರಿ ದೊಡ್ಡ ಮಹಾನ್ ವ್ಯಕ್ತಿಯಾಗಿದ್ದರು. ಅವರ ಸುಪುತ್ರರು ನೀವು. ನಿಮ್ಮ ಕಾಲದಲ್ಲಿ ಹೀಗೆ ಆಗಬಾರದು ಎನ್ನುವುದೇ ನಮ್ಮ ಅಪೇಕ್ಷೆ. ದಯವಿಟ್ಟು ಇದನ್ನು ಸರ್ಕಾರ ವಾಪಸ್ಸು ತೆಗೆದುಕೊಂಡು ನಾನಿರುವ ತನಕ ಇದನ್ನು ಮಾರುವುದಕ್ಕೆ ಅವಕಾಶ ಇಲ್ಲವೆಂದು ತಂದೆ ಹೆಸರನ್ನು ಉಳಿಸುತ್ತೀರಿ.

(ಮುಂದು)

(761) 22-09-2020/ 12-20/ ಕೆಹೆಚ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿ.ಎಂ.ಇಬ್ರಾಹಿಂ (ಮುಂದು):-**

ನಾವು ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇವೆ. ಅವರಂತಹ ವ್ಯಕ್ತಿ ಇವತ್ತು ಆ ಭಾಗದಲ್ಲಿ ಹುಡುಕಿದರೂ ಸಿಗುವುದಿಲ್ಲ. ಇವತ್ತು ತಮಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಈ ಜಾಗವನ್ನು ಮೈಸೂರು ಮಹಾರಾಜರು ಕೊಟ್ಟಿರುವಂತಹದ್ದು ಮತ್ತು ಸರ್ಕಾರದ ಸ್ವತ್ತಾಗಿದೆ. ಆದ್ದರಿಂದ ಅರಮನೆ ದುಡ್ಡು, ಗುರುಮನೆ ದುಡ್ಡು ಇಲ್ಲಲ್ಲ. ಇದರ ಬಗ್ಗೆ ದೇವರಾಜು ಅರಸುರವರು ಹೇಳಿ ಹೋಗಿರುವಂತಹದ್ದು. ದಯವಿಟ್ಟು, ಇದಕ್ಕೆ ತಮ್ಮ ಕಾಲದಲ್ಲಿ ಅವಕಾಶ ಕೊಡಬೇಡಿ. ತಮಗೆ ಕೈಮುಗಿದು 'ಶರಣು ಶರಣಾರ್ಥಿ' ಎಂದು ಬೇಡಿಕೊಳ್ಳುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮತ್ತು ಉಳಿದೆಲ್ಲಾ ವಿಧಾನ ಪರಿಷತ್ತಿನ ಸದಸ್ಯರು ತಮ್ಮ ವಿಚಾರಗಳನ್ನು ಹೇಳಿದ್ದಾರೆ. ಮೈಸೂರ್ ಲ್ಯಾಂಪ್ಸ್ ಉದ್ಯಮದ ಬಗ್ಗೆ ಮಾನ್ಯ ಸದಸ್ಯರಾದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಇದರ ಹಿಂದೆ ಏನೋ ಒಂದು ಷಡ್ಯಂತ್ರ ಇದೆ, ಮತ್ತೊಂದು ಇದೆ ಎಂಬ ವಿಚಾರಗಳನ್ನು ಹೇಳಿದರು. ಆದರೆ ಇದರ ಹಿಂದೆ ಯಾವುದೇ ಷಡ್ಯಂತ್ರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲ. Public Undertaking Company ಇದೆಯಲ್ಲವೇ, ಅದರ ಮತ್ತೊಂದು ಕಂಪನಿ ಸರ್ಕಾರದ ಅಧೀನದಲ್ಲಿರುವುದನ್ನು ವಿಲೀನ ಮಾಡುವಂತಹ ಪ್ರಕ್ರಿಯೆ ನಡೆಯುತ್ತಿದೆ ಮತ್ತು ಬಹಳ ಮುಖ್ಯವಾಗಿ ಇದರ ಬಗ್ಗೆ ಸಚಿವ ಸಂಪುಟದಲ್ಲಿ ನಿರ್ಧಾರವಾಗಿದೆ. ಸಚಿವ ಸಂಪುಟದಲ್ಲಿ ಇದರ ಬಗ್ಗೆ ಬಹಳಷ್ಟು ವಿಚಾರಗಳು ಚರ್ಚೆಯಾಗಿದೆ. ಈ ಹಿನ್ನಲೆಯಲ್ಲಿ ಇವತ್ತಿನ ದಿವಸ ಮಾನ್ಯ ಸದಸ್ಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಕೇವಲ ಕೈಗಾರಿಕಾ ಸಚಿವನಾಗಿ ನಾನು ಒಬ್ಬನೇ ನಿರ್ಧಾರ ಕೈಗೊಳ್ಳುವಂತಹದ್ದಲ್ಲ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಷಯದ ಬಗ್ಗೆ ಇಲ್ಲಿ ಏನು ಚರ್ಚೆಯಾಗಿದೆ. ಅದೆಲ್ಲಾ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ಮಾನ್ಯ ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮತ್ತೊಮ್ಮೆ ಸಚಿವ ಸಂಪುಟಕ್ಕೆ ತೆಗೆದುಕೊಂಡು ಹೋಗಿ ಚರ್ಚೆ ಮಾಡಿ, revision ಮಾಡಿ. The decision can be reviewed by the Cabinet. There is no problem in it.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹೇಳಿದ ಹಾಗೆ ಕೇವಲ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಮಾತ್ರ ಅಲ್ಲ. ಮಲ್ಲೇಶ್ವರಂ ಭಾಗದಲ್ಲಿ Karnataka Soaps and Detergents Limited ಕೂಡ ಸರ್.ಎಂ.ವಿಶ್ವೇಶ್ವರಯ್ಯನವರು ಮತ್ತು ಮಹಾರಾಜರು ಸ್ಥಾಪಿಸಿದ್ದು, *Karnataka Antibiotics and Pharmaceuticals Limited* ಇದೆ. ಅದನ್ನು ಖಾಸಗೀಕರಣ ಮಾಡುವುದಕ್ಕೆ ಒಂದು ಪ್ರಯತ್ನ ನಡೆಯುತ್ತಿದ್ದೆ. ಈ 3 ಕೂಡ 2 *Square K.M.,* ನಲ್ಲಿಯೇ ಇದೆ. ಆದ್ದರಿಂದ ಸಂಪೂರ್ಣವಾಗಿ ಹೋದರೆ, ಮೊದಲೇ ಬೆಂಗಳೂರಿನಲ್ಲಿ green patch ಕಡಿಮೆಯಾಗುತ್ತಿದೆ. ಇಲ್ಲಿ ಒಂದು ಹಸಿರು ಇದೆ. ಈ ಮೈಸೂರ್ ಲ್ಯಾಂಪ್ಸ್ ಉದ್ದಿಮೆಗೆ ಸೇರಿದ ಜಾಗವನ್ನು Tata Institute (Indian Institute of Science) ಗೆ ಕೊಟ್ಟು, ಸರ್.ಸಿ.ವಿ.ಎನ್.ರಾವ್‌ರವರಿಗೆ ಭಾರತ ರತ್ನ ಪ್ರಶಸ್ತಿ ಸಿಕ್ಕಿದ್ದು, ಇವರ ಹೆಸರಿನಲ್ಲಿ ಈ ಜಾಗ ಕೊಡಿ ಎಂದು ನಾವು 25 ವರ್ಷಗಳಿಂದ ಕೇಳುತ್ತಿದ್ದೇವೆ. ಆದರೆ ಯಾವುದೇ ಸರ್ಕಾರದಿಂದ ಕೊಡುತ್ತಿಲ್ಲ. ದಯವಿಟ್ಟು ಇದು ಸಾರ್ವಜನಿಕರ ಸ್ವತ್ತು ಮತ್ತು ಮಹಾರಾಜರು ಕೊಟ್ಟಿರುವಂತಹ ಸ್ವತ್ತು ಆಗಿದೆ. ಸರ್.ಎಂ.ವಿಶ್ವೇಶ್ವರಯ್ಯನವರು ಮಾಡಿರುವಂತಹ ಒಂದು ಕಾರ್ಖಾನೆ ಆಗಿದೆ. ಇದನ್ನು ದಯವಿಟ್ಟು ಉಳಿಸಿಕೊಳ್ಳಿ. ಇದು ಬೆಂಗಳೂರು ಮತ್ತು ಮೈಸೂರು ನಗರದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರವಾಗಿದೆ. ಏಕೆಂದರೆ ನಾನು ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್ ಪಕ್ಕದಲ್ಲಿಯೇ ಇರುವವನು. ಸುಮಾರು ದಿವಸಗಳ ಕಾಲ ಯೂನಿಯನ್‌ನಲ್ಲಿಯೂ ಕೂಡ ಇದ್ದೆ. ಆದ್ದರಿಂದ ಇದನ್ನು ಉಳಿಸಿಕೊಳ್ಳಬೇಕಾದ ಕರ್ತವ್ಯ ಕೇವಲ ವಿರೋಧಪಕ್ಷದವರದ್ದು ಅಲ್ಲ. ಕರ್ನಾಟಕ ರಾಜ್ಯವಾದರೂ ಕೂಡ ಬೆಂಗಳೂರು ನಗರದ ಪ್ರತಿಯೊಬ್ಬ ನಾಗರೀಕರ ಜವಾಬ್ದಾರಿ ಕೂಡ ಆಗಿದೆ.

**ಡಾ॥ ತೇಜಸ್ವಿನಿಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, Journalist ಆಗಿದ್ದಾಗ Public Undertaking Companies ವಿಶೇಷವಾಗಿ ಹೆಚ್.ಎ.ಎಲ್., ಹೆಚ್.ಎಂ.ಟಿ., ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್, Karnataka Soaps and Detergents Limited ಇವೆಲ್ಲವೂ ನಮ್ಮ ಪರಂಪರೆಯ ಪ್ರತೀಕಗಳಾಗಿವೆ. ಅವುಗಳನ್ನು ಮುಚ್ಚುವುದಕ್ಕಾದರೂ ನಾವು ಯಾರೂ ಸ್ವದೇಶಿ ವಸ್ತುಗಳನ್ನು ಉಪಯೋಗಿಸುವುದಿಲ್ಲ. 'Make in India' ಮುಂದಕ್ಕೆ ಇದನ್ನು ಫಾಲೋ ಮಾಡೋಣ. ಕರ್ನಾಟಕದಲ್ಲಿ AIIMS (All India Institute of Medical Sciences) ಮಾದರಿಯಲ್ಲಿ Health University ಮಾಡುವುದಕ್ಕೆ ಅಮೂಲ್ಯವಾದ 22 ಎಕರೆ ಜಾಗ ಎಲ್ಲಿಯೂ ಸಿಗುವುದಿಲ್ಲ. ಅಷ್ಟು ದೊಡ್ಡ ಜಾಗವಾಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇದಕ್ಕೆ ನಮ್ಮೆಲ್ಲರ ಸಹಮತ ಇದೆ.

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಆ ರೀತಿಯಲ್ಲಿ ಒಟ್ಟಾರೆಯಾಗಿ ನಾವೆಲ್ಲರೂ ಸೇರಿ ಒಂದು ಒಳ್ಳೆಯ ಉದ್ದೇಶಕ್ಕೋಸ್ಕರ ಮಾಡೋಣ. ನಮ್ಮ ಸಚಿವರು ಕೂಡ positive ಆಗಿ ಹೇಳಿರುವುದರಿಂದ, ಇದರ ಬಗ್ಗೆ ಸಚಿವ ಸಂಪುಟದಲ್ಲಿ ಮರು ಪರಿಶೀಲನೆ ಮಾಡಿ, ಇಂತಹ ಉದ್ದೇಶಕ್ಕೆ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗ ಅಲ್ಲಿ ಬಂಗಲೆಗಳು ಇವೆ. ಒಂದು 30 ಗುಂಟೆ, ಇನ್ನೊಂದು 30 ಗುಂಟೆ ಒಟ್ಟು 60 ಗುಂಟೆ ಜಾಗ ಇದೆ. ತಾವು ಹೇಳಿದ ಪ್ರಕಾರ 9 ಕೋಟಿ ರೂಪಾಯಿಗಳು ಅದರ ಬೆಲೆಯಾಗುತ್ತದೆ. ಇನ್ನೊಂದು ಮುಂಬೈನ Worli Industrial Properties Private Limited ನಲ್ಲಿ ಬಂಗ್ಲೆ ಇದ್ದು, 261.00 ಲಕ್ಷ ರೂಪಾಯಿಗಳಾಗುತ್ತದೆ ಎಂದು ತಾವು ಹೇಳಿದ್ದೀರಿ. ಮುಂಬೈನ Worli ಯಲ್ಲಿ ಏನು ಬೆಲೆ ಇದೆ ಎಂಬುದನ್ನು ತಾವು ಹೇಳಿ. ಇದರ ಬಗ್ಗೆ ನಮಗೂ ನಿಮಗೂ ಗೊತ್ತಿದೆ. ಒಂದು ಗುಂಟೆ ಎಷ್ಟು ಕಿಮತ್ತು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದೆ ಎಂದು ಹೇಳಿ. ಅಹಮದ್‌ಬಾದ್‌ನಲ್ಲಿರುವ ಕಛೇರಿಯ ಬೆಲೆ 80.18 ಲಕ್ಷ ರೂಪಾಯಿಗಳಾಗುತ್ತದೆ. ಇಷ್ಟೆಲ್ಲಾ ಇದೆಯಲ್ಲವೇ, ಇದರ ಬಗ್ಗೆ ನಾನೇನು ಹೇಳುತ್ತೇನೆ ಎಂದರೆ, ಸರ್ಕಾರವೇ ಇಟ್ಟುಕೊಳ್ಳಿ. ಮಾನ್ಯ ಸದಸ್ಯರು ಹೇಳಿದ ಹಾಗೆ ಇದನ್ನು University ಗೆ ಕೊಡಬಹುದು, ಆಸ್ಪತ್ರೆ ಮಾಡಬಹುದು. ಏನಾದರೂ ಮಾಡಿ, ತಮ್ಮ ಕಾಲಕ್ಕೆ ಒಂದು ಒಳ್ಳೆಯ ಕೆಲಸವನ್ನು ಮಾಡಿ. ತಾವು ಏಕೆ ಹೆಸರನ್ನು ಕೆಡಿಸಿಕೊಳ್ಳುತ್ತೀರಿ. ಇದಕ್ಕೆ ಸಚಿವ ಸಂಪುಟದ ನಿರ್ಧಾರವೆಂದರೆ, ಸಚಿವ ಸಂಪುಟದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಸೇರಿ ವಿಚಾರ ಮಾಡುವಂತಹದ್ದು ಎಂದು ಯಾರೊಬ್ಬರಿಗೂ ತಲೆಗೆ ಹೋಗಲಿಲ್ಲವೇ. ಸಚಿವ ಸಂಪುಟದಲ್ಲಿ ಯಾರೊಬ್ಬರಾದರೂ ವಿಚಾರ ಮಾಡಬೇಕಲ್ಲವೇ, ಸಚಿವ ಸಂಪುಟದಲ್ಲಿ 34 ಜನ ಮಂತ್ರಿಗಳಿದ್ದೀರಿ. ಇದರ ಬಗ್ಗೆ ತಾವೆಲ್ಲರೂ ವಿಚಾರ ಮಾಡಬೇಕಾಗಿತ್ತು. ಈ ಜಾಗವನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ. ಇದಕ್ಕೆ ನ್ಯಾಯಾಲಯದಿಂದ ಏನು ಅಡ್ಡಿ ಬರುವುದಿಲ್ಲ. ಇದು ಬೇರೆ ರೀತಿಯಿಂದ ನುಸುಳಿಕೊಂಡು ಹೋಗುವಂತಹದ್ದಾಗಿದೆ. ಈ ಜಾಗವನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಯಾವುದೇ ರೀತಿಯಿಂದ ಅಡ್ಡಿಯಿಲ್ಲ. ತಾವು ಸುಪ್ರಿಂ ಕೋರ್ಟ್‌ಗೆ ಹೋಗಿ, ಸರ್ಕಾರ ಇಂತಹ ಜಾಗ ತೆಗೆದುಕೊಳ್ಳುತ್ತದೆ ಎಂದರೆ ಯಾವುದೇ ನ್ಯಾಯಾಲಯ ಅಡ್ಡ ಬರುವುದಿಲ್ಲ. ಇದರ ಬಗ್ಗೆ ತಮಗೆ ತಿಳಿದಿಲ್ಲ. ನನಗೆ ಅನಿಸಿರುವ ಮಟ್ಟಿಗೆ ಅವರು ತಮಗೇನೋ ಮಾಡಿದ್ದಾರೆ. ದಯಮಾಡಿ ಇನ್ನೊಂದು ಬಾರಿ ಮನಸ್ಸು ಮಾಡಿ. ಇದನ್ನು ಮಾಡಿ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಇದು ಸಚಿವ ಸಂಪುಟದ ನಿರ್ಧಾರವಾಗಿದ್ದು, ಇದರ ಬಗ್ಗೆ ಚರ್ಚೆ ಮಾಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಚಿವರೇ, ಇದಕ್ಕೆ ರಿಮೋಟ್ ಬೇರೆ ಇದ್ದು, ಇದಕ್ಕೆ ಬಟನ್ ಬೇರೆ ಇರುತ್ತದೆ. ಇದರ ಬಗ್ಗೆ ನನಗೆ ಗೊತ್ತಿದೆ. ಈಗ ಸುಮ್ಮನೆ ಬೇಡ. ಇದನ್ನು ಸರ್ಕಾರದವರು ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಶ್ರೀ ಹೆಚ್.ಎಂ.ರಮೇಶ್‌ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಒಂದು ಪ್ರಶ್ನೆಗೆ ಉತ್ತರ ಮುಂದಕ್ಕೆ ಹೋಗಿದೆ. ನಾವು ಆಗಲೇ ಸಿದ್ದರಿದ್ದೆವು. ಆದರೆ ಆಗ ಉತ್ತರ ಬಂದಿರಲಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(ಆ) **ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೆ, ದಿನಾಂಕ: 22ನೇ ಸೆಪ್ಟೆಂಬರ್ 2020 ಸಮೂಹ–2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 114 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ).

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ:- ರಾಜ್ಯದ ಕೈಮಗ್ಗ ಸೀರೆಗಳಿಗೆ ಮಾರುಕಟ್ಟೆ, ಕಚ್ಚಾ ಪದಾರ್ಥ ಸೇರಿದಂತೆ ಇತರೆ ವಸ್ತುಗಳ ಪೂರೈಕೆಗೆ ಸುವ್ಯವಸ್ಥೆ, ಸರ್ಕಾರದಿಂದ ಸೀರೆ ಖರೀದಿಗೆ ತ್ವರಿತ ವ್ಯವಸ್ಥೆ ಕೈಗೊಳ್ಳುವ ಬಗ್ಗೆ.

***

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಭಾರತೀಯ ಸಂಸ್ಕೃತಿಗೆ ಪ್ರತೀಕವಾಗಿರುವ ಸ್ವಾತಂತ್ರ್ಯೋತ್ಸವ ಅವಧಿಯಲ್ಲಿ ಸ್ವದೇಶಿ ಆಂದೋಲನಕ್ಕೆ ಮುನ್ನುಡಿ ಬರೆದಿದ್ದ ನೇಕಾರಿಕೆ ಸದ್ಯ ಕೊರೋನಾ ಹೊಡೆತಕ್ಕೆ ಸಿಲುಕಿ ನಲುಗುತ್ತಿದೆ. ರಾಜ್ಯದಲ್ಲಿ ಕೈಮಗ್ಗ, ವಿದ್ಯುತ್ ಮಗ್ಗಗಳ ಮೂಲಕ ವಾರ್ಷಿಕ ಕೋಟ್ಯಂತರ ಸೀರೆ, ಪಂಚೆ ನೇಯುವ ನೇಕಾರರಿದ್ದು, ಲಾಕ್‌ಡೌನ್‌ನಿಂದಾಗಿ ಸಂಪೂರ್ಣ ನಷ್ಟ ಅನುಭವಿಸುವಂತಾಗಿದೆ. ಕಚ್ಚಾ ವಸ್ತುಗಳ ಕೊರತೆ, ಮಾರುಕಟ್ಟೆ ಸೌಲಭ್ಯ, ಸೀರೆ ಬೇಡಿಕೆ ಕಡಿಮೆಯಾಗಿರುವುದರಿಂದ ನೇಕಾರರ ಸ್ಥಿತಿ ಶೋಚನೀಯವಾಗಿದೆ. ವಿದ್ಯುತ್ ಮಗ್ಗಗಳಲ್ಲಿ ಸಿದ್ಧವಾದ ಸೀರೆಗಳಿಗಿಂತ ಕೈಮಗ್ಗದ ಸೀರೆ ದುಬಾರಿಯಾಗಿರುವುದರಿಂದ ಕೈಮಗ್ಗದ ಕುಲಕಸುಬುದಾರರಿಗೆ ತೀವ್ರ ಹಿನ್ನಡೆಯಾಗಿದೆ.

ಕೈಮಗ್ಗವನ್ನು ಅಭಿವೃದ್ಧಿಪಡಿಸುವ ಸಲುವಾಗಿ ನೇಕಾರರಿಗೆ ಆರೋಗ್ಯ ವಿಮಾ ಯೋಜನೆ, ಮಹಾತ್ಮ ಗಾಂಧಿ ಬುನ್ಕರ್ ಬಿಮಾ ಯೋಜನೆ, ನೇಕಾರ ಸನ್ಮಾನ್ ಯೋಜನೆ ಇತ್ಯಾದಿಗಳ ಮೂಲಕ ಬಡ್ಡಿ ಸಹಾಯಧನಗಳ ಸಹಾಯಕ್ಕೆ ಮುಂದಾಗಿದ್ದರೂ, ರಾಜ್ಯದ ಸೀರೆಗಳಿಗೆ ಮಾರುಕಟ್ಟೆ, ಕಚ್ಚಾ ಪದಾರ್ಥ ಸೇರಿದಂತೆ ಇತರೆ ವಸ್ತುಗಳ ಪೂರೈಕೆಗೆ ಸುವ್ಯವಸ್ಥೆ, ಸರ್ಕಾರದಿಂದ ಸೀರೆ ಖರೀದಿಗೆ ತ್ವರಿತ ವ್ಯವಸ್ಥೆ ಮತ್ತಿತರ ನಿರೀಕ್ಷೆಯನ್ನು ನೇಕಾರರು ಹೊಂದಿದ್ದು, ಈ ವಿಚಾರದಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಜವಳಿ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಸಿ.ಕೊಂಡಯ್ಯನವರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ತರಿಸಿ ಮಂಡಿಸಲಾಗುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ವಿಷಯ:- ಕೆ.ಪಿ.ಎಸ್.ಸಿ ಹೊರಡಿಸಿರುವ ಅಧಿಸೂಚನೆಯಲ್ಲಿ ಮೂಲ ವೃಂದ ಮತ್ತು ಕಲ್ಯಾಣ ಕರ್ನಾಟಕ ವೃಂದದ ಗ್ರೂಪ್ ಎ ಮತ್ತು ಬಿ ತಾಂತ್ರಿಕ ಹುದ್ದೆಗಳ ಭರ್ತಿಯಲ್ಲಿ ಕೋವಿಡ್ ಪರಿಣಾಮ ಆ ಭಾಗದ ಅಭ್ಯರ್ಥಿಗಳು ಪದವಿ ಪೂರೈಸಲು ಸಾಧ್ಯವಾಗದ ಹಿನ್ನಲೆಯಲ್ಲಿ ಸರ್ಕಾರ ಇವರಿಗೆ ನೆರವು ನೀಡುವ ಬಗ್ಗೆ.

***

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಲೋಕಸೇವಾ ಆಯೋಗ ಜೂನ್ 24 ರಂದು ಉಳಿಕೆ ಮೂಲ ವೃಂದ ಮತ್ತು ಕಲ್ಯಾಣ ಕರ್ನಾಟಕ ವೃಂದದ ಗ್ರೂಪ್ ಎ ಮತ್ತು ಬಿ ತಾಂತ್ರಿಕ 251 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿತ್ತು. ಅದರಲ್ಲಿ ಜಲಸಂಪನ್ಮೂಲ ಇಲಾಖೆಯಲ್ಲಿ ಬಾಕಿ ಉಳಿದಿದ್ದ 181 ಸಿವಿಲ್ ಇಂಜಿನಿಯರ್‌ಗಳ ನೇಮಕವೂ ಸೇರಿದ್ದು, ಪದವಿ ಪೂರೈಸಿರುವವರು ಅರ್ಜಿ ಸಲ್ಲಿಸಲು ಅರ್ಹರಾಗಿದ್ದರು. ನಿಗದಿಯಂತೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಆಗಸ್ಟ್ 10 ಕೊನೆಯ ದಿನವಾಗಿತ್ತು. ಆದರೆ, ಕೋವಿಡ್ ಕಾರಣದಿಂದಾಗಿ ಕಲ್ಯಾಣ ಕರ್ನಾಟಕ ಭಾಗದ ಅಂತಿಮ ಪದವಿ ಅಭ್ಯರ್ಥಿಗಳು ಪದವಿ ಪೂರೈಸಲು ಸಾಧ್ಯವಾಗದೇ ಇರುವುದರಿಂದ ನೇಮಕದಿಂದ ಹೊರಗುಳಿದಿದ್ದಾರೆ. ಮೇ ತಿಂಗಳಿನಲ್ಲೇ ಪದವಿ ಪರೀಕ್ಷೆಗಳು ಪೂರ್ಣಗೊಂಡಿದ್ದರೆ ಅರ್ಜಿ ಸಲ್ಲಿಸಲು ಅರ್ಹತೆ ಪಡೆಯುತ್ತಿದ್ದರು. ಕೊರೋನಾ ಕಾರಣದಿಂದಾಗಿ ಪರೀಕ್ಷೆ ಮುಂದೂಡಿದ್ದರಿಂದ ಈ ಭಾಗದ ಅಭ್ಯರ್ಥಿಗಳು ಅನ್ಯಾಯಕ್ಕೆ ಒಳಗಾಗಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗಕ್ಕೆ ವಿಶೇಷ ಸ್ಥಾನಮಾನ ದೊರೆತ ಬಳಿಕ ಇದೇ ಮೊದಲ ಬಾರಿಗೆ ಎಂಜಿನಿಯರ್‌ಗಳ ನೇಮಕ ಪ್ರಕ್ರಿಯೆ ನಡೆಯುತ್ತಿರುವುದರಿಂದ ಮುಂದಿನ ನೇಮಕಾತಿಗಳು ಯಾವಾಗ ಎಂಬುದು ತಿಳಿಯದಾಗಿದೆ. ಈ ಕಾರಣ ಸರ್ಕಾರ ಇವರ ನೆರವಿಗೆ ಧಾವಿಸಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು ಎಂದು ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪ್ರಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಕೇಳಿರುವ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಉತ್ತರವನ್ನು ಪಡೆದು ಕಳುಹಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ವಿಷಯ:– ಸರ್ಕಾರಿ ಪದವಿ ಕಾಲೇಜಿನ ಅತಿಥಿ ಉಪನ್ಯಾಸಕರಿಗೆ ಗೌರವಧನ (ವೇತನ) ಪಾವತಿಯಾಗದ ಕಾರಣ ಆತ್ಮಹತ್ಯೆಗೆ ಶರಣಾಗುತ್ತಿರುವ ಬಗ್ಗೆ.

***

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಇರುವಂತಹ ಉಪನ್ಯಾಸಕರುಗಳಲ್ಲಿ ಶೇಕಡಾ 70 ರಷ್ಟು ಭಾಗ ಅತಿಥಿ ಉಪನ್ಯಾಸಕರುಗಳು ಇದ್ದಾರೆ. ಅತಿಥಿ ಉಪನ್ಯಾಸಕರುಗಳ ಬಗ್ಗೆ ನೆನ್ನೆ ಕೂಡ ಪ್ರಶ್ನೆಯಲ್ಲಿ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಮಾನ್ಯ ಮರಿತಿಬ್ಬೇಗೌಡರವರು, ಮಾನ್ಯ ಅಪ್ಪಾಜಿಗೌಡರವರಿಗೆ ಲಿಖಿತ ಉತ್ತರಗಳು ಬಂದಿವೆ. ಮಾರ್ಚ್ ತಿಂಗಳಿನಿಂದ ಇವತ್ತಿನವರೆಗೆ ಅವರಿಗೆ ಸಂಬಳವನ್ನು ಕೊಟ್ಟಿಲ್ಲ. ಅವರನ್ನು 10 ತಿಂಗಳಿಗಾಗಿ ನೇಮಕ ಮಾಡಿಕೊಂಡಿದ್ದೇವೆ ಎಂದು ಸರ್ಕಾರ ಉತ್ತರವನ್ನು ಕೊಟ್ಟಿದೆ. ಆಗಸ್ಟ್ ತಿಂಗಳಿನಿಂದ ತೆಗೆದುಕೊಂಡು ಮಾರ್ಚ್ ತಿಂಗಳಿಗೆ ಕೊನೆ ಮಾಡಿ, ಮುಂದಿನ ದಿನಗಳಲ್ಲಿ ಅವರಿಗೆ ವೇತನವನ್ನೇ ಕೊಟ್ಟಿಲ್ಲ. ಕೋವಿಡ್ ಅವಧಿಯಲ್ಲಿ ಯಾವ ಕಾರ್ಮಿಕರನ್ನು ಮತ್ತು ನೌಕರರನ್ನು ತೆಗೆಯಬಾರದು ಹಾಗೂ ಅವರ ವೇತನವನ್ನು ಕಡಿತ ಮಾಡಬಾರದು ಎಂದು ಸರ್ಕಾರದ ಸುತ್ತೋಲೆಗಳು ಇದೆ. ಅಂತಹ ಸಂದರ್ಭದಲ್ಲಿ ಆ ಕೋವಿಡ್ ಅವಧಿಯೊಳಗೆ ಅವರಿಗೆ ವೇತನವನ್ನು ಕೊಡಲೇ ಇಲ್ಲ. ಇದರ ಬಗ್ಗೆ ನೆನ್ನೆಯ ಉತ್ತರದಲ್ಲಿ ಇತ್ತು.

(ಮುಂದು)

(762)/22–9–2020/ಎಲ್‌ಎಂ/ಎಂಡಿ/12–30

**ಶ್ರೀ ಆಯನೂರ ಮಂಜುನಾಥ್**(ಮುಂದು):–

ನಿನ್ನೆ ಸದನದಲ್ಲಿ ಸರ್ಕಾರ ತನ್ನ ಉತ್ತರದಲ್ಲಿ ಅವರನ್ನು ಸೇವೆಯಿಂದ ಬಿಡುಗಡೆಗೊಳಿಸಿದ್ದೇವೆ ಎಂದು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ ಈ ಕ್ಷಣದವರೆಗೆ ರಾಜ್ಯದ ಯಾವುದೇ ವಿಶ್ವವಿದ್ಯಾನಿಲಯ Last Working Day ನ್ನು ಅವರಿಗೆ ಹೇಳಲೇ ಇಲ್ಲ. ಕಾನೂನು ಪ್ರಕಾರ ಅವರು on duty ಯಲ್ಲಿಯೇದ್ದಾರೆ. ಜೂನ್ ತಿಂಗಳಲ್ಲಿ ಕೇಂದ್ರ ಸರ್ಕಾರ ಒಂದು ಸುತ್ತೋಲೆಯನ್ನು ಹೊರಡಿಸಿದೆ. ಜೂನ್ ತಿಂಗಳವರೆಗೆ ಅವರನ್ನು on duty ಎಂದು ಪರಿಗಣಿಸಿ ವೇತನವನ್ನು ಕೊಡಬೇಕು ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ 14,447 ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರನ್ನು ಆಯಾ ಶೈಕ್ಷಣಿಕ ಸಾಲಿನಲ್ಲಿ 10 ತಿಂಗಳ ಅವಧಿಗೆ ಹಾಗೂ ಕಾಲೇಜುಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Last Working Day ವರೆಗೆ ಸೇವೆಯನ್ನು ಸರ್ಕಾರ ಬಳಸಿಕೊಳ್ಳುತ್ತಿದೆ. ಈ ಸಾಲಿನಲ್ಲಿ ಮಾರ್ಚ್ ತಿಂಗಳವರೆಗೆ ವೇತನವನ್ನು ಪಾವತಿಸಿದೆ. ಆದರೆ ಏಪ್ರಿಲ್ ತಿಂಗಳನಿಂದ ಈವರೆಗೆ ವೇತನ ನೀಡಿರುವುದಿಲ್ಲ. ಈ ಸಾಲಿನಲ್ಲಿ ಕರೋನಾ ಕಾರಣದಿಂದ ಕಾಲೇಜು ತರಗತಿಗಳು ಕ್ರಮಬದ್ಧವಾಗಿ ನಡೆಯದೆ ತರಗತಿಗಳು ಮುಚ್ಚಿವೆ. ವಿದ್ಯಾರ್ಥಿಗಳಿಗೆ ಆನ್ ಲೈನ್ ಪಾಠ ಪ್ರವಚನ ಮಾಡಲು ಆಂತರಿಕ ಪರೀಕ್ಷೆಗಳನ್ನು ನಡೆಸಲು, ಮೌಲ್ಯ ಮಾಪನ ಇತ್ಯಾದಿ ಕಾರ್ಯಗಳಿಗೆ ಇವರನ್ನು ಬಳಸಿಕೊಳ್ಳಲಾಗುತ್ತಿದೆ. ಪ್ರಮುಖವಾಗಿ ಕಾಲೇಜುಗಳು/ವಿಶ್ವವಿದ್ಯಾಲಯಗಳು Last Working Day ಯನ್ನು ಈ ದಿನದವರೆವಿಗೂ ಘೋಷಿಸಿರುವುದಿಲ್ಲ. ಆದ್ದರಿಂದ ಇವರನ್ನು ಸೇವೆಯಿಂದ ಅಧಿಕೃತವಾಗಿ ಬಿಡುಗಡೆಗೊಳಿಸದೆ, ಕರ್ತವ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಕೇಂದ್ರ ಸರ್ಕಾರ ಸುತ್ತೋಲೆ ಮೂಲಕ ಈ ಅತಿಥಿ ಉಪನ್ಯಾಸಕರಗಳ ಈ ಕರೋನಾ ಅವಧಿಯಲ್ಲಿ ಆನ್ ಡ್ಯೂಟಿ ಎಂದು ಪರಿಗಣಿಸಿ ವೇತನ ನೀಡಲು ಸೂಚಿಸಿದೆ. ಆದರೆ ರಾಜ್ಯ ಸರ್ಕಾರ ಈವರೆವಿಗೂ ಆಗಸ್ಟ್ ತಿಂಗಳಿನವರೆಗೆ ಒಟ್ಟು 5 ತಿಂಗಳ ವೇತನ ಪಾವತಿ ಮಾಡದೆ ಉಚಿತವಾಗಿ ದುಡಿಸಿಕೊಳ್ಳಲಾಗುತ್ತಿದೆ. ಇದರಿಂದ ಆರ್ಥಿಕ ದುರ್ಬಲವಾಗಿರುವ ಅತಿಥಿ ಉಪನ್ಯಾಸಕರು ಮನೆ ಬಾಡಿಗೆ, ದಿನ ನಿತ್ಯದ ಊಟೋಪಚಾರ, ವೈದ್ಯಕೀಯ ಚಿಕಿತ್ಸೆ ಇಲ್ಲದೆ ಹಸಿವಿನಿಂದ ಕಂಗಾಲಾಗಿದ್ದಾರೆ. ನಾಲ್ಕಾರು ಜನ ಮರ್ಯಾದೆಗೆ ಅಂಜಿ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಸುಮಾರು ಹತ್ತಾರು ಜನ ಅನಾರೋಗ್ಯದಿಂದ ಚಿಕಿತ್ಸೆ ಪಡೆಯಲಾಗದೇ ಸಾವನ್ನಪ್ಪಿದ್ದಾರೆ. ಈ ರೀತಿ ಉನ್ನತ ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಸರ್ಕಾರ ಕೂಡಲೇ ಆಗಸ್ಟ್ ತಿಂಗಳವರೆಗೆ ವೇತನ ಬಿಡುಗಡೆ ಮಾಡಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತಿದ್ದೇನೆ. ಅಕಾಲಿಕವಾಗಿ ಮರಣ ಹೊಂದಿದವರ ಕುಟುಂಬಕ್ಕೆ ಪರಿಹಾರ ನೀಡಲು ಕೋರುತ್ತೇನೆ.

ಇದು ಯಾವ ನಾಗರೀಕ ಸಮಾಜಕ್ಕೂ ಶೋಭೆ ತರುವಂತಹ ವಿಚಾರವಲ್ಲ. ಈ ರೀತಿ ಯಾರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅವರ ಕುಟುಂಬಕ್ಕೆ ಸರ್ಕಾರ ಪರಿಹಾರವನ್ನು ಕೊಡಬೇಕು. ಬಡತನದಿಂದ ಆಹಾರವಿಲ್ಲದೆ ತೊಂದರೆಗೆ ಒಳಗಾಗಿದ್ದಾರೆ. ಸರ್ಕಾರ ನಿನ್ನೆ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದೆ. Last Working Day ಎಂದು ಘೋಷಣೆಯಾಗಿರುವುದಿಲ್ಲ. ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದಿಲ್ಲ. ಅವರಿಗೆ ಕೂಡಲೇ ವೇತನವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):**-ಮಾನ್ಯ ಸಭಾಪತಿಗಳೆ, ಅತಿಥಿ ಉಪನ್ಯಾಸಕರ ವೇತನ ಬಿಡುಗಡೆಗೊಳಿಸುವ ಬಗ್ಗೆ ಮಾನ್ಯ ಸದಸ್ಯರಾದ ಆಯನೂರ ಮಂಜುನಾಥರವರು ತಂದಿರುವ ಈ ಶೂನ್ಯವೇಳೆ ಪ್ರಸ್ತಾವಕ್ಕೆ ನಾಳೆ ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಶ್ರೀ ಆಯನೂರ ಮಂಜುನಾಥ:-** ಮಾನ್ಯ ಸಭಾಪತಿಗಳೆ, ಅಲ್ಲಿ ಶಿಕ್ಷಕರು ಉಪವಾಸದಿಂದ ಸಾಯುತ್ತಿದ್ದಾರೆ. ಆದ್ದರಿಂದ ನಾನು ಈ ಉತ್ತರವನ್ನು ಪ್ರತಿಭಟಿಸಿ ಬಾವಿಗೆ ಬರುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರಾದ ಶ್ರೀ ಆಯನೂರ ಮಂಜುನಾಥರವರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಶ್ರೀ ಯು.ಬಿ.ವೆಂಕಟೇಶ್:-** ಆಡಳಿತ ಪಕ್ಷದ ಸದಸ್ಯರು ಬಾವಿಗೆ ಬಂದಿದ್ದಾರೆ. ಏನು ಕಾಲ ಬಂದಿದೆ ಈ ಸರ್ಕಾರಕ್ಕೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಶೂನ್ಯವೇಳೆಯಲ್ಲಿ ಬಾವಿಗೆ ಬರುವುದು ಸರಿಯಲ್ಲ. ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಆಯನೂರ ಮಂಜುನಾಥರವರು ತಂದಿರುವ ಈ ವಿಷಯ ಬಹಳ ಜಲ್ವಂತವಾದ ಸಮಸ್ಯೆಯಾಗಿದೆ. ಅವರು ಆಡಳಿತ ಪಕ್ಷದವರಾದರೂ ಕೂಡಾ ಅವರ ಕಾಳಜಿಯನ್ನು ನಾವು ಮೆಚ್ಚುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಆಯನೂರ ಮಂಜುನಾಥರವರೆ ನಿಮ್ಮ ಸ್ಥಾನಕ್ಕೆ ಬನ್ನಿ. ಉಪಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇವೆ.

(ಮಾನ್ಯ ಉಪ ಮುಖ್ಯಮಂತ್ರಿಗಳು ಯಾವಾಗ ಬರುತ್ತಾರೆ ಅಲ್ಲಿಯವರೆಗೆ ನಾನು ಬಾವಿಯಲ್ಲಿ ನಿಂತಿರುತ್ತೇನೆ. ಇದರ ಬಗ್ಗೆ ಚರ್ಚೆ ಮಾಡಿದ್ದೇವೆ, ಪತ್ರ ಬರೆದಿದ್ದೇವೆ ಯಾವುದಕ್ಕೂ ಉತ್ತರವಿಲ್ಲ. **ಶ್ರೀ ಆಯನೂರ ಮಂಜುನಾಥ ಬಾವಿಯಲ್ಲಿ ನಿಂತು ಮಾತನಾಡಿದರು)**

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಗಳೆ, ಮಾನ್ಯ ಆಯನೂರ ಮಂಜುನಾಥರವರೆ ನಾವು ನಿಮ್ಮ ಜೊತೆಗಿದ್ದೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಈ ಹಂತದಲ್ಲಿ ವಿರೋಧ ಪಕ್ಷದ ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ಜನತಾ ದಳದ ಸದಸ್ಯರು ಬಾವಿಗೆ ಬಂದು ನಿಂತರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಉಪ ಮುಖ್ಯಮಂತ್ರಿಗಳು ಚಿಕಿತ್ಸೆಯಲ್ಲಿ ಇದ್ದಾರೆ...

**ಶ್ರೀ ಬಸವರಾಜ ಹೊರಟ್ಟಿ :-** ಇದು ಈಗಿನ ಸಮಸ್ಯೆಯಲ್ಲ. ಎಷ್ಟು ಜನ ಉಪನ್ಯಾಸಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವುದನ್ನು ಪರಿಶೀಲಿಸಿ ನೋಡಿ.

**ಸಭಾಪತಿಯವರು:-** ಸಭಾನಾಯಕರೆ ಸಂಬಂಧಪಟ್ಟ ಸಚಿವರನ್ನು ಕರೆಯಿಸಿ. ಈಗ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ತಮ್ಮ ಶೂನ್ಯವೇಳೆಯ ವಿಷಯವನ್ನು ಪ್ರಸ್ತಾಪ ಮಾಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ಇ–ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಮತ್ತು ಸಂಸ್ಕರಣೆಎ ಸರಿಯಾದ ವ್ಯವಸ್ಥೆ ಇಲ್ಲದೇ ಪರಿಸರ, ಮಕ್ಕಳ ಹಾಗೂ ಹಿರಿಯ ನಾಗರೀಕರ ಆರೋಗ್ಯದ ಮೇಲೆ ಬೀರುತ್ತಿರುವ ದುಷ್ಪಾರಿಣಾಮಗಳ ಬಗ್ಗೆ.**

**–––––––**

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭೆಯಿಂದ ಚುನಾಯಿತರಾದವರು):– ಮಾನ್ಯ ಸಭಾಪತಿಗಳೆ,** ಮಾಹಿತಿ ತಂತ್ರಜ್ಞಾನದ ತವರೂರಾಗಿರುವ ಬೆಂಗಳೂರು ಇ–ತ್ಯಾಜ್ಯ ಉತ್ಪಾದನೆಯಲ್ಲಿ ದೇಶದಲ್ಲೇ ಮೂರನೇ ಸ್ಥಾನದಲ್ಲಿದೆ. ಒಂದು ಅಂದಾಜಿನ ಪ್ರಕಾರ ನಗರದಲ್ಲಿ ವರ್ಷಕ್ಕೆ ಒಂದು ಲಕ್ಷ ಟನ್ ಇ–ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಆದರೆ ಇದರ ಸಂಗ್ರಹಣೆ, ವಿಲೇವಾರಿ ಮತ್ತು ಸಂಸ್ಕರಣೆಗೆ ಬಿಬಿಎಂಪಿ ವ್ಯವಸ್ಥಿತ ಜಾಲವನ್ನು ರೂಪಿಸಿರುವುದಿಲ್ಲ. ಮಾರುಕಟ್ಟೆಗೆ ದಿನಕ್ಕೊಂದು ವಿನ್ಯಾಸದ ಸ್ಮಾರ್ಟ್‌ಫೋನ್‌ಗಳು ಮತ್ತು ಇನ್ನಿತರ ಎಲೆಕ್ಟ್ರಾನಿಕ್ ವಸ್ತುಗಳು ಲಗ್ಗೆ ಇಡುತ್ತಿದ್ದು ಹೊಸತು ಕೈ ಸೇರಿದ ತಕ್ಷಣ ಹಳೆಯದಯ ಮೂಲೆ ಸೇರುತ್ತಿವೆ. ಇಂತಹ ಇ–ತ್ಯಾಜ್ಯವು ಗುಜರಿ ಅಂಗಡಿಗಳನ್ನು ಸೇರುತ್ತಿರುವುದರಿಂದ ಪರಿಸರಕ್ಕೆ ಮಾರಕವಾಗದ ರೀತಿಯಲ್ಲಿ ಅವುಗಳನ್ನು ಸಂಸ್ಕರಿಸುವ ವಿಧಾನವನ್ನು ಅನಸರಿಸುತ್ತಿಲ್ಲ. ಇದು ಪರಿಸರ ಮತ್ತು ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಇ–ತ್ಯಾಜ್ಯ ವಿಲೇವಾರಿಗೆ ಕಟ್ಟುನಿಟ್ಟಿನ ನಿಗಾವಹಿಸುವುದು ಹಾಗೂ ವೈಜ್ಞಾನಿಕ ಸಂಸ್ಕರಣೆ ಅವಶ್ಯವಾಗಿದೆ. ಇಲ್ಲದಿದ್ದಲ್ಲಿ ಅವೈಜ್ಞಾನಿಕ ವಿಲೇವಾರಿಯಿಂದ ಮಾರಕ ಕ್ಯಾನ್ಸರ್ ಹೆಚ್ಚಾಗಲಿದೆ. ಎಲ್‌ಇಡಿ ಪರದೆಗಳು, ಬ್ಯಾಟರಿ ಸೆಲ್‌ಗಳಲ್ಲಿನ ವಿಷಕಾರಕ ಅಂಶಗಳಿಂದ ಮೂತ್ರಕೋಶಕ್ಕೆ, ಶ್ವಾಸಕೋಶಕ್ಕೆ, ಮಕ್ಕಳ ಬೌದ್ಧಿಕ ಬೆಳವಣಿಗೆಗೆ, ಸಂತಾನೋತ್ಪತ್ತಿ ಸಾಮರ್ಥ್ಯ ಹಾಗೂ ಇತರೆ ಆರೋಗ್ಯ ಸಂಬಂಧಿ ಸಮಸ್ಯೆಗಳಿಗೆ ಕಾರಣವಾಗಲಿದೆ. ಆ ಕಾರಣ ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಬಿ.ಕೆ.ಹರಿಪ್ರಸಾದ್‌ರವರ ಶೂನ್ಯವೇಳೆ ಪ್ರಸ್ತಾವಕ್ಕೆ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಿಂದ ಉತ್ತರವನ್ನು ಪಡೆದು ಮಂಡಿಸಲಾಗುತ್ತದೆ.

**SRI S.R.PATIL (LEADER OF OPPOSITION):-** Mr. Chairman Sir, The House is not in order. ಇದು ಸರಿ ಕಾಣುವುದಿಲ್ಲ. ಇವೆಲ್ಲ ಸಂಸದೀಯ ವ್ಯವಸ್ಥೆಗೆ ವಿರುದ್ಧವಾಗಿರುವುದು. ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲ ಸದಸ್ಯರು ಬಾವಿಯಲ್ಲಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಸಚಿವರು ಬರುವವರೆಗೆ ಶೂನ್ಯವೇಳೆ ಉಳಿದ ವಿಷಯಗಳನ್ನು ಪ್ರಸ್ತಾಪ ಮಾಡಲಿ.

**(ಗೊಂದಲ)**

**ಡಾ: ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಆಯನೂರ ಮಂಜುನಾಥರವರಿಗೆ ನಾವು ಬೆಂಬಲವನ್ನು ವ್ಯಕ್ತಪಡಿಸುತ್ತೇವೆ. ಉಪನ್ಯಾಸಕರಿಗೆ ಸಂಬಳವನನು ಕೊಡಬೇಕು. ಧರಣಿ ಮಾಡಲಿ ಬಿಡಲಿ ಸಂಬಳ ಕೊಡಬೇಕು, ಸಂಬಳ ಕೊಡಿಸುವ ವಿಚಾರದಲ್ಲಿ ನಮ್ಮ ಬೆಂಬಲವಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಆಡಳಿತ ಪಕ್ಷದವರು ಬಾವಿಯಲ್ಲಿದ್ದಾರೆ. It is a rare precedent. I have never seen in my life. ಇದು ಮೊದಲನೆ ಸಾರಿಯಾಗುತಿರುವುದು. ಸದನ ನಡೆಸುವುದು ಸರಿಯಲ್ಲ.

**(ಗೊಂದಲ)**

**ಸಭಾಪತಿಯವರು:–** ಸಭಾನಾಯಕರೆ ಸಂಬಂಧಪಟ್ಟ ಸಚಿವರನ್ನು ಕರೆಯಿಸಿ.

(ಗೊಂದಲ)

**ಶ್ರೀ ಗೋಪಾಲ ಸ್ವಾಮಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರಾದ ಜೆ.ಸಿ.ಮಾಧುಸ್ವಾಮಿಯವರು ಇದ್ದಾರೆ ನನ್ನ ಒಂದು ಶೂನ್ಯವೇಳೆ ಓದಿಬಿಡುತ್ತೇನೆ. ಮಂತ್ರಿಗಳು ಉತ್ತರ ಕೊಡುತ್ತಾರೆ. ನಂತರ ನಾನು ತಮಗೆ ಬೆಂಬಲವಾಗಿ ನಿಲ್ಲುತ್ತೇನೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಉಪಮುಖ್ಯಮಂತ್ರಿಗಳು ಈ ಶೂನ್ಯವೇಳಗೆ ಉತ್ತರವನ್ನು ಕೊಡಬೇಕಾಗಿತ್ತು. ಆದರೆ ಅವರು quarantine ನಲ್ಲಿರುವುದರಿಂದ ಅವರ ಅನುಪಸ್ಥಿತಿಯಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ಮಾನ್ಯ ಸದಸ್ಯರುಗಳು ತಮ್ಮ–ತಮ್ಮ ಸ್ಥಾನಕ್ಕೆ ಬನ್ನಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ ತಾವು ಹೇಗೆ ಸದನವನ್ನು ನಡೆಸುತ್ತೀರಿ? ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಸದಸ್ಯರು ಬಾವಿಯಲ್ಲಿದ್ದಾರೆ. ಶೂನ್ಯವೇಳೆಯನ್ನು ಮುಂದೂಡಿ ನಂತರ ತೆಗೆದುಕೊಳ್ಳಿ. 10 ನಿಮಿಷ ಸದನವನ್ನು ಮುಂದೂಡಿ ಚರ್ಚೆ ಮಾಡಿ ಒಂದು ತೀರ್ಮಾನ ಮಾಡಿ. This is very rare case.

**(ಗೊಂದಲ)**

**ಶ್ರೀ ಬಸವರಾಜ ಹೊರಟ್ಟಿ:–** ಸದನವನ್ನು ಅರ್ಧ ಗಂಟೆ ಮುಂದೂಡಿ ಚರ್ಚೆ ಮಾಡಿ ತೀರ್ಮಾನ ಮಾಡಿ.

**(ಗೊಂದಲ)**

**ಸಭಾಪತಿಯವರು:–** ಸದನವನ್ನು 1–00 ಗಂಟೆಯವರೆಗೆ ಮುಂದೂಡಲಾಗುತ್ತದೆ.

**(ಸದನವನ್ನು 12 ಗಂಟೆ 38 ನಿಮಿಷದಿಂದ 1–00 ಗಂಟೆವರೆಗೆ ಮುಂದೂಡಲ್ಪಟ್ಟಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(763)22.09.2020/2.00/ವೈಎಲ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**(12 ಗಂಟೆ 38 ನಿಮಿಷಕ್ಕೆ ಮಂದೂಡಲ್ಪಟ್ಟ ಸದನವು ಪುನ: 2 ಗಂಟೆ 9 ನಿಮಿಷಕ್ಕೆ ಸಮಾವೇಶಗೊಂಡಿತು)**
**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**3. ಮುಖ್ಯಮಂತ್ರಿಗಳ ಹೇಳಿಕೆ**

**ಸರ್ಕಾರಿ ಪದವಿ ಕಾಲೇಜಿನ ಅತಿಥಿ ಉಪನ್ಯಾಸಕರಿಗೆ ಗೌರವಧನ (ವೇತನ) ಪಾವತಿಯಾಗದ ಕಾರಣ ಆತ್ಮಹತ್ಯೆಗೆ ಶರಣಾಗುತ್ತಿರುವ ಬಗ್ಗೆ.**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಮತ್ತು ಇನ್ನಿತರ ಸದಸ್ಯರು ಸರ್ಕಾರಿ ಪದವಿ ಕಾಲೇಜಿನ ಅತಿಥಿ ಉಪನ್ಯಾಸಕರಿಗೆ ಗೌರವಧನ ಪಾವತಿಯಾಗದ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

(ಮುಂದು) . . .

(764)22-09-2020 2.10 ಟಿಸಿಹೆಚ್.ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) (ಮುಂದು):**

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ 14,447 ಅತಿಥಿ ಉಪನ್ಯಾಸಕರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರನ್ನು ಆಯಾ ಶೈಕ್ಷಣಿಕ ಸಾಲಿನಲ್ಲಿ 10 ತಿಂಗಳ ಅವಧಿಗೆ ಕಾಲೇಜುಗಳ last working days ವರೆಗೆ ಅವರ ಸೇವೆಯನ್ನು ಸರ್ಕಾರ ಬಳಸಿಕೊಳ್ಳುತ್ತಿದೆ. ಈ ಸಾಲಿನಲ್ಲಿ ಮಾರ್ಚ್ ತಿಂಗಳವರೆಗೆ ಗೌರವ ವೇತನವನ್ನು ಪಾವತಿಸಿದೆ. ಆದರೆ, ಏಪ್ರಿಲ್ ತಿಂಗಳಿನಿಂದ ಇಲ್ಲಿಯವರೆಗೆ ವೇತನ ನೀಡಿರುವುದಿಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಕೇಂದ್ರ ಸರ್ಕಾರದ ಸುತ್ತೋಲೆ ಮೂಲಕ ಈ ಅತಿಥಿ ಉಪನ್ಯಾಸಕರನ್ನು ಕರೋನಾ ಅವಧಿಯಲ್ಲಿ 'on duty' ಎಂದು ಪರಿಗಣಿಸಿ, ವೇತನ ನೀಡಲು ಸೂಚನೆ ಮಾಡಿದ್ದೇನೆ.

**(ಈ ಹಂತದಲ್ಲಿ ಸದನದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಹಿನ್ನೆಲೆಯಲ್ಲಿ, ನಾನು ಆಗಸ್ಟ್ ತಿಂಗಳಿನವರೆಗೆ ಒಟ್ಟು ಐದು ತಿಂಗಳ ವೇತನವನ್ನು ಪಾವತಿ ಮಾಡದೇ, ಅವರು ಉಚಿತವಾಗಿ ಕೆಲಸ ಮಾಡುತ್ತಿದ್ದಾರೆಂದು ನನ್ನ ಗಮನಕ್ಕೆ ತಂದಿದ್ದಾರೆ. ಅದಕ್ಕೆ ತಕ್ಷಣವೇ ಆ ಒಂದು ಅತಿಥಿ ಉಪನ್ಯಾಸಕರಿಗೆ ವೇತನ ಪಾವತಿ ಮಾಡುವುದರ ಬಗ್ಗೆ ಸರ್ಕಾರ ತಕ್ಷಣ ಹಣವನ್ನು ಬಿಡುಗಡೆ ಮಾಡಿ ಅವರ ನೆರವಿಗೆ ಬರುವುದು ನಮ್ಮ ಕರ್ತವ್ಯ ಇದೆ. ಅದನ್ನು ಮಾಡುತ್ತೇನೆ ಎನ್ನತಕ್ಕಂಥ ಭರವಸೆಯನ್ನು ನಾನು ಈ ಮೇಲ್ಮನೆಯಲ್ಲಿ ಕೊಡುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಧನ್ಯವಾದಗಳು.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಅತಿಥಿ ಉಪನ್ಯಾಸಕರ ಸಮಸ್ಯೆ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ ಮತ್ತು ಭರವಸೆಯನ್ನು ಕೊಟ್ಟಿದ್ದಾರೆ. ಹಾಗಾಗಿ, ಅತಿಥಿ ಉಪನ್ಯಾಸಕರ ಪರವಾಗಿ ಮತ್ತು ನಮ್ಮ ಜೊತೆಗೂಡಿದ ಎಲ್ಲಾ ಶಾಸಕರುಗಳ ಪರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನು ಅರ್ಪಣೆ ಮಾಡುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಅತಿಥಿ ಉಪನ್ಯಾಸಕರಿಗೆ ಸಂಬಳ ಬಿಡುಗಡೆ ಮಾಡುವುದಕ್ಕೆ ನಿರ್ದೇಶನ ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು):-**

ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ 2018-19ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಸಂಪುಟ-1 ಮತ್ತು 2)ನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ (ಸಂಖ್ಯೆ 1) ನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 5. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕ.ವಿ.ಪ:–** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

01. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2020
02. ಕರ್ನಾಟಕ ರೇಸ್ ಕೋರ್ಸುಗಳಿಗೆ ಪರವಾನಗಿ ನೀಡುವ (ತಿದ್ದುಪಡಿ) ವಿಧೇಯಕ, 2020
03. ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2020
04. ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2020
05. ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2020
06. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020
07. ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವ ವಿಧೇಯಕ, 2020
08. ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2020
09. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2020

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6. ವಿಶೇಷ ಸದನ ಸಮಿತಿಗಳ ಕಾಲಾವಕಾಶ ವಿಸ್ತರಣೆ

### ಅ) ರಾಜ್ಯದಲ್ಲಿರುವ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿ

**ಅ) ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆ ಪರಿಶೀಲನೆ ವಿಶೇಷ ಸದನ ಸಮಿತಿಯ ಅಧ್ಯಕ್ಷನಾದ ನಾನು, ನಮ್ಮ ಸಮಿತಿ ಸಭೆಯಲ್ಲಿ ಸಾಕಷ್ಟು ವಿಷಯಗಳನ್ನು ಚರ್ಚೆ ಮಾಡಿದ್ದೇವೆ. ಇನ್ನೂ ಸಾಕಷ್ಟು ವಿಷಯಗಳು ಚರ್ಚೆ ಮಾಡತಕ್ಕಂಥದ್ದು ಇದೆ. ಮತ್ತೆ ಸಾಕಷ್ಟು ಕ್ಲಬ್‌ಗಳು ನಮ್ಮ ಸಮಿತಿ ವ್ಯಾಪ್ತಿಗೆ ಬರುತ್ತಿರುವುದರಿಂದ ಇನ್ನೂ 6 ತಿಂಗಳ ಕಾಲ ಸಮಯಾವಕಾಶವನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ರಾಜ್ಯದಲ್ಲಿರುವ ಹಾಗೂ ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಧಿಯನ್ನು ಆರು ತಿಂಗಳ ಕಾಲ ವಿಸ್ತರಿಸುವ ಪ್ರಸ್ತಾವವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವವನ್ನು ಮಂಡಿಸಲಾಯಿತು.

ಸದನ ಸಮಿತಿಯ ಕಾಲಾವಧಿಯನ್ನು ವಿಸ್ತರಿಸುವ ಪ್ರಸ್ತಾವವು ಅಂಗೀಕೃತವಾಗಿದೆ ಹಾಗೂ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ 21.09.2020 ರಿಂದ ಆರು ತಿಂಗಳವರೆಗೆ ಅವಧಿಯನ್ನು ವಿಸ್ತರಿಸಿದೆ.

**(ಪ್ರಸ್ತಾವನೆಯನ್ನು ಅನುಮೋದಿಸಿತು ಹಾಗೂ ವಿಶೇಷ ಸದನ ಸಮಿತಿಯ ಕಾಲಾವಧಿಯನ್ನು ವಿಸ್ತರಿಸಲು ಅನುಮೋದನೆ ದೊರೆಯಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಸದನ ಸಮಿತಿ**

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಅಧ್ಯಕ್ಷನಾದ ನಾನು ಈ ಕೋವಿಡ್-19 ನಿಂದ ನಾವು ಸರಿಯಾಗಿ ಸಭೆಗಳನ್ನು ನಿರ್ವಹಿಸುವುದಕ್ಕೆ ಆಗುತ್ತಿಲ್ಲ. ಆ ಕಾರಣಕ್ಕಾಗಿ ತಾವು ಸಮಿತಿಗೆ ಹೆಚ್ಚುವರಿಯಾಗಿ 6 ತಿಂಗಳ ಕಾಲಾವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಧಿಯನ್ನು ಆರು ತಿಂಗಳ ಕಾಲ ವಿಸ್ತರಿಸುವ ಪ್ರಸ್ತಾವವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವವನ್ನು ಮಂಡಿಸಲಾಯಿತು.

ವಿಶೇಷ ಸದನ ಸಮಿತಿಯ ಕಾಲಾವಧಿಯ ಪ್ರಸ್ತಾವವು ಅಂಗೀಕೃತವಾಗಿದೆ ಹಾಗೂ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ 21.09.2020 ರಿಂದ ಆರು ತಿಂಗಳವರೆಗೆ ಅವಧಿಯನ್ನು ವಿಸ್ತರಿಸಿದೆ.

(ಪ್ರಸ್ತಾವನೆಯನ್ನು ಅನುಮೋದಿಸಿತು ಹಾಗೂ ವಿಶೇಷ ಸದನ ಸಮಿತಿಯ ಕಾಲಾವಧಿಯನ್ನು ವಿಸ್ತರಿಸಲು ಅನುಮೋದನೆ ದೊರೆಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 7. ವರದಿಗಳನ್ನೊಪ್ಪಿಸುವುದು

**ಅ) ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)** ಮಾನ್ಯ ಸಭಾಪತಿಯವರೇ, 2020ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಧೇಯಕವನ್ನು ಪರಿಶೀಲಿಸಲು ರಚಿಸಲಾಗಿರುವ ಕರ್ನಾಟಕ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿಯ ಸದಸ್ಯರಾಗಿ ವಿಶೇಷ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಆ) ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಶ್ರೀ ಎಸ್.ರವಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಸದಸ್ಯನಾದ ನಾನು 2019–20 ನೇ ಸಾಲಿನ 32ನೇ ವರದಿಯನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

**ಇ) ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸದಸ್ಯನಾದ ನಾನು 2019–20ನೇ ಸಾಲಿನ 3ನೇ ವರದಿಯನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

**ಈ) ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, 2019–20ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಅಡಿಯಲ್ಲಿ ಕಾರ್ಮಿಕ, ಇಂಧನ, ಆಹಾರ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿರುವ ಕರ್ನಾಟಕ ರಾಜ್ಯ ವಕ್ಫ್‌ಮಂಡಳಿಗೆ ಸಂಬಂಧಿಸಿದಂತೆ ಎರಡನೆಯ ವರದಿಯನ್ನು ಸಮಿತಿಯ ಪರವಾಗಿ ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ಒಪ್ಪಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 8. ಚುನಾವಣಾ ಪ್ರಸ್ತಾವಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮಾನ್ಯ ಸಭಾನಾಯಕರು):–** ಮಾನ್ಯ ಸಭಾಪತಿಯವರೇ, 2020–21ನೇ ಸಾಲಿನ ವಿಧಾನ ಮಂಡಲದ/ವಿಧಾನ ಪರಿಷತ್ತಿನ ಈ ಕೆಳಕಂಡ ಸ್ಥಾಯಿ ಸಮಿತಿಗಳಿಗೆ ಹಾಗೂ ವಿವಿಧ ವಿಶ್ವವಿದ್ಯಾಲಯ ಮತ್ತು ರಾಜ್ಯ ಗ್ರಂಥಾಲಯ ಪ್ರಾಧಿಕಾರಗಳಿಗೆ ಸದಸ್ಯರುಗಳನ್ನು ಚುನಾಯಿಸುವ ಕುರಿತು ಪ್ರಸ್ತಾವಗಳನ್ನು ಮಂಡಿಸುತ್ತಿದ್ದೇನೆ.

ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸರ್ಕಾರಿ ಭರವಸೆಗಳ ಸಮಿತಿಗೆ ಒಂಭತ್ತು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸುವುದು.

ಆ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 250(1)ನೇ ನಿಯಮದ ಅನುಸಾರವಾಗಿ ಈ ಸಭೆ **ಹಕ್ಕುಭಾಧ್ಯತಾ ಸಮಿತಿಗೆ ಏಳು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸುವುದು.

ಇ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 349(2)ನೇ ನಿಯಮದ ಅನುಸಾರವಾಗಿ ಈ ಸಭೆ **ವಸತಿ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸುವುದು.

ಈ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 261(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಗೆ ಎಂಟು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸುವುದು.

ಉ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 245(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 248ನೇ ನಿಯಮದ ಅನುಸಾರವಾಗಿ ಈ ಸಭೆ **ಸಾರ್ವಜನಿಕ ಉದ್ಯಮಗಳ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸುವುದು.

ಋ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 254(1)ನೇ ನಿಯಮದ ಅನುಸಾರವಾಗಿ ಈ ಸಭೆ **ಅಧೀನ ಶಾಸನ ರಚನಾ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸುವುದು.

ಎ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 264ನೇ ನಿಯಮದ ಅನುಸಾರವಾಗಿ ಈ ಸಭೆ **ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸುವುದು.

ಏ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 267ನೇ ನಿಯಮದ ಅನುಸಾರವಾಗಿ ಈ ಸಭೆ **ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ಐದು** ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸುವುದು.

ಐ) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಧಿನಿಯಮ 1992ರ ಪ್ರಕರಣ 18(1)(9)ರನ್ವಯ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ** ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸುವುದು.

ಒ) ಕರ್ನಾಟಕ ವಿಶ್ವವಿದ್ಯಾಲಯ (ಹಂಪಿ) ಅಧಿನಿಯಮ 1991ರ ಪ್ರಕರಣ 19(ಎನ್)ರನ್ವಯ **ಕರ್ನಾಟಕ ವಿಶ್ವವಿದ್ಯಾಲಯದ ಗೌರ್ನಿಂಗ್ ಕೌನ್ಸಿಲ್‌ಗೆ** ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸುವುದು.

ಓ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಾಯ್ದೆ 2009ರ ಪ್ರಕರಣ 20 (ಐ)ರನ್ವಯ **ವಿಶ್ವವಿದ್ಯಾನಿಲಯದ ಪ್ರಶಾಸನ ಸಭೆಗೆ** ವಿಧಾನ ಪರಿಷತ್ತಿನ ಒಬ್ಬ ಸಿಂಡಿಕೇಟ್ ಸದಸ್ಯರನ್ನು ಚುನಾಯಿಸುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಔ) ರಾಜ್ಯ ಗ್ರಂಥಾಲಯ ಪ್ರಾಧಿಕಾರ (ಸಾರ್ವಜನಿಕ ಗ್ರಂಥಾಲಯ ಇಲಾಖೆ) ಅಧಿನಿಯಮ 1965ರ ಕಲಂ 3 (2)(ಸಿ) ರನ್ವಯ **ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸಮಿತಿಗೆ** ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸುವುದು.

ಈ ಎಲ್ಲಾ ಆಯ್ಕೆ ಸಮಿತಿಗೆ ಚುನಾವಣಾ ಪ್ರಕ್ರಿಯೆಗಳನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

## 9. ವಿಧೇಯಕಗಳನ್ನು ಹಿಂದಕ್ಕೆ ಪಡೆಯುವುದು

### (ಅ) ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2020

### ಹಿಂಪಡೆಯುವ ಪ್ರಸ್ತಾವ

**ಶ್ರೀ.ಸಿ.ಸಿ.ಪಾಟೀಲ್ (ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ “ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2020 ಹಿಂದಕ್ಕೆ ತೆಗೆದುಕೊಳ್ಳುವ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ. ಆದಕಾರಣ ದಯಮಾಡಿ ಈ ಪ್ರಸ್ತಾವಕ್ಕೆ ಸದನ ಒಪ್ಪಿಗೆಯನ್ನು ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ ;

“ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2020” ನ್ನು ಹಿಂದಕ್ಕೆ ಪಡೆಯಲು ಸದನದ ಅನುಮತಿಯನ್ನು ಕೋರುವುದು.

**ಶ್ರೀ.ಸಿ.ಸಿ.ಪಾಟೀಲ್ (ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು):–** ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2020ನ್ನು ಹಿಂದಕ್ಕೆ ಪಡೆದುಕೊಂಡಿದ್ದೇವೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಹಿಂಪಡೆಯಲು ಸದನವು ಅನುಮೋದಿಸಿತು.**

(ಮುಂದು...)

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(765)22.9.2020/2.20/ಎಂ.ಎಂ–ಜಿ.ಆರ್**

(ಸಭಾಪತಿಯವರ ಉಪಸ್ಥಿತಿ)

**(ಆ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2020**

**ಹಿಂಪಡೆಯುವ ಪ್ರಸ್ತಾವ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ "ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ"ವನ್ನು ಹಿಂಪಡೆಯಲು ಅನುಮತಿ ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**2020ನೇ ಸಾಲಿನ "ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ"ವನ್ನು ಹಿಂದಕ್ಕೆ ತೆಗೆದುಕೊಳ್ಳಲು ಸದನದ ಅನುಮತಿಯನ್ನು ಕೋರುವುದು.**

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, **2020ನೇ ಸಾಲಿನ "ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ" ವನ್ನು ಹಿಂದಕ್ಕೆ ಪಡೆದುಕೊಂಡಿದ್ದೇವೆ.**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಹಿಂಪಡೆಯಲು ಸದನವು ಅನುಮೋದಿಸಿತು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್(ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತು ಸದನ ಪ್ರಾರಂಭವಾಗುವುದಕ್ಕಿಂತ ಒಂದು ಗಂಟೆ ಪೂರ್ವದಲ್ಲಿ ನಿಯಮ 59ರಡಿಯಲ್ಲಿ ಒಂದು ನಿಲುವಳಿ ಸೂಚನೆಯನ್ನು ನಾನು ಹಾಗೂ ನಮ್ಮ ಸದಸ್ಯ ಸ್ನೇಹಿತರು ಸಹಿ ಮಾಡಿ ತಮಗೆ ಸಲ್ಲಿಸಿದ್ದೇವೆ. ಅದು ಉತ್ತರ ಕರ್ನಾಟಕದ ಪ್ರತಿಷ್ಠಿತ ನೀರಾವರಿ ಯೋಜನೆಯಾದಂತಹ ಕೃಷ್ಣಾ ಮೇಲ್ದಂಡೆ ಯೋಜನೆ ಒಂದು ಮತ್ತು ಎರಡನೇ ಹಂತ ಮುಗಿದಿದ್ದು ಈಗಾಗಲೇ 15 ಲಕ್ಷ ಎಕರೆಗೆ ನೀರಾವರಿಯಾಗಿದೆ. ಮೂರನೇ ಹಂತ Krishna Water Disputes Tribunal ನ ಶ್ರೀ ಬಿ.ಹೆಚ್. ಕುಮಾರ್ ವರ್ಮಾ ಅವರ ವರದಿ ಪ್ರಕಾರ ನಮ್ಮ ರಾಜ್ಯಕ್ಕೆ 130 ಟಿ.ಎಂ.ಸಿ ನೀರು ಹಂಚಿಕೆಯಾಗಿದೆ. ಆ ಭಾಗಲ್ಲಿ 14 ಲಕ್ಷದ 67 ಸಾವಿರ ಎಕರೆಗೆ ನೀರಾವರಿಯಾಗುವಂಥದ್ದು 130 ಟಿ.ಎಂ.ಸಿ ನೀರಿನ ಸದ್ಬಳಕೆಯಾಗಿ ಅಂದಾಜು ಉತ್ತರ ಕರ್ನಾಟಕದ ಏಳು ಜಿಲ್ಲೆಗಳು ಅಂದರೆ ಬಾಗಲಕೋಟೆ, ಬಿಜಾಪುರ, ರಾಯಚೂರು, ಕೊಪ್ಪಳ, ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳಿಗೆ; . . .

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಇತರರಿಂದ ನಿಯಮ 59ರ ಸೂಚನೆಯನ್ನು ನಿಯಮ 68ರಡಿಯಲ್ಲಿ ಚರ್ಚೆಗೆ ಅವಕಾಶವನ್ನು ಕಲ್ಪಿಸಲಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರಿಗೆ ಧನ್ಯವಾದಗಳು. ಅದನ್ನು ತಾವು ಯಾವಾಗ ಚರ್ಚೆಗೆ ತೆಗೆದುಕೊಳ್ಳುತ್ತೀರಿ ಎಂಬುದನ್ನು ಸ್ವಲ್ಪ ತಿಳಿಸಿ.

**ಸಭಾಪತಿಯವರು:-** ನಂತರ ಹೇಳುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವತ್ತು ವಿಧೇಯಕಗಳನ್ನು ಪರ್ಯಾಲೋಚನೆಗಾಗಿ ಮಂಡಿಸಿ ಬಿಡುತ್ತೇವೆ. ಚರ್ಚೆಯನ್ನು ಆಮೇಲೆ ಮಾಡಲಿ. ಚರ್ಚೆಯನ್ನು ನಾವು ಕೇಳುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಚಿವರೇ, ಇವತ್ತು ವಿಧೇಯಕಗಳನ್ನು ಪರ್ಯಾಲೋಚನೆಗಾಗಿ ಮಂಡಿಸಿ, ನಾಳೆ ಬೇಕಾದರೆ ಚರ್ಚೆಯನ್ನು ಮಾಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 10. ಪರ್ಯಾಲೋಚನೆಗಾಗಿ ಸಭೆಯ ಮಂದಿಡಲಾದ ವಿಧೇಯಕಗಳು

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಪರ್ಯಾಲೋಚಿಸಬೇಕಾಗಿದ್ದು, ಈ ವಿಧೇಯಕಗಳು ಕೆಲವು ಮುಖ್ಯಮಂತ್ರಿಯವರ ಹಾಗೂ ಇನ್ನಿತರ ಸಚಿವರುಗಳ ಹೆಸರಿನಲ್ಲಿದ್ದು ಅವೆಲ್ಲವನ್ನು ಸಭೆಯ ಮುಂದೆ ಮಂಡಿಸಿರುತ್ತೇನೆ. ಮುಂದೆ ಚರ್ಚೆಗೆ ತೆಗೆದುಕೊಳ್ಳಬಹುದಾಗಿದೆ.

1. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2020
2. ಕರ್ನಾಟಕ ರೇಸ್‌ಕೋರ್ಸುಗಳಿಗೆ ಪರವಾನಗಿ ನೀಡುವ (ತಿದ್ದುಪಡಿ) ವಿಧೇಯಕ, 2020
3. ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2020
4. ಕೈಗಾರಿಕಾ ವಿವಾದಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2020
5. ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2020
6. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020
7. ಕರ್ನಾಟಕ ಕೆಲವು ಅಧಿನಿಯಮಗಳು ಮತ್ತು ಪ್ರಾದೇಶಿಕ ಕಾನೂನುಗಳನ್ನು ನಿರಸನಗೊಳಿಸುವ ವಿಧೇಯಕ, 2020

**ಸಭಾಪತಿಯವರು:–** ಈಗ ಗಮನ ಸೆಳೆಯುವ ಸೂಚನೆಗಳು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಮಗೆ ಊಟಕ್ಕೆ ಹಸಿವಾಗುತ್ತಿದೆ.

**ಸಭಾಪತಿಯವರು:–** ಊಟ ಮಾಡಿಲ್ಲವೇ?

**ಶ್ರೀ ಮರಿತಿಬ್ಬೇಗೌಡ:–** ನಾವು ಇನ್ನೂ ಊಟ ಮಾಡಿಲ್ಲ.

**ಶ್ರೀ ಸಿ.ಸಿ. ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ತಾವು ಒಂದು ಗಂಟೆಗೆ ಎಂದು ಹೇಳಿ ಎರಡು ಗಂಟೆಗೆ ಸದನವನ್ನು ಕರೆದಿರಿ.

**ಸಭಾಪತಿಯವರು:–** ಈಗ ಸದನವನ್ನು 3.00 ಗಂಟೆಯವರೆಗೆ ಮುಂದೂಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(766) 22.09.2020/3.30/ಹೆಚ್‌ವಿ:ಎಕೆ

(ಮಧ್ಯಾಹ್ನ 2 ಗಂಟೆ 29 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನ: ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಪತಿಗಳಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ಪೀಠವನ್ನು ಅಲಂಕರಿಸಿದರು.)

ಸಭಾಪತಿಯವರುಃ- ಈಗ ಅರ್ಧ ಗಂಟೆ ಕಾಲಾವಧಿ ಚರ್ಚೆ. ಮಾನ್ಯ ಎಂ.ನಾರಾಯಣಸ್ವಾಮಿಯವರೇ, ಸರ್ಕಾರದಿಂದ ಲಿಖಿತ ರೂಪದ ಉತ್ತರ ಇನ್ನೂ ಬಂದಿಲ್ಲ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)ಃ- ಸನ್ಮಾನ್ಯ ಸಭಾಪತಿಯವರೇ, ಅವರು ಕೇಳಿದಂತಹ ಪ್ರಶ್ನೆಗೆ ನಿನ್ನೆ ಉತ್ತರವನ್ನು ಕೊಟ್ಟಿದ್ದೇವೆ. ಹೆಚ್ಚುವರಿ ಮಾಹಿತಿಯನ್ನು ಮೌಖಿಕವಾಗಿ ನೀಡಲಾಗುತ್ತದೆಂದು ಸರ್ಕಾರ ಹೇಳಿದೆ, ಅದಕ್ಕೆ ಮಾನ್ಯ ಸದಸ್ಯರು ಒಪ್ಪಿಕೊಂಡಿದ್ದಾರೆ.

ಶ್ರೀ ಎಂ.ನಾರಾಯಣಸ್ವಾಮಿಃ- ಸನ್ಮಾನ್ಯ ಸಭಾಪತಿಯವರೇ, ನಿನ್ನೆ ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಅರ್ಧ ಗಂಟೆ ಕಾಲಾವಧಿಯಡಿಯಲ್ಲಿ ಚರ್ಚೆಗೆ ತೆಗೆದುಕೊಂಡಿರುವುದಕ್ಕೆ ಉತ್ತರವನ್ನು ಕೊಟ್ಟಿಲ್ಲ.

ಶ್ರೀ ಕೋಟ ಶ್ರೀನಿವಾಸ ಪೂಜಾರಿಃ- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಚರ್ಚೆ ಪ್ರಾರಂಭ ಮಾಡಲಿ, ಸರ್ಕಾರ ಉತ್ತರ ಕೊಡುತ್ತದೆ.

11. **ಅರ್ಧಗಂಟೆ ಕಾಲಾವಧಿ ಚರ್ಚೆ**

**ವಿಷಯಃ ಕೊರೋನಾ ಸಂಬಂಧವಾಗಿ ಖರೀದಿಸಲಾದ ವಿವಿಧ ಸಾಮಗ್ರಿಗಳ ಬಗ್ಗೆ.**

– – –

ಶ್ರೀ ಎಂ.ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು)ಃ- ಸನ್ಮಾನ್ಯ ಸಭಾಪತಿಯವರೇ, ನಿನ್ನೆ ನಾನು ಕೊರೋನಾ ವಿಚಾರವಾಗಿ ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಆರೋಗ್ಯ ಸಚಿವರು ಉತ್ತರವನ್ನು ಕೊಟ್ಟಿದ್ದರು. ಆದರೆ, ಆ ಉತ್ತರ ಸಮಂಜಸವಾಗಿಲ್ಲ ಎನ್ನುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಒತ್ತಾಯದ ಮೇರೆಗೆ ತಾವು ಅದನ್ನು ಅರ್ಧ ಗಂಟೆ ಕಾಲಾವಧಿಯಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ನೀಡಿದ್ದೀರಿ, ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ, ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ.

ರಾಜ್ಯಕ್ಕೆ ಕೊರೋನಾ ಮಾರಕ ರೋಗ ಕಾಲಿಟ್ಟು ಸುಮಾರು 6 ತಿಂಗಳುಗಳಾಗುತ್ತಿವೆ. ಈ ಮಾರಕ ರೋಗವನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಸಂಪೂರ್ಣವಾಗಿ ಎಡವಿದೆ. ಈ ನಿಟ್ಟಿನಲ್ಲಿ ಸರ್ಕಾರ ನಿಷ್ಕ್ರಿಯವಾಗಿದೆ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ನಮ್ಮ ಪಕ್ಕದ ರಾಜ್ಯವಾಗಿರುವ ಕೇರಳದಲ್ಲಿ ಈ ಮಾರಕ ರೋಗ ಕಂಡು ಬಂದ ಕೂಡಲೇ ಸುಮಾರು 20 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟು ಈ ರೋಗ ನಿವಾರಣೆಗೆ ಏನೇನು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅವುಗಳನ್ನು ತೆಗೆದುಕೊಂಡಿತ್ತು. ನುರಿತ ಡಾಕ್ಟರ್‌ಗಳನ್ನು ಕರೆದು ಮಾತುಕತೆ ನಡೆಸುವ ಮೂಲಕ ಈ ರೋಗವನ್ನು ಯಾವ ರೀತಿಯಲ್ಲಿ ನಿವಾರಣೆ ಮಾಡಬಹುದು ಎನ್ನುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿತ್ತು. ಆದರೆ, ನಮ್ಮ ಸರ್ಕಾರದಲ್ಲಿರುವ ಒಂದೊಂದು ಇಲಾಖೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಒಂದೊಂದು ರೀತಿಯ ಹೇಳಿಕೆಗಳನ್ನು ನೀಡಿದ್ದಾರೆ. ಮಾನ್ಯ ಆರೋಗ್ಯ ಸಚಿವರು ಒಂದು ರೀತಿಯ ಹೇಳಿಕೆಯನ್ನು ನೀಡುತ್ತಾರೆ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮತ್ತೊಂದು ರೀತಿಯ ಹೇಳಿಕೆಯನ್ನು, ಮಾನ್ಯ ಕಂದಾಯ ಸಚಿವರು ಇನ್ನೊಂದು ರೀತಿಯ ಹೇಳಿಕೆಯನ್ನು ಹಾಗೂ ಉಪ ಮುಖ್ಯಮಂತ್ರಿಗಳು ಮತ್ತೊಂದು ರೀತಿಯ ಹೇಳಿಕೆಯನ್ನು ಕೊಡುವ ಮೂಲಕ ಗೊಂದಲವನ್ನು ಸೃಷ್ಟಿ ಮಾಡಿದ್ದಾರೆಯೇ ವಿನಃ ಈ ಮಾರಕ ರೋಗವನ್ನು ತಡೆಗಟ್ಟುವುದಕ್ಕೆ ಸೂಕ್ತ ಕ್ರಮವನ್ನು ಕೈಗೊಂಡಿಲ್ಲ. ಈ ಸರ್ಕಾರದಲ್ಲಿ ಸಚಿವರುಗಳ ಮಧ್ಯೆ ಪರಸ್ಪರ ಸಮನ್ವಯತೆ ಇಲ್ಲದೇ ಇರುವುದರಿಂದ ಈ ರೀತಿಯಾಗಿದೆ. ಸರ್ಕಾರ ಈ ರೋಗವನ್ನು ತಡೆಗಟ್ಟುವುದಕ್ಕೆ ಯಾವಯಾವ ವಸ್ತುಗಳನ್ನು ತರಿಸಿಕೊಳ್ಳಬೇಕಾಗಿತ್ತು ಅಂದರೆ, ಮಾಸ್ಕ್, ಸ್ಯಾನಿಟರೈಸ್, ಗ್ಲೌಸ್, ಆಕ್ಸಿಜನ್ ಸಿಲಿಂಡರ್ ಮತ್ತು ವೆಂಟಿಲೇಟರ್‌ನ್‌ಗಳನ್ನು ಸಮಯಕ್ಕೆ ಸರಿಯಾಗಿ ಖರೀದಿ ಮಾಡಿ ಮುಂಜಾಗ್ರತಾಕ್ರಮಗಳನ್ನು ತೆಗೆದುಕೊಂಡಿದ್ದರೆ ಉತ್ತಮವಾಗಿರುತ್ತಿತ್ತು.

ಸನ್ಮಾನ್ಯ ಸಭಾಪತಿಯವರೇ, ಜನವರಿ 31ನೇ ತಾರೀಖಿನಲ್ಲಿ ಒಂದು ಸೋಂಕಿತನ ಸಂಖ್ಯೆಯಿಂದ ಪ್ರಾರಂಭಗೊಂಡ ಈ ರೋಗ ಇವತ್ತು ರಾಜ್ಯದಲ್ಲಿ ಐದು ಲಕ್ಷದ ಗಡಿಯನ್ನು ಮುಟ್ಟಿದೆ. ಸರ್ಕಾರ ಅವತ್ತಿನಿಂದ ಈ ರೋಗವನ್ನು ತಡೆಗಟ್ಟುವ ಪ್ರಯತ್ನವನ್ನು ಮಾಡಿದ್ದರೆ ಈ ಸಂಖ್ಯೆಯನ್ನು ನಾವು ಕಡಿಮೆ ಮಾಡಬಹುದಾಗಿತ್ತು. ನನಗಿರುವ ಮಾಹಿತಿಯ ಪ್ರಕಾರ ಸರ್ಕಾರ ಸುಮಾರು 4000 ಕೋಟಿ ರೂಪಾಯಿಗಳನ್ನು ಸರ್ಕಾರ ಈಗಾಗಲೇ ಖರ್ಚು ಮಾಡಿದೆ. ಇಷ್ಟು ಹಣ ವೆಚ್ಚ ಮಾಡಿದ್ದರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಸರ್ಕಾರ ಶೇಕಡಾ ಒಂದರಷ್ಟು ಈ ರೋಗದ ಹರಡುವಿಕೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗಿಲ್ಲ.

(ಮುಂದುವರಿದಿದೆ)

(767) 22.9.2020 3.40 ಪಿಕೆ:ಆರ್‌ಎನ್

**ಶ್ರೀ ಎಂ.ನಾರಾಯಣಸ್ವಾಮಿ(ಮುಂದುವರೆದಿದೆ)**

ಇಷ್ಟೆಲ್ಲಾ ಖರ್ಚು ಮಾಡಿ, ಇಷ್ಟೊಂದು ಜನ ಮಂತ್ರಿಗಳಿದ್ದು, ಸರ್ಕಾರದ ಎಲ್ಲಾ ಅಧಿಕಾರಿಗಳನ್ನು ಇದಕ್ಕಾಗಿ ಉಪಯೋಗಿಸಿಕೊಂಡರು. ಆಶಾ ಕಾರ್ಯಕರ್ತೆಯರು ಇರಬಹುದು, ನಗರ ಪಾಲಿಕೆಯ ಸಿಬ್ಬಂದಿಗಳಿರಬಹುದು ಅಥವಾ ಶಿಕ್ಷಕರಿರಬಹುದು, ಇವರೆಲ್ಲರನ್ನೂ ಉಪಯೋಗಿಸಿಕೊಂಡು ಒಂದು ಪರ್ಸೆಂಟ್‌ನಷ್ಟು ಈ ರೋಗವನ್ನು ತಡೆಯುವುದಕ್ಕೆ ಆಗಲಿಲ್ಲ. ಇದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ನೀವು ತೆಗೆದುಕೊಂಡ ಐಟಂಗಳೇನಿತ್ತು, ಅವುಗಳನ್ನು ಖರೀದಿಸಲು ಯಾರಿಗೆ ಆರ್ಡರ್ ಪ್ಲೇಸ್ ಮಾಡಬೇಕಾಗಿತ್ತು, ಯಾವ ಕಂಪನಿಯಿಂದ ತೆಗೆದುಕೊಳ್ಳಬೇಕು ಎನ್ನುವುದರ ಕಡೆ ಗಮನ ಹೆಚ್ಚಾಯಿತು. ಯಾವ ಕಂಪನಿಗಳು ಎಷ್ಟು ಕಮಿಷನ್ ಕೊಡುತ್ತವೆ, ಯಾರಿಗೆ ಆರ್ಡರ್ ಕೊಡಬೇಕು-ಕೊಡಬಾರದು ಎಂಬ ಬಗ್ಗೆಯೇ ಗಲಾಟೆಯಾಯಿತು. ಬೀದಿ ರಂಪಾ ಆಗಿ ಅದು ಮಾಧ್ಯಮಗಳಲ್ಲಿ ಬಂತು. ಯಾವ ಆರೋಗ್ಯ ಸಚಿವರು ಜವಾಬ್ದಾರಿಯುತವಾಗಿ ಮಾತನಾಡಬೇಕಾಗಿತ್ತೋ ಅವರನ್ನು ಮೂಲೆ ಗುಂಪು ಮಾಡಿದರು ಮತ್ತು ಮಾನ್ಯ ಸುರೇಶ್‌ಕುಮಾರ್ ಕೊರೋನಾ ವಿಷಯದ ಬಗ್ಗೆ ಮಾತನಾಡುತ್ತಾರೆ ಎಂದು ಅವರನ್ನು ಮುಂದೆ ತಂದರು. ಒಂದು ವಾರ ಆದಮೇಲೆ ಅವರನ್ನೂ ದೂರ ಮಾಡಿದರು. ಈ ರೀತಿ ನಿಮ್ಮಲ್ಲಿ ಗೊಂದಲ ಸೃಷ್ಟಿ ಮಾಡಿಕೊಂಡು, ಕೊರೋನಾ ನಿಯಂತ್ರಣ ಮಾಡುವುದಕ್ಕೆ ಕಾರ್ಯಸೂಚಿಗಳನ್ನು ಮಾಡಬೇಕಾಗಿತ್ತೋ ಅದರ ಕಡೆ ಗಮನ ಕೊಡಲಿಲ್ಲ. ಇಂತಹ ಅನೇಕ ಉದಾಹರಣೆಗಳಿವೆ. ಒಂದು ವೆಂಟಿಲೇಟರ್ ಖರೀದಿ ಮಾಡುವುದಕ್ಕೆ ಮುಂಚೆ, ನಮ್ಮ ರಾಜ್ಯದಲ್ಲಿ ಎಷ್ಟು ವೆಂಟಿಲೇಟರ್‌ಗಳಿವೆ ಅಥವಾ ಎಷ್ಟು ಕೊರತೆ ಇವೆ ಮತ್ತು ಎಲ್ಲಿಂದ ತರಬೇಕು ಎಂಬ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಮೊದಲು ಟೆಂಡರ್ ಕರೆದು ಯಾವುದ್ಯಾವುದೋ ಕಂಪನಿಗಳಿಗೆ ಕೊಟ್ಟಿರಿ. ಮಾರ್ಕೆಟ್‌ನಲ್ಲಿ ಒಂದು ಸಿಲಿಂಡರ್ ಬೆಲೆ ಎಷ್ಟಿತ್ತೋ ಅದಕ್ಕೆ ಮೂರು ಪಟ್ಟು ಜಾಸ್ತಿ ಹಣವನ್ನು ಕೊಟ್ಟು ತೆಗೆದುಕೊಳ್ಳುವಂತಹ ಅವಶ್ಯಕತೆ ಏನಿತ್ತು? ನಮ್ಮ ರಾಷ್ಟ್ರದ ಜನ ಪಿ.ಎಂ.ಕೇರ್ಸ್ ಫಂಡ್‌ಗೆ ಸಾವಿರಾರು ಕೋಟಿಗಳಷ್ಟು ಹಣ ಕೊಟ್ಟರು. ಪಿ.ಎಂ. ಕೇರ್ಸ್ ಫಂಡ್ ಎನ್ನುವುದು ಯಾವರೀತಿ ಆಯಿತು ಎನ್ನುವುದು ನಮಗೂ ಕೂಡ ಗೊತ್ತಿಲ್ಲ. ಸ್ವಾತಂತ್ರ್ಯ ಬಂದಾಗಿನಿಂದ ನೋಡಿದರೆ, "ಪ್ರಧಾನ ಮಂತ್ರಿಗಳ ಪರಿಹಾರ ನಿಧಿ" ಎನ್ನುವುದೊಂದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಂಪ್ರದಾಯಿಕವಾಗಿ ಜನ ಕೊಡುವ ದೇಣಿಗೆಯನ್ನು ಆ ಅಕೌಂಟ್‌ನಲ್ಲಿಟ್ಟು ಇಂತಹ ತುರ್ತು ಪರಿಸ್ಥಿತಿಯಲ್ಲಿ ಉಪಯೋಗಿಸಲಾಗುತ್ತದೆ. ಪರಂಪರೆಯನ್ನು ದೂರ ಮಾಡಿ, ಹೊಸ ಪರಂಪರೆಯನ್ನು ಸೃಷ್ಟಿ ಮಾಡಿ, "ಪಿ.ಎಂ. ಕೇರ್ಸ್ ಫಂಡ್" ಎನ್ನುವ ಅಕೌಂಟನ್ನು ಪ್ರಾರಂಭ ಮಾಡಿದರು. ಈ ಫಂಡ್‌ಗೆ ಎಷ್ಟು ಹಣ ಬಂತು ಎನ್ನುವ ಬಗ್ಗೆ ಇವತ್ತಿಗೂ ಲೆಕ್ಕ ಇಲ್ಲ. ಯಾರೋ ಒಬ್ಬ ಸಾಮಾಜಿಕ ಕಾರ್ಯಕರ್ತ ಆರ್‌ಟಿಐ ನಲ್ಲಿ ಈ ಕುರಿತು ಪ್ರಶ್ನೆ ಮಾಡಿದಾಗ, ಆರ್‌ಟಿಐ ಮೂಲಕ ಇದರ ಬಗ್ಗೆ ಉತ್ತರ ಕೊಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಡಾ:ಬಿ.ಆರ್.ಅಂಬೇಡ್ಕರ್‌ರವರು ಬರೆದಿರುವ ಸಂವಿಧಾನದ ವ್ಯವಸ್ಥೆ ಅಡಿಯಲ್ಲಿ ಈ ರೀತಿಯದ್ದು ಯಾವತ್ತಾದರೂ ಆಗಿದೆಯೇ? ಸಾರ್ವಜನಿಕರು ಏನು ಪಿ.ಎಂ.ಕೇರ್ಸ್ ಫಂಡ್‌ಗೆ ದುಡ್ಡು ಕೊಟ್ಟಿದ್ದರೋ ಅದರ ಅಕೌಂಟ್ ಹೇಳಿ ಎಂದು ಕೇಳಿದರೆ, ಕೊಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**-ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಂದ್ರ ಸರ್ಕಾರದ ಕಾರ್ಯಶೈಲಿಯ ಬಗ್ಗೆ ಮಾತನಾಡುತ್ತಿದ್ದಾರೆಯೇ? ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಂತೆ ನಮ್ಮ ಮುಂದಿರುವ ವಿಷಯದ ಬಗ್ಗೆ ಮಾತನಾಡಬೇಕು.

**ಶ್ರೀ ಎಂ.ನಾರಾಯಣಸ್ವಾಮಿ:**- ಪಿ.ಎಂ. ಕೇರ್ಸ್ ಫಂಡ್‌ನಿಂದ ರಾಜ್ಯಕ್ಕೆ ಎಷ್ಟು ಹಣ ಬಂತು ಎನ್ನುವ ವಿಚಾರಕ್ಕೆ ಬರುತ್ತಿದ್ದೇನೆ. ಕೊರೋನಾ ಕೇವಲ ಕರ್ನಾಟಕ ರಾಜ್ಯಕ್ಕಲ್ಲ, ಭಾರತಕ್ಕೆ ಮತ್ತು ಇಡೀ ವಿಶ್ವಕ್ಕೆ ಸಂಬಂಧಪಟ್ಟ ವಿಚಾರವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**-ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಂದ್ರ ಸರ್ಕಾರದ ಕಾರ್ಯಶೈಲಿಯ ಬಗ್ಗೆ ಮಾತನಾಡಬಯಸಿದರೆ ಅದನ್ನು ಬೇಕಾದರೆ ಪ್ರತ್ಯೇಕವಾಗಿ ಮಾತನಾಡೋಣ. ಅದರ ಬಗ್ಗೆ ನೋಟಿಸ್ ಕೊಟ್ಟರೆ ಅದನ್ನೂ ಚರ್ಚೆ ಮಾಡೋಣ.

**ಶ್ರೀ ಎಂ.ನಾರಾಯಣಸ್ವಾಮಿ:**- ನಾನು ಆಪಾದನೆ ಮಾಡುತ್ತಿಲ್ಲ. ಪಿ.ಎಂ.ಕೇರ್ಸ್ ಫಂಡ್‌ಗೆ ಬಂದ ಹಣದಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ಬಂತು ಎಂದು ಕೇಳಬಯಸುತ್ತಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:**- ಹಿಂದಿನ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯ ಬಗ್ಗೆಯೂ ಚರ್ಚೆ ಮಾಡೋಣ. ಹಿಂದೆ ಪಿಎಂ ರಿಲೀಫ್ ಫಂಡ್ ಎಂದೇನಿತ್ತು, ಅದು ಹೇಗೆ ಬಳಕೆಯಾಗಿದೆ ಎಂಬ ಬಗ್ಗೆಯೂ ಮಾತನಾಡೋಣ. ಅದರ ಬಗ್ಗೆ ನಮ್ಮ ಹತ್ತಿರ ಕೂಡ ಒಂದಷ್ಟು ಮಾಹಿತಿಗಳಿವೆ. ಆದರೆ ಇವತ್ತಿನ ವಿಷಯ ಅದಲ್ಲ ಎನ್ನುವ ಕಾರಣಕ್ಕೆ ನಾವು ಮೌನವಾಗಿ ಕುಳಿತುಕೊಂಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ:-** ನಿಮ್ಮ ಮೇಲೆ ಆಪಾದನೆ ಮಾಡುತ್ತಿಲ್ಲ, ದೂಷಣೆ ಮಾಡುತ್ತಿಲ್ಲ. ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ಈ ಒಂದು ಮಾರಕ ರೋಗದಿಂದ ಜನ ರಸ್ತೆ ಬದಿಯಲ್ಲಿ ಬಿದ್ದು ಸತ್ತಿದ್ದನ್ನು ನಾವು ನೋಡಿದ್ದೇವೆ. ಅವರಿಗೆ ನಾವು ಸಹಾಯ ಮಾಡಬೇಕಾಗಿತ್ತು ಎನ್ನುವ ಕಾಳಜಿಯಿಂದ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್:-** ಪಿ.ಎಂ.ಕೇರ್ಸ್ ಫಂಡ್ ಬಗ್ಗೆ ಚರ್ಚೆ ಮಾಡುವುದಾದರೆ, ಅದರಲ್ಲಿ ಒಂದೇ ಪಾರ್ಟಿಯ ಸದಸ್ಯರಿರಬೇಕೇ ಅಥವಾ ದೇಶದಲ್ಲಿ ಒಂದು ವೇಳೆ 2 ಸಾವಿರ ಪಾರ್ಟಿಗಳಿದ್ದರೆ ಆ 2 ಸಾವಿರ ಪಾರ್ಟಿಗಳ ಸದಸ್ಯರೂ ಇರಬೇಕೇ ಎನ್ನುವುದರ ಬಗ್ಗೆಯೂ ಚರ್ಚೆ ಮಾಡೋಣ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ನೀವು ಯಾವುದೇ ವಿಷಯದ ಬಗ್ಗೆ ಮಾತನಾಡಿದರೂ ನಾವು ಮಾತನಾಡುವುದಕ್ಕೆ ತಯಾರಾಗಿದ್ದೇವೆ, ಪಲಾಯನ ಮಾಡುವುದಿಲ್ಲ. ಆದರೆ ಇವತ್ತೇನು ನಾನು ಮಾತನಾಡುತ್ತಿದ್ದೇನೆಯೋ ಅದು ನಮ್ಮ ನಿಮ್ಮ ರಾಜಕೀಯ ದ್ವೇಷದ ಮಾತುಗಳಲ್ಲ. ರಾಜ್ಯದಲ್ಲಿ ಜನ ಏನು ಸಾಯುತ್ತಿದ್ದಾರೋ ಅಂಥವರ ನೆರವಿಗೆ ಹೋಗುವಲ್ಲಿ ಸರ್ಕಾರ ಎಡವಿದೆಯೇನೋ ಎನ್ನುವ ಬಗ್ಗೆ ಗಮನ ಸೆಳೆಯುವುದಕ್ಕೆ ಮಾತನಾಡುತ್ತಿದ್ದೇನೆ. ನಾನು ಯಾವುದನ್ನೂ ಸಮರ್ಥನೆ ಮಾಡುತ್ತಿಲ್ಲ. ಸರ್ಕಾರ ವಿವಿಧ ಇಲಾಖೆಗಳ ಮೂಲಕ ಕೊರೋನಾ ತಡೆಯಲು ಏನು ರೂ. 4 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆಯೋ ಅದು ಸರಿಯಾದ ರೂಪದಲ್ಲಿ ಖರ್ಚು ಆಗಿದ್ದಿದ್ದರೆ ನಮ್ಮಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಈ ರೋಗ ಹರಡುತ್ತಿರಲಿಲ್ಲ. ಇಷ್ಟೊಂದು ಜನ ಸಾಯುತ್ತಿರಲಿಲ್ಲ. ಇಡೀ ಪ್ರಪಂಚದಲ್ಲಿ ನಮ್ಮ ದೇಶ 2ನೇ ಸ್ಥಾನಕ್ಕೆ ಬಂದು ನಿಂತಿದೆ. ದೇಶ ಮಟ್ಟದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಬಲಿಯಾಗಿರುವವರು ಮತ್ತು ಪಾಸಿಟಿವ್ ಬಂದಿರುವ ರಾಜ್ಯಗಳ ಪೈಕಿ ಕರ್ನಾಟಕ 4ನೇ ಸ್ಥಾನಕ್ಕೆ ಬಂದು ನಿಂತಿದೆ. ಇದು ನನ್ನ ಕಾಳಜಿಯಾಗಿದೆ.

**ಶ್ರೀ ಎನ್.ರವಿಕುಮಾರ್:-** ನಿಮ್ಮ ಪಕ್ಷ ಸಪೋರ್ಟ್ ಮಾಡಿರುವಂತಹ ಮಹಾರಾಷ್ಟ್ರ ರಾಜ್ಯ ದೇಶದಲ್ಲೇ ಮೊದಲನೆ ಸ್ಥಾನದಲ್ಲಿ ಇದೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಹೀಗೆ ಮಧ್ಯದಲ್ಲಿ ಎದ್ದು ನಿಂತು ಮಾತನಾಡಿದರೆ ಈ ವಿಚಾರವಾಗಿ ಅವರಿಗೆ ಎಷ್ಟರಮಟ್ಟಿಗೆ ಕಾಳಜಿ ಇದೆ ಎನ್ನುವುದು ಗೊತ್ತಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ.ಪ್ರಾಣೇಶ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕರ್ನಾಟಕ 4 ನೇ ಸ್ಥಾನದಲ್ಲಿದೆ ಎಂದು ಹೇಳಿದರು. ಆದರೆ ಮೊದಲನೆ ಸ್ಥಾನದಲ್ಲಿ ಯಾವ ರಾಜ್ಯ ಇದೆ ಎನ್ನುವುದು ನಮಗೆ ಗೊತ್ತಿಲ್ಲ, ಅದನ್ನು ಹೇಳಿದರೆ ತಿಳಿದುಕೊಳ್ಳುತ್ತೇವೆ. ಇದು ನಮ್ಮ ಉದ್ದೇಶವಾಗಿದೆ ಅಷ್ಟೆ.

(ಗೊಂದಲ)

**ಶ್ರೀ ಯು.ಬಿ.ವೆಂಕಟೇಶ್:-** ಈ ರೀತಿ ಎದ್ದು ನಿಂತು ಮಾತನಾಡಿದರೆ ನಾವೂ ಕೂಡ ಮಾತನಾಡಬೇಕಾಗುತ್ತದೆ.

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ಮಾನ್ಯ ಯಡಿಯೂರಪ್ಪನವರು ಪ್ಯಾಕೇಜ್ ಕೊಟ್ಟಿರುವುದರ ಬಗ್ಗೆ ಹೇಳಿ. ನಿಮ್ಮ ಪಕ್ಷದ ಆಡಳಿತ ಇರುವ ಯಾವ ರಾಜ್ಯಗಳಲ್ಲಿ ಪ್ಯಾಕೇಜ್ ಕೊಟ್ಟಿದ್ದಾರೆ ಎನ್ನುವುದನ್ನು ಹೇಳಿ.

(ಗೊಂದಲ)

**ಶ್ರೀ ಎಂ.ಕೆ. ಪ್ರಾಣೇಶ್**:- ಮಾನ್ಯ ಸಭಾಪತಿಯವರೇ, ನಾನು ಪಕ್ಷಾತೀತವಾಗಿ ಮಾತನಾಡುತ್ತೇನೆ. ಮಾನ್ಯ ಸದಸ್ಯರೂ ಕೂಡ ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ ಎಂದು ಹೇಳಿದಾಗ ಎಲ್ಲಾ ಅಂಶಗಳನ್ನು ಜೋಡಿಸಿಕೊಳ್ಳಬೇಕು ಅಲ್ಲವೇ? ಕರ್ನಾಟಕ 4ನೇ ಸ್ಥಾನದಲ್ಲಿದೆ ಎಂದು ಹೇಳಿದ ಮೇಲೆ ಮಹಾರಾಷ್ಟ್ರ 1ನೇ ಸ್ಥಾನದಲ್ಲಿದೆ ಎಂಬುದನ್ನೂ ಹೇಳಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇವರು ಹೇಳಿದ ಹಾಗೆ ಸದನದಲ್ಲಿ ಮಾತನಾಡುವುದಕ್ಕೆ ಆಗುತ್ತದೆಯೇ? ಮಾನ್ಯ ಸದಸ್ಯರಿಗೆ ಅವಕಾಶ ಸಿಕ್ಕಾಗ ಅವರೂ ಮಾತನಾಡಲಿ.

(ಗೊಂದಲ)

**ಶ್ರೀ ಎನ್.ರವಿಕುಮಾರ್:-** ನಾನು ದಾಖಲೆಗಳನ್ನಿಟ್ಟುಕೊಂಡು ಮಾತನಾಡುತ್ತಿದ್ದೇನೆ. ನಿಮ್ಮ ಸರ್ಕಾರ ಇರುವ ಕಡೆ ಯಾವುದಾದರೂ ಪ್ಯಾಕೇಜ್ ಕೊಟ್ಟಿದ್ದೀರಾ?

(ಗೊಂದಲ)

**ಶ್ರೀ ಎಂ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಗಂಭೀರವಾದಂತಹ ಪ್ರಶ್ನೆ ಎತ್ತಿ ಮಾತನಾಡುತ್ತಿದ್ದೇನೆ. ನಿನ್ನೆ ಉತ್ತರ ಕೊಡುವುದಕ್ಕಾಗಲಿಲ್ಲವೆಂದು ಈ ವಿಷಯವನ್ನು ಅರ್ಧಗಂಟೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಯಮದ ಅಡಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರಿ. ನಾನು ಮಾತನಾಡುವಾಗ ಈ ರೀತಿ ಪದೇ ಪದೇ ಮಧ್ಯದಲ್ಲಿ ಎದ್ದು ನಿಂತು ಮಾತನಾಡಿದರೆ ಹೇಗೇ? ಮಾನ್ಯ ಸಭಾಪತಿಯವರೇ, ಕೊರೋನಾದ ಪ್ರಾರಂಭದ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರ್ವಪಕ್ಷಗಳ ಸಭೆಯನ್ನು 3 ಬಾರಿ ಕರೆದರು. ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಮಾಡಿದ ಕೆಲಸಕ್ಕೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ಅವರು ಎಲ್ಲಾ ಪಕ್ಷದವರನ್ನು ಕರೆದು, ನಿಮ್ಮ ಸಲಹೆಗಳನ್ನು ಕೊಡಿ ಎಂದು ಹೇಳಿದರು. ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ಎಸ್.ಆರ್.ಪಾಟೀಲ್‌ರವರು, ನಮ್ಮ ಪಕ್ಷದ ಅಧ್ಯಕ್ಷರಾದ ಮಾನ್ಯ ಡಿ.ಕೆ.ಶಿವಕುಮಾರ್‌ರವರು, ನಾನು ಮತ್ತು ಇನ್ನೂ ಹಲವಾರು ಹಿರಿಯ ಮುಖಂಡರು ಆ ಸಭೆಗಳಲ್ಲಿ ಭಾಗವಹಿಸಿ ಹಲವಾರು ಸಲಹೆಗಳ ಕೊಟ್ಟೆವು. ಇಂತಹ ಒಂದು ಮಾರಕ ರೋಗ ಬರಬಾರದಿತ್ತು; ಆದರೆ ಬಂದಿದೆ. ನಾವು ರಾಜಕಾರಣ ಮಾಡುವುದಕ್ಕೆ ಬೇರೆ ಸಮಯ ಇದೆ. ಆದರೆ, ಸರ್ಕಾರ ಏನು ತೀರ್ಮಾನ ಕೈಗೊಳ್ಳುತ್ತದೆಯೋ ಅದಕ್ಕೆ ನಮ್ಮ ಸಂಪೂರ್ಣವಾದ ಬೆಂಬಲ ಇದೆ ಎಂದು ಹಲವಾರು ಸಲಹೆಗಳನ್ನು ಕೊಟ್ಟರೂ ಅದರಲ್ಲಿ ಯಾವ ಸಲಹೆಯನ್ನು ಅಳವಡಿಸಿಕೊಳ್ಳಲಿಲ್ಲ. ಅವರದೇ ಆದ ರೀತಿಯಲ್ಲಿ ಹೊರಟರು. ಸರ್ಕಾರ ತೆಗೆದುಕೊಂಡ ತೀರ್ಮಾನದಿಂದ ಈ ರೋಗ ಕಡಿಮೆಯಾಗಿದ್ದರೆ ನಾವೆಲ್ಲ ಶಹಬಾಷ್ ಎಂದು ಹೇಳುತ್ತಿದ್ದೆವು. ನಾವು, ಎಲ್ಲಾ ಆಸ್ಪತ್ರೆಗಳಿಗೆ ಸರ್ಕಾರ ನೋಟಿಸ್ ಕೊಟ್ಟು ತಮ್ಮ ವ್ಯಾಪ್ತಿಗೆ ತೆಗೆದುಕೊಳ್ಳಬೇಕು, ಆ ಆಸ್ಪತ್ರೆಗಳಲ್ಲಿರಬಹುದಾದ ಬೆಡ್‌ಗಳ ಪೈಕಿ ಶೇಕಡ 50 ರಷ್ಟು ಬೆಡ್‌ಗಳನ್ನು ಕೊರೋನಾ ರೋಗಿಗಳ ಟ್ರೀಟ್‌ಮೆಂಟ್‌ಗೆ ಮತ್ತು ಮಿಕ್ಕ ಬೆಡ್‌ಗಳನ್ನು ನಾನ್‌ಕೊರೋನಾ ರೋಗಿಗಳಿಗೋಸ್ಕರ ಇಟ್ಟುಕೊಳ್ಳುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಿದೆವು. ಅದನ್ನೂ ಕೂಡ ಕೇಳಲಿಲ್ಲ. ಮಾನ್ಯ ಸಭಾಪತಿಯವರೇ, ನಮ್ಮ ಮೆಡಿಕಲ್ ಕಾಲೇಜುಗಳಲ್ಲಿ 1200 ಬೆಡ್‌ಗಳಿವೆ. ಈ ಪೈಕಿ 600 ಬೆಡ್‌ಗಳ ಸಂಬಂಧ ವೈದ್ಯರುಗಳಿಲ್ಲ, ನರ್ಸ್‌ಗಳಿಲ್ಲ. ಹಾಗಾಗಿ, ಇರುವಂತಹ 600 ಬೆಡ್‌ಗಳಲ್ಲಿ 300 ಬೆಡ್‌ಗಳನ್ನು ಕೊಡಬೇಕೆಂದು ಕೇಳಿದ್ದೇವೆ ಎನ್ನುವ ಮಾತನ್ನು ಬಿ.ಬಿ.ಎಂ.ಪಿ ಕಮಿಷನರ್‌ರವರು ಹೇಳಿದರು. (ಮುಂದು . . .)

(768)22-9-2020 3.50 ಡಿಎಸ್-ಆರ್‌ಎನ್

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು):-**

ನಾವು ಅವರಿಗೆ ಹೇಳಿದೆವು, ನೀವು ಅದನ್ನು ತೆಗೆದುಕೊಳ್ಳಿ. ಆ ಆಸ್ಪತ್ರೆಯನ್ನು ಸರ್ಕಾರದ ಅಧೀನಕ್ಕೆ ತೆಗೆದುಕೊಳ್ಳಿ, 1200 ಬೆಡ್‌ಗಳಲ್ಲಿ 600 ಬೆಡ್‌ಗಳನ್ನು ಕೊಡುತ್ತಾರೆಂದು ಇಟ್ಟುಕೊಳ್ಳಿ, ಸರ್ಕಾರದಲ್ಲಿ ವೈದ್ಯರುಗಳು ಎಲ್ಲಿದ್ದಾರೆ, ನರ್ಸ್‌ಗಳು ಎಲ್ಲಿದ್ದಾರೆ, ಅಷ್ಟು ರೋಗಿಗಳನ್ನು ಕರೆದುಕೊಂಡು ಹೋಗಿ 600 ಬೆಡ್‌ಗಳಿಗೆ ಹಾಕಿದರೆ ಅವರಿಗೆ ಚಿಕಿತ್ಸೆ ಕೊಡುವವರು ಯಾರು? ಒಬ್ಬ ವೈದ್ಯರು ನನಗೂ ಕೂಡ ಪ್ರಾಣದ ಭಯ ಇದೆ. ನಾನು ಕೊರೋನಾ ರೋಗಿಗೆ ಚಿಕಿತ್ಸೆ ಕೊಡುವುದಕ್ಕಾಗುವುದಿಲ್ಲ, ನರ್ಸ್‌ಗಳು ನಮ್ಮ ಕೈಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುವುದಿಲ್ಲ ಎಂದು ಹೇಳಿದರು? ಏಕೆ ಅವರು ಈ ಮಾತನ್ನು ಹೇಳಿದ್ದಾರೆಂದರೆ, ಅವರಿಗೆ ಕೊಟ್ಟಂಥ ಪಿಪಿಇ ಕಿಟ್‌ನಿಂದ ಹಿಡಿದು ಗ್ಲೌಸ್, ಸ್ಯಾನಿಟೈಸರ್ ಪ್ರತಿಯೊಂದು ಕಳಪೆ ಮಟ್ಟದು ಎಂದು ವೈದ್ಯರುಗಳು ಎತ್ತಿ ಬೀದಿಗೆ ಬಿಸಾಕಿದ್ದು ಸುಳ್ಳಾ? 5 ಲಕ್ಷ ಪಿಪಿಇ ಕಿಟ್‌ಗಳನ್ನು ಚೀನಾದಿಂದ ತರಿಸಿಕೊಂಡಿದ್ದಾರೆ, ಮೂರೂವರೆ ಲಕ್ಷ ಕಿಟ್‌ಗಳನ್ನು ಈಗಾಗಲೇ ಹಂಚಿಕೆಯನ್ನು ಮಾಡಿದ್ದರು. ವೈದ್ಯರುಗಳು, ನರ್ಸ್‌ಗಳು, ಇದು ಕಳಪೆ ಎಂದು ಎತ್ತಿ ಬಿಸಾಕಿದರು. ಸರ್ಕಾರ ಎಚ್ಚೆತ್ತುಕೊಂಡು ಹೌದು, ಇದು ಕಳಪೆಯಾಗಿದೆ ಎಂದು ಒಪ್ಪಿಕೊಂಡು ಇನ್ನು ಒಂದೂವರೆ ಲಕ್ಷ ಹಂಚಿಕೆಯನ್ನು ಮಾಡಬೇಕಾಗಿತ್ತು ಅದನ್ನು ಮಾಡಲಿಲ್ಲ. ಇದು ವಾಸ್ತವಾಂಶ. ಆದರೆ ಪಿಪಿಇ ಕಿಟ್‌ಗಳು ಮಾರ್ಕೆಟ್‌ನಲ್ಲಿ 330 ರೂಪಾಯಿಗೆ ಸಿಗುತ್ತಿದೆ. ಅವರು 700 ರೂಪಾಯಿಗಳಿಂದ 2117 ರೂಪಾಯಿಯವರೆಗೆ ಕೊಟ್ಟು ಒಂದು ಪಿಪಿಇ ಕಿಟ್‌ನ್ನು ಖರೀದಿ ಮಾಡಿದ್ದಾರೆ. ಮಾಸ್ಕ್‌ಗಳಿಗೆ ಮಾರ್ಕೆಟ್‌ನಲ್ಲಿ 8 ರೂಪಾಯಿಯಿಂದ 10 ರೂಪಾಯಿಯವರೆಗೆ ಸಿಗುತ್ತದೆ. ಅದು ಯೂಸ್ ಅಂಡ್ ಥ್ರೋ. ಕೊರೋನಾ ವೈರಸ್‌ಗೆ ಎಲ್ಲಾ ಪೊಲೀಸ್ ಇಲಾಖೆಗೆ ಕೊಟ್ಟಿರುವಂಥದ್ದು ಬ್ಲೂ-ಕಲರ್ ಮಾಸ್ಕ್ ಯೂಸ್ ಅಂಡ್ ಥ್ರೋ. ಒಂದು ಮಾಸ್ಕ್‌ಗೆ 120 ರೂಪಾಯಿಯಿಂದ 150 ರೂಪಾಯಿ ಚಾರ್ಜ್ ಮಾಡಿದ್ದಾರೆ. ವೆಂಟಿಲೇಟರ್‌ಗಳ ಬಗ್ಗೆ ಹೇಳುವುದಾದರೆ, ನಮ್ಮ ಪ್ರಧಾನ ಮಂತ್ರಿಗಳು ಇಂತಹ ಒಂದು ಸಂದರ್ಭದಲ್ಲಿ ನಾನು ಕೈಜೋಡಿಸಬೇಕೆಂದು 50,000 ವೆಂಟಿಲೇಟರ್‌ಗಳನ್ನು ಇಡೀ ದೇಶಕ್ಕೆ ಸರಬರಾಜು ಮಾಡುವುದಕ್ಕೆ ಒಂದು ವೆಂಟಿಲೇಟರ್‌ಗೆ 4 ಲಕ್ಷ ರೂಪಾಯಿಗಳಂತೆ ಖರೀದಿ ಮಾಡಿ ಕರ್ನಾಟಕ ರಾಜ್ಯಕ್ಕೆ 1618 ವೆಂಟಿಲೇಟರ್‌ಗಳನ್ನು ಕಳುಹಿಸಿ ಕೊಡುತ್ತಾರೆ. ಇದುವರೆವಿಗೂ ಬಂದಿರುವಂಥದ್ದು 800-900 ಅಷ್ಟೆ. ಒಂದು ವೆಂಟಿಲೇಟರ್‌ಗೆ 4 ಲಕ್ಷ ರೂಪಾಯಿಗಳು. ನಮ್ಮ ಪಕ್ಕದ ತಮಿಳುನಾಡಿನಲ್ಲಿ ಅದೇ ದಿವಸ ನಮ್ಮ ಕರ್ನಾಟಕದವರು ಏನು ಆರ್ಡರ್ ಪ್ಲೇಸ್ ಮಾಡುತ್ತಾರೋ ಅವತ್ತೇ ತಮಿಳುನಾಡಿನವರು ಒಂದು ವೆಂಟಿಲೇಟರ್‌ಗೆ 4,78,000 ರೂಪಾಯಿಯಂತೆ 100 ವೆಂಟಿಲೇಟರ್‌ಗಳನ್ನು ಖರೀದಿ ಮಾಡುತ್ತಾರೆ. ಆದರೆ, ಕರ್ನಾಟಕ ಸರ್ಕಾರ ಒಂದು ವೆಂಟಿಲೇಟರ್‌ಗೆ, ಮೊದಲ ಬಾರಿಗೆ ಟೆಂಡರ್ ಕರೆದು ವರ್ಕ್ ಆರ್ಡರ್ ಅನ್ನು ಕೊಟ್ಟಾಗ 5,60,000 ರೂಪಾಯಿ. ಒಂದು ವಾರ ಬಿಟ್ಟು ಮತ್ತೆ ವರ್ಕ್ ಆರ್ಡರ್ 11,92,000 ರೂಪಾಯಿಗಳಿಗೆ ಕೊಡುತ್ತಾರೆ. ಅದಾದ ಮೇಲೆ ಮತ್ತೆ 15 ದಿವಸಕ್ಕೆ ಕೊಡುತ್ತಾರೆ, 12,32,000 ರೂಪಾಯಿಗಳಿಗೆ ವರ್ಕ್ ಆರ್ಡರ್ ಕೊಟ್ಟಿರುತ್ತಾರೆ. ಕೊನೆಗೆ 18,20,000 ರೂಪಾಯಿಗೆ ಒಂದು ವೆಂಟಿಲೇಟರ್‌ನ್ನು ತೆಗೆದುಕೊಳ್ಳುವಂಥದ್ದಾಗಿದೆ. ಇದನ್ನು ಒಪ್ಪಿಕೊಳ್ಳಬೇಕಲ್ಲವೇ? ಸರ್ಕಾರಕ್ಕೆ ಏನಾಗಿದೆ? ಕೊರೋನಾ ಎನ್ನುವಂತಹ ಮಾರಕ ರೋಗ ಬಂದಿರುವಂತಹ ಸಂದರ್ಭದಲ್ಲಿ ಜನರ ಬಳಿಗೆ ಹೋಗಬೇಕೇ, ಜನರ ಕಷ್ಟಗಳಿಗೆ ನಾವು ಭಾಗಿಗಳಾಗಬೇಕೇ ಅಥವಾ ಖರೀದಿಯಲ್ಲಿ ಲೂಟಿ ಮಾಡುವುದಕ್ಕೆ ಇಳಿಯಬೇಕೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರು ಇದರಲ್ಲಿ ಭಾಗಿಗಳಾಗಿದ್ದಾರೆಯೋ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಲ್ಲವೇ? ಒಂದು ವೇಳೆ ಅಧಿಕಾರಿಗಳಿರಬಹುದು ಅಥವಾ ಮಂತ್ರಿಗಳಿರಬಹುದು ಅಥವಾ ಸರಬರಾಜು ಮಾಡುವವರಿರಬಹುದು, ಏಕೆ ಇದುವರೆವಿಗೂ ಒಬ್ಬರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ? ಸನ್ಮಾನ್ಯ ವಿರೋಧ ಪಕ್ಷದ ನಾಯಕರಾಗಿರುವಂತಹ ಶ್ರೀ ಎಸ್.ಆರ್.ಪಾಟೀಲ್‌ರವರು, ಸನ್ಮಾನ್ಯ ಸಿದ್ದರಾಮಯ್ಯರವರು, ಮುಖ್ಯ ಸಚೇತರಾಗಿ ನಾನು ಕೂಡ ಸರ್ಕಾರಕ್ಕೆ ಮೂರು ಪತ್ರಗಳನ್ನು ಬರೆದಿದ್ದೇನೆ. ಇದುವರೆವಿಗೂ ಯಾವ್ಯಾವ ಕಂಪನಿಗಳಿಂದ ಏನೇನು ಖರೀದಿ ಮಾಡಿದ್ದಾರೆ, ಎಷ್ಟೆಷ್ಟು ಹಣಕ್ಕೆ ಖರೀದಿ ಮಾಡಿದ್ದಾರೆ, ಎಷ್ಟು quantity ಮಾಡಿದ್ದಾರೆಂದು ನಾವು ಪತ್ರವನ್ನು ಬರೆಯುತ್ತೇವೆ. ಆರು ತಿಂಗಳಾಯಿತು, ಇದುವರೆವಿಗೂ ಉತ್ತರ ಬಂದಿಲ್ಲ. ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ಡಿ.ಕೆ.ಶಿವಕುಮಾರ್‌ರವರು ಪತ್ರಿಕಾಗೋಷ್ಠಿಯನ್ನು ಮಾಡಿ 4,000 ಕೋಟಿ ರೂಪಾಯಿಗಳು ಖರ್ಚಾಗಿದೆ. ಅದರಲ್ಲಿ ಸುಮಾರು 2,000 ಕೋಟಿ ರೂಪಾಯಿ ಭ್ರಷ್ಟಾಚಾರವಾಗಿದೆ. ನಮಗೆ ಸರ್ಕಾರದವರು ಅಧಿಕೃತ ಮಾಹಿತಿಯನ್ನು ಕೊಡದಿದ್ದರೂ ಕೂಡ ನಮಗೂ ಗೊತ್ತಿರುವಂತಹ ಅಧಿಕಾರಿಗಳು ಈ ಸರ್ಕಾರದಲ್ಲಿದ್ದಾರೆ. ಅವರು ಕೊಟ್ಟಿರುವಂತಹ ಅಧಿಕೃತ ದಾಖಲೆಗಳ ಪ್ರಕಾರವಾಗಿ ನಾವು ಈ ರೀತಿ 2000 ಕೋಟಿ ರೂಪಾಯಿ ಭ್ರಷ್ಟಚಾರವಾಗಿದೆ ಎಂದು ಅಂಕಿಅಂಶಗಳನ್ನು ಬಿಡುಗಡೆ ಮಾಡುತ್ತೇವೆ. ಪತ್ರಿಕಾ ಗೋಷ್ಠಿ ಮುಗಿದ ಕೂಡಲೇ ಒಂದು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ಪತ್ರಿಕಾ ಗೋಷ್ಠಿಯನ್ನು ಕರೆಯುತ್ತಾರೆ. ಇನ್ನೇನು ಪತ್ರಿಕಾ ಗೋಷ್ಠಿ ಕರೆದು ಪತ್ರಿಕಾ ಗೋಷ್ಠಿ ಪ್ರಾರಂಭವಾಗಬೇಕು, ಅಷ್ಟರಲ್ಲಿ ಮುಖ್ಯಮಂತ್ರಿಗಳು ಪತ್ರಿಕಾ ಗೋಷ್ಠಿಯನ್ನು ರದ್ದು ಮಾಡಿಬಿಡುತ್ತಾರೆ. ಐದು ಜನ ಮಂತ್ರಿಗಳನ್ನು ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿ ಎಂದು ಕಳುಹಿಸುತ್ತಾರೆ. ಅವರು ಬಂದಾಗ ಲೆಕ್ಕ ಕೊಡಿ ಎಂದು ನಮ್ಮ ನಾಯಕರು ಕೇಳಿದರು. ಅದು ಸುಳ್ಳು ಎಂದು ಯಾರು ಕೂಡ ಅಲ್ಲಗೆಳೆಯಲಿಲ್ಲ. ಲೆಕ್ಕ ಕೊಡಿ, ಭ್ರಷ್ಟಾಚಾರ ಮಾಡಿದ್ದಾರೆಂದು ನಾವು ಹೇಳಿದ್ದೆವು, ಆದರೆ, ಅವರು ಅದರ ಬಗ್ಗೆ ಅಲ್ಲಗೆಳೆಯಲಿಲ್ಲ. ಇಲ್ಲ, ಕಾಂಗ್ರೆಸ್‌ನವರು ಸುಮ್ಮನೆ ರಾಜಕೀಯ ಮಾಡುತ್ತಿದ್ದಾರೆಂದು ಇದರ ಬಗ್ಗೆಯೇ ಮಾತನಾಡಿದರು. ಒಂದು ಮಾತನ್ನು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಕಾಂಗ್ರೆಸ್‌ನವರು ಸುಳ್ಳು ಹೇಳುತ್ತಿದ್ದೇವೆ, ಬಿಜೆಪಿ ಯವರು ಸತ್ಯಹರಿಶ್ಚಂದ್ರರಲ್ಲವೆ? ನಾವು ಮಾಡಿರುವ ತಪ್ಪನ್ನು ಹೇಳಿ, ಹೌದು, ಒಂದು ಸಿಲಿಂಡರ್‌ಗೆ ಇಷ್ಟು ತೆಗೆದುಕೊಂಡಿರುವುದು ತಪ್ಪು, ನಾವು 4 ಲಕ್ಷ ರೂಪಾಯಿಗೆ ತೆಗೆದುಕೊಂಡಿದ್ದೇವೆಂದು ಹೇಳಿ. ಇದುವರೆವಿಗೂ ಅವರ ಕೈಯಲ್ಲಿ ಹೇಳುವುದಕ್ಕಾಗಲಿಲ್ಲ. ನಾವು ಹೇಳಿದರೆ ವಿರೋಧ ಪಕ್ಷದವರು ವಿರೋಧ ಮಾಡುತ್ತಿದ್ದಾರೆಂದು ಹೇಳುತ್ತಾರೆ. ನಾವು ವಿರೋಧ ಮಾಡುತ್ತಿಲ್ಲ. ಇಂತಹ ಒಂದು ರೋಗವನ್ನು ತಡೆಯುವುದಕ್ಕೆ ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಿ ಎಡವಿದೆ ಎಂದು ಅವರಿಗೆ ಎಚ್ಚರಿಕೆ ಕೊಡುವುದಕ್ಕೆ ನಾವು ಮಾತನಾಡುತ್ತಿರುವಂಥದ್ದು. ಅದನ್ನು ಕೂಡ ಅವರು ಸ್ವೀಕಾರ ಮಾಡಲಿಲ್ಲ.

ಮಾನ್ಯ ಸಭಾಪತಿಯವರೇ, ಆಸ್ಪತ್ರೆಗಳಿಗೆ ರೋಗಿಗಳು ಫೋನ್ ಮಾಡಿ ಆಂಬ್ಯುಲೆನ್ಸ್ ಕಳುಹಿಸಿ ಕೊಡಿ ಎಂದರೆ, ಈ ಬೆಂಗಳೂರು ಮಹಾನಗರದಲ್ಲಿ ಒಂದು ಆಂಬ್ಯುಲೆನ್ಸ್ ಬರುವುದಕ್ಕೆ 4 ಗಂಟೆ, 5 ಗಂಟೆ ತೆಗೆದುಕೊಳ್ಳುತ್ತಾರೆ. ಪಾಸಿಟಿವ್ ಬಂದಿರುವಂತಹ ರೋಗಿ ಯಾವುದೇ ಆಸ್ಪತ್ರೆಗೆ ಫೋನ್ ಮಾಡಿದರೆ ಬೆಡ್ ಇಲ್ಲ, ಬೆಡ್ ಇಲ್ಲ ಎಂದು ಹೇಳುತ್ತಾರೆ. ರಸ್ತೆಯಲ್ಲಿ ಫುಟ್‌ಪಾತ್‌ನಲ್ಲಿ ಬಿದ್ದು ಬಹಳಷ್ಟು ರೋಗಿಗಳು ಪ್ರಾಣವನ್ನು ಕಳೆದುಕೊಂಡಿದ್ದಾರೆ. ಇದಕ್ಕೆ ಯಾರು ಹೊಣೆ? ನಾವೇನೇ ಮಾಡಿದರೂ ಕೂಡ ಸತ್ತಿರುವಂಥವರ ಪ್ರಾಣ ಮತ್ತೆ ಪಡೆಯುವುದಕ್ಕಾಗುತ್ತದೆಯೇ? ಆಸ್ಪತ್ರೆಯಲ್ಲಿ ಬೆಡ್ ಖಾಲಿ ಇದ್ದರೆ ಅವನು ಟೆಸ್ಟ್ ಮಾಡಿಸಿಕೊಂಡರೆ ಪಾಸಿಟಿವ್, ಆಸ್ಪತ್ರೆಯಲ್ಲಿ ಬೆಡ್ ಖಾಲಿ ಇಲ್ಲದಿದ್ದರೆ ಪಾಸಿಟಿವ್ ಆಗಿದ್ದರೂ ಕೂಡ ನೆಗಟಿವ್ ಎಂದು ಸರ್ಟಿಫಿಕೇಟ್ ಕೊಡುತ್ತಾರೆ. ಈ ರೀತಿ ಆಸ್ಪತ್ರೆಗಳಲ್ಲಿ ಹಗಲು ದರೋಡೆಯನ್ನು ಮಾಡಿದರು. ಆಸ್ಪತ್ರೆಗಳಿಗೆ ಯಾರು ಕೂಡ ಕಡಿವಾಣ ಹಾಕುವುದಕ್ಕೆ ಆಗಲಿಲ್ಲ. 200 ಆಂಬ್ಯುಲೆನ್ಸ್ ತೆಗೆದುಕೊಂಡಿದ್ದೇವೆಂದು ಹೇಳಿದರು. ಪಕ್ಕದ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎಲ್ಲವನ್ನು ಬದಿಗೊತ್ತಿ 202 ಕೋಟಿ ರೂಪಾಯಿಗಳಿಗೆ 1200 ಆಂಬ್ಯುಲೆನ್ಸ್‌ಗಳನ್ನು ಮೆರವಣಿಗೆ ಮುಖಾಂತರವಾಗಿ ಆಂಧ್ರ ಪ್ರದೇಶಕ್ಕೆ ತೆಗೆದುಕೊಂಡು ಹೋಗುತ್ತಾರೆ. ನಮ್ಮ ಸರ್ಕಾರಕ್ಕೆ ಏನಾಯಿತು? ಇದಕ್ಕಿಂತ ಮುಖ್ಯವಾದದ್ದು ಬೇರೆ ಏನಿತ್ತು? ಆಂಬ್ಯುಲೆನ್ಸ್‌ನ್ನು ಖರೀದಿ ಮಾಡುವುದಕ್ಕೆ ಆಗದಿದ್ದ ಮೇಲೆ ಸರ್ಕಾರ ಏಕಿರಬೇಕು? ಜನ ಹಾದಿಬೀದಿಯಲ್ಲಿ ಕೇಳುತ್ತಿದ್ದಾರೆ, ನಿಮ್ಮ ಯೋಗ್ಯತೆಗೆ ಒಬ್ಬ ರೋಗಿಯನ್ನು ಕರೆದುಕೊಂಡು ಹೋಗಿ ಆಸ್ಪತ್ರೆಗೆ ಅಡ್ಮಿಟ್ ಮಾಡುವುದಕ್ಕೆ ಆಗದಿದ್ದ ಮೇಲೆ ಇನ್ನು ಯಾವ ಪುರುಷಾರ್ಥಕ್ಕಾಗಿ ಸರ್ಕಾರವನ್ನು ನಡೆಸುತ್ತಿದ್ದೀರಾ? ನೀವು ಏಕೆ ಶಾಸಕರಾಗಿದ್ದೀರಾ ಎಂದು ನಮ್ಮನ್ನು ಕೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ನಾರಾಯಣಸ್ವಾಮಿಯವರ ಮಾತುಗಳನ್ನು ನಾವು ಗೌರವಿಸುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಜನ ಇವತ್ತು ಏನು ಮಾತನಾಡುತ್ತಿದ್ದಾರೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕೊರೋನಾ ಬಗ್ಗೆ ನಿನ್ನೆ ನಿಲುವಳಿ ಸೂಚನೆಯನ್ನು ಮಂಡಿಸುತ್ತೇವೆಂದು ಹೇಳಿದ್ದರು. ಆದರೆ, ನಾವು ಅರ್ಧಗಂಟೆ ಕಾಲಾವಧಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡಿ ಎಂದು ನಾವು ಹೇಳಿದೆವು. ಇವತ್ತು ಅವರು ವಿಷಯವನ್ನು ಪ್ರಸ್ತಾಪ ಮಾಡಿ ಟೀಕೆ ಮಾಡಿರುವಂಥದ್ದನ್ನು ನಾವು ಗೌರವಿಸುತ್ತೇವೆ. ಆದರೆ, ಅವರು ಚೌಕಟ್ಟು ಮೀರಿ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ,......

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಪ್ರಾಣೇಶ್‌ರವರೇ, ಅವರೇನು ಅಸಂಸದೀಯ ಶಬ್ಧ ಮಾತನಾಡಿದ್ದಾರೆ? ಈಗ ಅವರು ಮಾತನಾಡುವಂಥದ್ದನ್ನು ಕೇಳಿ. ನಂತರ ನೀವು ಉತ್ತರವನ್ನು ಹೇಳಿ. ನೀವು ಉತ್ತರ ಹೇಳುವ ಸ್ಥಾನದಲ್ಲಿದ್ದೀರಿ. ಅಸಂಸದೀಯ ಪದ ಉಪಯೋಗಿಸಿ ಮಾತನಾಡಿದರೆ ಮಾನ್ಯ ಸಭಾಪತಿಯವರು ಕಡತದಿಂದ ತೆಗೆದು ಹಾಕುತ್ತಾರೆ. ಮಾತನಾಡುವುದಕ್ಕೆ ನಿಮಗೆ ಹೇಗೆ ಹಕ್ಕು ಇದೆಯೋ ಅವರಿಗೂ ಮಾತನಾಡುವ ಹಕ್ಕು ಇದೆ. ಅವರು ತಪ್ಪೇನು ಮಾತನಾಡಿದ್ದಾರೆ?

**ಶ್ರೀ ಎಂ.ಪ್ರಾಣೇಶ್:-** ಅವರು ಹೇಳುತ್ತಿರುವುದು ಶುದ್ಧ ಸುಳ್ಳು. ಸುಳ್ಳನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತಿದ್ದೀರಾ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಪ್ರಾಣೇಶ್‌ರವರೇ, ಮಾನ್ಯ ನಾರಾಯಣಸ್ವಾಮಿಯವರು ಚೆನ್ನಾಗಿ ಮಾತನಾಡುತ್ತಿದ್ದಾರೆ, ತಾವು ಏಕೆ ಮಧ್ಯ ಪ್ರವೇಶ ಮಾಡುತ್ತಿದ್ದೀರಿ?

**(ಗೊಂದಲ)**

**ಶ್ರೀ ಎಂ.ಪ್ರಾಣೇಶ್:-** ಅವರು ರಾಜಕೀಯ ಮಾತುಗಳನ್ನು ಆಡುತ್ತಿದ್ದಾರೆ.

(ಮುಂದು)

**(769) 04.00 22.09.2020 ಎಸ್‌ವಿ-ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಭಾರತಿ ಶೆಟ್ಟಿಯವರೇ, ನಿಮಗೆ ಮಾತನಾಡಲು ಸಂಪೂರ್ಣವಾದಂತಹ ಅಧಿಕಾರವಿದೆ. ಚರ್ಚೆಯಲ್ಲಿ ತಮಗೆ ತಪ್ಪು ಎನ್ನಿಸಿದ್ದನ್ನು ಬರೆದಿಟ್ಟುಕೊಳ್ಳಿ. ತಪ್ಪು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದನ್ನು ನಂತರ ಹೇಳಿ. ರಾತ್ರಿ 10 ಗಂಟೆಯವರೆವಿಗೂ ಕುಳಿತು ಚರ್ಚಿಸೋಣ. ಇದು ಬಹಳ ಮಹತ್ವವಾದ ವಿಷಯ. ಚರ್ಚೆ ಮಾಡೋಣ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, provoke ಮಾಡುವಂತಹ ಕೆಲಸವನ್ನು ಅವರು ಮಾಡುತ್ತಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಪ್ರಾಣೇಶ್ ಅವರೇ, ನೀವು ಏಕೆ provoke ಆಗುತ್ತೀರಿ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಪ್ರಾಣೇಶ್ ಅವರೇ, ನಾನು ಯಾರನ್ನೂ provoke ಮಾಡುತ್ತಿಲ್ಲ. ಜನ ಏನು ಮಾತನಾಡಿಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುತ್ತಿದ್ದಾರೆ. ಮಾತನಾಡಲಿ. ಟೀಕೆ ಮಾಡುವುದಕ್ಕೂ ಅವಕಾಶವಿದೆ. ಅದರಲ್ಲಿ ಪ್ರಶ್ನೆಯೇ ಇಲ್ಲ. ಈ ಕೊರೋನಾ ವೈರಾಣುವಿನ ಪರಿಣಾಮ ಕೇವಲ ನಮ್ಮ ರಾಜ್ಯ ಅಥವಾ ನಮ್ಮ ದೇಶಕ್ಕಷ್ಟೇ ಅಲ್ಲ ಇಡೀ ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ suffer ಆಗುತ್ತಿದೆ. ಇದರಲ್ಲಿ ಯಾರಿಗೂ ವ್ಯತ್ಯಾಸವಿಲ್ಲ. ಬಡ, ಮಧ್ಯಮ ವರ್ಗದವರಿಂದ ಶ್ರೀಮಂತನವರೆವಿಗೂ, ಯಾವುದೇ ಜಾತಿ ಧರ್ಮದವರಿದ್ದರೂ ಯಾರನ್ನೂ ಇದು ಬಿಟ್ಟಿರುವುದಿಲ್ಲ. ಸರ್ಕಾರದ ಅಸಮರ್ಥತೆಯಿಂದ ಈ ವೈರಾಣು ಉದ್ಭವವಾಗಿರುವುದಲ್ಲ. ಮಾತನಾಡಲಿಕ್ಕೆ ಎಲ್ಲರಿಗೂ ಹಕ್ಕಿದೆ. ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಲಿ. ಸರ್ಕಾರ ಏನಾದರೂ ತಪ್ಪು ಮಾಡಿದ್ದರೆ ಅದನ್ನು ತೋರಿಸಲಿ. ಆದರೆ ಸರ್ಕಾರ ಮಾಡಿರುವ ಒಳ್ಳೆಯ ಕೆಲಸವನ್ನೂ ಸಹ ಹೇಳಬೇಕಾಗುತ್ತದೆ. ಕೇವಲ ಟೀಕೆ ಮಾಡುವುದಷ್ಟೇ ಅಲ್ಲ.

ಮಾನ್ಯ ಹೊರಟ್ಟಿಯವರೇ, ನೀವು ಹುಬ್ಬಳ್ಳಿಯಲ್ಲಿರುತ್ತೀರಿ. ಮೊದಲು ಕಿಮ್ಸ್ ಆಸ್ಪತ್ರೆಗೆ ಯಾವ ರೀತಿಯ ನೆಗೆಟಿವ್ ಭಾವನೆಯಿತ್ತು? ಕಿಮ್ಸ್ ಆಸ್ಪತ್ರೆಗೆ ಹೋಗುವವರೆಲ್ಲಾ ಸಾಯುತ್ತಾರೆ ಎನ್ನುವ ವಾತಾವರಣವಿತ್ತು. ಆದರೆ ಈ ಕೋವಿಡ್ ಸಂದರ್ಭದಲ್ಲಿ ಆ ಆಸ್ಪತ್ರೆಯಲ್ಲಿ ಯಾರ್ಯಾರು ದಾಖಲಾಗಿದ್ದಾರೆಯೋ ಅವರು ಚಿಕಿತ್ಸೆಯನ್ನು ಪಡೆದುಕೊಂಡು ಗುಣಮುಖರಾಗಿ ಹೊರಬಂದಂತಹ ವಾತಾವರಣ ನಿರ್ಮಾಣವಾಗಿದೆ. ಅಲ್ಲಿನ ನಿರ್ದೇಶಕರು, ವೈದ್ಯರು ಹಾಗೂ ಸಿಬ್ಬಂದಿಯ ವ್ಯವಸ್ಥೆ ಆ ರೀತಿಯಿದೆ. ನನಗೆ ಸ್ವತಃ 20-30 ಜನ ದೂರವಾಣಿ ಮಾಡಿ "ಸರ್, ನೀವು ಬಹಳ ಚೆನ್ನಾಗಿ administration ಮಾಡಿದ್ದೀರಿ. ಇಂದು ನಾನು ಕಿಮ್ಸ್‌ಗೆ ಹೋಗಿದ್ದರಿಂದ ಬದುಕಿ ಬಂದಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದಾದರೂ ಖಾಸಗಿ ಆಸ್ಪತ್ರೆಗೆ ಹೋಗಿದ್ದರೆ ನನಗೇನೋ ಸಮಸ್ಯೆಯಾಗುತ್ತಿತ್ತು. ಇಲ್ಲಿಗೆ ಬಂದಿದ್ದರಿಂದ ಗುಣಮುಖನಾಗಿದ್ದೇನೆ." ಎಂದು ಹೇಳಿದ್ದಾರೆ. ಸರ್ಕಾರದ ವ್ಯವಸ್ಥೆ ಹೀಗಿದೆ.

ಸರ್ಕಾರ ಇಂದು ಯಾವ ರೀತಿಯಾಗಿ ಕಾರ್ಯ ನಿರ್ವಹಣೆ ಮಾಡಬೇಕು, ಏನು ಮಾಡಬೇಕು ಎಲ್ಲವನ್ನೂ ಮಾಡಿದೆ. ಅದರಲ್ಲಿ ಎಲ್ಲಾದರೂ ಲೋಪದೋಷಗಳಾಗಿದ್ದಲ್ಲಿ ಸರಿ ಮಾಡೋಣ. ಅದು ಬಿಟ್ಟು ಬೆಳಿಗ್ಗೆಯಿಂದ ಸಾಯಂಕಾಲದವರೆವಿಗೂ ಅದನ್ನೇ ಹೇಳುವಂಥದ್ದಲ್ಲ. ಇದರಲ್ಲಿ ರಾಜಕಾರಣ ಮಾಡುವುದು ಬೇಕಾಗಿಲ್ಲ. ರಾಜಕೀಯವಾಗಿ ಇದನ್ನು ನೋಡುವುದಕ್ಕೆ ಹೋಗಬೇಡಿ. ಎಲ್ಲಿ ಸರಿ, ಎಲ್ಲಿ ತಪ್ಪು ಎಂಬುದನ್ನು ಹೇಳಿ. ಅದನ್ನು ಹೇಳುವ ಹಕ್ಕು ನಿಮಗಿದೆ. ಸರ್ಕಾರ ಏನೂ ಮಾಡಿಲ್ಲ ಎಂದು ರಾಜಕೀಯವಾಗಿಯೇ ಮಾತನಾಡುವುದು ಬೇಡ. ಹಾಗಾದರೆ ಸರ್ಕಾರ ಏನೂ ಮಾಡದೆ ಇಷ್ಟರ ಮಟ್ಟಿಗೆ ರೋಗವನ್ನು ನಿಯಂತ್ರಿಸಲು ಸಾಧ್ಯವಾಗುತ್ತಿತ್ತೇ? ಮೊನ್ನೆ ತಮಿಳುನಾಡಿನಿಂದ ಕೆಲವು ಕೈಗಾರಿಕೋದ್ಯಮಿಗಳು ಬಂದಿದ್ದರು. ಅವರು ಬೆಂಗಳೂರಿನಿಂದ ಹೋದಂತಹವರು. ಕರ್ನಾಟಕ ಒಳ್ಳೆಯ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡಿದೆ ಎಂದು ಅವರು ಹೇಳಿದರು. ಅಲ್ಲಿ ಇನ್ನೂ ರಸ್ತೆಗಳಲ್ಲಿ ಓಡಾಡಲಿಕ್ಕೆ ಆಗುತ್ತಿಲ್ಲವೆಂದು ಹೇಳಿದರು. ಎಷ್ಟೋ ಕಡೆಗಳಲ್ಲಿ ಇನ್ನೂ ಲಾಕ್‌ಡೌನ್ ಮುಂದುವರೆದಿದೆ. ನಮ್ಮ ರಾಜ್ಯದಲ್ಲಿ ಲಾಕ್‌ಡೌನ್ ಅನ್ನು ಸಡಿಲಗೊಳಿಸಿ ಕೈಗಾರಿಕೆಗಳು ಪ್ರಾರಂಭವಾಗುವುದಕ್ಕೆ, ಬಿಸಿನೆಸ್ ಚಾಲೂ ಮಾಡುವುದಕ್ಕೆ ಎಲ್ಲದಕ್ಕೂ ಅವಕಾಶವನ್ನು ನೀಡಲಾಗಿದೆ. ಇವೆಲ್ಲವುಗಳಿಗೆ ಸರ್ಕಾರದ ಕಾರ್ಯ ನಿರ್ವಹಣೆ ಮುಖ್ಯ. ನಮ್ಮ ರಾಜ್ಯದ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಮರ್ಥ ರೀತಿಯಿಂದ ಸರ್ಕಾರ ನಿರ್ವಹಣೆ ಮಾಡಿದೆ. ಎಲ್ಲಾದರೂ ಸಣ್ಣಪುಟ್ಟ ಲೋಪದೋಷಗಳು ಇಲ್ಲದಿರಲಾರದು. ಇವು ಆಕಸ್ಮಿಕವಾದ ಘಟನೆ. ಯಾರೂ ಹೇಳಿ ಕೇಳಿ ಮಾಡಿರುವುದಲ್ಲ. Day to day ನಡೆಯುವಂತಹದ್ದು. ಯಾವುದೇ ದೇಶವನ್ನು ತೆಗೆದುಕೊಳ್ಳಿ. ಯೂರೋಪಿಯನ್ ದೇಶಗಳು, ಇಟಲಿ, ಅಮೆರಿಕಾ, ಜಪಾನ್ ಮತ್ತಿತರ ದೇಶಗಳು ಹೇಗೆ suffer ಆಗುತ್ತಿವೆ ಎಂದು ಪ್ರತಿದಿನ ಲೇಖನಗಳು ಬರುತ್ತಿವೆ. ಆಸ್ಟ್ರೇಲಿಯಾ ಮತ್ತು ಇತರ ಎರಡು ದೇಶಗಳಲ್ಲಿ ಲಾಕ್‌ಡೌನ್ ಅನ್ನು ಮುಂದುವರೆಸಬೇಕೆಂಬ ಉದ್ದೇಶವಿರುವುದನ್ನು ನಿನ್ನೆ ದಿನಪತ್ರಿಕೆಯಲ್ಲಿ ನೋಡಿದ್ದೇನೆ. ಹಾಗಾದರೆ ಅಲ್ಲಿನ ಸರ್ಕಾರಗಳು fail ಆಗಿವೆಯೇ? ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು ಈ ರೀತಿಯಾಗಿ ಇಷ್ಟೆಲ್ಲಾ ಮಾಡಿದರೂ ಸಹ ಪ್ರಕರಣಗಳು ಹೆಚ್ಚಾಗುತ್ತಿವೆ. ಇದರಲ್ಲಿ ಜನರ ಪಾತ್ರವೇನೂ ಇಲ್ಲವೇ? ಇತ್ತೀಚೆಗೆ ನಾನು ಯಾದಗಿರಿ, ರಾಯಚೂರು ಭಾಗಗಳಿಗೆ ಭೇಟಿ ನೀಡಿದ್ದೆನು. ಮಾಸ್ಕ್‌ಗಳನ್ನು ಧರಿಸದ ಜನರು ರಸ್ತೆಯಲ್ಲಿ ಆರಾಮವಾಗಿ ತಿರುಗಾಡುತ್ತಿದ್ದರು. ಹಾಗಾದರೆ ಇದಕ್ಕೆ ಸರ್ಕಾರ ಜವಾಬ್ದಾರಿಯೇ? ನಮ್ಮ ಜನರಲ್ಲಿಯೂ ಜಾಗೃತಿ ಇರಬೇಕಲ್ಲವೇ? ಮಾನ್ಯ ನಾರಾಯಣಸ್ವಾಮಿಯವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ ಅದು ರಚನಾತ್ಮಕವಾದ ಸಲಹೆ ಸೂಚನೆಗಳನ್ನು ನೀಡುವಂತಿರಬೇಕು. ದಯವಿಟ್ಟು ಇಂತಹ ಒಂದು ಗಂಭೀರವಾದ ಪರಿಸ್ಥಿತಿಯಲ್ಲಿ ಕೊರೊನಾ ಬಗ್ಗೆ ರಾಜಕಾರಣ ಮಾಡುವುದು ಸಲ್ಲದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಶೆಟ್ಟರ್ ಅವರೇ, ಮಾತನಾಡುವಾಗ ಅವರು ಮಾತನಾಡುತ್ತಾರೆ. ಆದರೆ ಒಮ್ಮೊಮ್ಮೆ ಮಾತನಾಡಬೇಕಾಗುತ್ತದೆ. ಈಗ ನೀವು-ನಾವು ಒಂದೇ ವೇದಿಕೆಯ ಮೇಲಿದ್ದೆವು. ಅದಕ್ಕೆ ಮಂದಿ "ಏನ್ರೀ, ಬಿಜೆಪಿಯವರೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದೀರೇನು?" ಎಂದು ಕೇಳಿದರು. ಒಳ್ಳೆಯ ಕೆಲಸ ಮಾಡಿದಾಗ ಒಳ್ಳೆಯದು ಎಂದು ಹೇಳುತ್ತೇವೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಹೊರಟ್ಟಿಯವರೇ, ಅದಕ್ಕಾಗಿ ನಮ್ಮನ್ನು ವಿರೋಧಿಸುತ್ತಿದ್ದೀರಾ?

**ಸಭಾಪತಿಯವರು:-** ಸಮರ್ಥನೆ ಮಾಡುವವರು ಸಮರ್ಥನೆ ಮಾಡಲಿ. ಟೀಕೆ ಮಾಡುವವರು ಟೀಕೆ ಮಾಡಲಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಒಂದೊಂದು ಸಾರಿ ಅನಿವಾರ್ಯವಾಗಿ ಮಾತನಾಡಬೇಕಾಗುತ್ತದೆ, ಮಾತನಾಡುತ್ತೇವೆಂದು ಮಾನ್ಯ ಹೊರಟ್ಟಿಯವರು ಹೇಳಿದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಉಪ ಮುಖ್ಯಮಂತ್ರಿಗಳೇ, ಅವರು ವಾಸ್ತವಿಕ ನೆಲೆಗಟ್ಟಿನಲ್ಲಿ ಮಾತನಾಡುತ್ತಿದ್ದಾರೆ. ನಮ್ಮ ಜಿಲ್ಲಾಧಿಕಾರಿ, ಆರಕ್ಷಕ ಅಧೀಕ್ಷಕರು, ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲರೂ ಹೋಗಬೇಡವೆಂದು ಹೇಳಿದರೂ ಕೂಡ COVID-19 Designated Hospitals ಗೆ ಭೇಟಿ ನೀಡಿದ್ದೆನು. ಸಮಾಜವು ಅತ್ಯಂತ ಕೀಳು ಮನೋಭಾವದಿಂದ ಕೋವಿಡ್ 19 ಸೋಂಕಿತರನ್ನು ನೋಡುತ್ತಿದ್ದಾರೆಂದು ತಿಳಿದು ಅವರಿಗೆ ಆತ್ಮಸ್ಥೈರ್ಯ ತುಂಬಬೇಕೆನ್ನುವ ಉದ್ದೇಶದಿಂದ ಸ್ವತಃ ನಾನು ಆಸ್ಪತ್ರೆಗೆ ಹೋಗಿದ್ದೇನೆ. ಎಲ್ಲಾ ರೋಗಿಗಳ ಜೊತೆ ನಾನು ಚರ್ಚೆ ಮಾಡಿದ್ದೇನೆ. ಬಹಳ ಮಂದಿ ನನಗೆ advice ಮಾಡಿದರು. Viral load ಬಹಳ ಇದೆ, ದಯಮಾಡಿ ಹೋಗಬೇಡಿ ಎಂದರೂ ಪಿ.ಪಿ.ಇ. ಕಿಟ್ ಅನ್ನು ಧರಿಸಿ ನಾನು ಹೋಗಿದ್ದೆನು. ಇಡೀ ಸಮಾಜ ಕೀಳರಿಮೆಯಿಂದ, ಕೀಳು ಮನೋಭಾವದಿಂದ ನೋಡುತ್ತಿದ್ದು, ಅವರಲ್ಲಿ ಆತ್ಮಸ್ಥೈರ್ಯ ಬರಬೇಕೆಂದು ನಾನು ಒಬ್ಬ ಜನಪ್ರತಿನಿಧಿಯಾಗಿ ಕೋವಿಡ್ ಆಸ್ಪತ್ರೆಗೆ ಭೇಟಿ ನೀಡಿದ್ದೆನು. ಮನೆಯಲ್ಲಿ ಹೆಂಡತಿ, ಮಕ್ಕಳು ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವರ ಸಮೀಪಕ್ಕೆ ಹೋಗಲಾರದಂತಹ ಸ್ಥಿತಿಗತಿ ಇತ್ತು. ಇಂತಹ ಪರಿಸ್ಥಿತಿಯಲ್ಲಿ I visited the COVID-19 Designated Hospitals and discussed with the patients. ನನ್ನ ಜೊತೆ ಇದ್ದಂತಹ ಹಿರಿಯ ವೈದ್ಯರು, ವೈದ್ಯಕೀಯ ಸಿಬ್ಬಂದಿ ಕೂಡ ಒಳಗೆ ಬರಲು ತಯಾರಿರಲಿಲ್ಲ. ಜನಪ್ರತಿನಿಧಿಯಾಗಿ ನಮ್ಮ ಜವಾಬ್ದಾರಿಯಿದ್ದು, ಅಲ್ಲಿ ಕಂಡದ್ದನ್ನು ಇಲ್ಲಿ ಹೇಳುವ ಕೆಲಸ ಮಾಡುತ್ತಿದ್ದೇವೆ. You take it sportively. ನೀವು ಕ್ರೀಡಾ ಮನೋಭಾವದಿಂದ ಸ್ವೀಕಾರ ಮಾಡಿ. ಇಲ್ಲವಾದ್ದಲ್ಲಿ ನಿಮ್ಮ ಉತ್ತರದಲ್ಲಿ ಅದು ಹಾಗೆ ಇರುವುದಿಲ್ಲ, ನಾವು ಈ ರೀತಿ ಮಾಡಿದ್ದೇವೆಂದು rebut ಮಾಡಿ. ನಮ್ಮ ಸದಸ್ಯರೊಬ್ಬರು ಮಾತನಾಡುತ್ತಿದ್ದಾಗ ಆಳುವ ಪಕ್ಷದ ಸದಸ್ಯರೆಲ್ಲರೂ ಎದ್ದು ನಿಂತು interrupt ಮಾಡಿದರೆ ಏನಾಗುತ್ತದೆ? ಹೇಳುವುದಕ್ಕೆ ಸಾಕಷ್ಟು ಇದೆ. ಲೋಪದೋಷಗಳು ಇಲ್ಲವೆಂದಲ್ಲ. ನಮ್ಮ ಪಕ್ಷದವರೇ ಸರ್ಕಾರ ರಚಿಸಿದರೂ ಲೋಪದೋಷಗಳಾಗಬಹುದು. ಇಂದು ಸಭಾನಾಯಕರಾಗಿರುವವರು ಹಿಂದೆ ವಿರೋಧಪಕ್ಷದ ನಾಯಕರಾಗಿದ್ದಾಗ ಸಾಕಷ್ಟು ಹೇಳುತ್ತಿದ್ದರು. Sportive ಆಗಿ ತೆಗೆದುಕೊಳ್ಳಬೇಕು.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಇನ್ನೆಷ್ಟು ಸಮಯ ಮಾತನಾಡುತ್ತೀರಿ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇನ್ನು ಹತ್ತು ನಿಮಿಷಗಳು. ನನ್ನ ಸಮಯ ಹೋಗುತ್ತಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾತನಾಡುವಾಗ flow of thoughts ಇರುತ್ತದೆ. ಅದನ್ನು interrupt ಮಾಡಬೇಡಿ. He is speaking well. ವಾಸ್ತವಿಕ ನೆಲೆಗಟ್ಟಿನ ಮೇಲೆ ಹೇಳುವುದಾದರೆ ಇದು ಇಡೀ ಮನುಕುಲದ ವಿನಾಶಕ್ಕೆ ಬಂದಂತಹ ಒಂದು ವೈರಾಣು. ಇದು ಕೇವಲ ನಮ್ಮ ರಾಜ್ಯಕ್ಕಷ್ಟೇ ಅಲ್ಲ, ದೇಶಕ್ಕೆ ಮಾತ್ರವಲ್ಲ; ಇಡೀ ಪ್ರಪಂಚದ ಎಲ್ಲಾ ದೇಶಗಳಿಗೂ ವ್ಯಾಪಿಸಿದೆ. ವ್ಯಾಪಾರ ವಹಿವಾಟು ಹೋಗಿದೆ, ಉದ್ಯಮಗಳು ಹೋಗಿದೆ. ರಾಜ್ಯದ ಹಾಗೂ ದೇಶದ ಆರ್ಥಿಕ ಸ್ಥಿತಿಯು ಅಧೋಗತಿ ತಲುಪಿದೆ. ಈ ಸಂದರ್ಭದಲ್ಲಿ ಇದನ್ನು ನಿಯಂತ್ರಣ ಮಾಡಲು ಪ್ರತಿಪಕ್ಷದವರಾದ ನಾವು ಸರ್ಕಾರದೊಂದಿಗಿದ್ದೇವೆ. ಮನುಕುಲದ ವಿನಾಶಕ್ಕಾಗಿ ಬಂದಂತಹ ವೈರಾಣುವನ್ನು ನಿಯಂತ್ರಣ ಮಾಡಲು ನಾವು ನಿಮ್ಮೊಂದಿಗಿದ್ದೇವೆ. ನೀವು ಅಧಿಕಾರದ ಚುಕ್ಕಾಣಿಯನ್ನು ಹಿಡಿದಿದ್ದೀರಿ. ಸಣ್ಣ ಪುಟ್ಟ ಲೋಪದೋಷಗಳೇನಾದರೂ ಇದ್ದಲ್ಲಿ ಹೇಳುತ್ತೇವೆ. ಆಸ್ಪತ್ರೆಯಿರಬಹುದು, ಆಂಬ್ಯುಲೆನ್ಸ್ ಇರಬಹುದು. ಇಂದು ಆಂಬ್ಯುಲೆನ್ಸ್ ಸಿಗಲಾರದೆ ಜನ ರಸ್ತೆಯಲ್ಲಿ ಬಿದ್ದು ಸಾಯುವ ಪರಿಸ್ಥಿತಿ ಇದೆ. ಅವರೇನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅತಿರಂಜಿತವಾಗಿ, ವೈಭವೀಕರಣ ಮಾಡಿ ಮಾತನಾಡುತ್ತಿಲ್ಲ. ಇದ್ದಂತಹ ಸತ್ಯವನ್ನು ಹೇಳುತ್ತಾರೆ. Have a patient hearing. ಆಮೇಲೆ ನೀವು rebut ಮಾಡಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ವಿರೋಧಪಕ್ಷದ ನಾಯಕರೇ, ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುವಾಗ ದಾರಿ ಬಿಟ್ಟು ಹೋಗುತ್ತಿದ್ದಾರೆ ಎನ್ನುವ ಪ್ರಶ್ನೆಯನ್ನು ನಾವು ಉದ್ಭವ ಮಾಡಿಲ್ಲ. ಕೊರೊನಾ ಬಂದು ಆರು ತಿಂಗಳಾಯಿತು. ಇಡೀ ಕರ್ನಾಟಕಕ್ಕೆ ಮಾತ್ರವಲ್ಲ, ನಮ್ಮ ದೇಶವಷ್ಟೇ ಅಲ್ಲ, ಈ ಮಹಾಮಾರಿಯು ಇಡೀ ವಿಶ್ವಕ್ಕೆ ವ್ಯಾಪಿಸಿದೆ.

ಮಾನ್ಯ ಸಭಾಪತಿಯವರೇ, ಒಂದು ವಿಷಯ ತಮಗೂ ತಿಳಿದಿದೆ, ನಮ್ಮೆಲ್ಲರಿಗೂ ತಿಳಿದಿದೆ. ಕಳೆದ ಆರು ತಿಂಗಳಿನಿಂದ ಸತತವಾಗಿ ನಮ್ಮ ವೈದ್ಯರು ಹಗಲು ರಾತ್ರಿಯೆನ್ನದೆ ತಮ್ಮ ಜೀವದ ಹಂಗನ್ನು ತೊರೆದು ಜನರನ್ನು ರಕ್ಷಣೆ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಕೆಳಹಂತದ ಅಧಿಕಾರಿಗಳಿಂದ ಮೇಲು ಹಂತದ ಅಧಿಕಾರಿಗಳವರೆಗೆ ಎಲ್ಲರೂ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅವರ ಮನೋಧೈರ್ಯ ಕುಸಿಯಬಾರದು ಎನ್ನುವುದಷ್ಟೇ ನಮ್ಮ ಕಳಕಳಿ. ಇಂತಹ ಸಂದರ್ಭದಲ್ಲಿ ಲೋಪ ಆಗಿರುವುದರ ಕುರಿತು ವಿರೋಧಪಕ್ಷದವರು ಸರ್ಕಾರಕ್ಕೆ ಸಲಹೆಗಳನ್ನು ನೀಡಲಿ. ಸಾಕಷ್ಟು ಸಲಹೆಗಳನ್ನು ಕೊಡಲಿಕ್ಕೆ ಅವಕಾಶವಿದೆ. ಅವಕಾಶಗಳನ್ನು ಬಳಸಿಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ಆದರೆ ವಿರೋಧಪಕ್ಷದವರು ಕೇವಲ ಟೀಕೆಯನ್ನಷ್ಟೇ ಮಾಡಬಾರದು. ಈ ಸಂದರ್ಭದಲ್ಲಿ ಅವರ ಸಲಹೆಗಳನ್ನು ಪಡೆದುಕೊಳ್ಳಲು ಆಗಿರುವ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ನಾವು ಸಿದ್ಧರಿದ್ದೇವೆ. ವಿರೋಧಪಕ್ಷದಲ್ಲಿ ಕುಳಿತು ಸರ್ಕಾರವನ್ನು ಟೀಕೆ ಮಾಡುವುದೇ ಗುರಿ ಎಂಬಂತಾಗಬಾರದು. ವಿರೋಧ ಮಾಡಲಿಕ್ಕಿರುವುದೇ ವಿರೋಧಪಕ್ಷ ಎನ್ನುವಂತಾಗಬಾರದು.

**...ಮುಂದು)**

(770) 4-10 22.9.2020 KG VK

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, KIMS Hospital ಬಗ್ಗೆ ಹೇಳಿದರು. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಾನೇ ಸ್ವತಃ ಅಲ್ಲಿಗೆ visit ಮಾಡಿದ್ದೇನೆ. KIMS Hospital Director ರವರು ನಮ್ಮ ಜಿಲ್ಲೆಯವರು. ನಾನು ಆ ದೃಷ್ಟಿಯಿಂದ ಅಲ್ಲಿಗೆ ಹೋಗಿಲ್ಲ. ನಾವು ಒಳ್ಳೆಯದನ್ನು ಒಳ್ಳೆಯದೆಂದು ಹೇಳಿದ್ದೇವೆ. ನಾವು ಅವರಿಗೆ ಎಷ್ಟೋ ಬಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

'ಶಹಭಾಸ್‌ಗಿರಿ' ಕೊಟ್ಟಿದ್ದೇವೆ. ನಾವು ಅವರನ್ನು ಅಭಿನಂದಿಸಿದ್ದೇವೆ. ಲೋಪ ದೋಷಗಳನ್ನು ಏಕೆ ಹೇಳುತ್ತೇವೆಂದರೆ, ಆಡಳಿತ ಸುಧಾರಣೆಯಾಗಲಿ, ಅವರು ಸರಿದಾರಿಯಲ್ಲಿ ಹೋಗಲಿ ಎಂದು ಹೇಳುತ್ತೇವೆ. ನಾವು ಮೊದಲೇ ಅವರು ಎಲ್ಲಿ ಎಡವುತ್ತಾರೆಂದು ಸೂಚನೆ ಕೊಡುತ್ತೇವೆ. ಅವರ ಒಳ್ಳೆಯದಕ್ಕೆ ವಿರೋಧ ಪಕ್ಷ ಇದೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೈಗಾರಿಕೆ ಸಚಿವರು ಒಂದು ಮಾತನ್ನು ಹೇಳಿದ್ದಾರೆ. ಹುಬ್ಬಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಒಳ್ಳೆಯ ಉಪಚಾರವನ್ನು ಕೊಟ್ಟಿದ್ದೇವೆ, ಅಲ್ಲಿರುವಂತಹ ಸುಮಾರು 30 ಜನರು ನನಗೆ ಫೋನ್ ಮಾಡಿ ಹೇಳಿದರು ಎಂದು ಹೇಳಿದ್ದಾರೆ. ನಮಗೆ ಸಂತೋಷ. ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದಕ್ಕೆ ನಾವು ಸಹ ಶಹಭಾಸ್ ಹೇಳುತ್ತೇವೆ. ಆದರೆ, ಅದೇ ಜನ ಬೆಂಗಳೂರಿನಲ್ಲಿ WhatsApp ಮಾಡಿರುವಂತಹದ್ದನ್ನು ತೆಗೆದು ನೋಡಿರಬಹುದು; ಒಬ್ಬ ಸೋಂಕು ತಗಲಿರುವಂತಹ ವ್ಯಕ್ತಿಯನ್ನು ಆಸ್ಪತ್ರೆಯಲ್ಲಿ admit ಮಾಡಿಕೊಂಡಾಗ, ಆತ ದಯವಿಟ್ಟು ಯಾರು ಸಹ ಆಸ್ಪತ್ರೆಗೆ ಬರಬೇಡಿ ಎಂದು ಲೈವ್‌ನಲ್ಲಿ ಮಾತನಾಡುತ್ತಾನೆ. ಈ ಸಾಂಕ್ರಮಿಕ ರೋಗದಿಂದ ನಾನು ಸಾಯಿತ್ತೇನೋ ಅಥವಾ ಬದುಕುತ್ತೇನೆಂದು ಗೊತ್ತಿಲ್ಲ. ಆದರೆ, ನನಗೆ ಇಲ್ಲಿ ನರಕ ತೋರಿಸಿಬಿಟ್ಟಿದ್ದಾರೆ. ಈ ಆಸ್ಪತ್ರೆಯಲ್ಲಿ admit ಆದಮೇಲೆ, ಬೆಳಗ್ಗೆ ಕುಡಿಯುವುದಕ್ಕೆ ಒಂದು ಲೋಟ ಬಿಸಿ ನೀರು ಕೊಡುತ್ತಾರೆ. ನುಂಗುವುದಕ್ಕೆ ಎರಡು ಗುಳಿಗೆಗಳನ್ನು ಕೊಡುತ್ತಾರೆ. ಮಧ್ಯಾಹ್ನ ಒಂದು ಟೈಮ್‌ಗೆ ಊಟ ಕೊಡುತ್ತಾರೆ ಇಷ್ಟು ಬಿಟ್ಟರೆ ಬೇರೆ ಏನು ಇಲ್ಲವೆಂದು ಹೇಳುತ್ತಾನೆ. ಇಲ್ಲಿನ ವ್ಯವಸ್ಥೆಯನ್ನು ನೋಡಿ ನಾನು ನರಕವನ್ನು ನೋಡಿದ್ದೇನೆಂದು ಹೇಳಿದ್ದು ಸುಳ್ಳು ಅಲ್ಲವಲ್ಲ, ನಾನು ಏನಾದರೂ ಹೇಳಿದರೆ ಆಡಳಿತ ಪಕ್ಷದವರು ಕೋಪ ಮಾಡಿಕೊಳ್ಳುತ್ತಾರೆ. "ವಿಕ್ಟೋರಿಯಾ ಆಸ್ಪತ್ರೆಯ ಮುಂದೆ  ಜೀವ ಬಿಟ್ಟ ವೃದ್ದೆ" . "ಚಿಕಿತ್ಸೆಗೆ ಅಲೆದಾಟ, ಕೇಳುವವರಿಲ್ಲ ಸಂಕಟ, ನಿಲ್ಲದ ಸಾವಿನ ಓಟ" ಎಂದು ದಿನ ಪತ್ರಿಕೆಗಳಲ್ಲಿ ಬರೆದಿರುತ್ತಾರೆ. ಒಬ್ಬ ವೃದ್ದೆ ಸಂಕ್ರಾಮಿಕ ರೋಗಕ್ಕೆ ತುರಿಯಾಗುತ್ತಾಳೆ. ಆಕೆ ಆಸ್ಪತ್ರೆಗೆ ಹೋಗಬೇಕು, ಆಗ ಬೆಡ್ ಇಲ್ಲವೆಂದು ಹೇಳುತ್ತಾರೆ. ಆಕೆಯನ್ನು Ambulance ನಲ್ಲಿ ಕರೆದುಕೊಂಡು ಐದು ದಿವಸಗಳ ಕಾಲ ಇಡೀ ಬೆಂಗಳೂರಿನಲ್ಲಿ ಆಸ್ಪತ್ರೆಯಿಂದ ಆಸ್ಪತ್ರೆಗೆ  ಸುತ್ತಾಡಿದ್ದಾರೆ. Private ಆಸ್ಪತ್ರೆಯಲ್ಲಿ ಬೆಡ್ ಇಲ್ಲವೆಂದು ಹೇಳುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಬೆಡ್ ಖಾಲಿ ಇಲ್ಲವೆಂದು ಹೇಳುತ್ತಾರೆ. Ambulance ನಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ  ಕರೆದುಕೊಂಡು ಹೋಗುತ್ತಾರೆ. ಆಗ ಆಕೆಯನ್ನು wheelchair ಅನ್ನು ತಂದು ಒಳಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರೆದುಕೊಂಡು ಹೋಗುತ್ತಿರುತ್ತಾರೆ, ಅಷ್ಟರಲ್ಲಿ ಆಕೆ ಆತನ ಮಗನ ಮುಂದೆಯೇ ಪ್ರಾಣ ಬಿಡುತ್ತಾಳೆ. ಇದು ಯಾರ ತಪ್ಪು?

ಮಾನ್ಯ ಸಭಾಪತಿಯವರೇ, ಅದೇ ರೀತಿ 23 ವರ್ಷದ ಒಬ್ಬ ಹುಡುಗಿ, ಆಕೆ pregnant ಹೆರಿಗೆಗಾಗಿ ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಆಗ ಆಕೆ ಆಟೋ ರಿಕ್ಷಾದಲ್ಲಿ ಆಸ್ಪತ್ರೆಗೆ ಹೋಗುತ್ತಾಳೆ. ಆದರೆ, ಯಾವ ಆಸ್ಪತ್ರೆಯವರು ಸಹ ಆಕೆಯನ್ನು admit ಮಾಡಿಕೊಳ್ಳುವುದಿಲ್ಲ. ಏಕೆಂದರೆ, ಕರೋನಾ ಪರೀಕ್ಷೆ ಮಾಡಿಸಿಕೊಂಡು ಬಂದರೆ ಒಳಗೆ ಬಿಡುತ್ತೇವೆಂದು ಹೇಳಿದ್ದಾರೆ. ಅಲ್ಲಿಂದ ಒಂದು ಗಂಟೆಗೂ ಅಥವಾ ಎರಡು ಗಂಟೆಗೂ ಹೆರಿಗೆ ಆಗುತ್ತದೆ. ಅಂತಹ ಸಂದರ್ಭದಲ್ಲಿ ಯಾರು ಕರೋನಾ ಪರೀಕ್ಷೆ ಮಾಡಿಸಿಕೊಂಡು ಬರುವುದಕ್ಕೆ ಆಗುತ್ತದೆ? ಆ ವೇಳೆಯಲ್ಲಿ ಮಾನವಿಯತೆ ದೃಷ್ಟಿಯಿಂದ ಆಕೆಯನ್ನು ಒಳಗೆ ಕರೆದುಕೊಂಡಿದ್ದರೆ, ತಾಯಿ ಮತ್ತು ಮಗು ಇಬ್ಬರು ಉಳಿಯುತ್ತಿದ್ದರು. ಆಕೆಗೆ ಹೆರಿಗೆ ಮಾಡಿಸದಿದ್ದರಿಂದ ಆಕೆ ಪ್ರಾಣ ಬಿಡುತ್ತಾಳೆ. ಆಕೆಯ ಹೊಟ್ಟೆಯಲ್ಲಿದ್ದ ಮಗು ಸಹ ಸತ್ತು ಹೋಗುತ್ತದೆ. ಮಾನ್ಯ ಸಭಾಪತಿಯವರೇ, ನಾನು ಇದನ್ನು ಹೇಳುವುದಕ್ಕೆ ಇಷ್ಟಪಡುವಂಹದ್ದು, ಆದರೆ, ಆಪಾದನೆ ಮಾಡುವುದಕ್ಕೆ ಅಲ್ಲ. ನಾನು ಮೊನ್ನೆ ದಿವಸ ಉತ್ತರ ಕನ್ನಡ ಜಿಲ್ಲೆಗೆ ಪ್ರವಾಸ ಹೋಗಿದ್ದೆ.,

**ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದು ನಿಜ. ಅದೇರೀತಿ ಸಾವಿನ ಪ್ರಮಾಣ 1.6 ಮಾತ್ರ. recovery percentage is above 75 per cent. ಇದುವರೆಗೆ ಸುಮಾರು 5 ಲಕ್ಷದಷ್ಟು ರೋಗಿಗಳು ಆಸ್ಪತ್ರೆಯಲ್ಲಿ patient ಆಗಿರುವವರಲ್ಲಿ, ಸುಮಾರು 3,96,000/- ರೋಗಿಗಳು recovery ಆಗಿದ್ದಾರೆ. ಸುಮಾರು ಏಳು ಸಾವಿರ ರೋಗಿಗಳು ಮಾತ್ರ ಸತ್ತಿದ್ದಾರೆ. ಒಂದು ವೇಳೆ, ರೋಗಿಗಳಿಗೆ treatment ಇಲ್ಲದ್ದಿದರೆ, ಆಸ್ಪತ್ರೆಗಳು ಕೈಚೆಲ್ಲಿ ಈ ವ್ಯವಸ್ಥೆ ಕುಸಿದು ಹೋಗಿದ್ದರೆ ಸಾವಿನ ಪ್ರಮಾಣ ಲಕ್ಷಗಳ ಗಡಿ ದಾಟುತ್ತಿತ್ತು ಅಲ್ಲವೇ, ಮಾನ್ಯ ಸದಸ್ಯರು ಹೇಳಿದಂತೆ, ಮರಣ ಮೃದಂಗ ನಡೆದಿದ್ದರೆ, Ambulance ಸಿಗದೆ, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸಿಗದಿದ್ದರೆ, ರೋಗಿಗಳಿಗೆ ನರಕ ದರ್ಶನವಾಗಿದ್ದರೆ ಎಷ್ಟು ಜನ ರೋಗಿಗಳು ಸಾಯಬೇಕಾಗಿತ್ತು ಎಂಬುದನ್ನು ಅವರು ಹೇಳಲಿ. ಒಬ್ಬ ರೋಗಿ ಆಸ್ಪತ್ರೆಯಿಂದ ಬಿಡುಗಡೆಯಾದಂತಹ ಸಂದರ್ಭದಲ್ಲಿ ವೈದ್ಯರನ್ನು ಹೊಗಳಿರುತ್ತಾನೆ, ಅವನೊಬ್ಬ ರಾಜಕೀಯ ಹಿನ್ನೆಲೆಯ ಕಾರ್ಯಕರ್ತನಾಗಿರುತ್ತಾನೆ. ಆತ ಆ ರೀತಿ ಹೊಗಳಿದಾಗ, ಆತನಿಗೆ ಪಕ್ಷದಿಂದ ನೀನು ಈ ರೀತಿ ಹೋಗಳಿ ಬಿಟ್ಟರೆ ಏನು ಗತಿ ಎಂದು ಸೂಚನೆ ಬರುತ್ತದೆ. ಅದನ್ನು ತೆಗಳುತ್ತಾರೆ. ಅಂತಹ ಜನರು ಇದ್ದಾರೆ. ನಾವು ಏನು ಮಾಡಬೇಕು ಎಂಬುದನ್ನು ಹೇಳಲಿ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಾವಿನ ಸಂಖ್ಯೆ ಏಳು ಸಾವಿರ ಮಾತ್ರ ಎಂದು ಹೇಳಿದ್ದಾರೆ. Single death is a tragedy, Millions death is a statistic. ಯಾರು ಸತ್ತಿದ್ದಾರೆಂದು ಅವರ ಮನೆಗಳಿಗೆ ಹೋಗಿ ನೋಡಿದರೆ, ಆಗ ಅವರಿಗೆ ದುಖಃ ಗೊತ್ತಾಗುತ್ತದೆ. ಮಾನ್ಯ ಸದಸ್ಯರು ದಿನನಿತ್ಯ ದಿನಪತ್ರಿಕೆಗಳಲ್ಲಿ ಬಂದಿರುವಂತಹ ವಿಚಾರವನ್ನು ಹೇಳುತ್ತಿದ್ದಾರೆ ಹೊರತು, ಅವರು ಯಾವುದನ್ನು ಸೃಷ್ಟಿ ಮಾಡಿಕೊಂಡು ಹೇಳುತ್ತಿಲ್ಲ. ಇದರ ಬಗ್ಗೆ ಜನಗಳ ಮಧ್ಯೆ ಗೊಂದಲ ಇದೆ. ಇದಕ್ಕೆ ಸರ್ಕಾರದವರು clarify ಮಾಡಬೇಕು. ಹಾಗಾದರೆ, ಏಳು ಸಾವಿರ ಜನರು ಸತ್ತಿರುವುದು ಸಾವಲ್ಲವೇ ಅದು;

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ, ಒಂದು ವೇಳೆ, ಸರ್ಕಾರ ಹತಾಶೆ ಆಗಿದ್ದರೆ, ವ್ಯವಸ್ಥೆ ಕೈಚೆಲ್ಲಿದ್ದರೆ, ರೋಗಿಗಳಿಗೆ ಚಿಕಿತ್ಸೆ ಇಲ್ಲದಿದ್ದರೆ ಸಾವಿನ ಪ್ರಮಾಣ ಎಲ್ಲಿಗೆ ಹೋಗುತ್ತಿತ್ತು ಎಂಬುದನ್ನು ಹೇಳಲಿ? ಪ್ರತಿ ಜೀವದ ಬಗ್ಗೆಯೂ ಕಾಳಜಿ ಇದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮೊದಲು ಸರ್ಕಾರ ಇದರಲ್ಲಿ ಇರುವಂತಹ ಗೊಂದಲವನ್ನು ಸರಿಪಡಿಸಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಈಗ ವಿರೋಧ ಪಕ್ಷದವರು ಪ್ರತಿಯೊಂದರಲ್ಲಿ ತಪ್ಪುಗಳನ್ನು ಹುಡುಕಬೇಕೆಂದು ಯೋಚನೆ ಮಾಡಿಕೊಂಡು ಬಂದಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಇದ್ದಾರೆ, ಉಪ ಮುಖ್ಯಮಂತ್ರಿಯವರು ಇದ್ದಾರೆ, ಆರೋಗ್ಯ ಸಚಿವರು ಇದ್ದಾರೆ. ಉತ್ತರ ಕೊಡುತ್ತಾರೆ. ಮಾನ್ಯ ಸಚಿವರು ಅವರನ್ನು ಕೇಳಲಿ. ವಿರೋಧ ಪಕ್ಷದವರು ಇರುವುದು ಆಡಳಿತ ಪಕ್ಷದವರನ್ನು ಹೊಗಳುವುದಕ್ಕೆ ಅಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ನಮ್ಮನ್ನು ಖಂಡಿತವಾಗಿ ಹೋಗಳಬೇಕಾಗಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ಹೇಳಿದ್ದು ತಪ್ಪು ಎಂದಾದರೆ, ಉತ್ತರವನ್ನು ಅವರಿಗೆ rebut ಮಾಡಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಟೀಕೆ ಮಾಡುವುದೇ ಅವರ ಉದ್ದೇಶವಾಗಿದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಎಲ್ಲರಿಗೂ ಅವಕಾಶ ಸಿಗುತ್ತದೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಅವರ ದುರುದ್ದೇಶ ಅರ್ಥವಾಗಿದೆ..

**(ಗೊಂದಲ)**

**ಡಾ॥ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಅದ್ಭುತವಾದಂತಹ ಸಾಧನೆ ಮಾಡಿದೆ. ದಯವಿಟ್ಟು ಅವರಿಗೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಕೊಡುವುದಕ್ಕೆ ಆಗುತ್ತಿಲ್ಲ. ಕುಂಬಳ ಕಾಯಿ ಕಳ್ಳ ಎಂದರೆ, ಅವರು ಹೆಗಲ ಮುಟ್ಟಿ ನೋಡಿಕೊಳ್ಳುತ್ತಿದ್ದಾರೆ. ನಾವು ಯಾವ ರೀತಿ ಮಾತನಾಡಬೇಕೆಂದು ಆಡಳಿತ ಪಕ್ಷದವರಿಂದ ಕಲಿಯಬೇಕಾಗಿಲ್ಲ. ಇದು ಜನಸಾಮನ್ಯರ ಸದನ. ನಾವು ಜನಸಾಮಾನ್ಯರಿಗೆ ಅನಿಸಿದ್ದನ್ನು ಹೇಳಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(771)22-09-2020(4-20)ಎಂವಿ-ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿಯವರು ಆಡಳಿತ ಪಕ್ಷದವರು ಹೇಳಿದ ಹಾಗೆ ಮಾತನಾಡಬೇಕೆ. ಆಡಳಿತ ಪಕ್ಷದವರು ಏನೆಂದು ತಿಳಿದುಕೊಂಡಿದ್ದಾರೆ.

**ಡಾ||ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸರ್ಕಾರ ಮಾತನಾಡುವುದಕ್ಕೆ ಬಿಡುತ್ತಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಳ್ಳುತ್ತಾರೆ.

**(ಗೊಂದಲ)**

**ಡಾ||ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ ಅವರನ್ನು ಮಾತನಾಡುವುದಕ್ಕೆ ಬಿಡುತ್ತಿಲ್ಲ. ನಾವು ವಿರೋಧ ಪಕ್ಷದವರ ಪ್ರವಚನವನ್ನು ಕೇಳಿಸಿಕೊಳ್ಳಬೇಕೆ.

**ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕುಂಬಳ ಕಾಯಿ ಕಳ್ಳರು ಯಾರು ಎಂದು ಗೊತ್ತಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಮಾನ್ಯ ಸದಸ್ಯರು ಮಾತನಾಡುವುದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ನಮಗೆ ಮಾತನಾಡುವ ಹಕ್ಕು ಮತ್ತು ಅವಕಾಶ ಇದೆ. ಅವರು ಮನುಷ್ಯರಾಗಿ ಮನುಷ್ಯರ ಹೆಣವನ್ನು ಹೂಳಲಿಲ್ಲ. ಜೆ.ಸಿ.ಬಿ. ತೆಗೆದುಕೊಂಡು ಹೋಗಿ ಹೆಣಗಳನ್ನು ಹೂಳುತ್ತಿದ್ದಾರೆ. ಆ್ಯಂಬುಲೆನ್ಸ್ ಇಲ್ಲದೇ ಹೆಣವನ್ನು ತಳ್ಳುವ ಗಾಡಿಯಲ್ಲಿ ತೆಗೆದುಕೊಂಡು ಹೋಗಿದ್ದಾರೆ. ನಾವು ಹೆಣವನ್ನು ಪಕ್ಕದಲ್ಲಿ ಇಟ್ಟುಕೊಂಡು ಊಟ ಮಾಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಡಾ॥ವೈ.ಎ.ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಮಹಾರಾಷ್ಟ್ರ ಮತ್ತು ಮುಂಬೈಯನ್ನು ನೋಡಿಕೊಂಡು ಬರಲಿ.

**ಸಭಾಪತಿಯವರು:-** ಎಲ್ಲರಿಗೂ ಸಹ ಮಾತನಾಡುವುದಕ್ಕೆ ಅವಕಾಶವಿದೆ.

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಅವರು ಸಂಸ್ಕಾರದ ಬಗ್ಗೆ ಮಾತನಾಡುವುದು ಬೇಡ. ಅವರ ಕೈಯಲ್ಲಿ ಒಂದು ಹೆಣಕ್ಕೆ ಗೌರವಯುತವಾದ ಸಂಸ್ಕಾರ ಮಾಡುವುದಕ್ಕೆ ಆಗಲಿಲ್ಲ. ಜೆ.ಸಿ.ಬಿ.ಯಲ್ಲಿ ಹೆಣವನ್ನು ಬೀದಿ ನಾಯಿ ತರಹ ಮಾಡಿರುವುದನ್ನು ಮಾಧ್ಯಮದಲ್ಲಿ ತೋರಿಸಿದರು. ಅವರು ಅದನ್ನು ಸಮರ್ಥಿಸಿಕೊಳ್ಳುತ್ತಾರೆಯೇ? ಈಗ ಆಗಿರುವಂತಹ ತಪ್ಪನ್ನು ತಿದ್ದಿಕೊಂಡು, ಮುಂದೆ ನಡೆಸುವುದನ್ನು ಕಲಿತುಕೊಳ್ಳಲಿ. ಈಗ ಇರುವುದನ್ನು ಸಮರ್ಥಿಸಿಕೊಳ್ಳುವುದಕ್ಕೆ ಹೋಗುವುದು ಬೇಡ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಜನರು ಒಪ್ಪಿಕೊಂಡಿದ್ದಾರೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಸುಗೂಸು ಆಟೋದಲ್ಲಿ ಪ್ರಾಣ ಬಿಟ್ಟಾಗ ಜನರು ಅದನ್ನು ಒಪ್ಪಿಕೊಂಡಿದ್ದಾರೆಯೇ? ಬೀದಿಯಲ್ಲಿ 12 ಗಂಟೆ ಹೆಣ ಇರುವುದನ್ನು ಮಾಧ್ಯಮದವರು ತೋರಿಸಿದ್ದಾರೆ ಜನರು ಅದನ್ನು ಒಪ್ಪಿಕೊಂಡಿದ್ದಾರೆಯೇ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅದನ್ನು ಜನರು ಒಪ್ಪಿಕೊಂಡಿದ್ದಾರೆಯೇ ಎಂದು ಹೇಳಿ.

**ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಯಾವುದೇ ಒಂದು ಸಾವು ದುರ್ದೈವ ಮತ್ತು ದುಃಖಕರ. ಅದನ್ನು ಹೇಗೆ ತಪ್ಪಿಸುವುದು ಎಂದು ಹೇಳಲಿ. ಈಗ ಯಾರ್‍ಯಾರ ಖಾಸಗಿ ಆಸ್ಪತ್ರೆಗಳಿವೆ ಅವುಗಳ ಪಟ್ಟಿ ತೆಗೆಯಿಸಿ. ಯಾರ್‍ಯಾರು ಎಷ್ಟೆಷ್ಟು ಚಿಕಿತ್ಸೆಯನ್ನು ಉಚಿತವಾಗಿ ಕೊಟ್ಟಿದ್ದಾರೆಂದು ಗೊತ್ತಾಗಲಿ. ಮಾನ್ಯ ಮಂತ್ರಿಯವರು ಇದ್ದಾರೆ ಅವರು ಉತ್ತರವನ್ನು ಕೊಡುತ್ತಾರೆ. ಯಾರ್‍ಯಾರು ವೀರಾವೇಶದಿಂದ ಮಾತನಾಡುವವರು ಯಾವ್ಯಾವ ಆಸ್ಪತ್ರೆಯಲ್ಲಿ ಎಷ್ಟೆಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಿಸ್ಕೌಂಟ್ ಕೊಟ್ಟಿದ್ದಾರೆಂದು ಗೊತ್ತಾಗುತ್ತದೆ. ಉಚಿತವಾಗಿ ಚಿಕಿತ್ಸೆಯನ್ನು ಯಾರು ಕೊಟ್ಟಿದ್ದಾರೆಂದು ಅದರ ಪಟ್ಟಿ ತೆಗೆಯಿಸಿ.

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಆಕಾಶ್ ಆಸ್ಪತ್ರೆ ಮತ್ತು ರಾಜರಾಜೇಶ್ವರಿ ಆಸ್ಪತ್ರೆಗಳ ಹೆಸರು ಹೇಳಿದರೆ ಅದು ಒಂದು ದೊಡ್ಡ ಕಥೆ. ಅಲ್ಲಿಗೆ ಹೋದರೆ ವಾಪಸ್ಸು ಬರುವುದಿಲ್ಲ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನವೀಯತೆ ಮತ್ತು ರಾಕ್ಷಸರಂತೆ ವರ್ತಿಸಿದವರು ಯಾರು ಮತ್ತು ಸುಲಿಗೆ ಮಾಡಿದವರು ಯಾರು ಎಂದು ಗೊತ್ತಾಗುತ್ತದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ನಾನು ಸಭೆ ನಡೆಸಬೇಕೆ, ಬೇಡವೆ? ಇದು ತಾಳಮದ್ದಳೆ ಅಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ವಿನಂತಿ ಮಾಡುತ್ತೇನೆ. ಚರ್ಚೆ ಮಾಡಿದಾಗ ಸರ್ಕಾರ ಮಧ್ಯ ಪ್ರವೇಶ ಮಾಡುವುದು ಮೊದಲಿನಿಂದಲೂ ಇರುವಂತಹ ರೂಢಿ.

**ಸಭಾಪತಿಯವರು:–** ಎಲ್ಲರಿಗೂ ಸಹ ಅವಕಾಶವಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಐ.ಸಿ.ಯು.ನಲ್ಲಿ ವಾರ್ಡ್‌ಗಳ ಕೊರತೆಯಾಯಿತು. ಅದಕ್ಕೋಸ್ಕರ ಆಯುಷ್ಮಾನ್ ಭಾರತವನ್ನು ಘೋಷಣೆ ಮಾಡಿದ್ದೆವು. ಅದನ್ನು ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಯಾರೇ ಆದರೂ ಆಸ್ಪತ್ರೆಯಲ್ಲಿ ಆಯುಷ್ಮಾನ್ ಭಾರತ ತೆಗೆದುಕೊಂಡಿದ್ದರೆ, ಅವರಿಗೆ ಉಚಿತವಾಗಿ ಚಿಕಿತ್ಸೆ ಕೊಡುವಂತಹ ವ್ಯವಸ್ಥೆ ಬಂತು. ಆ ಎಲ್ಲಾ ಅಂಕಿಅಂಶಗಳನ್ನು ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಅದಕ್ಕೋಸ್ಕರ ನಾವು ಹೇಳಿರುವುದು ಅರ್ಧ ಗಂಟೆ ಚರ್ಚೆಗೆ ಸರ್ಕಾರ ಸಿದ್ಧವಿದೆ ಎಂದು. ಆದರೆ, ಭಾಷೆಗಳನ್ನು ಬಳಸುವಾಗ ಅವಹೇಳನ ಮಾಡುವಂತಹ ಭಾಷೆಗಳನ್ನು ಬಳಸಬಾರದು.

**ಸಭಾಪತಿಯವರು:–** ಭಾಷೆ ಸರಿಯಾಗಿ ಇರಲಿ. ಹಾಗೆಯೇ ಸುಮ್ಮನೆ ಚರ್ಚೆ ಮಾಡಿದರೆ ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರಿಗೆ ಬುದ್ಧಿ ಇಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಬುದ್ಧಿ ಇಲ್ಲವೆಂದು ಅಲ್ಲ. ಅವರು ಕೇವಲ ತಪ್ಪನ್ನು ಮಾತ್ರ ಹುಡುಕುತ್ತಿದ್ದಾರೆ. ಸದಸ್ಯರಾದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರಿಗೆ ಸರ್ಕಾರ ಮಾಡಿರುವಂತಹ ಒಳ್ಳೆಯ ಅಂಶಗಳನ್ನು ಗಮನಕ್ಕೆ ತರುತ್ತೇವೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ತಪ್ಪುಗಳನ್ನು ಹುಡುಕುವುದೇ ಕೆಲಸ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರು ಒಳ್ಳೆಯ ಕೆಲಸ ಮಾಡಿರುವುದನ್ನು ಹೇಳಲಿ. ಅದನ್ನು ನಾವು ಹೊರಗಡೆ ಹೇಳುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸದಸ್ಯರಾದಂತಹ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಏಕಪಕ್ಷೀಯವಾಗಿ ಮಾತನಾಡಿದ್ದಾರೆ. ಅವರಿಗೆ ಯಾವುದೇ ರೀತಿಯ ಅನುಮಾನವೇ ಬೇಡ. ಈಗ ಕೊರೋನಾ ಬಗ್ಗೆ ಚರ್ಚೆ ಮಾಡುತ್ತೇವೆ. ಕೊರೋನಾವನ್ನು ನಿಭಾಯಿಸುವುದಕ್ಕೆ ಸರ್ಕಾರ ಮತ್ತಷ್ಟು ಒಳ್ಳೆಯ ಕೆಲಸಗಳನ್ನು ಮಾಡಬೇಕಾಗಿತ್ತು ಎಂಬ ಭಾವನೆಯನ್ನು ಒಪ್ಪಿಕೊಳ್ಳುತ್ತೇವೆ. ನಮ್ಮದು ಸಮ್ಮಿಶ್ರ ಸರ್ಕಾರವಲ್ಲ. ಅವರ ಮನಸ್ಸಿನ ಭಾವನೆ ಏನೆಂದರೆ ಕೊರೋನಾ ಬಂದಿರುವುದೇ ಸರ್ಕಾರದಿಂದ ಎಂಬ ಭಾವನೆಯಲ್ಲಿ ಮಾತನಾಡುತ್ತಾರೆ. ಆ ಭಾವನೆಯನ್ನು ಬಿಟ್ಟು ಸ್ವಲ್ಪವಾದರೂ ಸರ್ಕಾರದ ಲೋಪದೋಷಗಳನ್ನು ಹೇಳಲಿ.

**ಶ್ರೀ ಎಂ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾನು ಇರುವಂತಹ ಲೋಪದೋಷಗಳನ್ನೇ ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಿಯಮ 72ರಲ್ಲಿ ಚರ್ಚೆ ಮಾಡಿದಾಗ, ಸರ್ಕಾರವೇ ಹೇಳಿತು ಇದನ್ನು ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳೋಣವೆಂದು ಮತ್ತು ಅದಕ್ಕೆ ಸರ್ಕಾರ ಸಿದ್ಧವಿದೆ ಎಂದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರೆ ನಿಮ್ಮಿಂದಲೇ ಬಂದಿದೆ ಎಂದು ಗೊತ್ತಿರಲಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡಿ. ಆದರೆ ಸರ್ಕಾರವೇ ಕೊರೋನಾವನ್ನು ತಂದಿದೆ ಎಂಬ ಭಾವನೆಯನ್ನು ಬಿಟ್ಟುಬಿಡಿ. ಆದರೆ, ನೀವು ಅದನ್ನು ಬಿಡುತ್ತಿಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ನಡೆದುಕೊಂಡಂತಹ ರೀತಿಯಿಂದ ಈ ರೀತಿಯಾಗಿರುವುದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಎಲ್ಲರನ್ನು ನಿಯಂತ್ರಣ ಮಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಏನನ್ನು ಮಾತನಾಡಬೇಕು ಅದನ್ನೆ ಮಾತನಾಡುತ್ತಿದ್ದೇನೆ. ಸರ್ಕಾರದ ಪರವಾಗಿ ಮಾನ್ಯ ಆರೋಗ್ಯ ಸಚಿವರು ಇಲ್ಲೇ ಕುಳಿತಿದ್ದಾರೆ ಅವರು ನೋಟ್ ಮಾಡಿಕೊಂಡು, ಆಮೇಲೆ ಉತ್ತರ ನೀಡಲಿ. ಎಲ್ಲಾ ಸಚಿವರು ಮಧ್ಯಮಧ್ಯದಲ್ಲಿ ಎದ್ದು ಮಾತನಾಡತಕ್ಕಂಥದ್ದು ಅಂದರೆ, ಅವರು ಆಡಳಿತ ಪಕ್ಷದಲ್ಲಿ ಇದ್ದಾರೋ ವಿರೋಧ ಪಕ್ಷದಲ್ಲಿ ಇದ್ದಾರೋ? ನಾವು ಹೇಳುವುದನ್ನು ಕೇಳುವುದಕ್ಕೆ ತಾಳ್ಮೆ ಇಲ್ಲದೇ ಹೋದರೆ, ನಾವು ಏನನ್ನು ಮಾತನಾಡುವುದಕ್ಕೆ ಆಗುತ್ತದೆ. ನಾವು ಎಷ್ಟು ಗಂಭೀರವಾದಂತಹ ಪ್ರಶ್ನೆಗಳನ್ನು ಕೇಳುತ್ತಿದ್ದೇವೆ. ಅದನ್ನು ಕೇಳುವುದಕ್ಕೂ ಸಹ ಅವರಿಗೆ ತಾಳ್ಮೆ ಇಲ್ಲದೇ ಹೋದರೆ. ಈಗ ಒಬ್ಬ ವ್ಯಕ್ತಿ ಬೆಳಗ್ಗೆ ಆಫೀಸ್‌ಗೆ ಎಂದು ಹೋಗುತ್ತಾನೆ. ಅವನಿಗೆ ಯಾವುದೇ ರೀತಿಯ symptoms ಇರುವುದಿಲ್ಲ. ಅವನು ಆಸ್ಪತ್ರೆಗೆ ಹೋದಾಗ ನಿತ್ರಾಣನಾಗಿ ಸುಸ್ತಾಯಿತು ಎಂದು ಕೆಳಗಡೆ ಬೀಳುತ್ತಾನೆ. ತಕ್ಷಣ ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು. ಆಫೀಸ್‌ನ ವಾಹನದಲ್ಲಿ ಕರೆದುಕೊಂಡು ನಾಲ್ಕೈದು ಕಡೆ ಸುತ್ತುತ್ತಾರೆ. ಅವರನ್ನು ಎಲ್ಲೂ ಕೂಡ ಆಸ್ಪತ್ರೆಗೆ ದಾಖಲು ಮಾಡಿಕೊಳ್ಳುವುದಿಲ್ಲ. ಆಗ ಅವನು ಹಠಾತ್ ಆಗಿ ಸತ್ತು ಹೋಗಿಬಿಡುತ್ತಾನೆ. ಅವನಿಗೆ ಏಳು ಮತ್ತು ಒಂಬತ್ತು ವರ್ಷದ ಮಕ್ಕಳು ಮತ್ತು ಅವನ ಹೆಂಡತಿ ಇದ್ದಾಳೆ. ಬೆಳಿಗ್ಗೆ ಎದ್ದು ಕಚೇರಿಗೆ ಹೋಗುತ್ತೇನೆಂದು ಹೋಗುತ್ತಾನೆ. ಆದರೆ, ನಿನ್ನ ಗಂಡ ತೀರಿಹೋದ ಎಂದು ಮಧ್ಯಾಹ್ನ ಮೂರು ಗಂಟೆಗೆ ಫೋನ್ ಬರುತ್ತದೆ. ಆ ತಾಯಿ ಮತ್ತು ಮಕ್ಕಳಿಗೆ ಏನಾಗಿರಬೇಕೆಂದು ಯೋಚನೆ ಮಾಡಿ. ಇವರನ್ನು ಅವರು ಸತ್ತ ಮೇಲೆ ಕರೆದುಕೊಂಡು ಹೋಗುತ್ತಾರೆ. ಟೆಸ್ಟ್ ಮಾಡಿ ಅವನಿಗೆ corona positive ಇದೆ ಎಂದು ಹೇಳುತ್ತಾರೆ. ಅವನ ದೇಹವನ್ನು ಸಹ ಕೊಡುವುದಿಲ್ಲ. ಅವನ ಹೆಂಡತಿ ಮತ್ತು ಮಕ್ಕಳು ದೇಹವನ್ನು ನೋಡುವುದಕ್ಕೆ ಆಗುವುದಿಲ್ಲ. ಅವನನ್ನು

wrap ನಲ್ಲಿ ಸುತ್ತಿಬಿಟ್ಟಿರುತ್ತಾರೆ. ಅವನ ಮುಖ ನೋಡುವುದಕ್ಕೆ ಬಿಡುವುದಿಲ್ಲ. ದೇಹವನ್ನು ನಿಮಗೆ ಕೊಡುವುದಿಲ್ಲ ನಾವೇ ದಫನ್ ಮಾಡುತ್ತೇವೆಂದು ತೆಗೆದುಕೊಂಡು ಹೋಗಿ, ದಫನ್ ಮಾಡಬೇಕಾದರೆ ಯಾವ ರೀತಿ ಮಾಡುತ್ತಾರೆ ಗೊತ್ತೆ? ಜೆ.ಸಿ.ಬಿ.ಯಲ್ಲಿ ತೆಗೆದುಕೊಂಡು ಹೋಗಿ ಗುಂಡಿ ತೆಗೆದು ದೇಹವನ್ನು ಬಿಸಾಡುತ್ತಾರೆ. ತಂದೆ-ತಾಯಿ ಇಲ್ಲದ ಅನಾಥರುಗಳನ್ನು ಯಾವ ರೀತಿ ಮಣ್ಣು ಮಾಡುತ್ತಾರೋ, ಆ ರೀತಿಯಾಗಿ ಮಣ್ಣು ಮಾಡುತ್ತಾರೆ. ಆಗ ಆ ತಾಯಿ ಮತ್ತು ಮಗು ಏನಾಗಬೇಕು. ಇನ್ನೊಂದು ಆಸ್ಪತ್ರೆಯಲ್ಲಿ, corona positive ಬಂದು ಸತ್ತಂತ ವ್ಯಕ್ತಿಗೆ ಅವನ ದೇಹ ನೋಡುವುದಕ್ಕೆ ಬಿಡುವುದಿಲ್ಲ. ಅವರು ನಮ್ಮಂತಹ ರಾಜಕಾರಣಿಗಳನ್ನು ಕೇಳಿಕೊಂಡು ದಯಮಾಡಿ ನಮಗೆ ದೇಹ ಕೊಡಿಸಿ, ನಾವೇ ದಫನ್ ಮಾಡಿಸುತ್ತೇವೆಂದು ಹೇಳುತ್ತಾರೆ. ಯಾರದೋ ಶಿಫಾರಸ್ಸಿನ ಮೇಲೆ ಎರಡು ದಿನ ಆದ ಮೇಲೆ ಅವರ ಕುಟುಂಬದವರಿಗೆ ದೇಹವನ್ನು ಕೊಡುತ್ತಾರೆ. ದೇಹವನ್ನು ತೆಗೆದುಕೊಂಡು ದಫನ್ ಮಾಡುವುದಕ್ಕೆ ಎಲ್ಲಾ ರೀತಿಯ ಪೂಜೆ ಪುನಸ್ಕಾರ ಮತ್ತು ಸಂಪ್ರದಾಯದ ಪ್ರಕಾರ ಎಲ್ಲವನ್ನು ಮಾಡುತ್ತಾರೆ. ಕೊನೆಯದಾಗಿ ಮುಖ ನೋಡೋಣವೆಂದು ಆ ಮುಖದ ಮೇಲೆ ಇರುವುದನ್ನು ತೆಗೆದರೆ, ದೇಹ ಅವರದ್ದಲ್ಲ. ಯಾರದೋ ಬೇರೆ ದೇಹ ಬಂದಿದೆ. ಆ ದೇಹಕ್ಕೆ ಅವರ ಹೆಂಡತಿ ಮತ್ತು ಮಕ್ಕಳು ಸಂಪ್ರದಾಯದ ಪ್ರಕಾರ ಪೂಜೆ ಮಾಡಿ, ಯಾರದೋ ದೇಹಕ್ಕೆ ಇವರೆಲ್ಲಾ ಕಣ್ಣೀರು ಸುರಿದು ಮಣ್ಣು ಮಾಡಬೇಕೆಂದು ಹೋದಂತಹ ಸಂದರ್ಭದಲ್ಲಿ ಬೇರೆ ದೇಹ ಸಿಗುತ್ತದೆ. ಇದು ಸ್ವಾಮಿ ವ್ಯವಸ್ಥೆ. ನಾನು ಇದನ್ನು ಹೇಳಬೇಕೆಂದು ಮಾತನಾಡುತ್ತಿರುವುದು. ನಾನು ಮಾತನಾಡುತ್ತಿರುವುದು ರಾಜಕಾರಣ ಮಾಡುವುದಕ್ಕೆ ಅಲ್ಲ. ಇವತ್ತು ‘ಹೈಕೋರ್ಟ್ ಪಾಲಿಕೆಗೆ ಹಿಗ್ಗಾಮುಗ್ಗಾ ತರಾಟೆ’ ಪತ್ರಿಕಾ ವರದಿ ನೋಡಿ. ಇದನ್ನು ನಾನು ಹೇಳಿದ್ದೇನೆಯೇ? ಹೈಕೋರ್ಟ್ ಆ ರೀತಿ ಏಕೆ ಹೇಳಿತು?

**(ಮುಂದು...)**

(772) 22.09.2020 04.30 LL-BNS

**ಸಭಾಪತಿಯವರ ಉಪಸ್ಥಿತಿ**

**ಶ್ರೀ ಎಂ. ನಾರಾಯಣಸ್ವಾಮಿ(ಮುಂದುವರೆದಿದ್ದು...)**

ಬೆಂಗಳೂರು ಮಹಾನಗರ ಇಂದು ವಿಶ್ವವಿಖ್ಯಾತವಾದಂತಹ ನಗರವಾಗಿದೆ. ಕಟ್ಟಡ ಕಾರ್ಮಿಕರು, ವಲಸೆ ಕಾರ್ಮಿಕರು ಬೇರೆ ಬೇರೆ ರಾಜ್ಯಗಳಿಂದ ಬೇರೆ ಬೇರೆ ಜಿಲ್ಲೆಗಳಿಂದ ಬೆಂಗಳೂರು ಮಹಾನಗರಕ್ಕೆ ಬಂದಿದ್ದರು. ಕೆಲವು ಕಾರ್ಮಿಕರು ಕಟ್ಟಡಗಳನ್ನು ಕಟ್ಟುತ್ತಿದ್ದರು ಹಾಗೂ ಇನ್ನಿತರ ಕೂಲಿ ಕೆಲಸಗಳನ್ನು ಮಾಡುತ್ತಿದ್ದರು. ಕೊರೊನಾ ಬಂದು, ಕೆಲಸ ಕಾರ್ಯಗಳು ನಿಂತು ಹೋಯಿತು. ಇದರಿಂದಾಗಿ, ಅವರಿಗೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊಟ–ಉಪಚಾರ ಇಲ್ಲದಂತಾಯಿತು. ಕೆಲವು ಎನ್‌ಜಿಓಗಳು, ನಮ್ಮಂತಹವರು, ಬೇರೆ ಸಂಘ–ಸಂಸ್ಥೆಗಳವರು ಅವರಿಗೆ ಊಟ–ಉಪಚಾರಗಳನ್ನು ಸ್ವಲ್ಪ ದಿವಸ ಕೊಟ್ಟರು. ಕಾರ್ಪೋರೇಷನ್ ವತಿಯಿಂದ, ಕಾರ್ಮಿಕ ಇಲಾಖೆ ವತಿಯಿಂದ ಅವರಿಗೆ ಆಹಾರದ ಕಿಟ್‌ಗಳನ್ನು ಕೊಡಬೇಕೆಂದು ಸಾವಿರಾರು ಕಿಟ್‌ಗಳನ್ನು ತಯಾರು ಮಾಡಿದರು. ನನ್ನ ಕ್ಷೇತ್ರವಾದ ಕೆ.ಆರ್. ಪುರಂನ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಆ ಸಾವಿರಾರು ಆಹಾರ ಕಿಟ್‌ಗಳನ್ನು ತೆಗೆದುಕೊಂಡು ಹೋಗಿ ಕಲ್ಯಾಣ ಮಂಟಪಗಳಲ್ಲಿ ಸ್ಟಾಕ್ ಮಾಡಿಕೊಳ್ಳುತ್ತಾರೆ. ಸರ್ಕಾರದಿಂದ ಕೊಟ್ಟಿರತಕ್ಕಂತಹ ಆಹಾರ ಕಿಟ್‌ನ ಲೇಬಲ್ ಕಿತ್ತು ಹಾಕಿ, ತಮ್ಮ ಭಾವಚಿತ್ರಗಳನ್ನು ಅಂಟಿಸಿ, ಹಂಚುವುದಕ್ಕೆ ಹೋಗುತ್ತಾರೆ. ಅದನ್ನು ನಾನು ಪತ್ತೆ ಮಾಡಿ ಹಿಡಿದೆನು. ಆ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಸ್ಥಳಕ್ಕೆ ಭೇಟಿ ನೀಡಿದರು. ನಂತರ ಆ ಘಟನೆ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದು, ಎಫ್.ಐ.ಆರ್. ಮಾಡಬೇಕೆಂದು ಹೇಳಿದರೂ ಇದುವರೆವಿಗೂ ಎಫ್.ಐ.ಆರ್. ದಾಖಲು ಮಾಡಿರುವುದಿಲ್ಲ. ಆ ನಂತರ, ಬೆಂಗಳೂರು ಮಹಾನಗರ ಸೇರಿದಂತೆ, ಇಡೀ ಕರ್ನಾಟಕ ರಾಜ್ಯಕ್ಕೆ ಸುಮಾರು 10 ಲಕ್ಷ ಜನರಿಗೆ ಆಹಾರದ ಕಿಟ್‌ಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ಆ ಒಂದೊಂದು ಕಿಟ್‌ಗಳಲ್ಲಿ ಏನಿತ್ತು ಎಂದು ಸರ್ಕಾರದ ವತಿಯಿಂದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಸಲ್ಲಿಸಿರುವುದನ್ನು ನಾನು ಉಲ್ಲೇಖ ಮಾಡುತ್ತಿದ್ದೇನೆ. ಆಹಾರದ ಕಿಟ್‌ನಲ್ಲಿ 5 ಮೂಸಂಬಿ ಹಣ್ಣು, 2 ಬಾಳೆಹಣ್ಣು, ಅರ್ಧ ಲೀಟರ್ ಸಾಮರ್ಥ್ಯದ 2 ಬಾಟಲ್ ನೀರು, ರೊಟ್ಟಿ, ಸಬ್ಜಿ ಮತ್ತು ಒಂದು ಕಪ್ ಅನ್ನ ನೀಡಿರುತ್ತಾರೆ. ಈ ಒಂದು ಆಹಾರದ ಕಿಟ್‌ಗೆ 1200 ಬೆಲೆ ಹಾಕಿರುತ್ತಾರೆ. ಯಾವ ಫೈವ್ ಸ್ಟಾರ್ ಹೋಟೆಲ್ ಕೂಡ ಇಷ್ಟು ಚಾರ್ಜ್ ಮಾಡುವುದಿಲ್ಲ. 5 ಮೂಸಂಬಿ ಹಣ್ಣಿನಂತೆ, 10 ಲಕ್ಷ ಜನರಿಗೆ ಎಂದರೆ... ಮೂಸಂಬಿ ಹಣ್ಣಿನ ಸರಿಯಾದ ಫಿಗರ್ ಅನ್ನು ನಂತರ ಪರಿಶೀಲಿಸಿ ಹೇಳುತ್ತೇನೆ. ಸುಮಾರು ನಾಲ್ಕೂವರೆ ಕೋಟಿ ಮೂಸಂಬಿ ಹಣ್ಣುಗಳನ್ನು ತರಬೇಕಾಗುತ್ತದೆ. ಅಂದರೆ, ಮೂಸಂಬಿ ಹಣ್ಣಿನ ಒಂದು ದೊಡ್ಡ ಪರ್ವತ ಆಗುತ್ತದೆ. ಆದಾಗ್ಯೂ, ಇದು ಮೂಸಂಬಿ ಹಣ್ಣಿನ ಸೀಸನ್ ಕೂಡ ಅಲ್ಲ. ಸುಳ್ಳು ಹೇಳಬೇಕಾದರೂ ನಂಬುವ ರೀತಿಯಲ್ಲಿ ಸುಳ್ಳು ಹೇಳಬೇಕು. ಅಲ್ಲದೇ, ಇದು ಮೂಸಂಬಿ ಹಣ್ಣು ಬೆಳೆಯುವ ಸಮಯ ಅಲ್ಲ. ಆದರೆ, ಸರ್ಕಾರದವರು ನಾಲ್ಕೂವರೆ ಕೋಟಿ ಮೂಸಂಬಿ ಹಣ್ಣುಗಳನ್ನು ತಂದು ಬಡವರಿಗೆ ಕೊಟ್ಟಿದ್ದೇವೆ ಎನ್ನುವುದನ್ನು ತೋರಿಸುತ್ತಾರೆ. ವಲಸೆ ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ಊಟ–ಉಪಚಾರ ಕೊಟ್ಟಿದ್ದರೆ ಯಾರೂ ಕೂಡ ಬೆಂಗಳೂರು ನಗರವನ್ನು ಬಿಟ್ಟು ಹೊರಗೆ ಹೋಗುತ್ತಿರಲಿಲ್ಲ. ಅವರು ಯಾವ ರೀತಿಯಲ್ಲಿ ಹೋದರು ಎಂದರೆ, ಬೆಂಗಳೂರಿನಿಂದ ಬೀದರ್ ಜಿಲ್ಲೆಗೆ, ಬಳ್ಳಾರಿ ಜಿಲ್ಲೆಗೆ, ರಾಯಚೂರು ಜಿಲ್ಲೆಗೆ ಕಾಲ್ನಡಿಗೆಯಲ್ಲಿ ಹೋದರು. ಅವರಿಗೆ ಬಸ್ ವ್ಯವಸ್ಥೆ ಅಥವಾ ಇನ್ನಿತರ ವ್ಯವಸ್ಥೆ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ದಾರಿಯಲ್ಲಿ ನಡೆದುಕೊಂಡೇ ತಮ್ಮ ಊರಿಗೆ ಹೋದರು. ಇನ್ನೂ ನಮಗೆ ಬೆಂಗಳೂರಿನ ಸಹವಾಸ ಬೇಡವೆಂದು ಪಾತ್ರೆ-ಪಗಡೆಗಳನ್ನು ಮೂಟೆ ಕಟ್ಟಿಕೊಂಡು ತಲೆ ಮೇಲಿಟ್ಟುಕೊಂಡು, ಹೊಟ್ಟೆಯಲ್ಲಿ ಒಂದು ಮಗು, ಕಂಕುಳಿನಲ್ಲಿ ಒಂದು ಮಗು, ಕೈಯಲ್ಲಿ ಒಂದು ಮಗು ಇಟ್ಟುಕೊಂಡು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರೆ ಕರುಳು ಕಿತ್ತು ಬರುತ್ತದೆ. ಅವರು ಊಟವನ್ನು ಮಾಡದೇ 3-4 ದಿವಸ ನಡೆದುಕೊಂಡೇ ಹೋದರು. ಇನ್ನೂ ಸ್ನಾನ ಮಾಡುವ ವಿಷಯ ಬೇಡ. ಇದಕ್ಕೆ ಯಾರು ಹೊಣೆ? ಇಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ, ವಲಸೆ ಕಾರ್ಮಿಕರಿಗೆ ಊಟದ ವ್ಯವಸ್ಥೆ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ, ಅವರು ರಸ್ತೆಯಲ್ಲಿ ನಡೆದುಕೊಂಡೇ ಹೋದರು. ಇದಕ್ಕೆ ಸಂಬಂಧಪಟ್ಟಂತೆ, ಒಂದು ಮನಕಲಕುವಂತಹ ಒಂದು ಉದಾಹರಣೆ ಹೇಳುವುದಕ್ಕೆ ಬಯಸುತ್ತೇನೆ. ಬೆಂಗಳೂರಿನಿಂದ ರಾಯಚೂರು ತನಕ ತಂದೆ-ತಾಯಿ ಮತ್ತು 12 ವರ್ಷದ ಒಂದು ಹೆಣ್ಣುಮಗು ಸೇರಿದ ಒಂದು ಕುಟುಂಬ ನಡೆದುಕೊಂಡು ಹೋದರು. ಅವರು ತಮ್ಮ ಮನೆ ತಲುಪುವುದಕ್ಕೆ ಇನ್ನೂ ಕೇವಲ 20 ಕಿಲೋಮೀಟರ್ ಇದೆ, ಇನ್ನೂ ಒಂದು ದಿವಸದಲ್ಲಿ ಮನೆ ಸೇರುತ್ತೇನೆಂಬ ಸಂತೋಷದಿಂದ ಹೋಗುತ್ತಿರುತ್ತಾರೆ. ಸುಮಾರು 15-20 ದಿನಗಳಿಂದ ಅವರು ನಡೆದುಕೊಂಡು ಹೋಗಿದ್ದಾರೆ. ಇನ್ನೇನು ತಮ್ಮ ಮನೆ ಸಿಗುತ್ತಿದೆಯೆಂಬ ಸಂತೋಷ ಒಂದು ಕಡೆ ಇದೆ. ಆದರೆ, 12 ವರ್ಷದ ಮಗು ರಸ್ತೆಯಲ್ಲಿಯೇ ಸತ್ತು ಹೋಗುತ್ತದೆ. ಅದಕ್ಕೆ ಯಾರು ಹೊಣೆ? ಒಂದು ಕುಟುಂಬ ಅಂದರೆ, ಗಂಡ-ಹೆಂಡತಿ ಸುಮಾರು 5-6 ವರ್ಷಗಳಿಂದ ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದವರು, ಇದೇ ರೀತಿ ನಡೆದುಕೊಂಡು ಹೋಗುತ್ತಾರೆ. ಇನ್ನೇನು ತಮ್ಮ ಊರು ಹತ್ತಿರ ಬರುತ್ತಿದ್ದಂತೆ, ಆತ ನಾವು ಊರಿಗೆ ಹೋದಮೇಲೆ ಬದುಕುವುದಕ್ಕೆ ನಮಗೆ ಯಾವ ದಾರಿ ಇದೆ, ಬೆಂಗಳೂರಿನಲ್ಲಿ ಕೂಲಿ ಮಾಡಿ ಬದುಕುತ್ತಿದ್ದೆ, ಗಂಜಿ ಕುಡಿಯುತ್ತಿದ್ದೆ, ನಾನು ಊರಿಗೆ ಹೋದಮೇಲೆ ಏನು ಮಾಡುವುದಕ್ಕಾಗುತ್ತದೆ ಎಂದು ಏನು ಯೋಚನೆ ಮಾಡಿದನೋ ಗೊತ್ತಿಲ್ಲ, ಗಂಡ-ಹೆಂಡತಿ ಇಬ್ಬರೂ ರಸ್ತೆ ಬದಿಯ ಮರಕ್ಕೆ ನೇಣು ಹಾಕಿಕೊಂಡು ಸಾಯುತ್ತಾರೆ. ಇದಕ್ಕೆ ಯಾರು ಹೊಣೆ? ಇವೊತ್ತಿನ ದಿವಸ ಮಾನ್ಯ ಸಚಿವರು ಮಾತನಾಡುತ್ತಾ, ಕೇವಲ 7 ಸಾವಿರ ಜನ ಸತ್ತಿದ್ದಾರೆಂದು ಹೇಳಬೇಕೆಂದು ಹೇಳಿದರು. ನಮ್ಮ ನೆಂಟರು ಯಾರಾದರೂ ಸತ್ತಿದ್ದರೆ ಆ ನೋವು ಏನೆಂದು ನಮಗೆ ಗೊತ್ತಾಗುತ್ತಿತ್ತು. ಯಾರೋ ಸತ್ತರು ಅಂತಲೇ, ಹಾಗಾದರೆ, ಅವರು ಸತ್ತಿರುವುದಕ್ಕೆ ಬೆಲೆ ಇಲ್ಲವೇ? ಈ ರೀತಿಯ ಬೇಜವಾಬ್ದಾರಿಯ ಉತ್ತರವನ್ನು ಮಾನ್ಯ ಸಚಿವರು ಕೊಡಬಾರದು. ಈ ರೀತಿಯ ಉತ್ತರವನ್ನು ನಾನು ಅವರಿಂದ ನಿರೀಕ್ಷೆ ಮಾಡಿರಲಿಲ್ಲ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಷಯಾಂತರ ಮಾಡಬಾರದು. ಅವರು ಹೇಳಿದ ಪ್ರಕಾರವೇ ಇದ್ದಿದ್ದರೆ, ಒಂದೊಂದು ಸಾವಿನ ಕುಟುಂಬಕ್ಕೂ ದುಃಖ ಇದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರದವರು ಈ ರೀತಿಯಾಗಿ ಮನಬಂದಂತೆ ಮಾತನಾಡುತ್ತಿದ್ದರೆ, ಏನು ಹೇಳಬೇಕೆಂದು ನಮಗೆ ಗೊತ್ತಾಗುತ್ತಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಆ ಸಾವು ಯಾರಿಗೂ ಬರಬಾರದು. ಆದರೆ, ಅವರ ರೀತಿಯಲ್ಲಿ ಸಾವಿನಲ್ಲಿ ರಾಜಕೀಯ ದುರುದ್ದೇಶ ನಮಗೆ ಇಲ್ಲ. ಹೆಣದ ಮೇಲೆ ರಾಜಕಾರಣ ಮಾಡುವಂತಹ ನೀಚತನ ನಮಗೆ ಇಲ್ಲ. ಹೆಣದ ಮೇಲೆ ರಾಜಕಾರಣ ಮಾಡುವಂತಹ ನೀಚತನ ಅವರದ್ದು.

**(ಗೊಂದಲ)**

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಸರ್ಕಾರದವರದ್ದು ಹಣದ ರಾಜಕಾರಣ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಇದರಲ್ಲಿ ಕೇವಲ ಉದಾಹರಣೆಗಳನ್ನು ಕೊಟ್ಟಿದ್ದೇನಷ್ಟೇ. ಈ ರೀತಿಯ ಸಾವಿರಾರು ಕುಟುಂಬಗಳು ಇವೊತ್ತಿನ ದಿವಸ ಬೀದಿ ಪಾಲಾಗಿ ತಮ್ಮ ಬದುಕನ್ನು ನಾಶ ಮಾಡಿಕೊಂಡು, ಇನ್ನೂ ಮುಂದೆ ತಮಗೆ ಜೀವನವೇ ಇಲ್ಲವೆಂದು ತೀರ್ಮಾನಕ್ಕೆ ಬಂದಿರುವಂತಹ ಬಡ ಕುಟುಂಬಗಳು ಇವೆ. ಮತ್ತೊಂದು ತಂಡದವರು ನಮ್ಮ ರಾಜ್ಯದವರು ಅಲ್ಲದೇ ಇರಬಹುದು, ಅವರು ಇದೇ ರೀತಿಯಾಗಿ ರಸ್ತೆಯಲ್ಲಿ ನಡೆದುಕೊಂಡು ಹೋದರೆ, ರಸ್ತೆಗಳು ಅಡ್ಡಾದಿಡ್ಡಿ ಇದ್ದು ದೂರ ಆಗಬಹುದೆಂದು, ರೈಲ್ವೇ ಹಳಿ ಮುಖಾಂತರ ಹೋದರೆ ಸ್ವಲ್ಪ straight ಆಗಿ ಇರುತ್ತದೆ, ನಾವು ಬೇಗನೆ ಮನೆಗೆ ಹೋಗಬಹುದೆಂದು ರೈಲ್ವೇ ಹಳಿ ಮೇಲೆ ನಡೆದುಕೊಂಡು ಹೋಗುತ್ತಿದ್ದರು. ಈ ರೀತಿ 5–6 ದಿನಗಳ ಕಾಲ ನಡೆದುಕೊಂಡು ಹೋದ ನಂತರ, ಒಂದು ದಿನ ರಾತ್ರಿ ರೈಲ್ವೇ ಟ್ರ್ಯಾಕ್ ಮೇಲೆ ತಮ್ಮ ಕುತ್ತಿಗೆಯನ್ನು ದಿಂಬು ರೀತಿಯಲ್ಲಿ ಮಾಡಿಟ್ಟುಕೊಂಡು, ಮಲಗಿ ಸುಖ ನಿದ್ದೆಯಲ್ಲಿದ್ದಂತಹ ಸಂದರ್ಭದಲ್ಲಿ ರೈಲು ಅವರ ಮೇಲೆ ಹರಿದು ಸುಮಾರು 13 ಜನ ಸ್ಥಳದಲ್ಲಿಯೇ ಸತ್ತು ಹೋದರು. ಸನ್ಮಾನ್ಯ ಸಾರಿಗೆ ಸಚಿವರು ಈ ಸದನದಲ್ಲಿಯೇ ಇದ್ದಾರೆ. ಸರ್ಕಾರಕ್ಕೆ ನಾವು ಪರಿ ಪರಿಯಾಗಿ ಬೇಡಿಕೊಂಡೆವು. ಅದೇನೆಂದರೆ, ಲಾಕ್‌ಡೌನ್ ಮಾಡುವುದಕ್ಕಿಂತಲೂ ಮುಂಚಿತವಾಗಿ ಒಂದು ವಾರಗಳ ಕಾಲ ಯಾರ್‍ಯಾರು ವಲಸೆ ಕಾರ್ಮಿಕರು ಅಥವಾ ಇನ್ನಿತರರು ತಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊರುಗಳಿಗೆ ಹೋಗುವುದಕ್ಕೆ ಉಚಿತವಾಗಿ ನಾವು ಸಾರಿಗೆ ವ್ಯವಸ್ಥೆ ಮಾಡಬೇಕೆಂದು ಕೇಳಿದರೂ ಅವರು ಮಾಡಲಿಲ್ಲ. ಬದಲಾಗಿ, ಅವರು ತಮ್ಮ ಊರಿಗೆ ಹೋಗುವುದಕ್ಕೆ ಬಸ್ ವ್ಯವಸ್ಥೆ ಮಾಡಿದರು. ಬೆಂಗಳೂರಿನಿಂದ ಬಳ್ಳಾರಿಗೆ 500 ರೂಪಾಯಿ ಇದ್ದಂತಹ ಬಸ್ ಟಿಕೆಟ್ ದರ ಮೂರು ಪಟ್ಟು ಅಂದರೆ, 1500 ರೂಪಾಯಿ ದರ ನಿಗದಿ ಮಾಡಿದರು. ಅದರಲ್ಲಿಯೂ ಕೊರೊನಾದಂತಹ ಸಂದರ್ಭದಲ್ಲಿ, ಉಚಿತವಾಗಿ ಕಳುಹಿಸುವಂತಹ ಸಂದರ್ಭದಲ್ಲಿ ಒಂದು ಟಿಕೆಟ್‌ಗೆ ಮೂರು ಪಟ್ಟು ಜಾಸ್ತಿ ಮಾಡಿದರು. ಆದರೆ, ಜನ ಮೆಜೆಸ್ಟಿಕ್ ಬಸ್ ಸ್ಟ್ಯಾಂಡ್‌ನಲ್ಲಿ ಸುಮಾರು 3-4 ದಿನಗಳ ಕಾಲ ಊಟ-ಉಪಚಾರ ಇಲ್ಲದೇ ಬೀದಿಯಲ್ಲಿ ಮಲಗಿದ್ದರು. ಆ ಸಂದರ್ಭದಲ್ಲಿ ನಮ್ಮ ಪಕ್ಷದ ಎಲ್ಲಾ ಮುಖಂಡರು ಅಲ್ಲಿಗೆ ಹೋಗಿ, ಇವರೆಲ್ಲರಿಗೂ ಎಷ್ಟು ಟಿಕೆಟ್ ಹಣ ಆಗುತ್ತದೆ, ಅಷ್ಟು ಹಣವನ್ನು ಕೆ.ಪಿ.ಸಿ.ಸಿ. ವತಿಯಿಂದ ನಾವು ಕೊಡುತ್ತೇವೆಂದು ಹೇಳಿ 1 ಕೋಟಿ ರೂಪಾಯಿಗಳ ಚೆಕ್ ನೀಡುತ್ತೇವೆಂದು ಬನ್ನಿ ಎಂದು ಕೆ.ಎಸ್.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕರಿಗೆ ಫೋನ್ ಮಾಡಿ ಹೇಳಿದೆವು. ಅದಕ್ಕೆ ಅವರು, ನಾನು ಬಸ್ ನಿಲ್ದಾಣದಲ್ಲಿಯೇ ಇದ್ದೇನೆಂದು ಹೇಳಿ ನಮ್ಮನ್ನು ಕರೆದರು. ಆಗ ಸನ್ಮಾನ್ಯ ಸಿದ್ದರಾಮಯ್ಯನವರು, ಶ್ರೀ ಡಿ.ಕೆ. ಶಿವಕುಮಾರ್ ಮತ್ತು ನಾವೆಲ್ಲರೂ 1 ಕೋಟಿ ರೂಪಾಯಿಗಳ ಚೆಕ್ ಜೊತೆಗೆ ನಾವು ಅಲ್ಲಿಗೆ ಹೋದೆವು. ಅಷ್ಟರಲ್ಲಿ ಸರ್ಕಾರದ ವತಿಯಿಂದ ಅವರಿಗೆ ಯಾವ ಮಾಹಿತಿ ಹೋಗಿತ್ತೋ ಅದು ನಮಗೆ ಗೊತ್ತಿಲ್ಲ. ಅಲ್ಲಿಂದ ಅವರು ಜಾಗ ಖಾಲಿ ಮಾಡಿ ಕೆಂಗೇರಿಗೆ ಹೋಗಿದ್ದರು. ಆ ದಿನ ಸರ್ಕಾರಕ್ಕೆ ಮುಜುಗರ ಆಯಿತು. ವಿರೋಧ ಪಕ್ಷದವರು ಬಂದು 1 ಕೋಟಿ ರೂಪಾಯಿಗಳ ಚೆಕ್ ಕೊಡುತ್ತಿದ್ದಾರೆಂದು, ನಾವು ಏನಾದರೂ ಮಾಡಬೇಕೆಂದು ತೀರ್ಮಾನ ಮಾಡಿ, ವಲಸೆ ಕಾರ್ಮಿಕರಿಗೆ 3 ದಿನಗಳ ಕಾಲ ಉಚಿತವಾಗಿ ಪ್ರಯಾಣ ಕೊಡುತ್ತೇವೆಂದು ಹೇಳಿದರು. ಅದಕ್ಕೆ ನಾವು 3 ದಿನಗಳ ಕಾಲ ಸಾಕಾಗುವುದಿಲ್ಲ, ಅದನ್ನು 1 ವಾರಕ್ಕೆ ಹೆಚ್ಚಿಸಬೇಕೆಂದು ಆಗ್ರಹ ಮಾಡಿದೆವು. ನಮ್ಮ ಮಾತನ್ನು ಗೌರವಿಸಿ, ಸನ್ಮಾನ್ಯ ಸಾರಿಗೆ ಸಚಿವರು 1 ವಾರಗಳ ಕಾಲ ಉಚಿತವಾದ ಪ್ರಯಾಣವನ್ನು ಆ ವಲಸೆ ಕಾರ್ಮಿಕರಿಗೆ ಮಾಡಿಕೊಟ್ಟರು. ಇದು ಪರಿಸ್ಥಿತಿ ಇದೆ. ಈ ರೋಗ ಜನವರಿಯಲ್ಲಿ ಪ್ರಾರಂಭವಾದಾಗ ಜೂನ್ ಅಥವಾ ಜುಲೈ ತಿಂಗಳಿನಲ್ಲಿ ಮುಕ್ತಾಯವಾಗುತ್ತದೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಿನಲ್ಲಿ ಮುಕ್ತಾಯವಾಗುತ್ತದೆಯೆಂದು ಜನರು ಏನು ಹೇಳುತ್ತಿದ್ದರು, ಅದು ಈ ರೋಗಕ್ಕೆ ವ್ಯಾಕ್ಸಿನೇಷನ್ ಬರುವವರೆಗೂ ಇದು ಮುಕ್ತಾಯವಾಗುವುದಿಲ್ಲ. ಇದು ಇನ್ನೂ ಜಾಸ್ತಿಯಾಗುತ್ತಲೇ ಇರುತ್ತದೆ. ಕರ್ನಾಟಕದಲ್ಲಿ ಒಂದು ದಿನಕ್ಕೆ 10 ಸಾವಿರ ಹೊಸ ಕೋವಿಡ್-19 ಪ್ರಕರಣಗಳು ಆಗುತ್ತಿವೆ, ಬೆಂಗಳೂರು ಮಹಾನಗರದಲ್ಲಿ ಸುಮಾರು 3 ಸಾವಿರದಿಂದ 4 ಸಾವಿರ ಹೊಸ ಕೋವಿಡ್-19 ಪಾಸಿಟಿವ್ ಪ್ರಕರಣಗಳು ಆಗುತ್ತಿವೆ. ಇವರುಗಳಿಗಾಗಿ ಎಲ್ಲಿಂದ ಆಸ್ಪತ್ರೆಗಳು ತರುತ್ತಾರೆ? ಮೊದಲನೆ ಬಾರಿಗೆ ನಡೆದ ಸರ್ವ ಪಕ್ಷ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭೆಯಲ್ಲಿ ನಾನು ಮುಖ್ಯಮಂತ್ರಿಯವರಿಗೆ ತುಮಕೂರು ರಸ್ತೆಯಲ್ಲಿ ಅಂತರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರ ಇದೆ, ಅಲ್ಲಿ ಎಲ್ಲಾ infrastructure ಇದೆ, ಅಲ್ಲಿ ಕೇವಲ ಬೆಡ್‌ಗಳನ್ನು ಹಾಕಿದರೆ ಸಾಕು, ಅಲ್ಲಿ ಸಾವಿರಾರು ರೋಗಿಗಳಿಗೆ ಒಂದೇ ಕಡೆ ಚಿಕಿತ್ಸೆ ನೀಡಬಹುದೆಂದು ಸಲಹೆ ನೀಡಿದೆನು. ನಾವು ಹೇಳಿದ 3 ತಿಂಗಳ ತರುವಾಯ ಆ ಬಗ್ಗೆ ಕಾರ್ಯೋನ್ಮುಖರಾದರು. ಅದರ ಜಾಹೀರಾತಿಗಾಗಿ ಎಷ್ಟು ಹಣ ಖರ್ಚು ಮಾಡಿದರೆಂದರೆ,... 10100 ಬೆಡ್‌ಗಳ ಆಸ್ಪತ್ರೆಯನ್ನು ಬೆಂಗಳೂರು ಅಂತರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಒಂದೇ ಜಾಗದಲ್ಲಿ ಮಾಡುತ್ತೇವೆಂದು ಘೋಷಣೆಗಳನ್ನು ಮಾಡಿದರು. ಅಲ್ಲಿ ಅವಕಾಶ ಇದ್ದದ್ದು, ಕೇವಲ 4 ಸಾವಿರ ಬೆಡ್ ಸಾಮರ್ಥ್ಯಕ್ಕೆ. ಆದರೆ, ಬೆಡ್‌ಗಳನ್ನು ಬಾಡಿಗೆ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಒಂದು ಬೆಡ್‌ಗೆ ಒಂದು ದಿವಸಕ್ಕೆ 800 ರೂಪಾಯಿ ಬಾಡಿಗೆ. ಅದಕ್ಕೆ ಕಂಟ್ರಾಕ್ಟರ್ ಯಾರು ಎಂದರೆ, ಶ್ರೀ ಅಬ್ಬಾಸ್ ಎಂಬುವವರು ಬೆಂಗಳೂರು ಅರಮನೆ ಮೈದಾನದಲ್ಲಿ ಮದುವೆ ಸಮಾರಂಭಗಳಿಗೆ ಟೆಂಟ್ ಹೊಡೆಯುವವರು. ಒಂದು ಮೆಟಲ್ ಕಾಟ್, ಬೆಡ್ ಮತ್ತು ಅದರ ಮೇಲೆ ಬೆಡ್‌ಶೀಟ್, ಒಂದು ದಿಂಬು, ಪಕ್ಕದಲ್ಲಿ ಒಂದು ಫ್ಯಾನ್ ಇಷ್ಟಕ್ಕೆ ಎಷ್ಟು ಖರ್ಚಾಗುತ್ತದೆಂದು ನಾವು ಮತ್ತು ಶ್ರೀ ಸಿದ್ದರಾಮಯ್ಯನವರು ಕೇಳಿದಾಗ, ಅದಕ್ಕೆ ಅವರು 8 ಸಾವಿರದಿಂದ 9 ಸಾವಿರ ಖರ್ಚಾಗುತ್ತದೆಯೆಂದು ಹೇಳಿದರು.

(ಮುಂದುವರೆದಿದೆ...)

(773)22.09.2020/4.40/ವೈಎಲ್-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾರಾಯಣಸ್ವಾಮಿ(ಮುಂದು):-**

ಸರ್ಕಾರ ಏತಕ್ಕೆ ಅದನ್ನು ತೆಗೆದುಕೊಳ್ಳಲಿಲ್ಲ. ಒಂದು ದಿವಸಕ್ಕೆ 800 ರೂಪಾಯಿಯಂತೆ 100 ದಿವಸಗಳ ಕಾಲ ನಿಮ್ಮ ಹತ್ತಿರ ತೆಗೆದುಕೊಳ್ಳುತ್ತೇವೆ ಎಂದು ಸರ್ಕಾರ ಒಪ್ಪಂದ ಮಾಡಿಕೊಂಡಿತು. 9000 ರೂಪಾಯಿಗಳಿಗೆ ಒಂದು ಸೆಟ್ ಬರುತ್ತದೆ. Lumpsum ನಲ್ಲಿ ತೆಗೆದುಕೊಂಡರೆ ಇನ್ನೂ ಕಡಿಮೆ ಮೊತ್ತಕ್ಕೆ ಸಿಗುತ್ತಿತ್ತು. ಇದರಲ್ಲಿ ಎಷ್ಟು ಗೋಲ್‌ಮಾಲ್ ಆಯಿತು. ಕೊರೋನಾ ಕಾಯಿಲೆ ಹೋದ ಮೇಲೆ ತೆಗೆದುಕೊಂಡಿರುವ ಹಾಸಿಗೆಗಳನ್ನು ಏನು ಮಾಡುತ್ತೀರಿ ಎಂದು ಕೇಳಿದ್ದಕ್ಕೆ, ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ಹಾಸ್ಟೆಲ್‌ಗಳಿಗೆ ಈ ಹಾಸಿಗೆಗಳನ್ನು ಒದಗಿಸುತ್ತೇವೆ ಎಂದು ಹೇಳಿದರು. ಮಾಜಿ ಸಚಿವರಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಶ್ರೀಮಂತರ ಮಕ್ಕಳೆಲ್ಲಾ ದೊಡ್ಡ-ದೊಡ್ಡ ಆಸ್ಪತ್ರೆಯಲ್ಲಿ, five star hotel ನಲ್ಲಿ ಇರಬೇಕು. ಯಾರೋ ಕೋವಿಡ್ ರೋಗಿ ಮಲಗಿರುವಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಸಿಗೆಯನ್ನು ತೆಗೆದುಕೊಂಡು ಹೋಗಿ ಬಡ ಮಕ್ಕಳ ಹಾಸ್ಟೆಲ್‌ಗೆ ಹಾಕಬೇಕಾ! ಎಂದು ಕೇಳಿದರು. ಅದಕ್ಕೆ ತಕ್ಷಣ ಮುಖ್ಯಮಂತ್ರಿಗಳು ಎಚ್ಚೆತ್ತುಕೊಂಡು ಇಲ್ಲ, ಆ ಹಾಸಿಗೆಯನ್ನು ಸುಟ್ಟು ಹಾಕುತ್ತೇವೆ ಎಂಬ ಹೇಳಿಕೆ ನೀಡಿದರು. ಈ ರೀತಿಯಾಗಿ ಗೊಂದಲದ ವಾತಾವರಣವನ್ನು ಮಾಡಿದರು. ಕೊನೆಗೂ ಇಷ್ಟೊಂದು ಹಣವನ್ನು ಖರ್ಚು ಮಾಡಿ Bangalore International Exhibition Centre ನಲ್ಲಿ ವ್ಯವಸ್ಥೆ ಕಲ್ಪಿಸಿದ್ದು, ಅಲ್ಲಿಗೆ ಎಷ್ಟು ಜನ ರೋಗಿಗಳು ಹೋಗಿದ್ದಾರೆ? ವೈದ್ಯರಾಗಲಿ, ನರ್ಸ್ ಆಗಲಿ, ಆಶಾಕಾರ್ಯಕರ್ತರಾಗಲಿ ಯಾರು ಸಹ ರೋಗಿಯನ್ನು ನೋಡಿಕೊಳ್ಳುವುದಕ್ಕೆ ಇಲ್ಲ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ, ಆ ವ್ಯವಸ್ಥೆಯನ್ನು ಕಲ್ಪಿಸಿದರೂ ಅಲ್ಲಿಗೆ 300 ಜನ ರೋಗಿಗಳು ಮಾತ್ರ ಹೋಗಿದ್ದರು. ಕಳೆದ ವಾರ ಅದಕ್ಕೂ ಬೀಗ ಹಾಕಿ ವಾಪಸ್ಸು ತೆಗೆದುಕೊಂಡು ಹೋದ ಪ್ರಯುಕ್ತ ಅದನ್ನು ಸಹ ಮುಚ್ಚಲಾಗಿದೆ. ಹಾಗಾಗಿ ಸರ್ಕಾರ ಎಡವುತ್ತಿದ್ದು, ದಯವಿಟ್ಟು ಆ ರೀತಿ ಮಾಡಬೇಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ನಾನು ಹೇಳಿರುವ ಮಾತನ್ನು ದಯವಿಟ್ಟು ವೈಯಕ್ತಿಕವಾಗಿ ತೆಗೆದುಕೊಳ್ಳುವುದಲ್ಲ. ಈ ರೀತಿಯ ರೋಗ ನಮ್ಮಲ್ಲಿಯೇ ಯಾರಿಗಾದರೂ ಬಂದರೆ, ನಾವು ಎಷ್ಟು ನೋವನ್ನು ಅನುಭವಿಸುತ್ತಿದ್ದೆವೋ, ಅದೇ ರೀತಿ ನಾಡಿನ ಜನ ಸಹ ಅನುಭವಿಸಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇದಕ್ಕಾಗಿ ಸರ್ಕಾರ ಏನು ಮಾಡಬೇಕೆಂದರೆ, ಅವರಲ್ಲಿರುವ ಭಿನ್ನಾಭಿಪ್ರಾಯವನ್ನು ಬಿಟ್ಟು ಹೊರಗೆ ಬರಬೇಕು. ಇವತ್ತು ಒಂದು ಕಡೆ ನೆರೆ ಹಾವಳಿ, ಮತ್ತೊಂದು ಕಡೆ ಕೊರೋನಾ ರೋಗದಿಂದ ಜನರು ಸಾಯುತ್ತಿದ್ದಾರೆ. ಇವತ್ತು ನಾವು ಜನರ ಸಹಾಯಕ್ಕೆ ಬರದೇ ಹೋದರೆ, ಮತ್ತೆ ಯಾವಾಗ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಜನರ ಕಷ್ಟಕ್ಕೆ ಸಹಾಯ ಮಾಡದೇ ಹೋದರೆ, ಪರಮಾತ್ಮ ನಮ್ಮನ್ನು ಮೆಚ್ಚುತ್ತಾನೆಯೇ ಎಂಬುದನ್ನು ಹೇಳುವುದಕ್ಕೆ ಬಯಸುತ್ತೇನೆ. ದಯವಿಟ್ಟು ಸಚಿವರು ನಿನ್ನೆ ದಿವಸ ಕೊಟ್ಟಿರುವಂತಹ ಉತ್ತರವೂ ಸಮಂಜಸವಾದ ಉತ್ತರವಾಗಿಲ್ಲ. ದಯವಿಟ್ಟು ವಾಸ್ತವಾಂಶಕ್ಕೆ ಹತ್ತಿರವಾಗಿರುವ ಮಾತನ್ನು ನಾನು ಹೇಳಿದ್ದೇನೆ. ಅದರ ಬಗ್ಗೆ ಹೇಳುತ್ತಾ ಹೋದರೆ ಭಾವೋದ್ವೇಗಕ್ಕೊಳಗಾಗಿ ನಮಗೆ ಕಣ್ಣಿನಲ್ಲಿ ನೀರು ಬರುತ್ತದೆ. ನಮಗಿಂತ ಹೆಚ್ಚಾಗಿ ಜನರು ಕಣ್ಣಿನಲ್ಲಿ ನೀರಲ್ಲ, ರಕ್ತ ಸುರಿಸಿದ್ದಾರೆ. ನನ್ನ ಮಾತನ್ನು ವೈಯಕ್ತಿಕವಾಗಿ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಕಾಂಗ್ರೆಸ್‌ನವರು ಕಾರ್ಯಕ್ರಮಗಳನ್ನು ಮಾಡಿದ್ದಾರೆ, ಮುಚ್ಚಿದ್ದಾರೆ ಎಂದೆಲ್ಲಾ ಮಾತನಾಡುತ್ತಿರುವುದನ್ನು ನಾನು ಸಹ ಹೇಳಬಹುದು. ನಮ್ಮ ಸರ್ಕಾರ ಅಧಿಕಾರದಲ್ಲಿದಾಗ ಬಿ.ಪಿ.ಎಲ್. ಕಾರ್ಡ್ ಹೊಂದಿದವರಿಗೆ ಉಚಿತವಾಗಿ 7 ಕೆ.ಜಿ. ಅಕ್ಕಿಯನ್ನು ಒಬ್ಬರಿಗೆ ನೀಡಲಾಗುತ್ತಿದ್ದು, ಈಗ ಅದನ್ನು 5 ಕೆ.ಜಿ. ಗೆ ಇಳಿಸಿದ್ದಾರೆ. ಈ ವ್ಯವಸ್ಥೆ ಇಲ್ಲದೇ ಇದ್ದರೆ ಇವತ್ತು ಯಾವ ಪರಿಸ್ಥಿತಿ ಬರುತ್ತಿತ್ತು? ಬೆಂಗಳೂರು ಮಹಾನಗರದಲ್ಲಿ ಇಂದಿರಾ ಕ್ಯಾಂಟೀನ್ ತೆರೆದು 5 ರೂಪಾಯಿಗೆ ತಿಂಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ 10 ರೂಪಾಯಿಗೆ ಊಟ ನೀಡಲಾಗುತ್ತಿತ್ತು. ಅದನ್ನು ಸಹ ನಿಲ್ಲಿಸಿದರು. ಜನರು ಅದನ್ನಾದರೂ ತಿನ್ನಬಹುದಾಗಿತ್ತಲ್ಲವೇ? ಈ ರೀತಿಯಾಗಿ food pocket and food kit ನೀಡಿ ದಂಡ ಮಾಡುವ ಬದಲು ಉಚಿತವಾಗಿ ಇಂದಿರಾ ಕ್ಯಾಂಟೀನ್‌ನ ಊಟ ನೀಡಬಹುದಾಗಿತ್ತಲ್ಲವೇ? ಆಟೋರಿಕ್ಷಾ ಚಾಲಕರಿಗೆ, ಟ್ಯಾಕ್ಸಿ ಚಾಲಕರಿಗೆ, ತರಕಾರಿ ಮಾರುವವರಿಗೆ, ತಳ್ಳುವ ಗಾಡಿಯವರಿಗೆ ಸರಿಯಾಗಿ ವ್ಯಾಪಾರ ವಹಿವಾಟು ಇಲ್ಲದೇ ಅವರಿಗೆ ತಿನ್ನುವುದಕ್ಕೂ ಊಟ ಇಲ್ಲದಂತಾಗಿದೆ. ಇಂದಿರಾ ಕ್ಯಾಂಟೀನ್‌ನಲ್ಲಿ ಉಚಿತವಾಗಿ ಊಟ ನೀಡಬಹುದಾಗಿತ್ತಲ್ಲವೇ? ಇದನ್ನು ಸರ್ಕಾರಕ್ಕೆ ಕೇಳುವುದಕ್ಕೆ ಬಯಸುತ್ತೇನೆ. ಈ ರೀತಿಯಾಗಿ ಸಹಾಯ ಹಸ್ತವನ್ನು ನೀಡಬೇಕೇ ವಿನಃ ರಾಜಕಾರಣ ಮಾಡಬಾರದೆಂಬುದು ನನ್ನ ಉದ್ದೇಶ. ದಯವಿಟ್ಟು ಗೌರವಾನ್ವಿತ ಸಚಿವರು ಈಗಲೂ ಕಾಲ ಮಿಂಚಿಲ್ಲ. ಇವತ್ತಿಗೆ, ನಾಳೆಗೆ ಕೊರೋನಾ ಎಂಬ ಮಾರಕ ರೋಗ ನಿಂತು ಹೋಗುವುದಿಲ್ಲ. ಇನ್ನೂ ತುಂಬಾ ತಿಂಗಳು ಬೇಕಾಗುತ್ತದೆ. ಆರ್ಥಿಕ ಪರಿಸ್ಥಿತಿ ದಿಕ್ಕೆಟ್ಟು ಹೋಗಿದೆ. ಕಟ್ಟಡ ನಿರ್ಮಾಣ ಮಾಡಲು ಸಾಧ್ಯವಾಗದೇ ಕೂಲಿ ಕಾರ್ಮಿಕರಿಗೆ ಕೂಲಿ ಇಲ್ಲದಂತಾಗಿದೆ. ಬಿಲ್ಡಿಂಗ್ ಓನರ್ಸ್ ಯಾರು ಇಲ್ಲದಂತಾಗಿದೆ. ಬಾಡಿಗೆ ಮನೆಯವರು ಮನೆ ಖಾಲಿ ಮಾಡಿಕೊಂಡು ಹೋಗುತ್ತಿದ್ದಾರೆ. ಇದೊಂದು ರೀತಿ ಚೈನ್ ಲಿಂಕ್ ಆಗಿದೆ. ಯಾರ ಹತ್ತಿರವೂ ಹಣ ಇಲ್ಲದೇ ಬದುಕುವುದಕ್ಕೆ ಸಾಧ್ಯವಾಗುತ್ತಿಲ್ಲ. ಯಾರ್‍ಯಾರು ಕ್ಷೌರ ಮಾಡುತ್ತಿದ್ದಾರೆ ಅವರಿಗೆ ರೂ.5000 ಗಳನ್ನು ನೀಡುತ್ತೇವೆ ಎಂದು ಸರ್ಕಾರ ಘೋಷಣೆ ಮಾಡಿತ್ತು. ಆದರೆ, ಇವತ್ತಿನವರೆಗೂ ಕೊಡಲು ಸಾಧ್ಯವಾಗಲಿಲ್ಲ. ನೇಕಾರರು, ಚಮ್ಮಾರರು, ಸವಿತಾ ಸಮಾಜದವರು ಇವರಿಗೆಲ್ಲಾ ಏನೇನು ಸವಲತ್ತು ನೀಡುತ್ತೇವೆ ಎಂದು ಹೇಳಿದ್ದೀರಿ, ಅದನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ಅದನ್ನು ನೀಡಿ ಎಂದು ಇದೆಲ್ಲಾವನ್ನು ಹೇಳುತ್ತಾ ಪರಿಪರಿಯಾಗಿ ಕೇಳಿಕೊಳ್ಳುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶ ನೀಡಿದ್ದು, ನನ್ನ ಕೈಲಾದ ಮಟ್ಟಿಗೆ ಸರ್ಕಾರದ ಕಣ್ಣನ್ನು ತೆರೆಸಬೇಕೆಂಬುವ ರೀತಿಯಿಂದ ಮಾತನಾಡಿದ್ದೇನೆ. ವೈಯಕ್ತಿಕವಾಗಿ ಯಾರ ಮೇಲೆಯೂ ಆಪಾದನೆ ಮಾಡಿ ಮಾತನಾಡಬೇಕೆನ್ನುವುದು ಇಲ್ಲ. ಅಂತರಾಳದ ಮಾತುಗಳನ್ನು, ಸ್ವತಃ ನಾನೇ, ನನ್ನ ಕಣ್ಣಾರೆ ಕೊರೋನಾ ರೋಗಿಗಳ ಹತ್ತಿರ ಹೋಗಿ ನೋಡಿದ್ದೇನೆ. ಆ ಹೆಣವನ್ನು ಸುಡಲು ತೆಗೆದುಕೊಂಡು ಹೋದಾಗ ಯಾವ ರೀತಿ ಅನಾಹುತಗಳಾಗಿದೆ ಎಂಬುದನ್ನು ನೋಡಿ ಹೇಳುತ್ತಿದ್ದೇನೆ. ಈಗಲಾದರೂ ದಯಮಾಡಿ ನಮ್ಮ ವಿರೋಧ ಪಕ್ಷದ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ನಮ್ಮ ಸಲಹೆಯನ್ನು ಕೇಳಲಿ. ನಾವು ಸಹ ಅವರ ಜೊತೆಯಲ್ಲಿದ್ದು, ಅವರಿಗೆ ಸಹಕಾರವನ್ನು ನೀಡುತ್ತೇವೆ. ನಾವೆಲ್ಲರೂ ಒಗ್ಗಟ್ಟಾಗಿ ಸೇರಿ ಈ ಮಾರಕ ರೋಗಕ್ಕೆ ನಮ್ಮ ರಾಜ್ಯದ ಜನ ಯಾರು ತುತ್ತಾಗಿದ್ದಾರೆ, ಅವರ ಕಷ್ಟಕ್ಕೆ ಸಹಾಯ ಹಸ್ತ ನೀಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡೋಣ

ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕೆ ಧನ್ಯವಾದಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ನನ್ನ ಸ್ನೇಹಿತರಾದ ಶ್ರೀ ನಾರಾಯಣಸ್ವಾಮಿಯವರು ಒಳ್ಳೆಯ ವಿಚಾರವನ್ನು ಸದನದ ಮುಂದೆ ಮಂಡಿಸಲು ಅವಕಾಶ ಮಾಡಿಕೊಟ್ಟಿದ್ದಾರೆ.

ಸಾಕಷ್ಟು ಸದಸ್ಯರು ಬಹಳ ಸುಂದರವಾಗಿ ಸದನದ ಮುಂದೆ ಮಾತನಾಡಿದ್ದಾರೆ. ಇದರ ಬಗ್ಗೆ ಸತ್ಯಾಸತ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕೆನ್ನುವುದು ನನ್ನ ಅಭಿಪ್ರಾಯ. ನಾನು ಮಾತನಾಡಬೇಕೆಂದು ಏತಕ್ಕೆ ಕೈ ಎತ್ತಿದೆ ಎಂದರೆ, ಸ್ವತಃ ನಾನೇ ಕೊರೋನಾ ರೋಗಿಯಾಗಿ 12 ದಿವಸಗಳ ಕಾಲ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಯಾವ ರೀತಿಯಲ್ಲಿ ಸರ್ಕಾರಿ ಆಸ್ಪತ್ರೆಯ ಚಿಕಿತ್ಸೆ ಇದೆ ಎಂಬುದರ ಅನುಭವ ನನಗೆ ಇದೆ. ಹೊರಗಿನಿಂದ ಮಾತನಾಡುವವರೂ ಏನೂ ಬೇಕಾದರೂ ಮಾತನಾಡಬಹುದು. ಬಹುಶಃ ನಾನು ಹೇಳುವ ಮಾತನ್ನು ತೆಗೆದುಕೊಂಡು ಚರ್ಚೆಗೋಸ್ಕರ 'ತಾವೂ ವಿಧಾನ ಪರಿಷತ್ತಿನ ಶಾಸಕರಾಗಿರುವುದರಿಂದ ಉತ್ತಮವಾದ ಸೇವೆ ಅಲ್ಲಿ ಸಿಕ್ಕಿರಬಹುದು. ಎಲ್ಲರಿಗೂ ಉತ್ತಮ ಸೇವೆ ಸಿಕ್ಕಿದೆಯೇ' ಎನ್ನುವಂತಹ ಪ್ರಶ್ನೆಯನ್ನು ಸಹ ಮಾನ್ಯ ಸದಸ್ಯರು ಕೇಳಬಹುದು. ಆದರೆ, ಖಂಡಿತವಾಗಿಯೂ ಹೇಳುವಂಥ ವಿಚಾರವೆಂದರೆ, ಬಹುಶಃ ವೈದ್ಯರಿರಬಹುದು, ನರ್ಸ್ ಇರಬಹುದು, ಆಯಾಗಳಿರಬಹುದು ಅವರಲ್ಲಿರತಕ್ಕಂಥ ಬದ್ಧತೆ ಯಾವ ರೀತಿ ಇದೆ ಎಂದರೆ, ಖಾಸಗಿ ಆಸ್ಪತ್ರೆಯಲ್ಲಿ ಆ ಬದ್ಧತೆ ಇದೆ ಎಂಬುದನ್ನು ಹೇಳುವುದಕ್ಕೆ ಆಗುವುದಿಲ್ಲ. ದಯವಿಟ್ಟು ನಾನು ಮಾತನಾಡುವಾಗ ಮಧ್ಯೆ ಪ್ರವೇಶ ಮಾಡಬಾರದು. ಖಾಸಗಿ ಆಸ್ಪತ್ರೆಗೆ ಜನರು ಮುಖ ಮಾಡಿರುವುದಕ್ಕೆ ವಿರೋಧ ಪಕ್ಷವೇ ಕಾರಣ ಎಂದು ಭಾವಿಸುತ್ತೇನೆ. ಏಕೆಂದರೆ, ಸರ್ಕಾರಿ ಆಸ್ಪತ್ರೆಯಲ್ಲಿ ಒಳ್ಳೆಯ ಸವಲತ್ತು ಇಲ್ಲ, oxygen ವ್ಯವಸ್ಥೆ ಇಲ್ಲ ಎಂಬುದು ಪ್ರಾರಂಭದ ಹಂತದಲ್ಲಿ ಪ್ರಾರಂಭವಾಗಿತ್ತು. ಈಗಾಗಲೇ ಚಿಕಿತ್ಸೆ ಪ್ರಾರಂಭ ಮಾಡಿದ್ದು, ವೈದ್ಯರು ಸಹ ಚೆನ್ನಾಗಿ ಚಿಕಿತ್ಸೆ ನೀಡುತ್ತಿದ್ದಾರೆ, ಸಾಕಷ್ಟು oxygen ವ್ಯವಸ್ಥೆ ಇದ್ದು, ಇನ್ನೂ ಏನು ಸವಲತ್ತು ಬೇಕು ಅವೆಲ್ಲಾ ವ್ಯವಸ್ಥೆ ಇದ್ದಂತಹ ಸಂದರ್ಭದಲ್ಲಿ ಈ ರೀತಿಯ ಮಾತನಾಡಿದರೆ ಮುಗ್ಧ ಜನರು ಯಾವ ರೀತಿ ಯೋಚನೆ ಮಾಡಬೇಕು. ಒಬ್ಬ ರಾಜಕಾರಣಿ, ಚುನಾಯಿತ ಪ್ರತಿನಿಧಿ ಕೇವಲ ವಿರೋಧಕ್ಕಾಗಿ ಈ ಮಾತುಗಳನ್ನು ಹಾಡಿದರೆ ಕೊರೋನಾ ರೋಗಿಯೂ ಸರ್ಕಾರಿ ಆಸ್ಪತ್ರೆಗೆ ಹೋಗಲು ತಯಾರಿರುತ್ತಾರೆಯೇ? ತಯಾರಿರುವುದಿಲ್ಲ. ಇದರಿಂದಾಗಿ ಕಷ್ಟ–ಸುಖವೋ, ಮನೆ, ಆಸ್ತಿಯನ್ನು ಮಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಸಗಿ ಆಸ್ಪತ್ರೆಯ ಕಡೆಗೆ ಮುಖ ಮಾಡುವ ವ್ಯವಸ್ಥೆಯನ್ನು ಯಾರು ಮಾಡಿದರು ಎಂಬುದನ್ನು ಸ್ವಲ್ಪ ಆತ್ಮ ವಿಮರ್ಶೆಗೆ ಪ್ರಶ್ನೆ ಮಾಡಿಕೊಳ್ಳುವ ಅವಶ್ಯಕತೆ ಇದೆ ಎಂಬುದನ್ನು ಭಾವಿಸುತ್ತೇನೆ. ನಾನು ಕೊರೋನಾಗೆ ತುತ್ತಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಂತಹ ಸಂದರ್ಭದಲ್ಲಿ ಸಾಮಾನ್ಯ ಜನರಿಗೆ ಯಾವ ರೀತಿ ಕೊಠಡಿ ಇತ್ತೋ, ಅದೇ ರೀತಿ ಕೊಠಡಿ ಇದ್ದು ನಾನು, ನನ್ನ ಹೆಂಡತಿ ಇಬ್ಬರೂ ಚಿಕಿತ್ಸೆ ಪಡೆದುಕೊಂಡಿದ್ದೆವು. ನಮಗೇನು posh ಆಗಿರುವಂತಹ ಕೊಠಡಿ ನೀಡಿರಲಿಲ್ಲ. ನಮ್ಮ ಉಸ್ತುವಾರಿ ಸಚಿವರಿಗೂ ಗೊತ್ತಿದೆ. ನಾನು ಸರ್ಕಾರಿ ಆಸ್ಪತ್ರೆಯಲ್ಲಿದ್ದಂತಹ ಸಂದರ್ಭದಲ್ಲಿ ನನ್ನ ಪಕ್ಕದಲ್ಲಿಯೇ 40 ರಿಂದ 50 ಜನ ಬೇರೆ ರೋಗಿಯು 10 ಮೀಟರ್ ಅಂತರದಲ್ಲಿ ಇದ್ದರು. ನಾನು ಬೆಳಗ್ಗಿನ ಜಾವ 5.00 ಗಂಟೆಗೆ ಎದ್ದು ಕಾರಿಡಾರ್‌ನಲ್ಲಿ ವಾಕ್ ಮಾಡುವಂತಹ ಸಂದರ್ಭದಲ್ಲಿ ನನಗೆ ಮಾತ್ರ ಉತ್ತಮ ರೀತಿಯಲ್ಲಿ ಚಿಕಿತ್ಸೆ ನೀಡುತ್ತಾರೆಯೋ ಅಥವಾ ಎಲ್ಲರನ್ನೂ ಅದೇ ರೀತಿ ನೋಡಿಕೊಳ್ಳುತ್ತಾರೆಯೋ ಎಂದು ಸುಮ್ಮನೆ ಕುತೂಹಲದಿಂದ ಯಾವ ರೀತಿ ಚಿಕಿತ್ಸೆ ನೀಡಲಾಗುತ್ತಿದೆ ಎಂಬುದನ್ನು ಕೇಳಿದಾಗ ಪ್ರತಿಯೊಬ್ಬರು ಸಹ ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ, ನಮಗೆ ಖುಷಿಯಾಗಿತ್ತು. ನಾವು ಆಸ್ಪತ್ರೆಗೆ ಬಂದಾಗ 2-3 ದಿವಸಗಳ ಕಾಲ ಏನಾಗುತ್ತದೆಯೋ ಏನೋ ಎಂಬ ಭಯವಾಗುತ್ತಿತ್ತು. ಹೊರಗೆ ಉಳಿದರೆ ಕೊರೋನಾದಿಂದ ನಾವು ಸತ್ತೇ ಹೋಗುತ್ತೇವೆ ಎನ್ನುವಂಥ ಮನೋಭಾವನೆಯಲ್ಲಿದ್ದೆವು. ಆದರೆ, ಇವರ ಹಾರೈಕೆಯಿಂದ ಹೆಚ್ಚು ಕಡಿಮೆ ಶೇಕಡಾ 50 ರಷ್ಟು ಭಾಗ ನಮ್ಮ ಕಾಯಿಲೆ ಗುಣವಾಗುವಂಥ ರೀತಿಯಲ್ಲಿ ಇದೆ ಎನ್ನುವ ಮಾತನ್ನು ಹೇಳಿರುವುದು ಸತ್ಯ. ಹಾಗಾಗಿ ಸುಮ್ಮನೆ ಹೊರಗೆ ಇದ್ದು, ಸರ್ಕಾರಿ ಆಸ್ಪತ್ರೆಗಳನ್ನು ದೂಷಣೆ ಮಾಡುವುದು ಒಳ್ಳೆಯದಲ್ಲ. ಪ್ರಾಮಾಣಿಕವಾಗಿ ವೈದ್ಯರು ಕೆಲಸ ಮಾಡುತ್ತಿದ್ದು, ಇಂತಹ ಮಾತುಗಳಿಂದ ಪತ್ರಿಕೆಯಲ್ಲಿ ಹೇಳಿಕೆ ಬಂದಾಗ ಅವರ ಆತ್ಮಸ್ಥೈರ್ಯವನ್ನು ಕುಗ್ಗಿಸುವಂತೆ ಆಗುವುದಿಲ್ಲವೇ? ಇಷ್ಟೆಲ್ಲಾ ಪ್ರಾಮಾಣಿಕವಾಗಿ ಕೆಲಸ ಮಾಡಿದರೂ, ಪತ್ರಿಕೆಯಲ್ಲಿ ಹೇಳಿಕೆ ಬಂದಿದೆ, ಎಷ್ಟೇ ಪ್ರಾಮಾಣಿಕವಾಗಿ ಕೆಲಸ ಮಾಡಿದರೂ ಅಷ್ಟೇ ಎಂಬ ಮನೋಭಾವನೆ ಅವರಲ್ಲಿ ಬಂದರೆ ಅಲ್ಲಿರುವ ರೋಗಿಗಳ ಕಥೆ ಏನು? ಹಾಗಾಗಿ ಸತ್ಯಾಸತ್ಯತೆ ಗೊತ್ತಿದ್ದು ಮಾತನಾಡಿದರೆ ಒಳ್ಳೆಯದು. ಕೇವಲ ಆಡಳಿತ ಪಕ್ಷದ ಬಗ್ಗೆ ಮಾತನಾಡುವುದಲ್ಲ. ಮೊದಲು ಮಾನ್ಯ ಸದಸ್ಯರು ಪಕ್ಷಾತೀತವಾಗಿ ಮಾತನಾಡುತ್ತೇನೆ ಎಂಬ ಮಾತನ್ನು ಹೇಳಿದಾಗ ನಾನು ಖುಷಿ ಪಟ್ಟೆ. ಖಂಡಿತವಾಗಿಯೂ ಪಕ್ಷಾತೀತವಾಗಿ ಮಾತನಾಡುತ್ತೇನೆ ಎಂದು ಹೇಳಿದ ಮೇಲೆಯೂ ಯಾರನ್ನು ಟಾರ್ಗೆಟ್ ಮಾಡಿದರು. ನಮಗೂ ಗೊತ್ತಿದೆ, ವಿರೋಧ ಪಕ್ಷಕ್ಕೂ ಗೊತ್ತಿದೆ ಕೊರೋನಾ ರೋಗಕ್ಕೆ ಔಷಧಿ ಇದೆಯೇ? ಮಾನ್ಯ ಸದಸ್ಯರು ಹೇಳಿರುವ ರೀತಿ ಕೊರೋನಾ ರೋಗಕ್ಕೆ ಔಷಧಿಯನ್ನು ಕಂಡು ಹಿಡಿದ ನಂತರವೂ ಅವ್ಯವಸ್ಥೆಯಾಗಿದ್ದರೆ ದೂಷಣೆ ಮಾಡುವುದು ಸರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(774) 22.09.2020 4.50 ಟಿಸಿಹೆಚ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ಕೆ ಪ್ರಾಣೇಶ್ (ಮುಂದು):**

ಅವರಿಗೆ immunity develop ಆಗಲಿ ಎನ್ನತಕ್ಕಂಥ ದೃಷ್ಟಿಯಿಂದ Vitamin C tablets, Dolo-650 mg tablets ಗಳನ್ನು ಕೊಟ್ಟು ಅದನ್ನು ಕಡಿಮೆ ಮಾಡತಕ್ಕಂಥ ಪ್ರಯತ್ನಗಳನ್ನು ಮಾಡುತ್ತಿದ್ದರು. ನಿಮಗೆ ಇನ್ನೊಂದು ವಿಚಾರ ಗೊತ್ತಿರಲಿ, ನನ್ನ ಕಣ್ಣೆದುರಿಗೆ ಮೂರು ಜನ ಸತ್ತು ಹೋದರು. ನಾನು ಇದ್ದಂತಹ ರೂಂನ ಪಕ್ಕದಲ್ಲಿಯೇ ಐ.ಸಿ.ಯು., ರೂಂ ಇತ್ತು. ಆ ಸಂದರ್ಭದಲ್ಲಿ ಅವರು ತೀರಿ ಹೋದರು. ಅವರು ತೀರಿಹೋದಾದ ಆ ಸಂಬಂಧ ಡಾಕ್ಟರ್‌ಗಳನ್ನು ಕೇಳಿದೆನು. ಅವರು ಏನು ತುಂಬಾ ಅಸ್ತಮ ಹಾಗೂ ತುಂಬಾ high B.P., Sugar ಇದ್ದಂತಹ ಪೇಷೆಂಟ್‌ಗಳು. ತುಂಬಾ high B.P., ಮತ್ತು high sugar ಇದ್ದಂತಹವರಿಗೆ ಏನೇ ಯಾವ oxygen ಗಳನ್ನು ಕೊಟ್ಟರೂ ಕೂಡ ಯಾರೂ ಅವರನ್ನು ಉಳಿಸುವುದಕ್ಕೆ ಸಾಧ್ಯವಾಗ ಕಾರಣ ಅವರು ತೀರಿ ಹೋದರು. ಆದರೂ ಅವರು ತೀರಿ ಹೋಗಬಾರದಿತ್ತು. ನಮ್ಮ ಪ್ರಯತ್ನಗಳು ನಿರಂತರವಾಗಿವೆ. 55 ವರ್ಷದ ಒಬ್ಬ ಡ್ರೈವರ್ ತೀರಿ ಹೋದರು. ಅವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು 40 oxygen cylinder ಗಳನ್ನು ಕೊಟ್ಟರು. ನಾನೇ ಕಣ್ಣಾರೆ ನೋಡಿದ್ದೇನೆ. ಒಬ್ಬರಿಗೆ 40 oxygen cylinder ಗಳನ್ನು ಕೊಟ್ಟರೂ ಕೂಡ ಅವರನ್ನು ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲ. ಆ ರೀತಿಯ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸರ್ಕಾರ ಏನೂ ಮಾಡಲಿಲ್ಲವೆಂದು ಹೇಳಿದರೆ, ತಪ್ಪಾಗುತ್ತದೆ. ಏಕೆಂದರೆ, ಈ ಸದನ ಒಂದು ರೀತಿಯ ದೇವಸ್ಥಾನ ಇದ್ದಂತೆ. ವಿರೋಧಪಕ್ಷದಲ್ಲಿ ಹಲವಾರು ಹಿರಿಯರ ಸದಸ್ಯರು ಕುಳಿತಿದ್ದಾರೆ. ಮಾನ್ಯ ಬಿ.ಕೆ ಹರಿಪ್ರಸಾದ್‌ರವರು ಈಗ ಮಾತನಾಡಿದರು. ಆದರೆ, ನಾನು ಅವರಿಂದ ಭಾರಿ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೆನು. ಏಕೆಂದರೆ ಅವರು ರಾಜ್ಯ ಸಭೆಯಲ್ಲಿ ಸದಸ್ಯರಾಗಿದ್ದಂಥವರು. ಹಲವಾರು ಮೇಲ್ಮಟ್ಟದ ಹಂತದಲ್ಲಿ ಕೆಲಸ ಮಾಡಿದಂಥವರು. ಅವರು ಕೂಡ ವಿಚಾರಕ್ಕೆ ಅನುಗುಣವಾಗಿ ಮಾತನಾಡುತ್ತಾರೆ, ಹಾಗೆಯೇ ಇರುವಂತಹ ವಿಚಾರಗಳನ್ನು ಹೇಳುತ್ತಾರೆ. ಅವರ ಮಾತುಗಳನ್ನು ಸಮರ್ಥನೆ ಮಾಡಿಕೊಳ್ಳುವಂಥದ್ದು ಇದ್ದಾಗ, ಅವರು ಸರಿಪಡಿಸುವಂತಹ ಪ್ರಯತ್ನಗಳು ಈ ಮೇಲ್ಮನೆಯಲ್ಲಿ ಆಗಬೇಕು. ಹಿರಿಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಏನಾದರು ಹೇಳಿದಾಗ ನಾವು ಕೂರುವಂತಹ ಕೆಲಸವನ್ನು ಮಾಡುತ್ತಿದ್ದೆವು. ಏಕೆಂದರೆ ಅವರು ಅನುಭವಸ್ಥರು, ಈ ಸದನದಲ್ಲಿ ಬೇರೆ ಏನಾದರೂ ತಪ್ಪು ಮಾತನಾಡಿದಾಗ ಸರಿಪಡಿಸುವಂತಹ ಪ್ರಯತ್ನಗಳನ್ನು ಮಾಡುತ್ತಾರೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎನ್ನತಕ್ಕಂಥ ವಿಚಾರಕ್ಕೋಸ್ಕರ ಕುಳಿತುಕೊಳ್ಳುತ್ತಿದ್ದೆವು. ಆದರೆ ಅವರು ಸರಿಯಾಗಿ ಮಾತನಾಡದೆ ಏನನ್ನೂ ಹೇಳದಿದ್ದಾಗ ಇಲ್ಲ ನೀವು ಕೇಳಿ, ಇಲ್ಲ ನೀವು ಮಾಡಿ ಎಂದು ಹೇಳಿದಾಗ, ನಮಗೆ ಒಂದು ಸ್ವಲ್ಪ ಕಸಿವಿಸಿಯಾಯಿತು. ಏನಪ್ಪಾ, ಇವರುಗಳು ಕೂಡ ಇಷ್ಟೆಲ್ಲಾ ಅನುಭವ ಇರುವಂಥವರು ಕೂಡ ಈ ವಿಚಾರಲ್ಲಿ ಈ ರೀತಿ ಮಾತನಾಡುತ್ತಾರಲ್ಲ ಎಂದು ನನಗೆ ನೋವಾಯಿತು. ಆದರೂ ಇರಲಿ. ಏಕೆಂದರೆ ರಾಜಕಾರಣ ಎನ್ನುವುದು ನನಗೆ ಸಂಪೂರ್ಣವಾಗಿ ಅರ್ಥವಾಯಿತು. ಇದರಲ್ಲಿ ಎಷ್ಟೇ ಒಳ್ಳೆಯತನಗಳು, ಎಷ್ಟೇ ಒಳ್ಳೆಯ ಗುಣಗಳು ಮನಸ್ಸಿನಲ್ಲಿದ್ದರೂ ಕೂಡ ಈ ಸಂದರ್ಭದಲ್ಲಿ ಪಕ್ಷಗಳನ್ನು ಬಿಡುವಂತಹ. . .

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ. . .

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ. ರಾಜಕೀಯದಲ್ಲಿ ಇರುವಂಥದ್ದು ನಾನು ಅವರ ಹೆಸರನ್ನು ಪ್ರಸ್ತಾಪ ಮಾಡಿದ್ದೇನೆ, ಅವರು ಹೇಳುತ್ತಾರೆ.

**ಸಭಾಪತಿಯವರು:–** ನೀವು ಯಾರಿಗೂ Yield ಆಗಬೇಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ. . .

**ಸಭಾಪತಿಯವರು:–** ಶ್ರೀ ಬಿ.ಕೆ.ಹರಿಪ್ರಸಾದ್ ರವರೇ, ನಿಮಗೆ ನಂತರ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ನಾನೇನು ಅವರ ಬಗ್ಗೆ ಕೆಟ್ಟದ್ದನ್ನು ಹೇಳಲಿಲ್ಲ. **(ಗೊಂದಲ)** ಇರತಕ್ಕಂಥ ವಿಚಾರವನ್ನು ನನಗೆ ಏನು ಅನಿಸಿತು ಅದನ್ನು ಹೇಳಿದೆನು ಅಷ್ಟೆ.

**ಸಭಾಪತಿಯವರು:–** ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಹರಿಪ್ರಸಾದ್.ಬಿ.ಕೆ:–** ಆಯಿತು.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಬಹುಶಃ ಸರ್ಕಾರಗಳ ಮೇಲೆ ಟೀಕೆ ಟಿಪ್ಪಣಿಗಳನ್ನು ಮಾಡುವುದು ಸಹಜ. ಈಗಾಗಲೇ ನಮ್ಮ ಸಚಿವರುಗಳೆಲ್ಲಾ ಹೇಳಿದ್ದಾರೆ. ಅಂದರೆ, ಕೊರೋನಾದ ಬಗ್ಗೆ ಇಡೀ ಪ್ರಪಂಚಕ್ಕೆ ಗೊತ್ತಿರತಕ್ಕಂಥ ವಿಚಾರಗಳನ್ನು ಕೇವಲ ನಮ್ಮ ಸರ್ಕಾರವನ್ನು ಟಾರ್ಗೆಟ್ ಮಾಡಿ ಮಾತನಾಡುವಂಥದ್ದು ಎಷ್ಟು ಸಮಂಜಸವೆಂದು ನಮ್ಮ ಹಿರಿಯ ಸದಸ್ಯರು ಯೋಚನೆ ಮಾಡಿಕೊಳ್ಳಬೇಕಾಗಿದೆ. ಇದನ್ನು ನಾನು ಹಲವಾರು ಸಂದರ್ಭಗಳಲ್ಲಿ ನೆನಪು ಮಾಡಿಕೊಳ್ಳುತ್ತೇನೆ. ಮತ್ತೆ ಎಲ್ಲರಿಗೂ ಕಾಯಿಲೆ ಬರುತ್ತಿದೆ, ಈ ಸರ್ಕಾರ ತಡೆಯಬಹುದಿತ್ತು ಎಂದು ಹೇಳಿದರು. ಆದರೆ ಅವರೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಚನೆ ಮಾಡಬೇಕು. ನಾನು ನಿನ್ನೆ ದಿವಸ ಪತ್ರಿಕೆಯನ್ನು ನೋಡಿದೆನು. ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ಸಿದ್ದರಾಮಯ್ಯನವರು ಒಂದು ಮಾತನ್ನು ಆಡಿದ್ದಾರೆ. 'ನೋಡಪ್ಪಾ, ನಮ್ಮ ಶ್ರೀ ಡಿ.ಕೆ.ಶಿವಕುಮಾರ್‌ರವರಿಗೆ ಹೇ ಮಾಸ್ಕ್ ಹಾಕಿಕೊ ಎಂದು ಹೇಳಿದೆ, ಆದರೆ ಅವರು ಮಾಸ್ಕ್ ಹಾಕಿಕೊಳ್ಳಲೇ ಇಲ್ಲ' ಈಗ ಕಾಯಿಲೆ ಬಂತು. ಈಗ ಮಾಸ್ಕ್ ಹಾಕಿಕೊಳ್ಳುವಂತಹ ಕೆಲಸವನ್ನು ಮಾಡುತ್ತಿದ್ದಾರೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಈ ರೀತಿಯ ವ್ಯವಸ್ಥೆಗಳಾದರೆ ಯಾರು ತಾನೆ ಇದನ್ನು ಸರಿಪಡಿಸಲು ಸಾಧ್ಯ. ಜಾಗೃತಿಯನ್ನು ನಾವು ಮೂಡಿಸಿಕೊಳ್ಳಬೇಕು. ಕೇಂದ್ರ ಸರ್ಕಾರ ಈ ಜಾಗೃತಿಯನ್ನು ಮೂಡಿಸುವುದಕ್ಕೆ ಹಲವಾರು ಪ್ರಯತ್ನಗಳನ್ನು ಮಾಡಿತು.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಪ್ರಾಣೇಶ್‌ರವರೇ, ಈಗ ತಾವು ಮಾಸ್ಕ್ ಹಾಕಿಕೊಂಡು ಮಾತನಾಡಬೇಕು.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಎಸ್. ರವಿಯವರೇ, ಮಾಸ್ಕ್ ಹಾಕಿಕೊಂಡು ಮಾತನಾಡಿದರೆ, ನನ್ನ ಮಾತು ಸದನಕ್ಕೆ ಕೇಳಿಸುವುದಿಲ್ಲ. ಈ ಸದನದಲ್ಲಿ ಸೋಷಿಯಲ್ ಡಿಸ್ಟೆನ್ಸ್ ಇದೆ, ಹಾಗಾಗಿ, ನಾನು ಮಾತನಾಡುತ್ತಿದ್ದೇನೆ. ಹಾಗಾಗಿ, ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರು. ಸನ್ಮಾನ್ಯ ಪ್ರಧಾನಮಂತ್ರಿಗಳು ಕೇಂದ್ರ ಸರ್ಕಾರದ ಮುಖಾಂತರ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡರು. ನೀವೇನು ಮಾಡಿದ್ದೀರಿ ಎಂದರೆ, 'ಏನೋ ಗಂಟೆ ಜಾಗಟೆಯನ್ನು ಹೊಡೆದಿರಿ' ಅಥವಾ ನೀವು social distance ನಿಂದ ದೀಪಗಳನ್ನು ಹಚ್ಚಿದಿರಿ ಎಂದು ನೀವು ಗೇಲಿ ಮಾಡಿದಿರಿ. ನೀವು lockdown ಮಾಡುವಂತಹ ಪ್ರಾರಂಭದಲ್ಲೇ ಮಾಡಬಹುದಿತ್ತು, ತದನಂತರ ಮಾಡಿದ್ದೀರಿ ಎನ್ನುವಂತಹ ಟೀಕೆಗಳನ್ನು ಮಾಡಿದ್ದಾರೆ. ಆದರೆ ಕೊರೋನಾದ ಬಗ್ಗೆ ಯಾರಿಗೆ ಅರಿವಿತ್ತು ಎನ್ನುವಂಥದ್ದು ಮೂಲಭೂತವಾದ ಪ್ರಶ್ನೆ. ಅದನ್ನು ಇವರ್‍ಯಾರೂ ಉಲ್ಲೇಖ ಮಾಡಲಿಲ್ಲ. ಮಾನ್ಯ ನಾರಾಯಣಸ್ವಾಮಿಯವರು ಅದನ್ನು ಉಲ್ಲೇಖ ಮಾಡಬಹುದಿತ್ತು. ಆದರೆ ಅದನ್ನು ಮಾಡಿದ ಉದ್ದೇಶವೇನು? ನಮ್ಮ ವ್ಯವಸ್ಥೆಗಳು ಹೇಗಿತ್ತು ಎಂದರೆ, ಮೊದಲನೆಯದಾಗಿ, ಪ್ರಾರಂಭದ ಹಂತದಲ್ಲಿ ಕೊರೋನಾ ಬರುತ್ತದೆ ಎನ್ನುವುದು ಗೊತ್ತಿರಲಿಲ್ಲ. ಎರಡನೆಯದಾಗಿ, ಕೊರೋನಾ ಬಂದಂತಹ ಸಂದರ್ಭದಲ್ಲಿ ಏಕಾಏಕಿ ಸೋಷಿಯಲ್ ಡಿಸ್ಟೆನ್ಸ್ ಇಲ್ಲದೆ, ಮಾಸ್ಕ್ ಹಾಕಿಕೊಳ್ಳದೆ ಓಡಾಡಿ ನಾವು ಇವತ್ತು ಕೊರೋನಾವನ್ನು ಹೆಚ್ಚಿಗೆ ಮಾಡಿಕೊಳ್ಳುತ್ತಿದ್ದೇವೆ. ಇಂತಹ ಪರಿಸ್ಥಿತಿ ಅವೊತ್ತೇ ಬಂದಿದ್ದರೆ, ಜನ ಬೀದಿ ಬೀದಿಯಲ್ಲಿ ಸಾಯುತ್ತಿದ್ದರು. ಏಕೆಂದರೆ, ಆಗ ನಮ್ಮಲ್ಲಿ ಆಸ್ಪತ್ರೆಗಳ ವ್ಯವಸ್ಥೆಗಳು ಇರಲಿಲ್ಲ. ಏನು medicin ಕೊಡಬೇಕು, ಏನು treatment ಕೊಡಬೇಕು ಎನ್ನುವುದು ಇರಲಿಲ್ಲ. ಆದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನೆಲ್ಲಾ ತಯಾರಿ ಮಾಡಿದ ತಕ್ಷಣವೇ lockdown ಅನ್ನು free ಮಾಡುವಂತಹ ಕೆಲಸವನ್ನು ಮಾಡಿತು. ಅದನ್ನೂ ನೀವು ಯೋಚನೆ ಮಾಡಬೇಕಲ್ಲವೇ? ಈಗ ತಕ್ಕಮಟ್ಟಿಗೆ ಯಶಸ್ವಿಯಾಗಿದ್ದೇವೆ. ಸಂಪೂರ್ಣವಾಗಿ ಯಶಸ್ವಿಯಾಗಿದ್ದೇವೆ ಎಂದು ಹೇಳುವುದಿಲ್ಲ. ತಕ್ಕಮಟ್ಟಿಗೆ ಕೊರೋನಾವನ್ನು ನಾವು ಹದ್ದುಬಸ್ತಿನಲ್ಲಿ ಇಡುವಂತಹ ಪ್ರಯತ್ನಗಳನ್ನು ಮಾಡುವುದರಲ್ಲಿ ಯಶಸ್ವಿಯಾಗಿದ್ದೇವೆ. ಹಾಗಾಗಿ, ನಾನು ಏಕೆ ಈ ಮಾತುಗಳನ್ನು ಉಲ್ಲೇಖ ಮಾಡುತ್ತಿದ್ದೇನೆಂದರೆ, ಕೆಲವು ಒಳ್ಳೆಯ ವಿಚಾರಗಳನ್ನು ಯೋಚನೆ ಮಾಡಬೇಕಲ್ಲವೇ? ಕೆಲವು ಸಂದರ್ಭಗಳಲ್ಲಿ ಮಾನ್ಯ ನಾರಾಯಣಸ್ವಾಮಿಯವರು ಹಲವು ವಿಚಾರಗಳನ್ನು ಮಾಡಿರಬಹುದು. Some percentae ತಪ್ಪು ಆಗಿರಬಹುದು. 'ಯಾವತ್ತೂ ನಡೆಯಬೇಕಾದವನು, ಎಡವಿಯೇ ಎಡವುತ್ತಾನೆ' ಹುಟ್ಟಿದ ಮಗು ತಕ್ಷಣವೇ ನಡೆಯುವುದಿಲ್ಲ. ಕೊರೋನಾ ಹುಟ್ಟಿದ್ದು. ತಕ್ಷಣವೇ ಅದಕ್ಕೆ medicin ಕಂಡುಹಿಡಿದು ನಡೆ ಎಂದು ಹೇಳಿದರೆ, ಸಾಮಾನ್ಯವಾಗಿ ನಾವು ಎಡವುದು ಸಹಜ. ಪ್ರಯತ್ನಗಳನ್ನು ಮಾಡುವುದು ಸಹಜ. ಕೋವಿಡ್-19 ಕಿಟ್ 2000/- ರೂಪಾಯಿಗಳು ಹಾಗೂ 5000/- ರೂಪಾಯಿಗಳಿಗೆ ಸಿಗುತ್ತದೆಂದು ಅವರು quote ಮಾಡಿದರು. ನಿಮಗೆ ದಾರಿಯಲ್ಲಿ ಹೋಗಬೇಕಾದರೆ, ಆ ಅಂಗಡಿಯಲ್ಲೂ ಚಪ್ಪಲಿಯನ್ನು ಮಾರಾಟ ಮಾಡುತ್ತಾರೆ. ದಾರಿಯಲ್ಲೂ ಕೂಡ ಚಪ್ಪಲಿಯನ್ನು ಮಾರಾಟ ಮಾಡುತ್ತಾರೆ. ಶೋರೂಂನಲ್ಲೂ ಚಪ್ಪಲಿಯನ್ನು ಮಾರಾಟ ಮಾಡುತ್ತಾರೆ. ಆದರೆ, ಅದರ ಬಾಳುವಿಕೆ ಯಾವ ರೀತಿ ಇರುತ್ತದೆ, ಮತ್ತು ಶೋರೂಂನ ಬಾಳುವಿಕೆ ಯಾವರೀತಿ ಇರುತ್ತದೆಂದು ನಾವು ನೋಡಬೇಕಾಗುತ್ತದೆ. ನೀವು ಬ್ರಾಂಡೆಡ್ ಚಪ್ಪಲಿಗಳನ್ನು ಹುಡುಕಿ ತೆಗೆದುಕೊಳ್ಳುತ್ತೀರಿ, ಅದೇಕೆ ನೀವು ದಾರಿಯಲ್ಲಿ ಮಾರಾಟವಾಗುತ್ತಿರುವ ಚಪ್ಪಲಿಗಳನ್ನು ಹಾಕಿಕೊಂಡು ನಡೆಯುವುದಿಲ್ಲ? ಇದೇ ವ್ಯವಸ್ಥೆ ಸರ್ಕಾರದ ಒಳಗಡೆ ಕೂಡ ಉತ್ತಮವಾದಂತಹ ಗುಣಮಟ್ಟ ಹೊಂದಿರುವುದು ಬೇಕು. ಬೇಕಾದಂತಹ ಸಂದರ್ಭದಲ್ಲಿ ಹುಡುಕಿ ತರುವಂತಹ ಕೆಲಸಗಳನ್ನು ಮಾಡಬೇಕೆಂದರೆ, ಈ ರೀತಿ ಹಣದ ವ್ಯತ್ಯಾಸಗಳು ಆಗುತ್ತವೆ. ಅದು ಏಕೆ ಆಗುವುದಿಲ್ಲ ಹೇಳಿ. ನೀವು ಅದನ್ನೇ ಟೀಕೆ ಮಾಡುವುದೇ? ನೀವು ಅನುಭವಿಸುವುದಕ್ಕೆ ಬ್ರಾಂಡೆಡ್‌ಗಳೆಲ್ಲಾ ಬೇಕು. ಆದರೆ ಬೇರೆ ಸಂದರ್ಭಗಳಲ್ಲಿ ಅವನು ಬಡವನಾಗಿರುತ್ತಾರೆ, ಅವನಿಗೆ 5000/- ರೂಪಾಯಿಗಳಿಗೆ ಸಿಕ್ಕರೂ ನಡೆಯುತ್ತದೆ. 2000/- ರೂಪಾಯಿಗಳಿಗೆ ಸಿಕ್ಕರೂ ನಡೆಯುತ್ತದೆ ಮತ್ತು 3000/- ರೂಪಾಯಿಗಳಿಗೆ ಸಿಕ್ಕರೂ ನಡೆಯುತ್ತದೆ. ಏಕೆ ನೀವೆಲ್ಲರೂ ಕೊರೋನಾ ಬಂದ ತಕ್ಷಣವೇ ಖಾಸಗಿ ಆಸ್ಪತ್ರೆಗೆ ಹೋಗುತ್ತೀರಿ? ನೀವು ಹೋಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯ ಸೌಲಭ್ಯಗಳು ಇಲ್ಲವೇ? ನಾನು ಎಲ್ಲರಿಗೂ ಹೇಳುತ್ತಿಲ್ಲ. ಎಲ್ಲಾ ಸಂದರ್ಭಗಳಲ್ಲೂ ಸರ್ಕಾರಿ ಆಸ್ಪತ್ರೆಯಲ್ಲಿ ಬೆಡ್‌ಗಳು ಸಿಗುವುದಿಲ್ಲ. ನನಗೂ ಗೊತ್ತು ನೀವು ಸರ್ಕಾರಿ ಆಸ್ಪತೆಗೆ ಹೋದರೆ ಬಡವರಿಗೆ ಅವಕಾಶ ಸಿಗುವುದಿಲ್ಲ ಎನ್ನತಕ್ಕಂಥ ಮನೋಭಾವ ನಿಮಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಎಲ್ಲೂ ಕೂಡ ನಾವು ಹೋದಂತಹ ಸಂದರ್ಭದಲ್ಲಿ ಅವರುಗಳಿಗೆ ಮಾನಸಿಕ ಸ್ಥೈರ್ಯವನ್ನು ತುಂಬುವಂತಹ ಕೆಲಸ ಆಗುತ್ತದೆ. ಮತ್ತೆ ವಿಶ್ವಾಸವನ್ನು ಬೆಳೆಸುವಂತಹ ಕೆಲಸಗಳು ಆಗುತ್ತದೆ. ಹಲವು ಸಂದರ್ಭದಲ್ಲಿ ಯಾರು ಕೋವಿಡ್ ಟೆಸ್ಟ್‌ಗೆ ಹೋದರೂ ಕೂಡ ಪಾಸಿಟಿವ್ ಮತ್ತು ನೆಗೆಟಿವ್ ಬರುತ್ತದೆಂದು ಮಾನ್ಯ ನಾರಾಯಣ ಸ್ವಾಮಿಯವರು ಹೇಳಿದರು. ದುಡ್ಡು ಇದ್ದರೆ ಮಾತ್ರ ತೋರಿಸಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಅವರು ಹೇಳಿದರು. ಮಾನ್ಯ ನಾರಾಯಣ ಸ್ವಾಮಿಯವರೇ, ಇತ್ತೀಚೆಗೆ ನಿಜವಾಗಲೂ ತುಂಬಾ ಜನ ಸಾಯುತ್ತಿದ್ದಾರೆ. ಅದು ಹೆದರಿಕೆಯಿಂದ ಸಾಯುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಮಾಜಿ ವಿಧಾನ ಪರಿಷತ್ತಿನ ಶಾಸಕರು, ಮಾಜಿ ಮಂತ್ರಿಗಳಾದಂತವರು ಹಾಗೂ ಸ್ಪೀಕರ್ ಆದಂತಹ ಶ್ರೀಮತಿ ಮೋಟಮ್ಮನವರ ಅಣ್ಣನ ಮಗ ಇವರು ಏನು ಮಾಡಿದರೆಂದರೆ, ಇದಕ್ಕೋಸ್ಕರವೇ ಮನೆಯಲ್ಲಿಯೇ ಕುಳಿತುಕೊಂಡು ನನಗೆ ಏನೂ ಇಲ್ಲ. Home quarantine ಆಗುತ್ತೇನೆಂದು ಹೇಳಿಬಿಟ್ಟು, ಮಾತ್ರೆಗಳನ್ನು ನುಂಗಿಕೊಂಡು ಮನೆಯಲ್ಲಿಯೇ ಇದ್ದರು. ಹೀಗಯ್ಯೆ ಮೂರು-ನಾಲ್ಕು ದಿನಗಳಾಯಿತು. ನಂತರ ಅವರಿಗೆ ಜ್ವರ ಬಂತು. ಜ್ವರ ಆದ ನಂತರ, breathing problem ಆಯಿತು. Breathing problem ಇರುವುದರಿಂದ ಚಿಕ್ಕಮಂಗಳೂರಿನ ಖಾಸಗಿ ಆಸ್ಪತ್ರೆಗಳಿಗೆ ಹೋದಾಗ, ಅಲ್ಲಿ ಎಲ್ಲೂ ಅಡ್ಮಿಟ್ ಮಾಡಿಕೊಳ್ಳುವುದಕ್ಕಾವುದಿಲ್ಲವೆಂದು ಹೇಳಿದ್ದಾರೆ. ಆಮೇಲೆ ಬೆಂಗಳೂರಿನ ಮಲ್ಲಿಗೆ ನರ್ಸಿಂಗ್ ಹೋಂಗೆ ತಂದಾಗ, lungs ಪೂರ್ತಿಯಾಗಿ damage ಆಗಿರುವುದರಿಂದ ಇನ್ನೂ ಆಸ್ಪತ್ರೆಯಲ್ಲೇ ಇದ್ದಾರೆ. ಹೆಚ್ಚು-ಕಡಿಮೆ ಆ ನರ್ಸಿಂಗ್ ಹೋಂನಲ್ಲಿ ಒಂದೂ ಮುಕ್ಕಾಲು ತಿಂಗಳು ಕಳೆದಿದೆ. ಆದರೆ ಅವರಿಗೆ ನೆಗೆಟಿವ್ ಬಂದಿದೆ, ಇನ್ನೂ ರಿಕವರಿ ಆಗಿಲ್ಲ. ಈ ರೀತಿಯ ಪರಿಸ್ಥಿತಿಯಲ್ಲಿ ಯಾರಾದರೂ ಅವರ ಜೀವನ್ನು ಅವರೇ ಕೊಟ್ಟಂತಹ ಸಂದರ್ಭದಲ್ಲಿ ಇಂತಹ ಸಾವುಗಳು ಸಂಭವಿಸಿದರೆ ಯಾರು ಜವಾಬ್ದಾರರು ಆಗುತ್ತಾರೆ. ಅದಕ್ಕೆ ಹೊಣೆ ಯಾರು ಆಗುತ್ತಾರೆ? ಇವತ್ತು ಪ್ರತಿ ಹಂತದಲ್ಲೂ ಸರ್ಕಾರ ಜವಾಬ್ದಾರಿಗಳನ್ನು ತೆಗೆದುಕೊಂಡು ನೀವಲ್ಲಾ ಸೋಷಿಯಲ್ ಡಿಸ್ಟೆನ್ಸ್ ಮಾಡಿ, ಮಾಸ್ಕ್ ಹಾಕಿಕೊಳ್ಳಿ ಎಂದು ಹೇಳಿದರೂ ಕೂಡ ಕೆಲವರು ಹಾಕಿಕೊಳ್ಳುತ್ತಿಲ್ಲ. ಮಾಸ್ಕ್ ಧರಿಸದಿದ್ದವರ ವಿರುದ್ಧ ಪೊಲೀಸ್‌ನವನ್ನು ಬಿಟ್ಟು 200/- ರೂಪಾಯಿಗಳು ದಂಡ ಹಾಕಿ, ಪ್ರಕರಣಗಳನ್ನು ದಾಖಲಿಸುವಂತಹ ಕೆಲಸವನ್ನು ಮಾಡಲಾಗಿದೆ. ಇದು ಯಾರ ಉದ್ದೇಶಕ್ಕೆ ಮಾಡಿರುವುದು. ಇವೆಲ್ಲಾ ಅವರ ಜೀವವನ್ನು ಉಳಿಸುವುದಕ್ಕೋಸ್ಕರ ಮಾಡಿದಂತಹ ಕಾರ್ಯಕ್ರಮಗಳು. 200/- ರೂಪಾಯಿಗಳು ದಂಡವನ್ನು ವಸೂಲಿ ಮಾಡಿದರೆ, ಸರ್ಕಾರಕ್ಕೆ ಏನಾದರೂ ಕಿರೀಟ ಬರುತ್ತದೆಯೇ? ಅವರು ಮಾಸ್ಕ್ ಧರಿಸಿದ್ದರೆ, ನಾಳೆ ದಿವಸ ಅವನು ಆ ಪರಿಸ್ಥಿಗೆ ಹೋಗಬಾರದು. ಈ ಸಮಸ್ಯೆಯಿಂದ ಪ್ರತಿಯೊಬ್ಬರ ಜೀವವು ಕೂಡ ಉಳಿಯಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂತಹ ಸಂದರ್ಭದಲ್ಲಿ ನಾವೆಲ್ಲರೂ ಕೂಡ ತುಂಬಾ ಜಾಗೃತರಾಗಿ ಹೇಳಿಕೆಗಳನ್ನು ಕೊಡುವಂಥದ್ದನ್ನು ಮಾಡಬೇಕು. ಹಾಗೆಯೇ ಈಗ ಒಂದೆರಡ್ಮೂರು ವಿಚಾರಗಳ ಬಗ್ಗೆ ನಾವು ಮಾತನಾಡಿದೆವು. ನಾವು ಮಾತನಾಡಿದಂತಹ ಸಂದರ್ಭದಲ್ಲಿ ಹೇಳಿದಾಗ, ಕೆಲವು ಚೈನಾ ಸ್ನೇಹಿತರಿಂದ ಈ ಕೊರೋನಾ ಬಂದಿರುತ್ತದೆ. ಹಾಗೆ ಬಂದಂತಹ ಸಂದರ್ಭದಲ್ಲಿ ಕೆಲವರು ಏನು ಮಾಡುತ್ತಾರೆಂದರೆ, 'ಚೈನಾದಲ್ಲಿ ಮಳೆ ಬಂದರೆ, ಇಲ್ಲೂ ಕೂಡ ಕೊಡೆ ಹಿಡಿಯುವಂತಹ ಕೆಲಸವನ್ನು ಮಾಡುವಂತಹವರು ನಮ್ಮ ದೇಶ ಮತ್ತು ರಾಜ್ಯದಲ್ಲಿ ಇದ್ದಾರೆ' ಇದಕ್ಕೆ ನಾವೇನು ಮಾಡುವುದು? ನಾನು ಮಾತನಾಡಿರುವುದು ಏನಾದರೂ ವ್ಯತ್ಯಾಸಗಳಿದ್ದರೆ ಮಾನ್ಯ ಸದಸ್ಯರು ಮಾತನಾಡುವಾಗ ಅದನ್ನು ಸರಿಪಡಿಸಲಿ. ನಮ್ಮ ಇಟಲಿ ಸ್ನೇಹಿತರಿಂದಲೂ ಕೂಡ ಕೊರೋನಾ ನಮ್ಮ ದೇಶಕ್ಕೆ ಬಂತು.

**(ಮುಂದು...)**

**(775)22.9.2020/5.00/ಎಂ.ಎಂ–ಎಂ.ಡಿ**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ಕೆ. ಪ್ರಾಣೇಶ್ (ಮುಂದು):–**

ಹಿರಿಯರಾದಂತಹ ಮಾನ್ಯ ಶ್ರೀ ಹರಿಪ್ರಸಾದ್‌ರವರೇ, ಇದಕ್ಕೆ ಮೂಲ ಕಾರಣಕರ್ತರು ಯಾರು ಹೇಳಿ? 'ತಬ್ಲೀಘ್'ಗಳಿಂದ ಬಂತು. ನೀವು ಅದನ್ನೇನಾದರೂ ಯೋಚನೆ ಮಾಡಿ ಮಾತನಾಡಿದಿರಾ? ಎಲ್ಲಿಂದ ಬಂತು ಎಂದು ಯೋಚನೆಯನ್ನು ಮಾಡಿದ್ದರೆ ಆಗಲೇ ಮಾಡಿ ಕೆಲವು ಸಂದರ್ಭಗಳಲ್ಲಿ ಕೋವಿಡ್ ಟೆಸ್ಟ್‌ಗಳನ್ನು ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ;

**ಶ್ರೀ ಪಿ.ಆರ್. ರಮೇಶ್:–** ಸುಪ್ರೀಂಕೋರ್ಟ್‌ನವರೇ ಛೀಮಾರಿ ಹಾಕಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** 'ತಬ್ಲೀಘ್ ಜಮಾತ್' ಅಲ್ಲ, 'ನಮಸ್ತೆ ಟ್ರಂಪ್'. ತಮಿಳುನಾಡು ಹೈಕೋರ್ಟ್ ತಬ್ಲೀಘ್ ಜಮಾತ್‌ಗೆ ಏನೂ ಸಂಬಂಧ ಇಲ್ಲವೆಂದು ಹೇಳಿದೆ. ಬಾಂಬೆ ಹೈಕೋರ್ಟ್ ಕೂಡ ಹೇಳಿದೆ 'ತಬ್ಲೀಘ್ ಜಮಾತ್' ಅಲ್ಲ 'ನಮಸ್ತೆ ಟ್ರಂಪ್' ಎಂದು, ಅದಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲವೆಂದು ಹೇಳಿದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ. ತಿಮ್ಮಾಪೂರ:–** ಕೋವಿಡ್‌ನಲ್ಲಿ ರಾಜಕಾರಣ ಮಾಡುತ್ತಿರುವ ನಿಮಗೆ ನಾಚಿಕೆಯಾಗಬೇಕು.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್:–** ನಾವು ಕೋವಿಡ್ ಅನ್ನು ತಂದವರ ಪರ ಇರುತ್ತೇವೆ ಎಂದರೆ ಅದು ನಿಮ್ಮ ಹಣೆಬರಹ. (ಗೊಂದಲ) ಇಲ್ಲಿಯೇ ನಾನು ರಾಜಕಾರಣ ಬೇಡ ಎಂದು ಹೇಳಿದ್ದು.

**(ಗೊಂದಲ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ನೀವು ಕೋವಿಡ್‌ನಲ್ಲಿ ಧರ್ಮದ target ಮಾಡುತ್ತಿದ್ದೀರಿ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಆತ್ಮಸ್ಥೈರ್ಯವನ್ನು ತುಂಬುವ ಕೆಲಸವನ್ನು ಸರ್ಕಾರ ಮಾಡುತ್ತಿದೆ.

**ಸಭಾಪತಿಯವರು:–** ನಿಮ್ಮದು ಮಾತನಾಡಿ ಮುಗಿಯಿತೇ?

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಇನ್ನು 2–3 ನಿಮಿಷ ಸಮಯ ಕೊಡಿ ಮುಗಿಸುತ್ತೇನೆ.

**ಸಭಾಪತಿಯವರು:–**ಎಲ್ಲರಿಗೂ ಕಾಲು ಗಂಟೆ ಸಮಯ ಕೊಟ್ಟರೆ ರಾತ್ರಿ 9 ಗಂಟೆಯಾಗುತ್ತದೆ.

**ಶ್ರೀ ಎಂ.ಕೆ. ಪ್ರಾಣೇಶ್:–** ವೈದ್ಯರಿಗಿರಬಹುದು, ಆಶಾ ಕಾರ್ಯಕರ್ತರಿಗಿರಬಹುದು ಹಾಗೆ ನರ್ಸ್‌ಗಳಿಗಿರಬಹುದು ಕೇಂದ್ರದ ಪ್ರಧಾನಮಂತ್ರಿಗಳೇ ಅವರಿಗೆ ಆತ್ಮಸ್ಥೈರ್ಯವನ್ನು ತುಂಬುವಂತಹ ಕೆಲಸವನ್ನು ಮಾಡಿದ್ದಾರೆ. ಇನ್ನೇನು ಮಾಡಬೇಕು? ಪ್ರತಿಯೊಬ್ಬರೂ ಪ್ರತಿ ಹಂತದಲ್ಲಿ ಎಲ್ಲರೂ ಕೂಡ ಉದಾಹರಣೆಗೆ ನಮ್ಮ ವೈದ್ಯಕೀಯ ಶಿಕ್ಷಣ ಮಂತ್ರಿಯಾಗಿರುವ ಡಾ: ಸುಧಾಕರ್‌ರವರು ಎಲ್ಲರೂ ಕೊರೋನಾಕ್ಕೆ ತುತ್ತಾಗಿದ್ದಾರೆ. ಏಕೆಂದರೆ, ಅವರು ಜನಸಂಪರ್ಕವನ್ನು ಮಾಡಿ ಅವರ ಜೊತೆ ಸಮಸ್ಯೆಗಳನ್ನು ಆಲಿಸುವಂತಹ ಕೆಲಸ ಮಾಡಿದ್ದಾರೆ. ಅದನ್ನು ನೀವು ಉಲ್ಲೇಖ ಮಾಡುವುದಿಲ್ಲ. ಬರೀ ಅದರಲ್ಲಿ ಅಷ್ಟು ದುಡ್ಡು, ಇದರಲ್ಲಿ ಇಷ್ಟು ದುಡ್ಡು ಕೆಲವು ಸಂದರ್ಭಗಳಲ್ಲಿ ನಾನು ನಿಮಗೆ ಹೇಳಿದೆ;

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು):–** ಸ್ವಾಮಿ, ಮಂತ್ರಿಗಳು ಜನರ ಸಂಪರ್ಕದಲ್ಲಿರಲಿಲ್ಲ, ಅವರು ಹೆಂಡತಿ ಮಕ್ಕಳ ಜೊತೆ ಈಜುಕೊಳದಲ್ಲಿ ಈಜಾಡುತ್ತಿದ್ದರು. ಅದು ನಿಮಗೆ ಗೊತ್ತಿದೆಯೇ?

**ಶ್ರೀ ಎಂ.ಕೆ. ಪ್ರಾಣೇಶ್:–** ಈ ರೀತಿಯ ಹೇಳಿಕೆ ಕೊಡುವುದರಲ್ಲಿ ಒಂದಂತೂ ಅರ್ಥ ಮಾಡಿಕೊಳ್ಳಬೇಕು. ಅವರು ಆತ್ಮವಿಮರ್ಶೆಯನ್ನು ಮಾಡಿಕೊಳ್ಳಬೇಕು. ಇದೇ ವ್ಯವಸ್ಥೆಯಡಿ ಬಂದಿದ್ದಕ್ಕೆ ಆಡಳಿತ ಪಕ್ಷದ ಸ್ಥಾನದಲ್ಲಿ ಕುಳಿತುಕೊಳ್ಳಬೇಕಾದವರು ವಿರೋಧಪಕ್ಷಕ್ಕೆ ಏಕೆ ಹೋದರು ಎಂದರೆ ಇದೇ ರೀತಿ ಮಾತನಾಡಿ ಜನರ ದಿಕ್ಕು ತಪ್ಪಿಸಿ; ಇದಕ್ಕೆ ಸಾಕ್ಷಿ ಎಂದರೆ;

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಅಲ್ಲಿ ಕುಳಿತು ವಿರೋಧಪಕ್ಷದ ಬಗ್ಗೆ ಮಾತನಾಡಬೇಡಿ ನೀವು ಅತಿ ಶೀಘ್ರದಲ್ಲಿ ಇಲ್ಲಿಗೆ ಬರುತ್ತೀರಿ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಇದಕ್ಕೆ ಸಾಕ್ಷಿ ಎಂದರೆ, ಅವರು ಮಾತನಾಡಿರುವುದು ದಾಖಲೆಯಾಗಿದೆ ಅದನ್ನು ನೋಡಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಅಲ್ಲಿ ಕುಳಿತಿರುವವರು ಕುದುರೆ ವ್ಯಾಪಾರ ಮಾಡಿ ಬಂದಿದ್ದಾರೆ.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್:–** ನಾನು ಮುಗಿಸುತ್ತೇನೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** 104 ದೊಡ್ಡದಲ್ಲ, ನಾವು ಕೆಲವು ವಿಚಾರಗಳಲ್ಲಿ ರಾಜಕಾರಣದ ಮಾತನಾಡುವುದಿಲ್ಲ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ನಾರಾಯಣಸ್ವಾಮಿಯವರು ಒಂದು ಮಾತನ್ನು ಹೇಳಿದರು ಆದರೆ ನಮಗೆ ಅದರ ಅನುಭವ ಇಲ್ಲ, ನಾವು ಹಾಗೆ ಮಾಡುವುದಿಲ್ಲ.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ಹೇಗೆ Corona Warriors ಇದ್ದಾರೆ, Political Warriors ನಿಮ್ಮ ಹತ್ತಿರ ಇದ್ದಾರೆ. ಖರೀದಿ ಮಾಡುವ ಶಕ್ತಿ ನಿಮಗಿದೆ. ಅವನ್ನೆಲ್ಲಾ ಮಾತನಾಡಬೇಡಿ. ಅದರಿಂದ ನಿಮಗೂ ಮುಜುಗರ, ನಮಗೂ ಮುಜುಗರವಾಗುತ್ತದೆ.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್:-** ಅಲ್ಲಿ ನ್ಯಾಯ ಸಿಗುತ್ತಿಲ್ಲ ಎಂದು ಗೊತ್ತಾದ ನಂತರ ನಮ್ಮ ಕಡೆಗೆ ಬಂದಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಏಕೆ ಬಂದಿದ್ದಾರೆಂದು ಚರ್ಚೆಯಾಗಲಿ ಹೇಳುತ್ತೇವೆ.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಅವರ ರಾಜಕೀಯದ ಅನುಭವಕ್ಕೆ ತಕ್ಕದಾಗಿ ಸ್ಥಾನಮಾನಗಳನ್ನು ಕೊಟ್ಟಿದ್ದರೆ ಅವರು ನಿಮ್ಮಲ್ಲಿಯೇ ಇರುತ್ತಿದ್ದರು. ಅವರ ರಾಜಕೀಯ ಅನುಭವಗಳನ್ನು ಇಟ್ಟುಕೊಳ್ಳುವುದಕ್ಕೆ ನಿಮಗೆ ಗೊತ್ತೇ ಆಗಲಿಲ್ಲ. ಏನೇನೋ monopoly ಮಾಡಿದಿರಿ ಅದಕ್ಕೆ ಬೇಡವೆಂದು ಎಲ್ಲಿ ನ್ಯಾಯವಿದೆ ಅಲ್ಲಿಗೆ ಬಂದಿದ್ದಾರೆ. ಮಾನ್ಯ ನಾರಾಯಣಸ್ವಾಮಿಯವರು ಹೇಳಿದ ಒಂದು ಸಣ್ಣ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಶ್ರೀ ಪಿ.ಆರ್. ರಮೇಶ್‌ರವರೇ ಮಾತನಾಡಿ.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ನಾರಾಯಣಸ್ವಾಮಿಯವರು ಒಂದು ಮಾತನ್ನು ಹೇಳಿದರು. ನಂಬುವಂತಹ ಸುಳ್ಳನ್ನು ಹೇಳಬೇಕು ಎಂದು ಹೇಳಿದರು. ಇದೇ ಕಾರಣಕ್ಕೆ ನೀವು ಅಧಿಕಾರವನ್ನು ಕಳೆದುಕೊಂಡಿದ್ದೀರಿ. ಏಕೆಂದರೆ, ಸುಳ್ಳನ್ನು ಹೇಳಿ ನಂಬಿಸಿ, ಜನರ ದಿಕ್ಕು ತಪ್ಪಿಸಿ (ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿ:-** ನೋಡಿ ನಿಮ್ಮ ಕೆಲಸ ಅದು, ಒಂದು ಸುಳ್ಳನ್ನು ನೂರು ಸಲ ಹೇಳಿದರೆ ಅದು ನಿಜ ಆಗುತ್ತದೆ ಎಂದು ನಂಬಿರುವಂತಹವರು ನೀವು, ನಾವಲ್ಲ. ಕುದುರೆ ವ್ಯಾಪಾರ ಮಾಡಿ ಹಿಂಬಾಗಿಲಿನಿಂದ ಸರ್ಕಾರ ಮಾಡಿರುವಂತಹವರು ನೀವು.

**ಶ್ರೀ ಎಂ.ಕೆ. ಪ್ರಾಣೇಶ್:-** ಅದಕ್ಕೋಸ್ಕರ ಸುಳ್ಳು ಹೇಳುವುದನ್ನು ಬಿಡಿ, ಜನರ ಪರವಾಗಿ ಕೆಲಸ ಮಾಡಿ.

**ಶ್ರೀ ಎಂ. ನಾರಾಯಣಸ್ವಾಮಿ:-** ಒಂದು ಸುಳ್ಳನ್ನು ನೂರು ಸಲ ಹೇಳಿದರೆ ಅದು ನಿಜ ಆಗುತ್ತದೆ ಎಂಬ ಭಾವನೆಯನ್ನು ಇಟ್ಟುಕೊಂಡಿರುವವರು ತಾವು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ಒಂದು ಗಂಟೆಗಳ ಕಾಲ ಮಾತನಾಡಿದ್ದೀರಿ ಅದು ಸಾಲುವುದಿಲ್ಲವೇ?

**ಶ್ರೀ ಪಿ.ಆರ್. ರಮೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ಜಂಟಿ ಇದ್ದ ನನ್ನ ಪ್ರಶ್ನೆಯನ್ನು ತಾವು ಅರ್ಧಗಂಟೆಗೆ ಚರ್ಚೆಗೆ ಕೊಟ್ಟಿದ್ದಕ್ಕೆ ತಮಗೆ ನಾನು ವಂದಿಸುತ್ತಾ, ಇವತ್ತು ಕೊರೊನಾ ಎನ್ನುವುದು ಇಡೀ ಜಗತ್ತನ್ನೇ ಆವರಿಸಿಕೊಂಡಿರುವ ಒಂದು ಕಾಯಿಲೆ. ಈ ಕಾಯಿಲೆ ಮೂಲತಃವಾಗಿ ಬಂದಿರುವುದು ಚೀನಾದಿಂದ ಎಂಬುದು ಎಲ್ಲರಿಗೂ ಗೊತ್ತು. ಅದು ಅಲ್ಲಿನ ವಾತಾವರಣ ಮತ್ತು ಅಲ್ಲಿನ ಆಹಾರದ ಪದ್ಧತಿ ಮತ್ತು ಅಲ್ಲಿನ ಜೀವನದ ಶೈಲಿಗಳ ಬಗ್ಗೆ ಇರುವಂತಹ ಒಂದು ಆಧಾರದಲ್ಲಿ ಈ ಒಂದು ಕೊರೊನಾ ವೈರಾಣು ಅಲ್ಲಿ ಉತ್ಪತ್ತಿಯಾಗಿದೆ ಎಂದು ಹೇಳುತ್ತಾರೆ. ಅದೇನೇ ಆದರೂ ನಮ್ಮ ದೇಶಕ್ಕೆ ಆ ಕೊರೊನಾ ವೈರಸ್ ಬಂದಿರುವುದು ಹೇಗೆ ಎನ್ನುವುದು ಬಹಳ ಮುಖ್ಯವಾಗಿದೆ. ಇವತ್ತು ಚೈನಾಗೂ ಇಲ್ಲಿಗೂ ಏನು ಸಂಬಂಧ? ಸುಮಾರು ಹತ್ತು ಸಾವಿರ ಕಿಲೋ ಮೀಟರ್ ದೂರದಿಂದ ಈ ಕಾಯಿಲೆ ಬರಬೇಕೆಂದರೆ ಅದು ಎರಡೇ ಮೂಲ. ಒಂದು ವಿಮಾನದ ಮುಖಾಂತರ ಬರಬೇಕು, ಇಲ್ಲವೆಂದರೆ ಸಮುದ್ರದ ಮುಖಾಂತರ ಬರಬೇಕು. ನಮ್ಮ ದೇಶದಲ್ಲಿ ಈ ಎರಡು ದಾರಿಗಳಿಂದ ಬರುವುದು ಬಿಟ್ಟರೆ ಬೇರೆ ದಾರಿಗಳಿಂದ ಇಲ್ಲ. ರಸ್ತೆಯಲ್ಲಿ ಬರುವುದಕ್ಕೆ ಆಗುವುದೇ ಇಲ್ಲ. ಹಾಗಾಗಿ ಇವತ್ತು ಈ ಕಾಯಿಲೆ ನಮ್ಮ ದೇಶಕ್ಕೆ ಹೇಗೆ ಬಂತು ಎನ್ನುವುದು ಬಹಳ ಮುಖ್ಯ. Covid-19 ಎಂದರೆ Corona Virus Disease ಎಂದು ಹೇಳುವುದಕ್ಕೆ Covid ಎಂದು ಹೇಳುತ್ತಾರೆ. 2019ರಲ್ಲಿ ಇದು ಉದ್ಭವವಾಗಿರುವುದರಿಂದ 19 ಎಂದು ಹೇಳುತ್ತಾರೆ. ನವೆಂಬರ್‌ನಲ್ಲಿ ಕಾಣಿಸಿಕೊಂಡ ಈ virus WHO (World Health Organization) ಒಂದು signal ಕೊಡುತ್ತದೆ. ಅದೇನೆಂದರೆ, ಇಡೀ ಪ್ರಪಂಚದಲ್ಲಿ ಜನವರಿ 10ನೇ ತಾರೀಖು ಪ್ರಪ್ರಥಮವಾಗಿ ನಮ್ಮ ದೇಶಕ್ಕೂ ಸೇರಿದ ಹಾಗೆ ಕೋವಿಡ್ ಎನ್ನುವ ಮಹಾಮಾರಿ ಬರುವಂತಹದ್ದಾಗಿದೆ, ಈ virus ಬಹಳಷ್ಟು ವೇಗವಾಗಿ ಹರಡುತ್ತದೆ, ಇದನ್ನು ತಡೆಗಟ್ಟುವುದಕ್ಕೆ ಎಲ್ಲಾ ಕ್ರಮಗಳನ್ನು ಆಯಾ ದೇಶದವರು ತೆಗೆದುಕೊಳ್ಳಬೇಕೆಂದು ಹೇಳಿತು. ಹಲವಾರು ದೇಶಗಳು ಕ್ರಮಗಳನ್ನು ತೆಗೆದುಕೊಂಡಿವೆ. ಪ್ರಪಂಚದಲ್ಲಿ ಬಹಳ ದೇಶಗಳಲ್ಲಿಲ್ಲ, ಕೆಲವು ದೇಶಗಳಲ್ಲಿ ಈಗಾಗಲೇ ಈ virus ಪ್ರವೇಶಿಸಿದೆ. It is because of carelessness. ನಮ್ಮ ದೇಶವನ್ನು ಅವರ ದೇಶದ ಬಗ್ಗೆ ಹೋಲಿಕೆ ಮಾಡುವುದು, ಅವರ ದೇಶಕ್ಕೆ ಇನ್ನೊಂದು ದೇಶವನ್ನು ಹೋಲಿಕೆ ಮಾಡುವುದು ಬೇಡ. ಇಲ್ಲಿ ಯಾವತ್ತು ವಿಶ್ವ ಆರೋಗ್ಯ ಸಂಸ್ಥೆ ಹೇಳಿದಂತಹ ಮಾತನ್ನು ಈ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ದೇಶ ಹಗುರವಾಗಿ ತೆಗೆದುಕೊಂಡಿತು ಎನ್ನುವುದು ಬಹಳ ಮುಖ್ಯವಾಗಿದೆ. ಒಂದು ಸರ್ಕಾರ ಅಂದರೆ ರಾಜ್ಯ ಸರ್ಕಾರ ಇರಬಹುದು, ಕೇಂದ್ರ ಸರ್ಕಾರ ಇರಬಹುದು. ಇದೊಂದು Federal System ನಲ್ಲಿ ನಮ್ಮ ದೇಶ ಆಳುವಂತಹದ್ದು. ಇವತ್ತು ಯಾವುದೇ ಒಂದು ರಾಜ್ಯಕ್ಕಿರಬಹುದು, ಊರುಗಳಿಗಾಗಿರಬಹುದು ಅದು ಬಂದಾಗ ಪ್ರತಿಯೊಬ್ಬ ನಾಗರಿಕನಿಗೂ ಪ್ರತಿಯೊಬ್ಬ ಭಾರತೀಯನಿಗೂ ಅದು ಕೆಡುಕು ಆಗುತ್ತದೆ. ಜನವರಿ 10ನೇ ತಾರೀಖು ವಿಶ್ವ ಆರೋಗ್ಯ ಸಂಸ್ಥೆಯವರು ಹೇಳಿದರು ಆದರೆ ನಮ್ಮ ದೇಶದ ಆಡಳಿತ ಅದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿತು. ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳಬೇಕು. ಆದರೆ ಫೆಬ್ರವರಿಯಲ್ಲಿ ನಮ್ಮ ದೇಶಕ್ಕೆ President of America ಬರುವುದಿತ್ತು. ಅವರ ಜೊತೆಗೆ ಬೇರೆ ಬೇರೆ ದೇಶಗಳಿಂದ ಹತ್ತು ಸಾವಿರ NRI's (Non-Resident Indian) and Foreigners ಬರುವುದಿತ್ತು. ಹತ್ತು ಸಾವಿರ ಜನ ನಮ್ಮ ದೇಶಕ್ಕೆ ಬರುವಂತಹದ್ದು ಅಹಮದಾಬಾದ್‌ನಲ್ಲಿ ಆಗುವಂತಹ ಒಂದು event ನಲ್ಲಿ ಭಾಗವಹಿಸುವುದಾಗಿತ್ತು. ಅಲ್ಲಿ ಭಾಗವಹಿಸುವುದಕ್ಕೆ ಇಷ್ಟು ಜನರು ಬರುವುದಕ್ಕೆ ನಾವು ವಿಮಾನ ಮತ್ತು ಬೇರೆ ಬೇರೆ ಸಾರಿಗೆ ವ್ಯವಸ್ಥೆಯನ್ನು ತರಬೇಕಾಗುತ್ತದೆ. ಅದು Domestic Airports or International Airports ಇರಬಹುದು, ತರುವುದು ಆಗಲೇಬೇಕು.

(ಮುಂದು)

(776) 22–09–2020/ 05–10/ ಕೆಹೆಚ್–ಎಂಡಿ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್ (ಮುಂದು):–**

ಇವತ್ತು ಜನವರಿ 10ನೇ ತಾರೀಖು WHO (World Health Organization) ರವರು ಹೇಳಿದಾಗ ಇಡೀ ದೇಶದಲ್ಲಿ ಕೇವಲ Airports and Ports ಗಳನ್ನು ನಾವು lockdown and seal down ಮಾಡಿದ್ದರೆ ಈ ಸಮಸ್ಯೆ ಇಷ್ಟು ಉದ್ಭವ ಆಗುತ್ತಿರಲಿಲ್ಲ. ಇದನ್ನು administration ಒಪ್ಪಿತು. ಆದರೆ, ಇದನ್ನು ನಮ್ಮ ರಾಜಕೀಯ ನಾಯಕರುಗಳು ಒಪ್ಪಲಿಲ್ಲ. ಇದಕ್ಕೆ ಕಾರಣವೇನೆಂದರೆ, ನಾವು ಅಹಮದ್‌ಬಾದ್‌ನಲ್ಲಿ ಈ event ಮಾಡಲೇಬೇಕು ಎಂದು ಅವರು ಒಪ್ಪಲಿಲ್ಲ. ಹಾಗಾಗಿ ಆವತ್ತು ಆ ರೀತಿಯ ನಿರ್ಣಯ ತೆಗೆದುಕೊಂಡಿತ್ತು. ಫೆಬ್ರವರಿ–23ನೇ ತಾರೀಖು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟ್ರಂಪ್‌ನವರು ನಮ್ಮ ದೇಶಕ್ಕೆ ಬಂದರು. ಆವತ್ತು ನಮ್ಮ ದೇಶಕ್ಕೆ ಬಂದಾಗ ಈ 10 ಸಾವಿರ ಜನ ಬಂದಿದ್ದರಲ್ಲವೇ, ಈ 10 ಸಾವಿರ ಜನ ಅಹಮದ್‌ಬಾದ್‌ನಿಂದ ನೇರವಾಗಿ ಬರಲಿಲ್ಲ. ಕಲ್ಕತ್ತಾಗೆ ಬಂದು ಅಹಮದ್‌ಬಾದ್‌ಗೆ ಬಂದರು. ಮಂಬೈಗೆ ಬಂದು ಅಹಮದ್‌ಬಾದ್‌ಗೆ ಬಂದರು. ಬೆಂಗಳೂರಿಗೆ ಬಂದು ಅಹಮದ್‌ಬಾದ್‌ಗೆ ಹೋದರು. ಮತ್ತೆ ಅಹಮದ್‌ಬಾದ್‌ನಿಂದ ಬೆಂಗಳೂರಿಗೆ ಬಂದರು. ಹೀಗೆ ಎಲ್ಲಾ ಕಡೆ ಈ 10 ಸಾವಿರ ಜನರು ಪ್ರವಾಸ ಮಾಡಿ ಓಡಾಡಿದ್ದಾರೆ. ಈ ಜನ ಓಡಾಡಿರುವಂತಹದ್ದು ಒಂದು ಕಡೆಯಾದರೆ, ಫೆಬ್ರವರಿ 24ನೇ ತಾರೀಖಿನಂದು ಟ್ರಂಪ್‌ನವರು ದೇಶದಿಂದ ಹೋದರು. ಆದಾದ ಮೇಲೆ ನಮ್ಮ ದೇಶದಲ್ಲಿ ಸರ್ಕಾರ ಕ್ರಮಗಳನ್ನು ತೆಗೆದುಕೊಂಡಿದ್ದರೆ ಇಷ್ಟು ಮಟ್ಟಿಗೆ ಆಗುತ್ತಿರಲಿಲ್ಲ. ಮತ್ತೆ ಈ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ತಡ ಮಾಡಲಾಯಿತು. ಇದಕ್ಕೆ ಕಾರಣವೇನೆಂದರೆ, ಒಂದು ರಾಜ್ಯದಲ್ಲಿ ಒಂದು ಸರ್ಕಾರವನ್ನು ತೆಗೆದು ಇನ್ನೊಂದು ಸರ್ಕಾರವನ್ನು ಸ್ಥಾಪನೆ ಮಾಡಬೇಕೆಂದು ಅಲ್ಲಿ ಬಳಸಿಕೊಳ್ಳುವಂತಹ Airports ಮತ್ತೆ ಇದಕ್ಕೆ ಬಳಸಿಕೊಳ್ಳಬೇಕೆಂದು ಬೆಂಗಳೂರಿಗೂ ಆ ರಾಜ್ಯದಿಂದ ಬಂದಿರುವಂತಹದ್ದಾಗಿದೆ. ಕೆಲವು ಎಂ.ಎಲ್.ಎ., ಹೋಟೆಲ್‌ಗಳಲ್ಲಿ ಇದ್ದದ್ದು ಆಯಿತು.

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸದಸ್ಯರೇ, ಕೊರೋನಾ . . .

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ತೇಜಸ್ವಿನಿಗೌಡರವರೇ, ಹೀಗಾಗಿ ಇದೆಲ್ಲಾ ನಾನು ವ್ಯವಸ್ಥೆಯ ಬಗ್ಗೆ ಹೇಳುತ್ತಿದ್ದೇನೆ. ಇದು ಕೊರೋನಾ ಆಗಿದೆ. ತಾವು ಹೇಳುವಂತಹದ್ದನ್ನು ನಾವು ಕೇಳಬೇಕು. ನಾವು ಹೇಳುವುದನ್ನು ತಾವು ಕೇಳಬಾರದೇ?

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಪಿ.ಆರ್.ರಮೇಶ್‌ರವರೇ, politicize ಮಾಡಿದ್ದರೆ ತಮ್ಮ ಉದ್ದೇಶ ಈಡೇರುವುದಿಲ್ಲ ಎಂದು ಹೇಳುತ್ತಿದ್ದೇನೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಆವತ್ತು ಮಾರ್ಚ್ 23ನೇ ತಾರೀಖು ಒಂದು ರಾಜ್ಯದ ಸರ್ಕಾರ ಸ್ಥಾಪನೆಯಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣ ವಚನವನ್ನು ತೆಗೆದುಕೊಳ್ಳುತ್ತಾರೆ. ಪ್ರಮಾಣ ವಚನವನ್ನು ತೆಗೆದುಕೊಂಡು ಮಾರ್ಚ್ 24ನೇ ತಾರೀಖು ದೇಶದ ಸರ್ಕಾರ ಇಡೀ ದೇಶವನ್ನು lockdown ಮಾಡಿ ಎಂದು ಒಂದು ಆದೇಶವನ್ನು ಹೊರಡಿಸುತ್ತದೆ. ಅಲ್ಲಿಗೆ ಜನವರಿ 10ನೇ ತಾರೀಖು WHO ರವರು ಹೇಳುತ್ತಾರೆ. ಮತ್ತೆ ಫೆಬ್ರವರಿ ಮೊದಲನೇ ವಾರದಲ್ಲಿ pandemic ಎಂದು ಘೋಷಣೆ ಮಾಡುತ್ತಾರೆ. ಇಡೀ ಪ್ರಪಂಚದಲ್ಲಿ ಇದು ಆವರಿಸಿಕೊಂಡಿರುವಂತಹ ಒಂದು ಸಾಂಕ್ರಾಮಿಕ ರೋಗ ಆಗಿದೆ. ನಮ್ಮ ದೇಶದಲ್ಲಿಯೂ ಸಾಂಕ್ರಾಮಿಕ ರೋಗ ಹರಡುತ್ತದೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿದ್ದರೂ ಕೂಡ ಇದನ್ನು ಒಂದೂವರೆ ತಿಂಗಳುಗಳ ಕಾಲ lockdown and seal down ಮಾಡುವಂತಹದ್ದಕ್ಕೆ postpone ಮಾಡುತ್ತಾ ಬಂದು ಮಾರ್ಚ್ 24ನೇ ತಾರೀಖು lockdown ಮಾಡಬೇಕೆಂದು ದೇಶದಲ್ಲಿ ಆದೇಶ ಮಾಡುತ್ತಾರೆ. ಮಾರ್ಚ್ 25ನೇ ತಾರೀಖಿನಿಂದ ನಮ್ಮ ದೇಶ lockdown ಆಗುತ್ತದೆ. ಇದು ಯಾರ ತಪ್ಪು? ಇದರ ಜವಾಬ್ದಾರಿ ಸರ್ಕಾರದ್ದಾಗಿದೆ. ಇದು ಸರ್ಕಾರದ ತಪ್ಪಲ್ಲ ಎಂದು ಮಾಜಿ ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಹಾಗೆಯೇ ನಮ್ಮ ನಾಯಕರಾದ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಮತ್ತು ಮಾನ್ಯ ಎಂ.ಕೆ. ಪ್ರಾಣೇಶ್‌ರವರು ಸರ್ಕಾರದ್ದು ಏನು ತಪ್ಪು ಇದೆ ಎಂದು ಹೇಳಿದರು. ಇದು ತಪ್ಪಲ್ಲವೇ, ಫೆಬ್ರವರಿ ಕೊನೆಯಲ್ಲಿ ಅಥವಾ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದರೆ ಖಂಡಿತವಾಗಿಯೂ ದೇಶ ಇಷ್ಟೊಂದು ಹಾಳಾಗುತ್ತಿರಲಿಲ್ಲ. ಇದು ಒಂದು ರೀತಿಯಲ್ಲಿ ನಾವು negligence ಇವತ್ತು ನಾವು ಈ ಒಂದು ಹಂತದಲ್ಲಿದ್ದೇವೆ. ಇವತ್ತು ಕೋಟಿ ಲೆಕ್ಕದಲ್ಲಿ ಜನರಿಗೆ affect ಆಗಿದೆ. ನನ್ನನ್ನು ಸೇರಿಸಿಕೊಂಡು ಇವತ್ತು ಇಲ್ಲಿರುವ ಎಷ್ಟು ಜನರಿಗೆ ಕೊರೋನಾ ಬಂದು ಹೋಗಿದೆಯೋ ನನಗೆ ಗೊತ್ತಿಲ್ಲ. ನಮ್ಮ immune system ಚೆನ್ನಾಗಿರುವುದರಿಂದ ನಾವು ಇದ್ದೇವೆಯೋ ಎಂಬುದು ಸಹ ನನಗೆ ಗೊತ್ತಿಲ್ಲ. ಕೆಲವರಿಗೆ immune system ಚೆನ್ನಾಗಿ ಇಲ್ಲದೇ ಇರುವುದಕ್ಕೆ ಹೋಗಿದ್ದಾರೋ ಎಂಬುದು ಗೊತ್ತಿಲ್ಲ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, For example ನಮ್ಮ ದೇಶದ ಪ್ರಧಾನ ಮಂತ್ರಿಗಳು ಸರ್ವ ಪಕ್ಷಗಳ ಸಭೆಯನ್ನು ಮಾಡಿದ್ದರು. ಬೇರೆ ಬೇರೆ ರಾಜ್ಯದ ಮುಖ್ಯಮಂತ್ರಿಗಳು ಸಭೆಯನ್ನು ಮಾಡಿದ್ದರು. ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಏನು ಸಲಹೆಗಳನ್ನು ಕೊಟ್ಟರು. ಕೇಂದ್ರದಲ್ಲಿ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಎಷ್ಟು ಬಾರಿ ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಮಾಡಿದರು. ಇದರ ಬಗ್ಗೆ ತಾವು ವಿರೋಧ ಮಾಡಿದ್ದೀರಾ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಎನ್.ರವಿಕುಮಾರ್‌ರವರೇ, ಇಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಪಿ.ಆರ್.ರಮೇಶ್‌ರವರೇ, Just a minute.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಎನ್.ರವಿಕುಮಾರ್‌ರವರೇ, ದಯವಿಟ್ಟು, ಆ ರೀತಿ ಮಾತನಾಡಬೇಡಿ. ತಾವು ಮಾತನಾಡುತ್ತಿರುವುದಕ್ಕೆ ನಾನು ಗೌರವ ಕೊಟ್ಟಿದ್ದೇನೆ. ಅದನ್ನು ದುರುಪಯೋಗಪಡಿಸಿಕೊಳ್ಳಬೇಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್.ರಮೇಶ್‌ರವರು ಒಂದು ರೀತಿಯಲ್ಲಿ ಹೇಗೆ ಹೇಳುತ್ತಿದ್ದಾರೆಯೆಂದರೆ, ಒಂದು ರೀತಿಯಲ್ಲಿ ದೇಶದಲ್ಲಿ ಬಿಜೆಪಿ ಪಕ್ಷವೇ ಕರೋನಾವನ್ನು ಉಂಟು ಮಾಡುವುದಕ್ಕೋಸ್ಕರವೇ ಮಾಡಿದೆ. ಹಾಗೆಯೇ ಏನು ತಂತ್ರವನ್ನು ಮಾಡಿಕೊಂಡಿದೆ ಎಂದು ಹೇಳುತ್ತಿದ್ದಾರೆ. ದೇಶದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಮಾಡಿ, ದೊಡ್ಡ ದೊಡ್ಡ ಸಮಾವೇಶಗಳನ್ನು ಮಾಡಬಾರದು ಎಂದು ಹೇಳಿದೆ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಎನ್.ರವಿಕುಮಾರ್‌ರವರೇ, ಇಡೀ ದೇಶದಲ್ಲಿ ಈ ಲಾಕ್‌ಡೌನ್ ಅನ್ನು ಮಾಡುವುದಕ್ಕೆ 4 ಗಂಟೆಗಳ ಸಮಯವನ್ನು ಕೊಟ್ಟಿದ್ದು, ಒಂದು ದಿನ ಇಲ್ಲ. ಇಡೀ ದೇಶದಲ್ಲಿರುವಂತಹ ಯಾವ ರಾಜ್ಯದ ಮುಖ್ಯಮಂತ್ರಿಗಳೂ ಸರಿಯಾದ ನಿರ್ಧಾರವನ್ನು ತೆಗೆದುಕೊಂಡಿಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಪಿ.ಆರ್.ರಮೇಶ್‌ರವರೇ ಕರ್ನಾಟಕ ರಾಜ್ಯದಲ್ಲಿ ತಾವು ಎಷ್ಟು ಬಾರಿ ಸಭೆಗಳನ್ನು ಮಾಡಲಾಗಿದೆ, ಈ ರೀತಿ ಮಾತನಾಡುವುದು ಸರಿಯಲ್ಲ. ಇದು ತಮಗೆ ಶೋಭೆ ತರುವುದಿಲ್ಲ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಆದರೆ ಇವರು ಮಾಡಿರುವಂತಹ ಆದೇಶಗಳೆಲ್ಲಾ ಯಾರನ್ನೋ ಕೇಳಿ ಯಾವ ಆದೇಶಗಳನ್ನು ಮಾಡಿಲ್ಲ.

**ಸಭಾಪತಿಯವರು:–** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು ಮಾತನಾಡಿದ್ದು ಮುಗಿಯಿತೇ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದು ಮುಗಿದಿಲ್ಲ. ನಾನು ಮಾತನಾಡುವುದಕ್ಕೆ ಈಗತಾನೇ ಪ್ರಾರಂಭ ಮಾಡಿದ್ದೇನೆ. ಇದು ನನ್ನದೇ ಪ್ರಶ್ನೆಯಾಗಿದ್ದು, ನನಗೆ ಮಾತನಾಡುವುದಕ್ಕೆ ತಾವು ಬಿಡುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಪಿ.ಆರ್.ರಮೇಶ್‌ರವರೇ, ಮತ್ತೆ ಏಕೆ ತಾವು yield ಆಗುತ್ತೀರಿ?

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಆಯಿತು. ಇವತ್ತಿನ ದಿವಸ ಇಂತಹ ಪರಿಸ್ಥಿತಿ ಬಂದಿದೆ. ಇವತ್ತು ಮಾನ್ಯ ಎಂ.ನಾರಾಯಣಸ್ವಾಮಿಯವರು ಯಾವೆಲ್ಲಾ ವಿಷಯಗಳನ್ನು ಮಾತನಾಡಿದರು. ಅದನ್ನೆಲ್ಲಾ ನಾನು endorse ಮಾಡುತ್ತೇನೆ ಮತ್ತು ಇದರ ಜೊತೆಗೆ ಇವತ್ತಿನ ದಿವಸ ಖಾಯಿಲೆ ಬಂದಿರುವಂತಹದ್ದು. ಮಾನ್ಯ ಸಿ.ಟಿ.ರವಿಯವರ ಊರು ಚಿಕ್ಕಮಂಗಳೂರಿನಲ್ಲಿ ಯಾವುದೋ ಆಶ್ರಯ ಆಸ್ಪತ್ರೆಯಲ್ಲಿ ಯಾವುದೋ ಒಬ್ಬ ಕೋವಿಡ್–19 ರೋಗಿಯ ಹೆಸರನ್ನು ಇಲ್ಲಿ ಹೇಳುವುದು ಬೇಡ. ಈ ಆಸ್ಪತ್ರೆಗೆ ಈ ವ್ಯಕ್ತಿ ಹೋಗಿ ಬಂದಿರುವಂತಹ ಒಂದು ಬಿಲ್ ಇದೆ. ಈ ಬಿಲ್‌ನಲ್ಲಿ ಇರುವುದನ್ನು ನಾನು ಇಲ್ಲಿ ಓದುತ್ತೇನೆ. ಇವರಿಗೆ ಒಟ್ಟು 9,25,600/– ರೂಪಾಯಿಗಳು ಕೋವಿಡ್–19 ವ್ಯಕ್ತಿಗೆ ಬಿಲ್ ಆಗಿರುತ್ತದೆ. ಇದರಲ್ಲಿ Doctors Visit Charges, ಡಾಕ್ಟರ್ visit ಮಾಡಿದ್ದರಲ್ಲವೇ, ಇದನ್ನು ಆಸ್ಪತ್ರೆಯಲ್ಲಿ ಮಾಡಿದ್ದೋ ಅಥವಾ ಇನ್ನೆಲ್ಲಿ ಮಾಡಿರುವುದೋ ಗೊತ್ತಿಲ್ಲ. ಒಬ್ಬ Physician ಗೆ 45,000/– ರೂಪಾಯಿಗಳು, ಒಬ್ಬ Covid-19 In-charge ಗೆ 36,000/– ರೂಪಾಯಿಗಳು, ಇನ್ನೊಬ್ಬ Covid-19 In-charge ಗೆ 36,000/– ರೂಪಾಯಿಗಳು, Covid-19 Team Head ಗೆ 45,000/– ರೂಪಾಯಿಗಳು, Covid overall In-charge ಗೆ 36,000/– ರೂಪಾಯಿಗಳ ಬಿಲ್ ಅನ್ನು ಮಾಡಿದೆ. ಈ ರೀತಿ ಆಸ್ಪತ್ರೆಗಳು exploit ಮಾಡುವಂತಹ ರೀತಿಯಲ್ಲಿ ಇವತ್ತಿನ ದಿವಸ ಹೋಗುತ್ತಿದೆ ಎಂದರೆ, ನಮ್ಮಲ್ಲಿ ಇದೇ ಸಭೆಗಳಲ್ಲಿ ನಾವು Karnataka Private Medical Establishments Act ಒಂದು ಕಾಯಿದೆಯನ್ನು ಪಾಸ್ ಮಾಡಿದ್ದೇವೆ. ಆ ಕಾಯಿದೆಗೆ ಗೌರವ ಇಲ್ಲವೇ? ಸರ್ಕಾರದ ಒಂದು ನಿಯಂತ್ರಣ ಇರುವಂತಹದ್ದಕ್ಕೆ ಅವಕಾಶ ಇಲ್ಲವೇ, ಈ ರೀತಿ ಇವತ್ತು ಸುಮಾರು 9,25,600/– ರೂಪಾಯಿಗಳನ್ನು ಆ ವ್ಯಕ್ತಿ ಆಸ್ಪತ್ರೆಗೆ ಕಟ್ಟಿದರೆ, ಅವನು ಖಂಡಿತವಾಗಿಯೂ ಕೋವಿಡ್–19 ನಿಂದ ಹೊರಗಡೆ ಬಂದಿದ್ದರೂ ಸಹ ಬಿಲ್ಲನ್ನು ಆಸ್ಪತ್ರೆಗೆ ಕಟ್ಟಿದ ತಕ್ಷಣ ಸತ್ತು ಹೋಗುತ್ತಾನೆ. ಏಕೆಂದರೆ, ಆ ವ್ಯಕ್ತಿ ಸಾಲ ಮಾಡಿ, ಬಿಲ್ಲನ್ನು ಕಟ್ಟಬೇಕು. ಈ ಸಾಲವನ್ನು ತೀರಿಸುವುದಕ್ಕೆ ಆ ವ್ಯಕ್ತಿ ಸಾಯುವವರೆಗೂ ದುಡಿಯಬೇಕು ಅಥವಾ ಆ ವ್ಯಕ್ತಿ ಸಾಯಬಹುದು. ಇವತ್ತಿನ ದಿವಸ ಇಂತಹ ಪರಿಸ್ಥಿತಿ ಇರುವಂತಹದ್ದು. ಮಾನ್ಯ ನಾರಾಯಣಸ್ವಾಮಿಯವರು ಬಹಳಷ್ಟು ಗಂಭೀರವಾದ ವಿಚಾರವಾಗಿದ್ದರೂ ಸಹ ಇವತ್ತು ಸರ್ಕಾರ ಕರೋನಾವನ್ನು ನಿಯಂತ್ರಿಸುವುದಕ್ಕೆ ಸಂಪೂರ್ಣವಾಗಿ ವಿಫಲವಾಗಿದೆ. ಇದನ್ನು ಒಪ್ಪಿಕೊಳ್ಳುವಂತಹದ್ದು ಆಗಬೇಕಾಗುತ್ತದೆ. ಸುಮ್ಮನೆ ನಾವು ಏನೋ ಮಾಡುತ್ತೇವೆ. ಆಗುತ್ತದೆ ಎಂದು ಹೇಳುವುದಲ್ಲ. ಇದರಲ್ಲಿ ತಾವು ವಿಫಲವಾಗಿರುವುದರಿಂದ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಎಷ್ಟರಮಟ್ಟಿಗೆ ಸಾವು–ನೋವುಗಳು ಆಗುತ್ತದೆ ಎಂಬುದು ಗೊತ್ತಿಲ್ಲ. ಕನಿಷ್ಠಪಕ್ಷ ಸರ್ಕಾರ ಈ ಒಂದು attitude ಬದಲಾವಣೆ ಮಾಡಿ. ಅದೇನೆಂದರೆ, learn how to live with corona. ಇವತ್ತು ನಾವೆಲ್ಲಾ ಮಾಡುತ್ತಿರುವುದು ಪ್ರತಿಯೊಬ್ಬ ಮನುಷ್ಯ, ಪ್ರತಿಯೊಬ್ಬ ನಾಗರೀಕ we are learning how to live with corona. ಇವತ್ತು ಕೊರೋನಾ ಜೊತೆ ವಾಸ ಮಾಡುವುದಕ್ಕೆ ನಾವು ಎಲ್ಲಾ ವಾತಾವರಣಗಳನ್ನು ಸರಿ ಮಾಡಿಕೊಳ್ಳುತ್ತಿದ್ದೇವೆ. ತಾವು ಆ ದೃಷ್ಟಿಯಿಂದ ಈ ಒಂದು ಯೋಚನೆಯನ್ನು ಮಾಡಬೇಕು. ಇವತ್ತು ಕೊರೋನಾದಿಂದ ಸಂಕಟಕ್ಕೆ ಒಳಪಡುವಂತಹ ಕೆಲವರು ಇದ್ದರೆ, ಕೆಲವರಿಗೆ ಆನಂದವೋ ಆನಂದ. ಕರೋನಾ ಬಂದಿದ್ದೇ ಸಾಕಪ್ಪ ಎನ್ನುವ ರೀತಿಯಲ್ಲಿ ಇದ್ದಾರೆ. ಆಸ್ಪತ್ರೆಗಳು ಇರಬಹುದು, ಸಂಸ್ಥೆಗಳು ಇರಬಹುದು ಮತ್ತು ನಮ್ಮಂತಹ ರಾಜಕೀಯ ವ್ಯಕ್ತಿಗಳು ಇರಬಹುದು ಇದ್ದರಿಂದ ಲೂಟಿ ಮಾಡುತ್ತಿದ್ದಾರೆ. ಇದ್ದರಿಂದ ಕೆಲವರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅವರಿಗೆ ಮನೆಗಳಲ್ಲಿ ತಿನ್ನುವುದಕ್ಕೆ ಊಟ ಇಲ್ಲ. ಕೆಲಸ ಇಲ್ಲ. ನಮ್ಮ ನಗರದಲ್ಲಿ labourers ಅಥವಾ work force ಸುಮಾರು 30 ಲಕ್ಷ ಜನರು ಬೆಂಗಳೂರಿನಿಂದ ಹೊರಗೆ ಹೋಗಿದ್ದಾರೆ.

(ಮುಂದು)

(777)/22–9–2020/ಎಲ್‌ಎಂ/ಎಕೆ/5–20

**ಶ್ರೀ ಪಿ.ಆರ್.ರಮೇಶ್**(ಮುಂದು):–

ಬೆಂಗಳೂರು ಅಭಿವೃದ್ಧಿ ಹೊಂದಿದ ನಗರ ಎಂದು brand ಆಗಲು ಕಾರಣಕರ್ತರಾದ ಈ ಜನರು ಇವತ್ತು ಬೆಂಗಳೂರಿನಲ್ಲಿ ಇಲ್ಲ. ಇಲ್ಲಿ ಇವತ್ತು ಯಾವುದೇ ರೀತಿಯ ಚಟುವಟಿಕೆಗಳು ನಡೆಯುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರಾದ ಸೋಮಶೇಖರ್‌ರವರಿಗೆ ಚೆನ್ನಾಗಿ ಗೊತ್ತಿದೆ. ಅವರಿಗೆ ಇವತ್ತು ಅವರ ಸೈಟ್‌ಗಳನ್ನು ಮಾರಾಟ ಮಾಡಲು ಆಗುತ್ತಿಲ್ಲ. 20 ಲಕ್ಷ ರೂ.ಗಳಿಗೆ ಒಂದು ಸೈಟ್ ಮಾರಾಟವಾಗುತ್ತಿರುವುದು ಇವತ್ತು 10 ಲಕ್ಷ ರೂ.ಗಳಿಗೂ ಕೇಳುವವರು ಇಲ್ಲ. ಸೈಟ್‌ಗಳನ್ನು ಕೊಳ್ಳುವವರೇ ಇಲ್ಲ. ಇದಕ್ಕೆ ಕಾರಣ ಇವತ್ತು ವಹಿವಾಟು ಎಲ್ಲವು ನಿಂತು ಹೋಗಿದೆ. ಇದು ಸರಿ ಹೋಗಬೇಕಾದರೆ ಖಂಡಿತವಾಗಿ ಇನ್ನು 10 ವರ್ಷಗಳು ಬೇಕಾಗುತ್ತದೆ. ಇವತ್ತು ನಮ್ಮ ದೇಶದಲ್ಲಿಯ ಆರ್ಥಿಕತೆ ಕುಸಿದು ಹೋಗಿದೆ. ಇಡೀ ನಮ್ಮ ದೇಶದ ಆರ್ಥಿಕತೆ minus–24 ಇದೆ ಎಂದು ಎಲ್ಲಾ ಮಾಧ್ಯಮಗಳಲ್ಲಿ ಬರುತ್ತಿದೆ. ಕೋವಿಡ್‌ನಿಂದ ಯಾವ ರೀತಿ ಸಮಸ್ಯೆಗಳು ಬಂದಿವೆ ಅವುಗಳನ್ನು ತಡೆಗಟ್ಟಲು ಪ್ರಯತ್ನಪಡುತ್ತಿಲ್ಲ. ಕೊರೋನಾವನ್ನು ತಡೆಗಟ್ಟುವಲ್ಲಿ ಸರ್ಕಾರ ಫೇಲ್ ಆಗುತ್ತಿದೆ. ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಧಾನ ಮಂತ್ರಿಗಳು 21 ದಿವಸಗಳಲ್ಲಿ ಕೊರೋನಾವನ್ನು ಮುಗಿಸುತ್ತೇವೆ ಎಂದು ಹೇಳಿದರು. ಜಾಗಟೆ ಹೊಡೆಯಿರಿ ಎಂದು ಹೇಳಿದರು. ನಮ್ಮಲ್ಲಿ ಒಬ್ಬ ಎಂಎಲ್ಎ ರವರು ಕ್ಯಾಂಡಲ್ ಹಚ್ಚಿದರೆ ಕೊರೋನಾ ಓಡಿ ಹೋಗುತ್ತದೆ ಎಂದು ಹೇಳಿದರು. ಆ ಕೊರೋನಾಗೆ ಜೀವವೇ ಇಲ್ಲ. It is only a substance, i.e. RNA (Ribonucleic Acid). ಅದು ಒಂದು protein, ಕೊಬ್ಬು ಇರುವಂತಹ ಅಂಶ. ಅದೊಂದು cell. ಜೀವಂತ ಅಣುಗಳಲ್ಲಿ ಹೋದಾಗ ಮಾತ್ರ ಅದು multiply ಆಗುತ್ತದೆ. ಆಗ ಅದು ನಮ್ಮ lungs ಗೆ ತೊಂದರೆ ಕೊಡುತ್ತದೆ. Lungs ಒಳಗೆ ಹೋಗಿ congestion ಮಾಡುತ್ತದೆ. ಕೊರೋನಾವನ್ನು ಮತ್ತು ಜನ ಜೀವನವನ್ನು ಇಂದು ಆಟಿಕೆ ಮಾಡಿಕೊಳ್ಳಲಾಗಿದೆ. 1.6%, 2.0% ಜನರು ಸಾಯುತ್ತಿದ್ದಾರೆ ಎಂದು ಹೇಳುತ್ತಾರೆ. ಇದೊಂದು ಹೇಳಿಕೆಯೇ ಅಲ್ಲ. ಪ್ರತಿಯೊಂದು ಜೀವವು ಬಹಳ ಮುಖ್ಯ. ಪ್ರತಿಯೊಬ್ಬ ಮನುಷ್ಯ ಅವನ ಸಂಸಾರಕ್ಕೆ ಅವನೇ ಆಧಾರ. ಇಂತಹ ಮನುಷ್ಯನನ್ನು ನಾವು ಉಳಿಸುವಂತಹ ಕೆಲಸವನ್ನು ಮಾಡಬೇಕೆ ಹೊರತು ತೆಗೆಯುವಂತಹ ಕೆಲಸವನ್ನು ಮಾಡಬಾರದು. ಇವತ್ತು ಸರ್ಕಾರ ಕೈಗೊಂಡಿರುವ ಎಲ್ಲ ಕಾರ್ಯಕ್ರಮಗಳು ಸಂಪೂರ್ಣವಾಗಿ complete failure ಆಗಿವೆ. ಇಂಡಿಯಾ ಯಾವ ರೀತಿ ಈ ಸಮಸ್ಯೆಯನ್ನು ಬಗೆಹರಿಸುತ್ತದೆ ಎಂದು ಇಡೀ ಜಗತ್ತೆ ನಮ್ಮ ಕಡೆಗೆ ನೋಡುತ್ತಿದೆ. ನಾವು ಬೇರೆಯವರಿಗೆ ಹೋಲಿಸಿಕೊಂಡು ಮಾತನಾಡುವುದು ಬೇಡ, ನಮ್ಮನು ನಾವು ನೋಡಿಕೊಳ್ಳೋಣ. ನಮ್ಮಲ್ಲಿ ಕೊರೋನಾ ಏನಾದರೂ ನಿಯಂತ್ರಣಕ್ಕೆ ಬಂದಿದೆ ಎಂದರೆ it is not because of these steps. It is because of our environment and climate. ಚೈನಾ ಮತ್ತು ಯೋರೋಪನಲ್ಲಿರುವ climate ಗೂ ನಮ್ಮ ದೇಶದ ವಾತಾವರಣಕ್ಕೂ ಬಹಳ ವ್ಯತ್ಯಾಸವಿದೆ. ಅಲ್ಲಿ ಇರುವಂತಹ ಉಷ್ಣಾಂಶ minus ಗೆ ಹೋಗುತ್ತದೆ. ನಮ್ಮಲ್ಲಿ ಆ ರೀತಿ ಇಲ್ಲ. ಈಗ ನಮ್ಮಲ್ಲಿ ಮಳೆಗಾಲ ಬರುತ್ತಿದೆ. ಕೊರೋನಾ ಹರಡಲು ಮಳೆಗಾಲ ತುಂಬಾ supportive ಆಗಿರುತ್ತದೆ. ಹೀಗಾಗಿ ಇಷ್ಟು ಕೊರೋನ ಹರಡುತ್ತಿದೆ. ಒಳ್ಳೆಯ ಬಿಸಿಲು ಇದ್ದಿದರೆ ಕೊರೋನಾ ಇಷ್ಟೊಂದು ಹರಡುತ್ತಿರಲಿಲ್ಲ. Automatic ಆಗಿ ನಮ್ಮ immunity power ಜಾಸ್ತಿ ಆಗುತ್ತಿತ್ತು. ಹೀಗಾಗಿ immunity power ಬರಲು ಏನು ಮಾಡಬೇಕು, ಯಾವ ರೀತಿಯಲ್ಲಿ ಪ್ರತಿ ಎರಡು-ಮೂರು ಗಂಟೆಗೆ ಒಮ್ಮೆ ಬಿಸಿ ನೀರನ್ನು ಕುಡಿಯಬೇಕು, ಸ್ಟೀಮ್ ತೆಗೆದುಕೊಳ್ಳಬೇಕು, ಯಾವ ರೀತಿ ಕಷಾಯ ಕುಡಿಯಬೇಕು ಇದರಿಂದ ನಮ್ಮ lifestyle ನ್ನು ನಾವು ವೃದ್ಧಿಸಿಕೊಳ್ಳಬೇಕು. ಕೊರೋನಾ ಜೊತೆಯಲ್ಲಿ ನಾವು ಜೀವನ ನಡೆಸಬೇಕು ಎನ್ನುವ ಬಗ್ಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಯೋಜನೆಗಳನ್ನು ಹಾಕಿಕೊಂಡು blueprint ತಯಾರಿಸಿ ಅದನ್ನು ಜನರಿಗೆ ತಿಳಿಸುವಂತಹ ಪ್ರಯತ್ನ ಆಗಬೇಕು. ಪರೀಕ್ಷೆ ಬಂದವರನ್ನು ಆಸ್ಪತ್ರೆಗೆ ತೆಗೆದುಕೊಂಡು ಹಾಕುತ್ತೀರಾ, ಕೊರೋನಾ ಬಂದವನು ಕಳ್ಳ ಇದ್ದಹಾಗೆ, ಜೈಲಿನಲ್ಲಿ ಹಾಕಿದ ಹಾಗೆ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಹಾಕಲಾಗುತ್ತಿದೆ. ಕೊರೋನಾ ಬಂದ ಹೊಸದರಲ್ಲಿ symptoms ಇರುವ ವ್ಯಕ್ತಿಯನ್ನು ಹಿಡಿಯಲು ನಾಲ್ಕು ಜನ ಅವನ ಹಿಂದೆ ಓಡುತ್ತಿದರು. ಇದೆಲ್ಲವನ್ನು ನಾವು ನೋಡಿದ್ದೇವೆ. ಇದೊಂದು ಸಾಮಾಜಿಕ ಪಿಡುಗು ಆಗಿದೆ. ಮುಂದೆ ಇದು ಬಹಳ ದೊಡ್ಡ ಸಮಸ್ಯೆಯಾಗುತ್ತದೆ. ಮುಂದೆ ಈ ಸಮಸ್ಯೆ ಇನ್ನು ಹೆಚ್ಚಾಗಬಹುದು. ಇಷ್ಟು ದಿನ ತೆಗೆದುಕೊಂಡ ಕ್ರಮಗಳಿಗೆ ಎಷ್ಟು ಹಣ ಖರ್ಚಾಗಿದೆ ಗೊತ್ತಿಲ್ಲ, ಯಾವ-ಯಾವ ಏಜೆನ್ಸಿಯವರು ಏನೇನು ಕೆಲಸ ಮಾಡಿದ್ದಾರೆ ಅವರಿಗೆ ಬಿಲ್ ಪಾವತಿ ಮಾಡುವಾಗ ಎಲ್ಲಿಂದ ಹಣ ತರುತ್ತಾರೆ, ಎಷ್ಟೆಷ್ಟು ಬಿಲ್ ಆಗಿದೆ ಎನ್ನುವುದು ಇನ್ನು ಗೊತ್ತಿಲ್ಲ. ಈ ಸಮಸ್ಯೆ ಪರಿಹಾರಕ್ಕೆ ಜನರ ಸಹಕಾರವನ್ನು ತೆಗೆದುಕೊಂಡು ಕೊರೋನಾ ಜೊತೆಗೆ ನಾವು ಜೀವನ ನಡೆಸಲು ಯೋಜನೆಯನ್ನು ರೂಪಿಸಿ ಜನರಿಗೆ ತಿಳಿಸಬೇಕು. ಏಕೆಂದರೆ ಇದಕ್ಕೆ medicine ಬರುವವರೆಗೆ ಇದು ಕೊನೆಯಾಗುವುದಿಲ್ಲ. Medicine ಬಂದ ಮೇಲೆಯೇ ಇದು ಕೊನೆಗಾಣುತ್ತದೆ. ಇವತ್ತು medicine ಬರುತ್ತದೆ, ನಾಳೆ ಬರುತ್ತದೆ ಎಂದು ಏನೋ ಒಂದು ಹೇಳುತ್ತಿದ್ದಾರೆ. ಆದರೆ ಆ medicine positive ಆಗಿ ಎಲ್ಲಿಯು ಕಾಣುತ್ತಿಲ್ಲ. ಹೀಗಾಗಿ ನಮ್ಮ ದೇಹದಲ್ಲಿ ನಾವು immune system ನ್ನು ಬೆಳಸಿಕೊಳ್ಳಬೇಕು. ಪ್ರತಿಯೊಬ್ಬ ಮನುಷ್ಯನ ದೇಹ ಇವತ್ತು ಡಾಕ್ಟರ್‌ಗಳಿಗೆ research and development ಮಾಡುವಂತಹ ದೇಹವಾಗಿದೆ. ನನಗೆ ಕೊರೋನಾ ಬಂದರೆ ಇನ್ನೊಬ್ಬರಿಗೂ ಅದೇ ರೀತಿ ಕೊರೋನಾ ಬರುತ್ತದೆ ಎಂದು ಇಲ್ಲ. ನನಗೆ ಬಂದರೆ ನನಗೆ ಕೆಲವು ಆರೋಗ್ಯ ಸಮಸ್ಯೆಗಳು ಬರುತ್ತವೆ, ಇನ್ನೊಬ್ಬರಿಗೆ ಬಂದಾಗ ನನ್ನ ರೀತಿಯಲ್ಲಿಯೇ ಆರೋಗ್ಯ ಸಮಸ್ಯೆಗಳು ಬರುವುದಿಲ್ಲ. ಬೇರೆ ರೀತಿಯ ಸಮಸ್ಯೆಗಳು ಉಂಟಾಗುತ್ತವೆ. ಹೀಗಾಗಿ ಈ ಕೊರೋನಾ ಬಗ್ಗೆ ಇನ್ನೂ research and development ಆಗುತ್ತಿದೆ. ಇನ್ನು ಬಹಳಷ್ಟು ಕೆಲಸಗಳು ನಡೆಯಬೇಕಾಗಿದೆ. ಸರ್ಕಾರಕ್ಕೆ ನನ್ನ ವಿನಂತಿ ಎಂದರೆ ಕೊರೋನಾ ಜೊತೆಗೆ ಜೀವನ ಮಾಡುವುದನ್ನು ಜನರಿಗೆ ತಿಳಿಸಿಕೊಡಿ. ಏಕೆಂದರೆ ತಾವು ಕೊರೋನಾ ನಿಯಂತ್ರಣಕ್ಕೆ ತರುವ ಕೆಲಸ ಮಾಡುವುದನ್ನು ಸರ್ಕಾರ ಬಿಟ್ಟುಬಿಟ್ಟಿದೆ. Flood gates ನ್ನು ಓಪನ್ ಮಾಡಿದ ಹಾಗೆ ಓಪನ್ ಮಾಡಿ ಬಿಟ್ಟು ಬಿಟ್ಟಿದ್ದೀರಾ. ಇದರ ಜೊತೆಗೆ ನಾವು ಎಲ್ಲರೂ ಹೋಗಿ ಬಿಡುತ್ತೇವೆ. ಕೊರೋನಾ ಜೊತೆಗೆ ಹೇಗೆ ಹೋಗಬೇಕು, ಹೇಗೆ ಚೆನ್ನಾಗಿ ಇರಬೇಕು ಎನ್ನುವುದನ್ನು ತಿಳಿಸಿಕೊಡುವ ರೀತಿಯಲ್ಲಿ ಯೋಜನೆಗಳನ್ನು ರೂಪಿಸಿದಾಗ ಮಾತ್ರ ಈ ಸಮಸ್ಯೆಯನ್ನು curb ಮಾಡಿ ಪರಿಣಾಮಕಾರಿಯಾಗಿ

ಜನರಿಗೆ ಒಂದು ಕಾರ್ಯಕ್ರಮವನ್ನು ಕೊಡಬಹುದು. ಸರ್ಕಾರ ಈ ವಿಚಾರದಲ್ಲಿ failure ಆಗಿರುವುದರಿಂದ ಈ ವಿಚಾರವನ್ನು ನಾನು ಹೇಳುತ್ತಿದ್ದೇನೆ ಇಲ್ಲದಿದ್ದರೆ ಕೊರೋನಾ ಜೊತೆಗೆ ನಾವು ಹೋಗಬೇಕು ಎಂದು ನಾನು ಹೇಳುತ್ತಿರಲಿಲ್ಲ. ಇಷ್ಟು ಹೇಳಿ ನನಗೆ ಸಮಯ ಕೊಟ್ಟಿದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

## 12. ಪ್ರಕಟಣೆ

ಸಭಾಪತಿಯವರು:- ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿಯಂತೆ, ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಮಿತಿಯ ಇಂದು ದಿನಾಂಕ:22-9-2020ರಂದು ಸಭೆ ಸೇರಿ, ವಿಧಾನ ಪರಿಷತ್ತಿನ 141ನೇ ಅಧಿವೇಶನದಲ್ಲಿ ಈ ಕೆಳಕಂಡ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು.

**ಕಾರ್ಯಕಲಾಪಗಳ ವಿವರ**

ಕೋರೊನಾ ವೈರಸ್ ಹಿನ್ನೆಲೆಯಲ್ಲಿ ಪ್ರಸ್ತುತ ಅಧಿವೇಶನವನ್ನು ದಿನಾಂಕ:26-9-2020ಕ್ಕೆ ಮುಕ್ತಾಯಗೊಳಿಸುವುದು. ಪ್ರತಿನಿತ್ಯ ಬೆಳಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆವರೆಗೆ ಕಾರ್ಯಕಲಾಪ ನಡೆಸುವುದು.

ಪ್ರಶ್ನೋತ್ತರ ಅವಧಿಯಲ್ಲಿ ಸ್ವೀಕರಿಸಲಾಗುವ ಉತ್ತರಗಳನ್ನು ಆಯಾ ದಿನಗಳಂದೆ ಮಂಡಿಸಲು ತೀರ್ಮಾನಿಸಲಾಯಿತು.

ಹಿಂದಿನಂತೆಯೇ ಗಮನ ಸೆಳೆಯುವ ಸೂಚನೆಗಳು, ನಿಯಮ 330 ಮೇರೆಗೆ ಚರ್ಚೆ. ನಿಯಮ 68ರ ಮೇಲಿನ ಪ್ರಸ್ತಾವನೆ ಹಾಗು ಅರ್ಧ ಗಂಟೆ ಕಾಲಾವಧಿ ಚರ್ಚೆ, ಶಾಸನ ರಚನೆ, ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕಾರ, ಶೂನ್ಯವೇಳೆಯ ಪ್ರಸ್ತಾವನೆಗಳು ಇರಲಿದೆ. ಸದರಿ ವರದಿಗೆ ಸದನದ ಸಹಮತವಿದೆ ಎಂದು ಭಾವಿಸುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರೆ, ಈಗ ಸರ್ಕಾರ ಉತ್ತರ ಕೊಡಬೇಕಾ ಅಥವಾ ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಡಬೇಕಾ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಅರ್ಧ ಗಂಟೆ ಚರ್ಚೆ ಎಂದು ಇದನ್ನು ತೆಗೆದುಕೊಳ್ಳಲಾಗಿದೆ. ಪ್ರಶ್ನೋತ್ತರ ಅವಧಿಯಲ್ಲಿ ಸಂಬಂದಪಟ್ಟ ಮಂತ್ರಿಗಳಿಂದ ಸರಿಯಾಗಿ ಉತ್ತರ ಬಾರದಿದ್ದಾಗ, ಅದನ್ನು ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಟ್ಟು, ವಿವರವಾಗಿ ಚರ್ಚೆ ಮಾಡಿ ಸಂಬಂಧಪಟ್ಟ ಮಂತ್ರಿಗಳಿಂದ ಸಮಂಜಸವಾದ ಉತ್ತರವನ್ನು ಪಡೆಯುವಂತಹ ಒಂದು ವ್ಯವಸ್ಥೆ ಇದು. ಇದು ನಿಯಮ 68ರ ಮೇಲೆ ಮಾಡುತ್ತಿರುವ ಚರ್ಚೆಯಲ್ಲ. ಇದೇನು ಆಗುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. You are the Chairperson. You have to guide me.

**ಸಭಾಪತಿಯವರು:–** ನನಗೂ ಅರ್ಥವಾಗದೆ ಇರುವುದರಿಂದ ನಾನು ತಮ್ಮನ್ನು ಕೇಳುತ್ತಿರುವುದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಒಂದು ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಅದರಿಂದ ಸದಸ್ಯರಿಗೆ ತೃಪ್ತಿಯಾಗುವುದಿಲ್ಲ. 15 ಪ್ರಶ್ನೆಗಳು ಇರುತ್ತವೆ. ಒಂದು ಪ್ರಶ್ನೆಗೆ ನಾಲ್ಕು ನಿಮಿಷ ಮಾತ್ರ ಅವಕಾಶವಿದೆ. It is 'Question Hour'. ಅದು 'Question Day' ಅಲ್ಲ. ಸಾರ್ವಜನಿಕ ಹಿತಾಸಕ್ತಿ ಇರುವಂತಹ ಪ್ರಶ್ನೆ ನಾಲ್ಕು ನಿಮಿಷದಲ್ಲಿ ಅಪೂರ್ಣವಾದರೆ ಸರಿಯಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಅದನ್ನು ಅರ್ಧ ಗಂಟೆ ಚರ್ಚೆಗೆ ಗೌರವಾನ್ವಿತ ಸಭಾಪತಿಯವರು ಅವಕಾಶವನ್ನು ಮಾಡಿಕೊಡುತ್ತಾರೆ. ಸಂಬಂಧಪಟ್ಟ ಸದಸ್ಯರು ಅದರ ಬಗ್ಗೆ ಪ್ರಶ್ನೆಯನ್ನು ಕೇಳಿ ಮಂತ್ರಿಗಳಿಂದ ಉತ್ತರವನ್ನು ಪಡೆಯಬೇಕು. ಪ್ರಶ್ನೋತ್ತರ ಸಮಯದಲ್ಲಿ supplementary ಪ್ರಶ್ನೆ ಕೇಳಲು ಒಬ್ಬರಿಗೆ ಅಥವಾ ಇಬ್ಬರಿಗೆ ಅವಕಾಶವಿರುತ್ತದೆ. It is only to ask supplementary question. ಅದೇ ರೀತಿ ಅರ್ಧ ಗಂಟೆ ಚರ್ಚೆಯಲ್ಲಿ ಒಬ್ಬರಿಗೆ ಅಥವಾ ಇಬ್ಬರಿಗೆ supplementary question ಕೇಳಲು ಅವಕಾಶವಿರುತ್ತದೆ. ಪ್ರಶ್ನೋತ್ತರ ಅವಧಿ ಇದ್ದಹಾಗೆಯೇ ಇದೆ. ನಾಲ್ಕು ನಿಮಿಷದ ಪ್ರಶ್ನೆಗೆ 30 ನಿಮಿಷಗಳ ಸಮಯ ಕೊಟ್ಟು ಆ ಪ್ರಶ್ನೆಯ ಮೇಲೆ ಬೆಳಕು ಚೆಲ್ಲಿ ಸಮರ್ಪಕವಾದ ಉತ್ತರ ಪಡೆಯಲು ಮತ್ತು ಇದರಿಂದ ಸಾರ್ವಜನಿಕವಾಗಿ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ತಾವು ಅವಕಾಶವನ್ನು ಕೊಟ್ಟಿದ್ದೀರಿ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(778)22-09-2020(05-30)ಬಿಎಸ್‌ಡಿ-ಎಕೆ

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ನಾನು ನನಗೆ ಅನಿಸಿದ್ದನ್ನು ನಿಯಮದ ಪ್ರಕಾರ ಹೇಳಿದ್ದೇನೆ. ಅದರಲ್ಲಿ ಏನಾದರೂ ಆಕ್ಷೇಪಣೆಗಳಿದ್ದರೆ ದಯಮಾಡಿ ಕ್ಷಮಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಯಾವಾಗಲೂ ಒಂದು ಪ್ರಶ್ನೆ ಅಪೂರ್ಣವಾದರೆ, ಸಮರ್ಪಕವಾಗಿ ಚರ್ಚೆ ಮಾಡಲು ಸಾಧ್ಯವಾಗದಿದ್ದರೆ, ಕೋರಿಕೆ ಮೇರೆಗೆ ಮತ್ತು ಸರ್ಕಾರದ ಸಹಮತದ ಮೇರೆಗೆ ಅರ್ಧ ಗಂಟೆ ಚರ್ಚೆಯಲ್ಲಿ ತೆಗೆದುಕೊಳ್ಳುವುದು ರೂಢಿ. ಆದರೆ ಇದೊಂದು ವಿಶೇಷ ಸಂದರ್ಭ ಎಂದು ನಮಗೆಲ್ಲಾ ಅನಿಸಿದೆ ಹೊರತು ಬೇರೆ ಯಾವ ಕಾರಣವೂ ಅಲ್ಲ. ಇದರ ಬಗ್ಗೆ ನಾಳೆ ಅವರು ನಿಲುವಳಿ ಸೂಚನೆ, ನಿಯಮ 72ರಡಿ, ನಿಯಮ 330ರಡಿ ಅಥವಾ ಬೇರೆ ರೂಪದಲ್ಲಿ ತರಬಹುದು. ಇದೊಂದು ಬಹಳ ಗಂಭೀರವಾದ ವಿಚಾರ. ತಾವು ಈಗಾಗಲೇ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇಂತಹ ಗಂಭೀರ ಮತ್ತು ಅಪರೂಪದ ವಿಚಾರಗಳಿದ್ದಾಗ ತಮ್ಮ ವಿವೇಚನೆ ಮೇರೆಗೆ ಕೆಲವು ಆಸಕ್ತ ಸದಸ್ಯರಿಗೆ ಚರ್ಚೆ ಮಾಡಲು ಅವಕಾಶ ಕೊಟ್ಟ ಉದಾಹರಣೆಗಳಿವೆ. ಮಾನ್ಯ ನಾರಾಯಣಸ್ವಾಮಿಯವರು ಬಹಳ ಕಟುವಾಗಿ ವಿಚಾರಗಳನ್ನು ಮಂಡಿಸಿದ್ದು, ಅದನ್ನು ಒಪ್ಪಬಹುದು ಅಥವಾ ಬಿಡಬಹುದು ಎಂಬುದು ಬೇರೆ ವಿಚಾರ. ಅದೇ ರೀತಿ ಮಾನ್ಯ ರಮೇಶ್‌ರವರು ಬಹಳ ಅಧ್ಯಯನ ಮಾಡಿ ವರದಿ ಮಾಡಿದ್ದಾರೆ. ಒಬ್ಬಬ್ಬರಿಗೆ ಮಾತನಾಡಲು ಅವಕಾಶ ಕೊಡುವಾಗ ಈ ಕಡೆಯವರಿಗೆ ಅವಕಾಶ ಕೊಟ್ಟರೆ ಕೊನೆಗೆ ಉತ್ತರ ಕೊಡಲು ಸುಲಭವಾಗುತ್ತದೆ. ಇಲ್ಲದಿದ್ದರೆ ನಾಳೆ ನಿಲುವಳಿ ಸೂಚನೆ..........

**ಸಭಾಪತಿಯವರು:-** ಮಾನ್ಯ ಸಚಿವರು ಹೇಳಿ.

**ಶ್ರೀ ಬಿ. ಶ್ರೀರಾಮುಲು:-** ಉತ್ತರ ಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಕೆಲವರು ಮಾತನಾಡಲು ready ಆಗಿದ್ದಾರೆ, ಅವರ ಜಿಲ್ಲೆಗಳಲ್ಲಿ ಸಮಸ್ಯೆಗಳು ಇರುತ್ತವೆ.

**ಶ್ರೀ ಆರ್.ಬಿ. ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಆ ಕಡೆ ಮಾತನಾಡಲು ಅವಕಾಶ ಕೊಟ್ಟರೆ ಈ ಕಡೆ ಸಹ ಕೊಡಬೇಕಾಗುತ್ತದೆ, ನಮ್ಮ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು. ನಾವು ತಯಾರಾಗಿದ್ದೇವೆ. ಸರ್ಕಾರದವರು ಕೇಳಿ ಉತ್ತರ ಕೊಡಬೇಕಾದುದು ರೂಡಿ. ಸಚಿವರಲ್ಲದೇ ಶಾಸಕರು ಮಾತನಾಡುವುದು..........

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರುಃ-** ಈ ವಿಚಾರವನ್ನು ಬೇರೆ ಮೂಲದಲ್ಲಿ ತರುವುದಕ್ಕಿಂತ ಸ್ವಲ್ಪ ಅವಕಾಶ ಕೊಟ್ಟರೆ ಎಲ್ಲರಿಗೂ ಅವಕಾಶ ಸಿಕ್ಕಿದಂತಾಗುತ್ತದೆ.

**ಶ್ರೀ ಆರ್.ಬಿ. ತಿಮ್ಮಾಪೂರಃ-** ನಮ್ಮದೇನೂ ಅಭ್ಯಂತರವಿಲ್ಲ.

**ಸಭಾಪತಿಯವರುಃ-** ನನಗೇನೂ ಇಲ್ಲ, ಆದರೆ ಎಲ್ಲಾ ಕಡೆಗಳಿಂದ ಕೈ ಎತ್ತುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು)ಃ-** ಮಾನ್ಯ ಸಭಾಪತಿಯವರೇ, ಇದನ್ನು ವಿಸ್ತೃತವಾಗಿ ಚರ್ಚೆ ಮಾಡಲು you have got an unfettered discretionary power. ತಾವು ನಮ್ಮ ‘Rules of Procedure and Conduct of Business in the Karnataka Legislative Council’ ಅನ್ನು ಬದಿಗಿಟ್ಟು ಅವಕಾಶ ಕಲ್ಪಿಸಬಹುದು. ಆ Chair ನ ಮಹತ್ವವೇ ಆ ರೀತಿ ಇದೆ. ಅಷ್ಟು ಅಧಿಕಾರ ಇದೆ. ತಾವು ಈ ಕಡೆ, ಆ ಕಡೆ ಯಾವ ಕಡೆಯೂ ಬೇಡ, ನಿಯಮ 68 ಬೇಡ, ನಿಯಮ 72 ಮತ್ತು ನಿಯಮ 330 ಯಾವುದೂ ಬೇಡ ಎಂದು ಇವೆಲ್ಲವನ್ನು ಮೀರಿ 30 minutes ಚರ್ಚೆಯೊಳಗೆ ಅವಕಾಶ ಕಲ್ಪಿಸಬಹುದು. ಆದರೆ ನಿಯಮಗಳ ಬಗ್ಗೆ ಬೆಳಕು ಚೆಲ್ಲುವ ಮಾತನ್ನು ಹೇಳುತ್ತಿದ್ದೇನೆ. ಈ ವಿಚಾರ ಮತ್ತೊಂದು ನಿಯಮದ ಕೆಳಗೆ ಚರ್ಚೆಯಾಗಬಾರದು ಎಂದೇನೂ ಇಲ್ಲ, ಬೇರೆ ನಿಯಮಗಳಲ್ಲಿಯೂ ಚರ್ಚೆಗೆ ಬರಬಹುದು. ಅದ್ಯಾವುದೂ ಬೇಡ ಇವತ್ತೇ final ಮಾಡೋಣ ಎಂದರೆ ಅವಕಾಶ ಕಲ್ಪಿಸಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಮಾನ್ಯ ಸಭಾಪತಿಯವರೇ, ಮತ್ತೊಂದು ಸಾರಿ ನಿಯಮ 72 ಅಥವಾ ನಿಯಮ 330 ಎಂದಾಗ ಅವರವರ ಜಿಲ್ಲೆಗಳಲ್ಲಿ ಬೇರೆ ಬೇರೆ ಸಮಸ್ಯೆಗಳಿವೆ, ಕೆಲವು ಕಡೆ ventilator ಕೊರತೆ ಇದೆ, ಕೆಲವರಿಗೆ Ayushman Bharat Scheme ಹೊಂದಾಣಿಕೆ ಆಗಿಲ್ಲ ಎಂದು doubt ಇದೆ. ಕೆಲವು ಕಡೆ ICU Ward ಕಡಿಮೆ ಇದೆ ಎಂದು ಇದೆ. ಮಾನ್ಯ ನಾರಾಯಣಸ್ವಾಮಿಯವರು ಎತ್ತಿದ ವಿಚಾರ ಇಡೀ ರಾಜ್ಯಕ್ಕೆ ಬೆಳಕು ಚೆಲ್ಲುವಂತೆ ಆಗಬೇಕು. ಬೇರೆ ನಿಯಮಗಳಲ್ಲಿ ತೆಗೆದುಕೊಳ್ಳುವುದಕ್ಕಿಂತ ಒಂದೆರಡು ಜನರಿಗೆ ಅವಕಾಶ ಕೊಟ್ಟು, ಅನಿವಾರ್ಯವಾದರೆ ಬೇರೆ ತೆಗೆದುಕೊಳ್ಳೋಣ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ)ಃ-** ಮಾನ್ಯ ನಾರಾಯಣಸ್ವಾಮಿಯವರು Half an Hour Discussion ನಲ್ಲಿ ಮಾತನಾಡಿದರು. ಅವರು ಒಂದು ಪ್ರಶ್ನೆಗೆ ಸೀಮಿತವಾಗಿ ಮಾತನಾಡಿದ್ದಾರೆ. ಇದು ಬಹಳ ಗಂಭೀರವಾದ ವಿಚಾರವಾಗಿದೆ. ಅವರು ಹೇಳಿದಂತೆ ಎಲ್ಲಾ ಜಿಲ್ಲೆಗಳಲ್ಲಿಯೂ ಇರುವ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪರಿಸ್ಥಿತಿಯನ್ನು share ಮಾಡುವಂತಹ ವಿಚಾರವಾಗಿದೆ. ಇದನ್ನು ವಿಸ್ತಾರವಾಗಿ ಚರ್ಚೆ ಮಾಡಬೇಕಾಗಿದ್ದು, ಮಾನ್ಯ ಸಭಾಪತಿಯವರು ತೀರ್ಮಾನ ತೆಗೆದುಕೊಂಡು ಬೇರೆ ಸಮಯದಲ್ಲಿ ಕೊಡುವುದು ಉತ್ತಮ. ಈಗ ಮಾನ್ಯ ಮಂತ್ರಿಯವರು ಉತ್ತರ ಕೊಟ್ಟರೆ ಕೇಳುತ್ತೇವೆ, ಏಕೆಂದರೆ ಬಹಳಷ್ಟು ಟೀಕೆ ಟಿಪ್ಪಣಿಗಳು ಬಂತು. ಮಾನ್ಯ ಮಂತ್ರಿಯವರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ.

**ಶ್ರೀ ಎಂ. ನಾರಾಯಣಸ್ವಾಮಿಃ–** ಅವರು ಮಾತನಾಡುವುದಾದರೆ ನಾವು ಮಾತನಾಡುತ್ತೇವೆ, ತೊಂದರೆ ಏನೂ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಮಾತನಾಡಲಿ.

(ಗೊಂದಲ)

**Sri S.R. PATIL:** Being the Leader of Opposition, I will also speak for one hour. ನಾನು ನಿಯಮದ ಬಗ್ಗೆ ಹೇಳಿದ್ದೇನೆ.

(ಗೊಂದಲ)

**ಶ್ರೀ ಎಂ. ನಾರಾಯಣಸ್ವಾಮಿಃ–** ಕರ್ರೋನ ವಿಷಯದಲ್ಲಿ ಸದನವನ್ನು ಮೊಟಕುಗೊಳಿಸಲಾಗುತ್ತದೆ, ಇದರ ಮೇಲೆ ಚರ್ಚೆ ಮಾಡಬಹುದು ಆದರೆ .......... ಮಾನ್ಯ ಸಚಿವರು ಮೊದಲು ಉತ್ತರ ಕೊಡಲಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್ಃ–** ಮಾತನಾಡುವವರು ಎರಡೂ ಕಡೆ ಮಾತನಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಮಾನ್ಯ ವಿರೋಧ ಪಕ್ಷದವರು ಎತ್ತಿದ ವಿಚಾರ ಬಹಳ ಮಹತ್ವದ್ದಾಗಿದ್ದು, ಇನ್ನೊಂದು ಸಾರಿ ಚರ್ಚೆ ಇಲ್ಲ ಎಂದರೆ ಮುಗಿಸೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಬೇರೆ ರೂಪದಲ್ಲಿ ತರುವುದಾದರೆ ಮುಂದುವರೆಸೋಣ, ತೊಂದರೆ ಏನು?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದ ವಿಚಾರಕ್ಕೆ ಇನ್ನೊಂದು ಸಾರಿ ಅವಕಾಶ ಮಾಡಿಕೊಡಿ.

**ಶ್ರೀ ಎಸ್. ರವಿ:–** ರಾಜ್ಯಾದ್ಯಂತ oxygen ಅಭಾವದ ಬಗ್ಗೆ .......... ಅದು ಕೂಡ ಚರ್ಚೆ ಆಗಬೇಕು.

(ಗೊಂದಲ)

**ಶ್ರೀ ಆರ್.ಬಿ. ತಿಮ್ಮಾಪೂರ:–** ಇದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡಲು ಅವಕಾಶ ಕೊಡಿ.

**ಶ್ರೀ ಎಸ್.ರವಿ:–** ಆ ಕಡೆ ಮಾನ್ಯ ಸಿ.ಟಿ. ರವಿ ಹಾಗೂ ಮಾನ್ಯ ಪ್ರಾಣೇಶ್ ರವರು ಸಾಕಷ್ಟು ಮಾತನಾಡಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರ ಕೊಡಲಿ, ಅವರ ಉತ್ತರದ ನಂತರ ಬೇಕಾದರೆ ಬೇರೆ ರೂಪದಲ್ಲಿ ತರಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನನಗೆ ಅನ್ನಿಸಿದಂತೆ, ಇವತ್ತು ಒಂದೆರಡು ಜನ ಮಾತನಾಡಲಿ, ಮಾತನಾಡುವವರು ಆ ಕಡೆ ಈ ಕಡೆ ಇದ್ದಾರೆ. ಈಗಾಗಲೇ ಎರಡು ಮೂರು ಜನ ಕೈ ಎತ್ತುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಇದೇ ನಿಯಮದಡಿ ಮತ್ತೊಮ್ಮೆ ಚರ್ಚೆಗೆ ತೆಗೆದುಕೊಳ್ಳುವುದಾದರೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ಬೇರೆ ಯಾವ ನಿಯಮದಡಿ ಕೋವಿಡ್–19 ಚರ್ಚೆಗೆ ಬೇಡ ಎನ್ನುವುದಾದರೆ ಅವರು ಮಾತನಾಡಲಿ, ನಾವು ಮಾತನಾಡುತ್ತೇವೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸದಸ್ಯರು ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಸೀಮೀತವಾಗಿ notice ಕೊಟ್ಟಿದ್ದಾರೆ. ಅದರ ಬಗ್ಗೆ ತಾವು ಸವಿಸ್ತಾರವಾದ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಮಾನ್ಯ ಸಚಿವರು reply ಕೊಟ್ಟರೆ ಸಾಕು.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ..........

**ಸಭಾಪತಿಯವರು:–** ನೀವು ಮಾತನಾಡಿದರೆ ಎಲ್ಲರೂ ಮಾತನಾಡಬೇಕಾಗುತ್ತದೆ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾನು ಆವಾಗಲಿಂದಲೂ ಕೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುಃ–** ಇದು ಅರ್ಧ ಗಂಟೆ ಮೇಲೆ ಚರ್ಚೆ ನಡೆಯುತ್ತಿದ್ದು, ಒಂದೂವರೆ ಗಂಟೆ ಸಮಯ ಕಳೆದಿದೆ. ಇನ್ನೂ ಚರ್ಚೆ ಮಾಡುವುದಾದರೆ ೨ ಗಂಟೆಯವರೆಗೂ ಹೋಗುತ್ತದೆ. ಬೇರೆಯದ್ದರಲ್ಲಿ ಕೊಟ್ಟರೆ ಆಯಿತು. Calling Attention ಇದೆ, ಬೇರೆ ಬೇರೆ Calling Attention ಇದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**13.ಕೊರೋನಾ ಸಂಬಂಧವಾಗಿ ಖರೀದಿಸಲಾದ ವಿವಿಧ ಸಾಮಗ್ರಿಗಳ ಬಗ್ಗೆ ನಡೆದ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಸರ್ಕಾರದ ಉತ್ತರ.**

**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ ಎನ್ನುವ ಕಾರಣದಿಂದ ಇವತ್ತು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದು, ಬಹಳಷ್ಟು ಹಿರಿಯ ಸದಸ್ಯರು, ಮಾನ್ಯ ವಿರೋಧ ಪಕ್ಷದ ಸದಸ್ಯರು ಕೊರೊನ ಸಂದರ್ಭದಲ್ಲಿ ಏನೇನು ಆಯಿತು, ಸರ್ಕಾರ ಯಾವ ರೀತಿ ವಿಫಲವಾಯಿತು ಎಂದು ಗಂಭೀರವಾಗಿ ಆರೋಪ ಮಾಡುವ ಕೆಲಸ ಮಾಡಿದ್ದಾರೆ. ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುವ ಸಂದರ್ಭದಲ್ಲಿ ಸ್ವಲ್ಪ ನೋವಾಯಿತು, ಆದರೂ ಪರವಾಗಿಲ್ಲ, ಏಕೆಂದರೆ ಅವರು ವಿರೋಧ ಪಕ್ಷದಲ್ಲಿದ್ದಾರೆ. ಅವರು ಮಾತನಾಡಲಿ, ಅವರಿಗೆ ಅವಕಾಶ ಇದೆ, ಮಾತನಾಡಲು ಅವಕಾಶ ಕೊಡಬೇಕು ಎನ್ನುವುದರಿಂದ ಅವರು ಏನೇ ಮಾತನಾಡಿದರೂ ನಾವು ಮೂಕರಂತೆ ಅಂದರೆ ಮೌನವಾಗಿ ಕುಳಿತಿದ್ದೆವು. ಇವತ್ತು ಕೋವಿಡ್ ಸಂದರ್ಭದಲ್ಲಿ ಬಹಳಷ್ಟು ಮಂದಿ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ, ವಿರೋಧ ಪಕ್ಷದ ಬಗ್ಗೆ ನಾನು ಆರೋಪ ಮಾಡುವುದಿಲ್ಲ, ಎಲ್ಲರ ಸಹಕಾರದಿಂದ ಒಳ್ಳೆಯ ಕೆಲಸ ಮಾಡಿದ್ದೇವೆ. ಜನವರಿಯಲ್ಲಿ ಪ್ರಾರಂಭವಾದ time ನಲ್ಲಿ, lockdown ವಿಚಾರದಲ್ಲಿಯೂ ಸಾಕಷ್ಟು ಮಂದಿ ಉಲ್ಲೇಖ ಮಾಡಿದ time ನಲ್ಲಿ, WHO (World Health Organization) ಪ್ರಕಾರ ಯಾವುದೇ ರೀತಿಯ guidelines ಇರಲಿಲ್ಲ. ಆವತ್ತಿನ ಸಂದರ್ಭದಲ್ಲಿ lockdown ಮಾಡುವಾಗ ಬಹಳಷ್ಟು ತೊಂದರೆಯಾಯಿತು ಎನ್ನುವ ವಿಚಾರ ಅವರಿಗೂ ತಿಳಿದಿದೆ. ಜನವರಿಯಲ್ಲಿ ಕಾಣಿಸಿಕೊಂಡು ಮಾರ್ಚ್‌ನಲ್ಲಿ ದೇಶದಲ್ಲಿಯೇ ಪ್ರಥಮ ಬಾರಿಗೆ ಕಲ್ಬುರ್ಗಿಯಲ್ಲಿ death ಆದ ಸಂದರ್ಭದಲ್ಲಿ ಸ್ವತಃ ನಾನು ಹೋಗಿದ್ದೆನು. ಅಂದು ಮಾನ್ಯ ವಿರೋಧ ಪಕ್ಷದ ಸದಸ್ಯರು ಸೇರಿದಂತೆ ಎಲ್ಲರೂ ಸಲಹೆ ಕೊಟ್ಟರು. ಮಾನ್ಯ ಮುಖ್ಯಮಂತ್ರಿಯವರು ಸಹ 'ಶ್ರೀ ರಾಮುಲುವರೇ, ಕಲ್ಬುರ್ಗಿಯಲ್ಲಿ ಪ್ರಥಮ ಬಾರಿಗೆ death ಆಗಿದೆ, ತಾವು ಅಲ್ಲಿಗೆ ಹೋಗಬೇಕು' ಎಂದು ಹೇಳಿದ ಸಂದರ್ಭದಲ್ಲಿ ನಾನು ಅಪ್ಪಣೆ ಕೇಳಿದಾಗ ಪ್ರಶ್ನೆ ಮತ್ತು ಉತ್ತರಗಳನ್ನು ನೋಡಿಕೊಳ್ಳುವ ಬಗ್ಗೆ ತಿಳಿಸಿ, ಆ ಕಡೆ ಮತ್ತು ಈ ಕಡೆ ಎಲ್ಲರ ಸಲಹೆ ಮೇರೆಗೆ ನಾನು ಕಲ್ಬುರ್ಗಿಗೆ ಹೋದೆನು. ಕಲ್ಬುರ್ಗಿಯಲ್ಲಿ ಹೋದ time ನಲ್ಲಿ ಬಹಳಷ್ಟು ಭಯಾನಕ ಪರಿಸ್ಥಿತಿ ಇತ್ತು. ಅಲ್ಲಿ ಜನ ಸತ್ತ ಸಮಯದಲ್ಲಿ ಯಾರೂ ಹೊರಗಡೆ ಬರುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಎಲ್ಲರೂ ಕೂಡ ಮನೆಯಲ್ಲಿ ಬಾಗಿಲು ಹಾಕಿಕೊಂಡು ಕುಳಿತಿದ್ದರು. ಅಲ್ಲಿದ್ದ ಜಿಲ್ಲಾಧಿಕಾರಿಗಳು ಮತ್ತು District Surgeon, DHO ಗಳೆಲ್ಲರೂ ಕೂಡ panic ಆಗಿ ಕುಳಿತ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ನಾನು " ಯಾರೂ ದಯವಿಟ್ಟು ಹೆದರಿಕೊಳ್ಳಬೇಡಿ, ನಿಮಗೆ ಸರ್ಕಾರ ಯಾವರೀತಿ ಬೇಕಾದರೂ ಸಹಕಾರ ಕೊಡುತ್ತದೆ' ಎಂದು ಅವರಿಗೆ ಮನೋಧೈರ್ಯ ತುಂಬುವ ಕೆಲಸ ಮಾಡಿದ್ದೆನು.

(ಮುಂದು)

(779)/22.09.2020/5.40/ಹೆಚ್‌ವಿಃಆರ್‌ಎನ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಶ್ರೀರಾಮುಲು(ಮುಂದುವರಿದದ್ದು)ಃ-**

ಸನ್ಮಾನ್ಯ ಸಭಾಪತಿಯವರೇ, 'ನೀವು ಯಾರೂ ಹೆದರಬೇಡಿ, ನಿಮಗೆ ಬೇಕಾದಂತಹ ಸಹಾಯ ಮತ್ತು ಸಹಕಾರವನ್ನು ನೀಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ' ಎನ್ನುವ ನಿಟ್ಟಿನಲ್ಲಿ ಅವರಿಗೆ ಮನೋಧೈರ್ಯವನ್ನು ತುಂಬಿ ಅವರಲ್ಲಿ ಮನೋಸ್ಥೈರ್ಯವನ್ನು ಸೃಷ್ಟಿ ಮಾಡುವ ಕೆಲಸವನ್ನು ನಾವು ಮಾಡಿದ್ದೇವೆ. ನಾನೇ ಸ್ವತಃ ಕಲಬುರ್ಗಿಗೆ ಹೋಗಿ, ಯಾವಯಾವ ರೀತಿಯಲ್ಲಿ ಬಫರ್ ಝೋನ್‌ಗಳನ್ನು ಮಾಡಬೇಕು, ಯಾವ ರೀತಿಯಲ್ಲಿ ಜಿಲ್ಲೆಯ ಒಳಗಡೆ ಇರುವಂತಹ ಜನರನ್ನು ಒಳಗೇ ಇರುವಂತೆ ಮಾಡಬೇಕು ಮತ್ತು ಜಿಲ್ಲೆಯಿಂದ ಹೊರಗಡೆ ಇರುವಂತಹ ಜನರು ಒಳಗೆ ಬರದೇ ಇರುವಂತೆ ಹೇಗೆ ತಡೆಗಟ್ಟಬೇಕು ಯಾವಯಾವ ರೀತಿಯ ಟೆಸ್ಟ್‌ಗಳನ್ನು ಮಾಡಬೇಕು ಮತ್ತು ಯಾವ ರೀತಿಯಲ್ಲಿ ಕ್ವಾರೈಂಟೇನ್ ಮಾಡಬೇಕು ಎನ್ನುವುದರ ಬಗ್ಗೆ SOP (Standard Operating Procedure) ರೂಲ್ಸ್‌ಗಳಲ್ಲಿ ಬದಲಾವಣೆ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಕೋವಿಡ್ ಎನ್ನುವುದು ವಿಶ್ವವ್ಯಾಪಿಯಾಗಿರುವ ರೋಗವಾಗಿದೆ. ಇದನ್ನು ನಿಯಂತ್ರಿಸುವುದು ನಮ್ಮ ಕೈಯಲ್ಲಿ ಇಲ್ಲ. ಪಬ್ಲಿಸಿಟಿಗೋಸ್ಕರ ಅಥವಾ ಮಾತನಾಡಬೇಕು ಎನ್ನುವುದಗೋಸ್ಕರ ಮಾತನಾಡುವುದು ಬೇರೆಯೇ ವಿಚಾರವಾಗಿದೆ. ಆದರೆ, ಎಲ್ಲರ ಸಹಾಯ ಸಹಕಾರದಿಂದ ಈ ಕೋವಿಡ್ ಅನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಣಕ್ಕೆ ತರುವಂತಹ ಕೆಲಸವನ್ನು ಮಾಡಿದ್ದೇವೆ. ಸಾವಿರಾರು ವರ್ಷಗಳ ಹಿಂದಿನಿಂದಲೂ ಭಾರಿ ಮಳೆಯಾದಾಗ ಅಥವಾ ಪ್ರಕೃತಿ ವಿಕೋಪಗಳು ಸಂಭವಿಸಿದಾಗ ಹೊಸಹೊಸ ಸಾಂಕ್ರಾಮಿಕ ರೋಗಗಳಾದ ಕಾಲರ, ಮಲೇರಿಯಾ, ಪ್ಲೇಗ್ ಮುಂತಾದವು ಬಂದಂತಹ ಸಂದರ್ಭದ'ಲ್ಲಿ ಔಷಧಿ ಕಂಡು ಹಿಡಿದಿರಲಿಲ್ಲ. ಅವತ್ತಿನ ಪರಿಸ್ಥಿತಿ ಕೂಡ ಇದೇ ರೀತಿ ಇತ್ತು. ಈ ದೇಶದಲ್ಲಿ ಹೊಸಹೊಸ ಕಾಯಿಲೆಗಳು ಬಂದಂತಹ ಸಂದರ್ಭದಲ್ಲಿ ಜನರು ಹೇಗೆ ಸಂಕಷ್ಟದಲ್ಲಿ ಸಿಲುಕಿದ್ದರೋ ಅದೇ ರೀತಿಯ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಕೋವಿಡ್‌ನಿಂದಾಗಿ ವಿಶ್ವದಲ್ಲಿ ಲಕ್ಷಾಂತರ ಜನರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ ಮತ್ತು ಸಂಕಷ್ಟಕ್ಕೀಡಾಗಿದ್ದಾರೆ. ನಮ್ಮ ದೇಶದ ಪ್ರಧಾನಮಂತ್ರಿಗಳ ಪ್ರಯತ್ನದಿಂದಾಗಿ ಪರಿಸ್ಥಿತಿಯಲ್ಲಿ ಸ್ವಲ್ಪ ಮಟ್ಟಿನ ಸುಧಾರಣೆಗಳಾಗಿವೆ. ಭಾರತೀಯ ಜನತಾ ಪಕ್ಷಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಲ್ಲೆಲ್ಲಿ ಅಧಿಕಾರದಲ್ಲಿವೆ ಅಲ್ಲಿಗೆ ಮಾತ್ರ ಬಂದಿರುವಂತಹ ಕಾಯಿಲೆ ಇದಲ್ಲ. ವಿಶ್ವದಲ್ಲಿ ಎಲ್ಲ ಕಡೆಗಳಲ್ಲಿ ಈ ರೋಗ ಕಂಡು ಬಂದಿದೆ. ನಮ್ಮ ಸರ್ಕಾರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವಂತಹ ಕೆಲಸವನ್ನು ಮಾಡಿದೆ. ನಾನು ಬೇರೆಯವರನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಪಕ್ಷದ ಯುವ ನಾಯಕರೊಬ್ಬರು ಮಾತನಾಡುತ್ತಾ, 'ಕೋವಿಡ್ ಬಂದಿರುವ ಸಂದರ್ಭದಲ್ಲಿ ಲಾಕ್‌ಡೌನ್ ಪರಿಹಾರವೇ?' ಎಂದು ಕೇಳಿದ್ದರು. ಇದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಎಂ.ನಾರಾಯಣಸ್ವಾಮಿಯವರು ಬಹಳ ಸುದೀರ್ಘವಾಗಿ ಮಾತನಾಡುತ್ತಾ, ಮಾಸ್ಕ್, ಪಿ.ಪಿ.ಇ. ಕಿಟ್, ಸ್ಯಾನಿಟೈಸರ್, ವೆಂಟಿಲೇಟರ್ ಹೀಗೆ ಬಹಳಷ್ಟು ವಿಚಾರಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ವೆಂಟಿಲೇಟರ್‌ಗಳ ಬಗ್ಗೆ ಹೇಳಬೇಕಾದರೆ, ಕೆಲವು ವೆಂಟಿಲೇಟರ್‌ಗಳನ್ನು ಅಂಬ್ಯುಲೆನ್ಸ್‌ಗಳಲ್ಲಿ ಬಳಕೆ ಮಾಡುತ್ತಾರೆ ಇವುಗಳ ದರ 4-5 ಲಕ್ಷ ರೂಪಾಯಿಗಳಾಗಿವೆ. ಆಸ್ಪತ್ರೆಗಳಲ್ಲಿ ಬಳಕೆ ಮಾಡುವ ವೆಂಟಿಲೇಟರ್‌ಗಳ ದರ 10 ಲಕ್ಷ ರೂಪಾಯಿಗಳಾಗಿರುತ್ತದೆ ಮತ್ತು ಐ.ಸಿ.ಯು.ನಲ್ಲಿ ಬಳಕೆ ಮಾಡುವಂತಹ ವೆಂಟಿಲೇಟರ್‌ಗಳ ದರ 15 ಲಕ್ಷ ರೂಪಾಯಿಗಳಾಗಿರುತ್ತದೆ. ಮಾನ್ಯ ಸದಸ್ಯರು ಮಾತನಾಡುತ್ತಾ, ಬಳಕೆ ಮಾಡಿರುವ ಕಳಪೆ ಗುಣಮಟ್ಟದ ವೆಂಟಿಲೇಟರ್‌ಗಳನ್ನು ಸರ್ಕಾರ ಖರೀದಿ ಮಾಡಿದೆ ಎನ್ನುವ ಆರೋಪವನ್ನು ಮಾಡಿದ್ದಾರೆ. ಇವು ಬಳಕೆ ಮಾಡಿರುವ ವೆಂಟಿಲೇಟರ್‌ಗಳು ಎನ್ನುವುದನ್ನು ನಮ್ಮ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಡ್ರಗ್ಸ್ ಅಂಡ್ ಲಾಜಿಸ್ಟಿಕ್ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳು ಕಂಡುಹಿಡಿದು ಅವರನ್ನು ತಕ್ಷಣವೇ ಬ್ಲಾಕ್ ಲಿಸ್ಟ್‌ಗೆ ಸೇರಿಸುವಂತಹ ಕೆಲಸವನ್ನು ಮಾಡಿದ್ದಾರೆ. ನಾನು ಏತಕ್ಕೋಸ್ಕರ ಈ ವಿಚಾರದ ಬಗ್ಗೆ ಮಾತನಾಡುತ್ತಿದ್ದೇನೆಂದರೆ, ಈ ಮಾರಕ ರೋಗ ಪ್ರಾರಂಭವಾದಂತಹ ಸಂದರ್ಭದಲ್ಲಿ ನಮ್ಮ ಭಾರತದಲ್ಲಿ ಯಾವ ಕಂಪನಿಯವರೂ ಮಾಸ್ಕ್ ಇರಬಹುದು, ಪಿ.ಪಿ.ಇ. ಕಿಟ್ ಇರಬಹುದು ಅಥವಾ ಸ್ಯಾನಿಟರೈಸ್ ಇರಬಹುದು ಇವುಗಳನ್ನು ಉತ್ಪಾದನೆ ಮಾಡಿ ಸರಬರಾಜು ಮಾಡುವುದಕ್ಕೆ ಮುಂದೆ ಬರಲಿಲ್ಲ. ಆದ್ದರಿಂದ ನಾವು ಇವುಗಳನ್ನು ಚೈನಾ ದೇಶದಿಂದ ಹೆಚ್ಚಿನ ದರಕ್ಕೆ ತರಿಸಿಕೊಳ್ಳುವಂತಹ ಪರಿಸ್ಥಿತಿ ಬಂತು. ಈ ವಸ್ತುಗಳನ್ನು ನಾವು ಗುರುತಿಸಿದಂತಹ  ಕಂಪನಿಗಳಿಂದ ಖರೀದಿ ಮಾಡಲಿಲ್ಲ. ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಟೆಕ್ಸ್‌ಟೈಲ್ ಇಲಾಖೆಯವರು ಯಾವ ಕಂಪನಿಗಳನ್ನು ಗುರುತಿಸಿ ಇಂತಿಂಥ ಕಂಪನಿಗಳು ನಿಮಗೆ ಏನು ಬೇಕು ಅವುಗಳನ್ನು ಸರಬರಾಜು ಮಾಡುವುದಕ್ಕೆ ತಯಾರಿದ್ದಾರೆ ಎಂದು ಕಂಪನಿಗಳ ಲಿಸ್ಟ್ ಕಳುಹಿಸಿಕೊಟ್ಟಿದ್ದರು. ಅವುಗಳಿಂದ ನಮಗೆ ಬೇಕಾದ ವಸ್ತುಗಳನ್ನು ನಾವು ಖರೀದಿ ಮಾಡಿದ್ದೇವೆ. ಆ ಸಂದರ್ಭದಲ್ಲಿ ಕೆಲವೊಂದು ಲೋಪವುಂಟಾಗಿದೆ. ಬಳಕೆಯಾಗಿರುವ ಕೆಲವೊಂದು ವೆಂಟಿಲೇಟರ್‌ಗಳು ಸರಬರಾಜು ಆಗಿರುವುದನ್ನು ನಮ್ಮ ಇಲಾಖೆಯವರು ಗುರುತಿಸಿ ಆ ಕಂಪನಿಗಳನ್ನು ಬ್ಲಾಕ್‌ಲಿಸ್ಟ್ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಎನ್ 95 ಮಾಸ್ಕ್‌ಗಳು, ವೆಂಟಿಲೇಟರ್‌ಗಳು, ಸ್ಯಾನಿಟರೈಸ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಪಿ.ಪಿ.ಇ.ಕಿಟ್‌ಗಳನ್ನು ನಾವು ಆಯ್ಕೆ ಮಾಡುತ್ತಿಲ್ಲ ಇದಕ್ಕಾಗಿ ಒಂದು ಕಮಿಟಿ ಇದೆ. ನಮ್ಮ ಇಲಾಖೆಯ ನಿರ್ದೇಶಕರು ಮತ್ತು ಆಯುಕ್ತರು ಆ ಕೆಲಸವನ್ನು ಮಾಡುತ್ತಾರೆ. ಗೌರವ ಗುಪ್ತರವರ ನೇತೃತ್ವದಲ್ಲಿ ಈ ಕಾರ್ಯ ನಡೆಯುತ್ತಿದೆ. ಹೃದ್ರೋಗ ತಜ್ಞರಾದ ಡಾ॥ಮಂಜುನಾಥ್‌ರವರ ನೇತೃತ್ವದಲ್ಲಿಯೂ ಕೆಲವೊಂದು ವಸ್ತುಗಳನ್ನು ಖರೀದಿ ಮಾಡಲಾಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಪಿ.ಪಿ.ಇ. ಕಿಟ್‌ಗಳು ಮತ್ತು ಎನ್-95 ಮಾಸ್ಕ್‌ಗಳು ಸರಿಯಾಗಿಲ್ಲ ಎನ್ನುವ ಆರೋಪವನ್ನು ಸಹ ಮಾಡಿದ್ದಾರೆ. ಮೊದಲು ನಾವು ಈ ಕಿಟ್‌ಗಳನ್ನು ಕೇವಲ operation theatre ಗಳಲ್ಲಿ ಅಥವಾ ಏಡ್ಸ್ ಬಂದಂತಹ ವ್ಯಕ್ತಿಗಳಿಗೆ ಚಿಕಿತ್ಸೆ ನೀಡುವಂತಹ ಸಂದರ್ಭದಲ್ಲಿ ಮಾತ್ರ ಇದನ್ನು ಬಳಕೆ ಮಾಡುತ್ತಿದ್ದೆವು. ಈ ರೋಗ ಪ್ರಾರಂಭವಾದ ಸಂದರ್ಭದಲ್ಲಿ ಕೆಲವು ಕಾಂಪೋನೆಂಟ್ ಇರುವಂತಹ ಕಿಟ್‌ಗಳನ್ನು ತೆಗೆದುಕೊಳ್ಳಬೇಕೆನ್ನುವುದು ನಮಗೆ ಗೊತ್ತಾಗಲಿಲ್ಲ. ಆ ಸಂದರ್ಭದಲ್ಲಿ ನಮ್ಮ ಬಳಿ ಯಾವುದು ಸ್ಟಾಕ್ ಇತ್ತು ಅದನ್ನು ಬಳಕೆ ಮಾಡಿಕೊಂಡಿದ್ದೇವೆ. ಕೆಲವರು ದಾನ ಮಾಡುತ್ತೇವೆಂದು ಕಳಪೆ ಗುಣಮಟ್ಟದನ್ನು ನೀಡಿದಾಗ ಅವುಗಳನ್ನು ವಾಪಸ್ಸು ಕಳುಹಿಸಿಕೊಟ್ಟು ಗುಣಮಟ್ಟದ ವಸ್ತುಗಳನ್ನು ತರಿಸಿಕೊಳ್ಳುವಂತಹ ಕೆಲಸವನ್ನು ಮಾಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಕೋವಿಡ್ ಪ್ರಾರಂಭವಾದ ನಂತರ ನಾನು ಇಡೀ ರಾಜ್ಯದ 30 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಈ 30 ಜಿಲ್ಲೆಗಳಲ್ಲಿ ನಾನು ಕಣ್ಣಾರೆ ಕಂಡಿರುವ ವಿಷಯಗಳ ಬಗ್ಗೆ ಒಂದು ಪುಸ್ತಕವನ್ನು ಬರೆಯಬಹುದಾಗಿದೆ. ನನಗೆ, ನನ್ನ ತಾಯಿಗೆ, ನನ್ನ ಸಹೋದರ, ಸಹೋದರಿಯರಿಗೆ ಕೋವಿಡ್ ಪಾಸಿಟಿವ್ ಬಂದಿತ್ತು. ಬೋರಿಂಗ್ ಆಸ್ಪತ್ರೆಯಲ್ಲಿ ನಾವು ಚಿಕಿತ್ಸೆ ಪಡೆದುಕೊಂಡಿದ್ದೇವೆ. ಮಾನ್ಯ ಕೆ.ಸಿ.ಕೊಂಡಯ್ಯನವರು, ಮಾನ್ಯ ಪ್ರಾಣೇಶ್‌ರವರು ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ಧರಾಮಯ್ಯನವರಿಗೆ ಹಾಗೂ ಸ್ವತಃ ಮಾನ್ಯ ಮುಖ್ಯಮಂತ್ರಿಗಳು ಕೋವಿಡ್ ಪಾಸಿಟಿವ್‌ಗೆ ಒಳಗಾಗಿದ್ದರು. ನಾನು 30 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದಂತಹ ಸಂದರ್ಭದಲ್ಲಿ ಈ ರೋಗ ಇನ್ನೂ ಹೊಸದಾಗಿತ್ತು. ರಾಜ್ಯದಲ್ಲಿ ಜನರು ಯಾರು ಓಡಾಡುತ್ತಿರಲಿಲ್ಲ, ಗಾಡಿಗಳು ಓಡಾಡುತ್ತಿರಲಿಲ್ಲ. ರಸ್ತೆ ಎಲ್ಲ ಖಾಲಿಖಾಲಿ ಇತ್ತು. ಕೋವಿಡ್ ವಿರುದ್ಧದ ಹೋರಾಟಗಾರರಾದ ಡಾಕ್ಟರ್‌ಗಳು, ನರ್ಸ್‌ಗಳು ಮತ್ತು ಕಂದಾಯ ಇಲಾಖೆಯವರು ಎಲ್ಲರೂ ಸೇರಿಕೊಂಡು 40-43 ಡಿಗ್ರಿ ಬಿಸಿಲಿನಲ್ಲಿ ಥರ್ಮಾಮೀಟರ್ ಹಿಡಿದುಕೊಂಡು ಟೆಂಪರೇಚರ್ ಚೆಕ್ ಮಾಡುತ್ತಿದ್ದರು. ಪೋಲೀಸಿನವರು ಲೆದರ್ ಶೂ ಹಾಕಿಕೊಂಡು ತಮ್ಮ ಕಾರ್ಯನಿರ್ವಹಿಸುತ್ತಿದ್ದರು. ಅದನ್ನು ನೋಡಿದರೆ, ಮೈ ರೋಮಗಳು ಎದ್ದು ನಿಲ್ಲುತ್ತಿದ್ದವು. ಡಾಕ್ಟರ್‌ಗಳು ನರ್ಸ್‌ಗಳು ಇವತ್ತಿನವರೆವಿಗೂ ಮನೆ ಸೇರಿಲ್ಲ. ಏಳು ದಿನ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡಿದರೆ, ಅವರನ್ನು ಏಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಗಳಿಗೆ ಕ್ವಾರೈಂಟೇನ್‌ಗೆ ಕಳುಹಿಸಿಕೊಡಬೇಕಾಗಿದೆ. ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುವ ಒಬ್ಬ ಡಾಕ್ಟರ್ ಸುಮಾರು 8 ಗಂಟೆಗಳ ಕಾಲ ನೀರು ಕುಡಿಯುವುದಿಲ್ಲ. ಪಿ.ಪಿ.ಇ. ಕಿಟ್ ಬಿಚ್ಚುವುದಿಲ್ಲ. ಸ್ನಾನ ಮಾಡುವವರೆಗೆ ಏನನ್ನೂ ಮುಟ್ಟುವುದಿಲ್ಲ. 8 ಗಂಟೆಗಳ ನಂತರ ಅವರು ತಮ್ಮ ಮನೆಗೆ ಹೋದ ನಂತರ ಊಟ ಮಾಡುತ್ತಾರೆ. ಇಡೀ ರಾಜ್ಯದಲ್ಲಿರುವ ಡಾಕ್ಟರ್ಸ್, ನರ್ಸ್, ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಮತ್ತು ಪೊಲೀಸಿನವರಿಗೆ ನಾವು ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಏಕೆಂದರೆ ಅವರುಗಳು ಬಹಳಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಯಾರಾದರು ಒಳ್ಳೆಯ ಕೆಲಸ ಮಾಡಿದಂತಹ ಸಂದರ್ಭದಲ್ಲಿ ಅವರು ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳುವಂತಹ ವಿಶಾಲ ಹೃದಯ ಮತ್ತು ಸಾಮರ್ಥ್ಯ ನಮ್ಮ ಬಳಿ ಇರಬೇಕಾಗುತ್ತದೆ.

(ಮುಂದುವರಿದಿದೆ)

(780) 22.9.2020 5.50 ಪಿಕೆ:ಆರ್‌ಎನ್

(ಸಭಾಪತಿಗಳ ಉಪಸ್ಥಿತಿ)

**ಶ್ರೀ ಬಿ.ರಾಮುಲು(ಮುಂದುವರೆದಿದೆ)**

ಅಂದಿನ ಪರಿಸ್ಥಿತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಗಟ್ಟಿಯಾದ ನಿರ್ಧಾರಗಳನ್ನು ಕೈಗೊಂಡರು. ಅವರೇ ಸ್ವತಃ 24 ತಾಸು ನಮ್ಮೆಲ್ಲರನ್ನೂ ಮತ್ತು ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಕೂರಿಸಿಕೊಂಡು ಏನೇನು ಮಾಡಬೇಕಾಗಿತ್ತೋ ಆ ಎಲ್ಲ ಕೆಲಸಗಳನ್ನು ಮಾಡಿಸಿದರು. ಲಾಕ್‌ಡೌನ್ ಮಾಡಿದ ಸಂದರ್ಭದಲ್ಲಿ ಬಹಳಷ್ಟು ಜನರಿಗೆ ತೊಂದರೆಯಾಯಿತು. ಬಹಳಷ್ಟು ಜನ ಭಯದಿಂದ ನಡೆದುಕೊಂಡು ಹೋಗಿ ಸತ್ತವರೂ ಇದ್ದಾರೆ, ಇಲ್ಲ ಎಂದು ಹೇಳುವುದಕ್ಕೆ ಹೋಗುತ್ತಿಲ್ಲ. ನಷ್ಟವಾಗಿರುವುದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಜೀವ ಉಳಿಸುವ ಕೆಲಸವನ್ನು ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಮಾಡಿದೆ ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಕ್ಲಿನಿಕ್‌ಗಳು ಏನಿತ್ತು, ಆ ಕ್ಲಿನಿಕ್‌ಗಳ ವೈದ್ಯರು ಭಯಕ್ಕೆ ಒಳಗಾಗಿ ಕ್ಲೋಸ್ ಮಾಡಿಕೊಂಡಿದ್ದರು. ನೆಗಡಿ, ಜ್ವರ ಬಂದರೆ ಇದು ಕೋವಿಡ್-19 ಆಗಿರಬಹುದೆಂದು ಭಯ ಪಡುವ ಸಂದರ್ಭ ಇತ್ತು. ಆಗ ಸರ್ಕಾರ ಗಟ್ಟಿಯಾಗಿ ನಿಂತು, ಖಾಸಗಿ ನರ್ಸಿಂಗ್ ಹೋಮ್‌ಗಳ ವೈದ್ಯರನ್ನು ಕರೆಸಿ ಒಡಂಬಡಿಕೆ ಮಾಡಿಕೊಂಡರು. ತಾವೆಲ್ಲರೂ ಕ್ಲಿನಿಕ್‌ಗಳನ್ನು, ನರ್ಸಿಂಗ್ ಹೋಮ್‌ಗಳನ್ನು ತೆರೆಯಬೇಕು; ಆ ಮೂಲಕ ಜನರಿಗೆ ಭರವಸೆ ಮೂಡುತ್ತದೆ, ಜನ ಕ್ಲಿನಿಕ್‌ಗಳಿಗೆ ಬರುತ್ತಾರೆ; ಆ ಸಂದರ್ಭದಲ್ಲಿ ತಾವುಗಳು ಸರಿಯಾಗಿ ಸ್ಪಂದಿಸಿ ಚಿಕಿತ್ಸೆ ಕೊಡುವ ಕೆಲಸ ಮಾಡಬೇಕೆಂದು ವಿನಂತಿ ಮಾಡಿಕೊಂಡಾಗ, ಇಡೀ ರಾಜ್ಯದಲ್ಲಿ ವೈದ್ಯರುಗಳು ವಿಶಾಲ ಹೃದಯದಿಂದ ತಮ್ಮ ಕ್ಲಿನಿಕ್‌ಗಳನ್ನು ಓಪನ್ ಮಾಡಿಕೊಂಡು ಕೆಲಸ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲು ಪ್ರಾರಂಭಿಸಿದರು. ಸರ್ಕಾರಿ ಆಸ್ಪತ್ರೆಗಳ ವೈದ್ಯರು ಯಾವರೀತಿ ಕೆಲಸ ಮಾಡಿದರು ಎಂಬ ಬಗ್ಗೆ ಗಮನ ಸೆಳೆಯಬೇಕಾಗುತ್ತದೆ. ಒಂದು ದಿನ ಕೂಡ ವಿಶ್ರಾಂತಿ ತೆಗೆದುಕೊಳ್ಳದೇ, ಒಂದು ಗಂಟೆ ಕೂಡ ವಿಶ್ರಾಂತಿ ತೆಗೆದುಕೊಳ್ಳದೇ ಕೆಲಸ ಮಾಡಿದ ವೈದ್ಯರು ಮತ್ತು ನರ್ಸ್‌ಗಳನ್ನು ಹೊಗಳಲೇಬೇಕಾಗುತ್ತದೆ. ಖಾಸಗಿ ಆಸ್ಪತ್ರೆಗಳ ಜೊತೆ ಒಡಂಬಡಿಕೆ ಮಾಡಿಕೊಂಡ ಸಂದರ್ಭದಲ್ಲಿ, ನಿಮ್ಮಲ್ಲಿನ ಶೇಕಡ 50 ರಷ್ಟು ಬೆಡ್‌ಗಳನ್ನು ಕೊಡಬೇಕೆಂದು ಹೇಳತ್ತು ಮತ್ತು ಅದಕ್ಕೂ ಕೂಡ ಸರ್ಕಾರ ದರವನ್ನು ನಿಗದಿ ಮಾಡಿತ್ತು. ಆದರೂ ಕೆಲವು ಖಾಸಗಿ ಆಸ್ಪತ್ರೆಗಳು ಸುಮಾರು 10 ಜನರಿಗೆ ಸಂಬಂಧಪಟ್ಟಂತೆ ಏನು ರೂ.42 ಲಕ್ಷಗಳನ್ನು ಪಡೆದುಕೊಂಡಿದ್ದರು ಅದನ್ನು ನಮ್ಮ ಡಿಐಜಿ ಶ್ರೀಮತಿ ರೂಪ ಮತ್ತು ಮಾನ್ಯ ಗೌರವ ಗುಪ್ತರವರ ನೇತೃತ್ವದಲ್ಲಿ ಇದ್ದ ಕಮಿಟಿಯು ಸಂಬಂಧಪಟ್ಟವರಿಗೆ ವಾಪಸ್ಸು ಕೊಡಿಸಲಾಯಿತು. ಯಾವ ಖಾಸಗಿ ಆಸ್ಪತ್ರೆಗಳು ಸಹಕಾರ ಕೊಡುತ್ತಿಲ್ಲವೋ ಅವುಗಳ ಮೇಲೆ ಕ್ರಿಮಿನಲ್ ಕೇಸ್ ಹಾಕುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ. 24 ತಾಸು ಮಾನಿಟರ್ ಮಾಡುತ್ತಿದ್ದೇವೆ. ಬೆಂಗಳೂರಿನ ಒಬ್ಬ ವ್ಯಕ್ತಿಗೆ ಅಂಬ್ಯುಲೆನ್ಸ್ ಸಿಗದೇ ಸತ್ತು ಹೋದ ಎನ್ನುವ ವಿಷಯ ಮಾಧ್ಯಮಗಳಲ್ಲಿ ಬಂದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಂದು ವಾರ್ಡ್‌ಗೆ ಎರಡೆರಡು ಅಂಬ್ಯುಲೆನ್ಸ್‌ಗಳನ್ನು ಒದಗಿಸುವಂತಹ ಕೆಲಸ ಮಾಡಿದರು. ಇಡೀ ರಾಜ್ಯದ ಎಲ್ಲಾ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ವಾಲಿಟಿ ಫುಡ್ ಕೊಡುವಂತಹ ಕೆಲಸ ಮಾಡಿದೆ. ಕೋವಿಡ್ ಬಂದಂಥ ಸಂದರ್ಭದಲ್ಲಿ ಎಲ್ಲಾ ರೀತಿಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ ನಿಭಾಯಿಸುವಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಒಬ್ಬ ವ್ಯಕ್ತಿಗೆ ನೆಗಡಿ-ಕೆಮ್ಮು ಬಂದಾಗ ಟೆಸ್ಟ್ ಮಾಡಿ ಅವನಿಗೆ ಪಾಸಿಟಿವ್ ಇದೆ ಎಂದು ಗೊತ್ತಾದಾಗ ಅಥವಾ ಸಮಸ್ಯೆ ಗಂಭೀರವಾಗಿದೆ ಎಂದು ಗೊತ್ತಾದಾಗ ಮೊದಲು ಏನು ಮಾಡಬೇಕು? ಎಲ್ಲಾ ಆಸ್ಪತ್ರೆಗಳಲ್ಲಿ ಆಕ್ಸಿಜನ್‌ನ ವ್ಯವಸ್ಥೆ ಮಾಡಬೇಕಾಗುತ್ತದೆ. ಇದಕ್ಕಿಂತ ಮುಂಚೆ ಆಸ್ಪತ್ರೆಗಳು ಯಾವರೀತಿ ಇರುತ್ತಿತ್ತು ಎನ್ನುವುದು ನಿಮಗೆ ಗೊತ್ತಿದೆ. ನಾನು ಆರೋಗ್ಯ ಮಂತ್ರಿಯಾಗಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳ ಭೇಟಿಗೆ ಹೋದಾಗ, ಗೆಸ್ಟ್‌ಹೌಸ್‌ನಲ್ಲಿ ಮಲಗಬಾರದು, ಆಸ್ಪತ್ರೆಗಳಲ್ಲೇ ಮಲಗಬೇಕು ಎಂದು ನಿರ್ಧಾರ ಮಾಡಿ ನಾನು ಆಸ್ಪತ್ರೆಗಳಲ್ಲಿ ಮಲಗಿದ್ದೆ. ಆ ಸಂದರ್ಭಗಳಲ್ಲಿ ಅಲ್ಲಿನ ಹಿರಿಯ ವೈದ್ಯರನ್ನು ಕರೆದು, ಸದರಿ ಆಸ್ಪತ್ರೆಗೆ ವೈದ್ಯರ ಕೊರತೆ ಇದೆಯೇ, ನರ್ಸ್‌ಗಳ ಕೊರತೆ ಇದೆಯೇ ಅಥವಾ ಔಷಧಿಗಳ ಕೊರತೆ ಇದೆಯೇ ಎಂಬ ಬಗ್ಗೆ ವಿಚಾರಣೆ ಮಾಡುವಂಥದ್ದು ಆದಾಗ, ಅಲ್ಲಿನ ಅಧಿಕಾರಿಗಳು ಕೂಡ, ನಮ್ಮನ್ನು ಪ್ರಶ್ನೆ ಮಾಡುವ ಮಂತ್ರಿಗಳಿದ್ದಾರೆ, ಜಾಗೃತರಾಗಿರಬೇಕು ಎನ್ನುವ ಭಾವನೆ ಅವರಲ್ಲಿ ಬರುವಂತೆ ಮಾಡಿದ್ದೇನೆ. ಬಹಳಷ್ಟು ಆಸ್ಪತ್ರೆಗಳಿಗೆ ಭೇಟಿ ಕೊಟ್ಟಾಗ, ನೀವು ಬರುತ್ತೀರಿ ಎಂದು ಆಸ್ಪತ್ರೆಗೆ ಸುಣ್ಣ-ಬಣ್ಣ ಎಲ್ಲಾ ಹೊಡೆದು ಕ್ಲೀನ್ ಮಾಡಿದ್ದಾರೆ ಎಂಬ ಮಾತನ್ನು ಹೇಳರುವುದೂ ಇದೆ. ಆಗ ನಾನು, ಇನ್ನೂ ಮುಂದೆ ಕೂಡ ಇದೇರೀತಿ ಸ್ವಚ್ಛವಾಗಿ ಇಡಬೇಕು ಎಂಬ ಆದೇಶವನ್ನೂ ಕೂಡ ಮಾಡಿ ಬಂದಿದ್ದೇನೆ. ಸಾಂಕ್ರಾಮಿಕ ಪ್ರಾರಂಭವಾದ ಸಂದರ್ಭದಲ್ಲಿ ಈ ರೋಗ ಇಷ್ಟೊಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಂಭೀರವಾಗುತ್ತದೆ, ಇಂತಹ ಪರಿಸ್ಥಿತಿ ಬರುತ್ತದೆ ಎಂಬುದನ್ನು ನಾವು ತಿಳಿದುಕೊಂಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಆಸ್ಪತ್ರೆಗಳಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಆದ್ಯತೆಯ ಮೇಲೆ ಕೊಡಬೇಕು ಎಂದು ವ್ಯವಸ್ಥೆ ಮಾಡುವಾಗ 5 ಲಕ್ಷ ರೋಗಿಗಳಿಗೆ ಟ್ರೀಟ್‌ಮೆಂಟ್ ಕೊಡಬೇಕಾಗುತ್ತದೆ ಎನ್ನುವ ಕಲ್ಪನೆ ಕೂಡ ನಮ್ಮಲ್ಲಿ ಇರಲಿಲ್ಲ. ಕೊರೋನಾ ಸಾಂಕ್ರಾಮಿಕ ರೋಗ ಚೀನಾ, ಅಮೇರಿಕಾ, ಇಟಲಿ ದೇಶಗಳಲ್ಲಿ ಪ್ರಾರಂಭವಾಗಿದೆ, ಅದು ನಮ್ಮ ಭಾರತಕ್ಕೆ ಬಂದುಬಿಟ್ಟರೆ ಹೇಗೆ? ಕರ್ನಾಟಕಕ್ಕೆ ಬಂದು ಬಿಟ್ಟರೆ ಹೇಗೆ ಎಂಬ ಮಾತುಗಳನ್ನೂ ನಾವು ಆಡಿಕೊಳ್ಳುತ್ತಿದ್ದೆವು. ರಾಜ್ಯಕ್ಕೆ ಕೊರೋನಾ ಪ್ರವೇಶ ಕೊಟ್ಟಾಗ, ಮಾನ್ಯ ಮುಖ್ಯಮಂತ್ರಿಗಳು ಜನರ ಪ್ರಾಣಗಳನ್ನು ಉಳಿಸುವ ನಿಟ್ಟಿನಲ್ಲಿ, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ, ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆಕ್ಸಿಜನ್ ಬೆಡ್‌ಗಳನ್ನು ಕೊಡುವ ಕೆಲಸ ಮಾಡಿದರು. ಆ ಸಂದರ್ಭದಲ್ಲಿ, ನಮ್ಮಲ್ಲಿ ಸ್ಯಾನಿಟೈಸರ್ ಇಲ್ಲ, ಮಾಸ್ಕ್‌ಗಳು ಇಲ್ಲ, ಪಿಪಿಇ ಕಿಟ್‌ಗಳಿಲ್ಲ ಎಂಬ ಬೇಡಿಕೆಗಳು ಬಂತು. ಈ ಎಲ್ಲಾ ವಸ್ತುಗಳು ಎಲ್ಲಾ ತಾಲ್ಲೂಕುಗಳಿಗೆ, ಎಲ್ಲಾ ಜಿಲ್ಲೆಗಳಿಗೆ ಮುಟ್ಟಬೇಕು ಎಂಬುದನ್ನು ಚಾಲೆಂಜ್ ಆಗಿ ತೆಗೆದುಕೊಂಡು ಆ ಕೆಲಸವನ್ನು ಪೂರ್ಣಗೊಳಿಸಲಾಯಿತು. ಬಹಳಷ್ಟು ವೈದ್ಯರು, ನರ್ಸ್‌ಗಳು, ಪೋಲೀಸರು ಅಲ್ಲದೇ, ಫ್ರಂಟ್‌ಲೈನ್ ವಾರಿಯರ್ಸ್ ಎನಿಸಿಕೊಂಡ ಅನೇಕ ಜನ ತಮ್ಮ ಪ್ರಾಣವನ್ನು ಕಳೆದುಕೊಂಡರು. ದೇಶವನ್ನು ಕಾಯುವ ಯೋಧರು ಹೇಗೆ ತಮ್ಮ ಬಲಿದಾನವನ್ನು ಕೊಡುತ್ತಾರೋ ಅದೇರೀತಿ ಇವರೂ ಕೂಡ ವಾರಿಯರ್ಸ್‌ಗಳಾಗಿದ್ದು ಇವರಿಗೆ ನಮನಗಳನ್ನು ಸಲ್ಲಿಸಬೇಕಾಗುತ್ತದೆ. ಮುಂದಿನ ಪರಿಸ್ಥಿತಿ ಹೇಗಿರುತ್ತದೆಯೋ ಗೊತ್ತಿಲ್ಲ. ಆದರೆ ಇವತ್ತೇನು ನಾವು ಕಷ್ಟಪಟ್ಟು ನಿಭಾಯಿಸಿದ್ದೇವೆಯೋ ಅದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ಇವತ್ತಿನ ದಿನ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಬಹಳಷ್ಟು ಸುಧಾರಣೆಗಳಾಗುತ್ತಿವೆ.

**ಶ್ರೀ ಕೆ.ಗೋವಿಂದರಾಜ್:–** ಬೌರಿಂಗ್ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಇಲ್ಲ.

**ಸಭಾಪತಿಯವರು:–** ಬೇರೆ ವಿಷಯಗಳನ್ನು ಆಮೇಲೆ ಕೇಳಿ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿನ ವೈದ್ಯರುಗಳ ಅವಶ್ಯಕತೆ ಇರುವುದರಿಂದ ಅವರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವಂತಹ ಕೆಲಸವನ್ನೂ ಮಾಡುತ್ತಿದ್ದೇವೆ. ಬಹಳಷ್ಟು ಜನ ಹೆದರಿ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಒಂದೊಂದು ಪ್ರಾಣ ಕೂಡ ಬಹಳ ಅಮೂಲ್ಯವಾದುದಾಗಿರುತ್ತದೆ. ಮಾನ್ಯ ಹಿರಿಯ ಸದಸ್ಯರಾದ ಹರಿಪ್ರಸಾದ್‌ರವರು ಮತ್ತು ಇತರರು ಈ ಕುರಿತು ಮಾತನಾಡಿದ್ದಾರೆ. ತಮ್ಮ ಕುಟುಂಬಗಳಲ್ಲಿ ಕೆಲವರು, ತಂದೆಯನ್ನು, ತಾಯಿಯನ್ನು, ಅಣ್ಣ–ತಮ್ಮಂದಿರನ್ನು ಮತ್ತು ಅಕ್ಕ–ತಂಗಿಯರನ್ನು ಕಳೆದುಕೊಂಡಿದ್ದಾರೆ. ಅವರೆಲ್ಲರ ಆತ್ಮಕ್ಕೂ ಶಾಂತಿ ಸಿಗಲೆಂದು ಭಗವಂತನಲ್ಲಿ ಕೇಳಿಕೊಳ್ಳುತ್ತೇನೆ. ಹೊಸದಾಗಿ ಕಂಡುಬರುವಂತಹ ಇಂತಹ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೋಗಗಳನ್ನು ಎದುರಿಸುವ ನಿಟ್ಟಿನಲ್ಲಿ ನಮ್ಮ ಆರೋಗ್ಯ ಇಲಾಖೆ ಸುಧಾರಣೆ ಆಗಬೇಕಿದೆ. ಮಾನ್ಯ ಎಂ.ನಾರಾಯಣಸ್ವಾಮಿಯವರು ಮತ್ತು ಇತರ ಸದಸ್ಯರು ಬಳ್ಳಾರಿಯಲ್ಲಿ ಶವ ಸಂಸ್ಕಾರ ಮಾಡುವಾಗ, ಶವವನ್ನು ಜೆಸಿಬಿ ಯಲ್ಲಿ ಎಸೆದಾಡುವಂತಹ ಕೆಲಸ ಮಾಡಿದರು ಎನ್ನುವ ಬಗ್ಗೆ ಪ್ರಸ್ತಾಪ ಮಾಡಿದರು. ಈ ಘಟನೆ ಆದ ತಕ್ಷಣ ನಾವು ಸಂಬಂಧಪಟ್ಟವರನ್ನು ಅಮಾನತ್ತು ಮಾಡಿದೆವು. ಈ ರೀತಿ ಆಗಬಾರದು ಎಂದು ನಾನು, ಮಾನ್ಯ ಕೊಂಡಯ್ಯನವರು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಚಿಂತನೆ ಕೂಡ ಮಾಡಿದೆವು. ನಂತರ ಎಸ್‌ಒಪಿ ಯನ್ನು ಬದಲು ಮಾಡಿಕೊಂಡೆವು. ಕೋವಿಡ್-19 ಕಾರಣದಿಂದ ಯಾರಾದರೂ ಸತ್ತರೆ ಅದನ್ನು ವಿಡಿಯೋ ಮಾಡಿಕೊಂಡು ವೈರಲ್ ಮಾಡುವಂಥದ್ದು ನಡೆಯುತ್ತಿತ್ತು. ಈ ರೀತಿ ಯಾರೂ ವಿಡಿಯೋ ಮಾಡಿಕೊಳ್ಳಬಾರದೆಂದು ನಿಯಮ ಮಾಡಿದೆವು. ಜೆಸಿಬಿ ಯಿಂದ ಶವವನ್ನು ಎಸೆದಾಡುವಂತಹ ಕೆಲಸ ಇನ್ನು ಮುಂದೆ ಆಗಬಾರದು ಎಂದು, ಪ್ರತಿ ಜಿಲ್ಲಾಧಿಕಾರಿಗಳಿಗೂ ಆಯಾ ಜಿಲ್ಲೆಗಳಿಗೆ ತಕ್ಕಂತೆ ಎಸ್‌ಒಪಿ(Standard operating procedure) ಗಳನ್ನು ಬದಲಾವಣೆ ಮಾಡಿಕೊಳ್ಳುವಂತಹ ವಿಶೇಷ ಅಧಿಕಾರವನ್ನು ಕೊಟ್ಟೆವು; ಈ ದಿಸೆಯಲ್ಲಿ ಒಂದು ನಿಯಮ ಮಾಡುವಂತಹ ಕೆಲಸ ಮಾಡಿದೆವು. ಇಂತಹ ಸಂದರ್ಭಗಳಲ್ಲಿ ಮೊಬೈಲ್‌ಗಳಲ್ಲಿ ವಿಡಿಯೋ ಮಾಡಿಕೊಳ್ಳಬಾರದು, ಜನರು ಪ್ಯಾನಿಕ್ ಆಗಬಾರದು ಎನ್ನುವ ನಿಟ್ಟಿನಲ್ಲಿ ನಿಯಮ ಮಾಡಿದೆವು. ಮಾನ್ಯ ಸಭಾಪತಿಯವರೇ, ವ್ಯಾಕ್ಸಿನ್ ಬರುವ ತನಕ, ಮುಂದಿನ 2-3 ತಿಂಗಳುಗಳ ಕಾಲ ಇಂತಹ ಪರಿಸ್ಥಿತಿಯನ್ನೇ ನಾವು ಎದುರಿಸಬೇಕಾಗುತ್ತದೆ. ಕೊರೋನಾ ಸಾಂಕ್ರಮಿಕ ರೋಗದಿಂದ ತಪ್ಪಿಸಿಕೊಳ್ಳಲು ಎಲ್ಲರೂ ಮಾಸ್ಕ್ ಹಾಕಿಕೊಂಡಿರುವುದನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಲಕ್ಷ್ಮಣ ಸವದಿಯವರು ನನಗೆ ಒಂದು ಮಾತನ್ನು ಹೇಳಿದರು. ಶ್ರೀ ರಾಮುಲುರವರು ಆರೋಗ್ಯ ಮಂತ್ರಿ ಆದಮೇಲೆ, ಹನುಮಂತನ ಹಾಗೆ ಕಾಣುವ ಮಾಸ್ಕ್‌ಅನ್ನು ಎಲ್ಲರೂ ಹಾಕಿಕೊಳ್ಳುವಂತಹ ಕೆಲಸವನ್ನು ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿ ತಮಾಷೆ ಮಾಡಿದರು.

(ಮುಂದು . . .)

(781)22-9-2020 6.00 ಡಿಎಸ್-ವಿಕೆ

**ಶ್ರೀ ಬಿ.ಶ್ರೀರಾಮುಲು (ಮುಂದು):-**

ಏಕೆಂದರೆ, ಎಲ್ಲೋ ಒಂದು ಕಡೆ ನಾವೆಲ್ಲರೂ ಜೀವನವನ್ನು ಮಾಡಬೇಕಾಗಿದೆ. ಕೋವಿಡ್ ಜೊತೆಯಲ್ಲಿ ನಮ್ಮ ಪ್ರಯಾಣ ಬೆಳೆಸಬೇಕೆಂದು ನಾನು ಬಹಳಷ್ಟು ಸಲ ಉಲ್ಲೇಖ ಮಾಡಿದ್ದೇನೆ. ಕೋವಿಡ್ ಹೇಗೇಗೆ ಇರುತ್ತದೆ ಅದರ ಜೊತೆಯಲ್ಲಿ ನಾವು ಪ್ರಯಾಣ ಬೆಳೆಸಬೇಕೆಂದು ಬಹಳಷ್ಟು ಜನರು ಹೇಳಿದರು. ಈ ಕೋವಿಡ್ ಎನ್ನುವಂಥ ಖಾಯಿಲೆಗೆ vaccine ಬರುವವರೆಗೆ ಅಂತ್ಯವಾಗುವುದಿಲ್ಲ. Vaccine

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುವವರೆಗೆ ಜಾಗೃತಿಯಾಗಿರಬೇಕು. ಎಲ್ಲರೂ ಸಾಮಾಜಿಕ ಅಂತರವನ್ನು ನಿರ್ವಹಣೆ ಮಾಡಬೇಕು. ಎಲ್ಲರೂ mask ಗಳನ್ನು ಹಾಕಬೇಕು, sanitizer ಬಳಕೆ ಮಾಡಿಕೊಳ್ಳಬೇಕು, ಮನೆಯಲ್ಲಿ sanitizer ಇಲ್ಲದಿದ್ದರೆ ಸೋಪನ್ನು ಬಳಕೆ ಮಾಡಬೇಕು. ಇವೆಲ್ಲಾ precautionary measures ತೆಗೆದುಕೊಂಡರೆ ಜಾಗೃತಿಯನ್ನು ಮೂಡಿಸಬಹುದು. ಆದ್ದರಿಂದ ನಾನು ಬಹಳಷ್ಟು ವಿಚಾರಗಳನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಬೇರೆ ಬೇರೆ ವಿಚಾರಗಳು ಸಾಕಷ್ಟು ಇರುವ ಕಾರಣ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಸರ್ಕಾರ ಬಹಳಷ್ಟು ಸಮರ್ಥವಾಗಿ ನಿಭಾಯಿಸುವ ಕೆಲಸ ಮಾಡಿದೆ. ಮಾನ್ಯ ಮುಖ್ಯಮಂತ್ರಿಗಳ ಮುಂದಾಳತ್ವದಲ್ಲಿ ನಾವೆಲ್ಲಾ ಮಂತ್ರಿಗಳು ಸೇರಿ ಕೋವಿಡ್ ವಿಚಾರದಲ್ಲಿ, ಎಲ್ಲಾ ವಿಚಾರಗಳಲ್ಲೂ ಒಳ್ಳೆಯ ಕೆಲಸ ಮಾಡುವಂತಹ ಕೆಲಸ ಮಾಡಿದ್ದೇವೆ. ವೈದ್ಯರುಗಳು, ನರ್ಸ್‌ಗಳು, ಪೊಲೀಸರು, frontline warriors ಆಗಿ ಕೆಲಸ ಮಾಡಿದ್ದಂತಹ ಎಲ್ಲರೂ ಇವತ್ತಿನವರೆಗೆ ಮನೆಗೆ ಹೋಗಿಲ್ಲ. ಇವತ್ತು ಅವರೆಲ್ಲರೂ ಏಳು ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದಾರೆ. ಏಳು ಗಂಟೆಗಳ ಕಾಲ ಮತ್ತೆ ಅವರು quarantine ನಲ್ಲಿರುತ್ತಾರೆ. ಆಶಾ ಕಾರ್ಯಕರ್ತರು 24 ಗಂಟೆಗಳ ಕಾಲ ಗುಡ್ಡಗಾಡು ಪ್ರದೇಶದ ಪ್ರತಿ ಮನೆಗಳಿಗೂ ಹೋಗಿ ನಿಮಗೆ ಜ್ವರ, ನೆಗಡಿ ಬಂದಿದೆಯೇ ಎಂದು ಸರ್ವೆ ಮಾಡಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲೂ ಎರಡೆರಡು ಬಾರಿ ಸರ್ವೆಯನ್ನು ಮಾಡಿದ್ದಾರೆ. ಈ ರೀತಿ ಒಳ್ಳೆಯ ಕೆಲಸ ಮಾಡಿದಂತಹ ಸಂದರ್ಭದಲ್ಲಿ ಅವರಿಗೆ ಎಲ್ಲೋ ಒಂದು ಕಡೆ distress ಮಾಡುವಂತಹ ಕೆಲಸ ಮಾಡಿದರೆ ಮನಸ್ಸಿಗೆ ನೋವಾಗುತ್ತದೆ. ದಯವಿಟ್ಟು ನಾನು ವಿನಂತಿ ಮಾಡುತ್ತೇನೆ, ಯಾವುದೇ ರಾಜಕಾರಣ ಮಾಡುವುದಕ್ಕೋಸ್ಕರ ನಾನು ಮಾತನಾಡುತ್ತಿಲ್ಲ. ಇವತ್ತು ಯಾರ್ಯಾರು ವೈದ್ಯರುಗಳೆಲ್ಲಾ ಕೆಲಸ ಮಾಡಿದ್ದಾರೆ ಅವರಿಗೆಲ್ಲಾ ಶಕ್ತಿ ತುಂಬುವಂತಹ ಕೆಲಸ ಮಾಡಬೇಕು. ನಾವೆಲ್ಲರೂ ಇದ್ದೇವೆ ಎನ್ನುವಂತಹ ಧೈರ್ಯವನ್ನು ತುಂಬುವಂತಹ ಕೆಲಸ ಮಾಡಬೇಕು ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ, ಧನ್ಯವಾದಗಳು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟೀಕರಣ ಕೇಳಬಯಸುತ್ತಿದ್ದೇನೆ. ಮಾನ್ಯ ಸಚಿವರು ಬಹಳ ಕಳಕಳಿಯಿಂದ ಕೋವಿಡ್-19 ಕಾರ್ಯದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ಬಹಳಷ್ಟು ಭಾವನಾತ್ಮಕ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಯಾವುದೇ pandemic ಗೆ ಬರಬೇಕಾದರೆ, ಸರ್ಕಾರ ಏನಾದರೂ ತಂದಿದೆಯೇ ಎನ್ನುವಂತಹ ಮಾತನ್ನು ಇವತ್ತು ನಮ್ಮ ಸಭಾನಾಯಕರು ಹೇಳಿದ್ದಾರೆ. ಇದು ಚೈನಾ ದೇಶದ Wuhan City

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಲ್ಲಿ ಈ ಕೊರೋನಾ ವೈರಸ್ ಹುಟ್ಟಿರುವಂಥದ್ದು. ವಿದೇಶದಿಂದ ಯಾರಾದರೂ ನಮ್ಮ ಸ್ನೇಹಿತರು, ಸಂಬಂಧಿಕರು ಬರುತ್ತಿದ್ದರೆ ಅವರು Cell Phone or Electronic Goods ತರುತ್ತಿದ್ದರು. ವಿದೇಶದಿಂದ ಬರುವಂತಹ ಯಾರೇ ಸ್ನೇಹಿತರು, ಸಂಬಂಧಿಕರು, ಬಂಧು-ಬಾಂಧವರು ಕೊರೋನಾ ವೈರಸನ್ನು ತರುತ್ತಿದ್ದಾರೆ. ಅವರ ಉತ್ತರದಲ್ಲಿ ನಾನು ನಿರೀಕ್ಷಣೆ ಮಾಡಿದ್ದೆ. ಇದರ prevention ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನುವುದನ್ನು ಎಳ್ಳಷ್ಟೂ ಅವರು ಹೇಳಲಿಲ್ಲ. ಅವರು ಮಾಡಿದಂತಹ ಕೆಲಸ, ಭಾಗಿಯಾಗಿರುವಂಥದ್ದು, ಪ್ರಯತ್ನ ಪಟ್ಟಿರುವುದು, ರಾಜ್ಯದ ಉದ್ದಗಲಕ್ಕೂ ತಿರುಗಾಡಿರುವುದನ್ನು ಹೇಳಿದರು, ಅದಕ್ಕೆ ನಾನು ಅವರಿಗೆ ಅಭಿನಂದಿಸುತ್ತೇನೆ. ಆದರೆ ಸರ್ಕಾರ prevention ಮಾಡಬಹುದಾಗಿತ್ತು. ಇಡೀ ಪ್ರಪಂಚದಲ್ಲಿ ಇದು ಹಬ್ಬುತ್ತಿದೆ ಎನ್ನುವುದು ಗೊತ್ತಿತ್ತು. ಚೈನಾ ದೇಶದಲ್ಲಿ ಹುಟ್ಟಿರುವಂತಹ ಈ ಕೊರೋನಾ ವೈರಸ್ ಭಾರತ ದೇಶದಲ್ಲಿ ಹುಟ್ಟಿ, ಅದು ನಮ್ಮ ಪಕ್ಕದ ಮನೆಯ ಕೇರಳದ ಕಾಸರಗೋಡಿನಲ್ಲಿ ಜನವರಿ 30ಕ್ಕೆ ಮೊದಲನೆಯ ಪ್ರಕರಣವನ್ನು ಕಂಡುಹಿಡಿದರು. ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬಂದ್ ಮಾಡಿ ಎಂದು ನಾನು ಹೇಳುತ್ತಿಲ್ಲ. ಜನವರಿ 30ಕ್ಕೆ ಈ ಪ್ರಕರಣ ಕಂಡು ಬಂದ ಕೂಡಲೇ ಫೆಬ್ರವರಿ 1 ರಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬಂದಂಥವರು ಯಾರೇ ಇರಲಿ ಅವರನ್ನು institutional quarantine ಮಾಡಬುದಾಗಿತ್ತು. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಮಾರ್ಚ್‌ನಲ್ಲಿ ಸಭೆ ಕರೆದಾಗ ನಾನು ಸಭೆಯಲ್ಲಿ ಭಾಗವಹಿಸಿದ್ದೆ. ನಮ್ಮ ಕೆಳಮನೆಯ ನಾಯಕರು, ಪಕ್ಷದ ಅಧ್ಯಕ್ಷರು, ಎಲ್ಲರೂ ಭಾಗವಹಿಸಿದ್ದೆವು. ಆಗ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಒಂದು ಮಾತನ್ನು ಹೇಳಿದರು, ಇಡೀ ದೇಶದ ಬಗ್ಗೆ ನಾನು ಹೇಳುತ್ತಿಲ್ಲ, ಜನವರಿಯಲ್ಲಿ ನಾಲ್ಕು ಲಕ್ಷ ಜನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕರ್ನಾಟಕಕ್ಕೆ ಬಂದಿದ್ದಾರೆ. ಆಮೇಲೆ ಫೆಬ್ರವರಿಯಲ್ಲಿ ಮೂರೂವರೆ ಲಕ್ಷ ಜನರು ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದಾಗ 18,000 ಜನರು ವಿದೇಶದಿಂದ ಬಂದಿದ್ದಾರೆ. ಅವರು ಯಾರನ್ನೂ self-quarantine ಮಾಡಲಿಲ್ಲ. ಮಾರ್ಚ್ ತಿಂಗಳಿನಲ್ಲಿ ಬಂದಂಥವರನ್ನು ಹುಡುಕಾಡುತ್ತಿದ್ದೇವೆಂದು ಹೇಳಿದರು. ವಿದೇಶದಿಂದ ಯಾರೇ ಬರಲಿ, ಅವರೆಲ್ಲರನ್ನು 14 days institutional quarantine ಮಾಡಿ ಅದರಲ್ಲಿ ಯಾರಿಗಾದರೂ ಅಂತಹ ಲಕ್ಷಣಗಳು ಕಂಡುಬಂದರೆ ಅವರನ್ನು ಟೆಸ್ಟ್ ಮಾಡಿ ಆಸ್ಪತ್ರೆಗೆ ಕಳುಹಿಸಬಹುದಾಗಿತ್ತು. There is a medical term that, "Prevention is better than cure". ಆ prevention ಮಾಡಿದ್ದರೆ ದೇಶದಲ್ಲಿ ಕೊರೋನಾ ವೈರಸ್ ಬರುವಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ನಮ್ಮ ರಾಜ್ಯದಲ್ಲಾದರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತಿರಲಿಲ್ಲ. ಇಡೀ ದೇಶದ ಎಲ್ಲಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ವಿದೇಶದಿಂದ ಬರತಕ್ಕಂಥ ಎಲ್ಲಾ ಜನರನ್ನು quarantine ಗೆ ಒಳಪಡಿಸಬಹುದಾಗಿತ್ತು. ಯಾರಿಗಾದರೂ ಕೊರೋನಾ ವೈರಸ್ ಇದ್ದಿದ್ದರೆ ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಬಹುದಾಗಿತ್ತು. ಆ ರೀತಿ ಮಾಡಿದ್ದರೆ ನಮ್ಮಲ್ಲಿ lockdown, seal down ಪ್ರಶ್ನೆ ಬರುತ್ತಿರಲಿಲ್ಲ. ಆರ್ಥಿಕ ಸ್ಥಿತಿ ಹಾಳಾಗುವಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ವ್ಯಾಪಾರ ವಹಿವಾಟು ನಿಂತು ಹೋಗುವ ಪರಿಸ್ಥಿತಿ ಬರುತ್ತಿರಲಿಲ್ಲ. ಉದ್ಯಮಗಳು ಹಾಳಾಗುವ ಪರಿಸ್ಥಿತಿ ಬರುತ್ತಿರಲಿಲ್ಲ. ಇವತ್ತು ದೇಶದಲ್ಲಿ ಎಲ್ಲಾ ರೀತಿಯ ಚಟುವಟಿಕೆಗಳು ಚೆನ್ನಾಗಿ ನಡೆಯುತ್ತಿತ್ತು. ಅದಕ್ಕೆ ಸರ್ಕಾರ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ವಿಫಲವಾಗಿದೆ. ನಾನು ರಾಜಕಾರಣಕ್ಕಾಗಿ ಈ ಮಾತನ್ನು ಹೇಳುತ್ತಿಲ್ಲ. ಅಮೇರಿಕದ ಅಧ್ಯಕ್ಷರಾದ ಟ್ರಂಪ್‌ರವರು ಬರುವವರಿದ್ದರು. ಅದರ ಸಲುವಾಗಿ ತಡವಾಯಿತು. ಚುನಾಯಿತ ಸರ್ಕಾರ ಮಧ್ಯಪ್ರದೇಶದಲ್ಲಿ ಕೆಡವಬೇಕಾಗಿತ್ತು. ಒಟ್ಟಾರೆ ನನಗನಿಸಿರುವಂತಹ ಕಾರಣಗಳನ್ನು ನಾನು ಹೇಳುತ್ತಿದ್ದೇನೆ. ಅದು ಸರಿ ಇರಬಹುದು, ತಪ್ಪು ಇರಬಹುದು. First case in India ಕಾಸರಗೋಡಿನಲ್ಲಿ, ಅವರ ಜಿಲ್ಲೆಯ ಪಕ್ಕದಲ್ಲಿ, ಮನೆಯ ಪಕ್ಕದಲ್ಲಿ ಬಂದಾಗ ಇಡೀ ರಾಜ್ಯದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಯಾರು ವಿದೇಶಿಗರು ಬರುತ್ತಾರೆ ಅವರನ್ನು institutional quarantine ಮಾಡದಿರುವುದರಿಂದ ಕರ್ನಾಟಕ ರಾಜ್ಯದಲ್ಲಿ ಈ ರೀತಿ ವ್ಯಾಪಿಸಿತ್ತು. ಆಮೇಲೆ ತಬ್ಲಿಘಿಯಿಂದ ಬಂತು ಎಂದು ಹೇಳುತ್ತಿದ್ದರು. ಆ ತಬ್ಲಿಘಿಗೆ ಯಾರು ಅನುಮತಿಯನ್ನು ಕೊಟ್ಟರು? Delhi Police are working right under the nose of Union Home Minister. ಅಲ್ಲಿ ಅವರಿಗೆ ಅವಕಾಶ ಕೊಡಬಾರದಾಗಿತ್ತು. ಅದೇ ರೀತಿ ಅವರು ಬಾಂಬೆಯಲ್ಲಿ ಸಭೆ ಮಾಡುವುದಕ್ಕೆ ಕೇಳಿದರು, ಆದರೆ ಬಾಂಬೆಯ ಸರ್ಕಾರ ಒಪ್ಪಲಿಲ್ಲ. ಅದಕ್ಕೆ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಮಾನ್ಯ ಸಚಿವರು ಮುಂಜಾಗ್ರತೆಯಾಗಿ ಏನು ಕ್ರಮ ತೆಗೆದುಕೊಂಡಿದ್ದೇವೆ ಎಂಬುದನ್ನು ಹೇಳಲಿಲ್ಲ. ಆಯಿತು, ತಪ್ಪಾಗಿದೆ. ಆಮೇಲೆ ಕೋವಿಡ್ ನಿಯಂತ್ರಣವನ್ನಾದರೂ ಪರಿಣಾಮಕಾರಿಯಾಗಿ ಮಾಡಬಹುದಾಗಿತ್ತಲ್ಲವೇ? ಮಾರ್ಚ್ 24 ಮಧ್ಯ ರಾತ್ರಿಯಿಂದ ಮೇ ವರೆಗೆ 42 ದಿವಸ lockdown ಮಾಡಿದರು. ಆಮೇಲೆ ಅನೇಕ ರಾಜ್ಯಗಳಲ್ಲಿ ಆ lockdown ಅನ್ನು ಮುಂದುವರೆಸಿದರು. ಕರ್ನಾಟಕದಲ್ಲಿ ಲಾಕ್‌ಡೌನ್ ಮುಂದುವರೆಸಲಿಲ್ಲ, unlock ಮಾಡಿ lift ಮಾಡಿದ ಕೂಡಲೇ ಜನ 42 ದಿವಸ ಮನೆಯಲ್ಲಿದ್ದರಲ್ಲಾ ಸಿಕ್ಕಾಪಟ್ಟೆ ಎಲ್ಲಿ ನೋಡಿದರೂ ಜನ ಜಾತ್ರೆಯಾಗುತ್ತಿತ್ತು. ಇದರಿಂದ ಮತ್ತೆ ವೈರಸ್ ಹರಡುತ್ತಿತ್ತು. ಈಗ lockdown ಮಾಡುವ ಹಾಗಿಲ್ಲ. ಈಗ ಮಾನ್ಯ ಸಚಿವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡುಬಿಟ್ಟರು. ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡರೆ ದೇವರು ನಿಲ್ಲಿಸುತ್ತಾರೆಯೇ? Lockdown ಮಾಡಿದಾಗ ಎಲ್ಲಾ ಮಸೀದಿಗಳಿಗೆ, ಚರ್ಚೆಗಳಿಗೆ ಕೀಲಿಯನ್ನು ಹಾಕಿದ್ದರು. ವೈದ್ಯರಲ್ಲಿ ದೇವರನ್ನು ಕಾಣುತ್ತೇವೆಂದು ನಮ್ಮ ಹಿರಿಯರು ಹೇಳುತ್ತಿದ್ದರು. ಅದರ ಪ್ರಕಾರ ಯಾರು ಮಸೀದಿಗೆ, ಗುಡಿಗೆ, ಚರ್ಚ್‌ಗಳಿಗೆ ಹೋಗಲಿಲ್ಲ. ನೇರವಾಗಿ ಆಸ್ಪತ್ರೆಗೆ ಹೋಗುವಂತಹ ಕೆಲಸ ಆಯಿತು. ದೇವರು ಎಲ್ಲಿ ಕಾಪಾಡಬೇಕು? ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಈ ಕೋವಿಡ್ ಹರಡಿದ ನಂತರ ಅದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲಿಲ್ಲ. West Bengal ಮುಂತಾದ ಅನೇಕ ರಾಜ್ಯಗಳಲ್ಲಿ lockdown ಅನ್ನು ಮುಂದುವರೆಸಿದರು. ನಾವೇನು lockdown lift ಮಾಡಿದ್ದೇವೆಲ್ಲಾ ಅನೇಕ ರಾಜ್ಯಗಳಲ್ಲಿ lockdown ಅನ್ನು ಮುಂದುವರೆಸಿ ಸಾಧ್ಯವಾದ ಮಟ್ಟಿಗೆ ಅದನ್ನು ತಹಬಂದಿಗೆ ತಂದರು. ಆದರೆ, ಇಲ್ಲಿ ಆಗಲಿಲ್ಲ. ಮುಂಜಾಗ್ರಾತಾ ಕ್ರಮವನ್ನು ತೆಗೆದುಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ. ನಿಯಂತ್ರಣ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ, efforts ಮಾಡಿದ್ದಾರೆ. ಸರ್ಕಾರವೇನು ಪ್ರಯತ್ನ ಮಾಡಿಲ್ಲ ಎಂದು ನಾನು ಹೇಳಲಿಲ್ಲ. The Government has done good efforts. ಆದರೆ ನಿರೀಕ್ಷಿತ ಮಟ್ಟದಲ್ಲಿ ಪ್ರಯತ್ನ ಆಗಿಲ್ಲ. ಮಾನ್ಯ ನಾರಾಯಣಸ್ವಾಮಿಯವರು ಹೇಳಿದರು, ಪಕ್ಕದ ಕೇರಳದಲ್ಲಿ ಯಾವ ರೀತಿ ಪರಿಣಾಮಕಾರಿಯಾಗಿ ನಿಯಂತ್ರಣ ಮಾಡಿ ಇಡೀ ರಾಜ್ಯದಲ್ಲೆಲ್ಲಾ WHO (World Health Organization) ರವರ ಕಡೆಯಿಂದ ಕೇರಳದ ಮುಖ್ಯಮಂತ್ರಿ appreciation ಮಾಡಿಕೊಂಡರು. First day 20,000 crores ಘೋಷಣೆ ಮಾಡಿ ಎಲ್ಲ ರೀತಿಯ precautionary measure ತೆಗೆದುಕೊಂಡರು. ನಾನು ಸ್ಪಷ್ಟೀಕರಣ ಕೇಳುವಾಗ ಹೆಚ್ಚು ಮಾತನಾಡುವುದಕ್ಕಾಗುವುದಿಲ್ಲ. ಮತ್ತೊಂದು ವಿಚಾರವೇನೆಂದರೆ, ಪ್ರಶ್ನೆ ಕೇಳಿದಂತಹ ನಮ್ಮ ಸದಸ್ಯರು ಕೆಲವು ವೈದ್ಯಕೀಯ ಉಪಕರಣಗಳಾದ hand gloves, mask, sanitizer, ventilator ಇರಬಹುದು, ಇವುಗಳನ್ನು ಖರೀದಿ ಮಾಡುವುದರಲ್ಲಿ ಮಾರ್ಕೆಟ್‌ನಲ್ಲಿ ಸಿಗುವ ಬೆಲೆಗಿಂತ ನಾಲ್ಕೈದು ಪಟ್ಟು ಹೆಚ್ಚು ಹಣ ಕೊಟ್ಟು ಖರೀದಿ ಮಾಡಿದ್ದಾರೆನ್ನುವ ಆಪಾದನೆ ಇತ್ತು. ಮಾನ್ಯ ಸಚಿವರು ಕೇಂದ್ರ ಸರ್ಕಾರದವರು ಸೂಚಿಸಿರುವಂತಹ ಕಂಪನಿಗಳಲ್ಲೇ ನಾವು ಖರೀದಿ ಮಾಡಿದ್ದೇವೆಂದು ಹೇಳಿದರು.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(782) 06.10 22.09.2020 ಎಸ್‌ವಿ–ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):–**

ಆಮೇಲೆ ಅವುಗಳನ್ನು blacklist ನಲ್ಲಿಡಲಾಗಿದೆ ಎಂದು ಹೇಳಿದರು. ಹಾಗಾದರೆ ಕೇಂದ್ರ ಸರ್ಕಾರದವರು blacklist ನಲ್ಲಿಡುವ ಕಂಪನಿಗಳನ್ನು ಪ್ರೊಪೋಸ್ ಮಾಡಿದ್ದಾರೆಯೇ? ಕಳಪೆ ಸಾಮಗ್ರಿಗಳನ್ನು ಕೊಟ್ಟಿರುವವರನ್ನು blacklist ನಲ್ಲಿಡಲಾಗಿದೆ. How the Central Government proposed such defective companies. ಅತ್ಯುತ್ತಮವಾದ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡುತ್ತಿದ್ದರೋ, ಪಾರದರ್ಶಕವಾಗಿ ವ್ಯವಹರಿಸುತ್ತಿದ್ದರೋ ಅಂತಹ ಕಂಪನಿಗಳ ಹೆಸರುಗಳನ್ನು ಕೇಂದ್ರ ಸರ್ಕಾರ ಹೇಳಬೇಕಿತ್ತು. ಕೇಂದ್ರ ಸರ್ಕಾರ ಸೂಚಿಸಿದ ಕಂಪನಿಗಳಲ್ಲಿ ನಮ್ಮ ರಾಜ್ಯ ಸರ್ಕಾರವು ಖರೀದಿ ಮಾಡಿದೆ ಎಂದರೆ ಅವು ಕಳಪೆ ಸಾಮಗ್ರಿಗಳನ್ನು ಕೊಡುವಂತಹ ಕಂಪನಿಗಳಾಗಿವೆ. ಕಳಪೆ ಸಾಮಗ್ರಿಯಷ್ಟೇ ಅಲ್ಲದೆ ಮೂರು ಪಟ್ಟು, ನಾಲ್ಕು ಪಟ್ಟು demand ಮಾಡುವಂತಹ ಕಂಪನಿಗಳ ಹೆಸರುಗಳನ್ನು ಹೇಳಿದ್ದಾರೆ. ಅದನ್ನು ಇವರು blacklist ನಲ್ಲಿಟ್ಟಿರುತ್ತಾರೆ. ಅಂದರೆ ಇದರಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತು ಪರಿಣಾಮಕಾರಿಯಾಗಿ ವಿವರಣೆಯನ್ನು ಕೊಡಲು ಅಸಮರ್ಥರಾದರು. ಮಂತ್ರಿಗಳ ಬಗ್ಗೆ ವ್ಯಕ್ತಿಗತವಾಗಿ ನನಗೆ ಗೌರವವಿದೆ. ಆದರೆ ಇಂದು ಅವರು ಕೊಟ್ಟಿರುವ ಉತ್ತರ ತೃಪ್ತಿಕರವಾಗಿರುವುದಿಲ್ಲ. ಕೋವಿಡ್–19 ವೈರಾಣು ನಮ್ಮ ರಾಜ್ಯದಲ್ಲಿ ಕಾಲಿಡಲಾರದಂತೆ prevention ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ಕೋವಿಡ್–19 ವೈರಾಣು ಬಂದ ನಂತರ ಈ ರೋಗವನ್ನು ನಿಯಂತ್ರಣ ಮಾಡುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಮಂತ್ರಿಗಳು ತಮ್ಮ ಇಲಾಖೆಯಲ್ಲಿ ಭಾರಿ ಪ್ರಮಾಣದ ಭ್ರಷ್ಟಾಚಾರ ಆಗದ ರೀತಿಯಲ್ಲಿ ಕ್ರಮವನ್ನು ಕೈಗೊಂಡಿರುವುದಿಲ್ಲ. ಸರ್ಕಾರ ಇದರಲ್ಲಿ involve ಆಗಿದೆ. ಸಚಿವರ ಉತ್ತರ ತೃಪ್ತಿಕರವಾಗಿರುವುದಿಲ್ಲದ ಕಾರಣ ನಾವು ಅತೃಪ್ತರಾಗಿ ಸಭೆಯಿಂದ ನಿರ್ಗಮಿಸುತ್ತೇವೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ವಿರೋಧಪಕ್ಷದ ನಾಯಕರೇ, ನಿಮ್ಮ ಪಕ್ಷವನ್ನು ನಿಯಂತ್ರಿಸುವಲ್ಲಿ ನಿಮ್ಮ ಪಕ್ಷವೇ ವಿಫಲವಾಗಿದೆಯಲ್ಲವೆ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇದು ಆತ್ಮ ವಂಚನೆಯ ನಡೆ. ಮಾನ್ಯ ಶ್ರೀರಾಮುಲು ಅವರು ಬಹಳ ಸೊಗಸಾಗಿ ಪ್ರಾಮಾಣಿಕವಾದ ಉತ್ತರವನ್ನು ಕೊಟ್ಟಿದ್ದರೂ ಕೂಡ ಪ್ರತಿಪಕ್ಷದವರು ಸಭಾತ್ಯಾಗ ಮಾಡಿದ್ದಾರೆ. ನಾವು ಪ್ರತಿಪಕ್ಷದವರಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಕೋವಿಡ್–19 ವಿಚಾರದಲ್ಲಿ ರಾಜಕಾರಣವನ್ನು ನಾವು ನಿರೀಕ್ಷೆ ಮಾಡಿರಲಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು, corona warriors ಗಳಿಗಾಗಿರುವ ವಿಮೆಯು ಈ ತಿಂಗಳಲ್ಲಿ ಅಂತ್ಯವಾಗುತ್ತದೆ ಎಂಬುದಾಗಿ ನಾನು ಪಾರ್ಲಿಮೆಂಟ್ ನಡವಳಿಗಳಿಂದ ತಿಳಿದುಕೊಂಡಿದ್ದೇನೆ. ಅದು State Policy or Central Policy ಎಂಬುದನ್ನು ನೋಡಿಕೊಂಡು, ರಾಜ್ಯದ್ದಾಗಿದ್ದರೆ ದಯಮಾಡಿ ಒಂದು ವರ್ಷ ಮುಂದುವರೆಸಬೇಕು. ಕೇಂದ್ರದ್ದಾಗಿದ್ದರೆ ಒಂದು ಪ್ರಸ್ತಾವನೆಯನ್ನು ಕಳುಹಿಸಿಕೊಡಿ. Testing time frame ಮುಂಚೆ 6–7 ದಿನಗಳಾಗುತ್ತಿತ್ತು. ಈಗ 3–4 ದಿನಗಳಾಗಿವೆ. ದಯಮಾಡಿ 48 ಗಂಟೆಗಳಲ್ಲಿ ಮಾಡಬೇಕು. ಇದರಿಂದ contact tracing ಮಾಡಲು ಅನುಕೂಲವಾಗುತ್ತದೆ. ಆದಷ್ಟು ಬೇಗ trap ಮಾಡಿ ಅದನ್ನು treat ಮಾಡಬಹುದು. ಇದಕ್ಕೊಂದು ಅವಕಾಶವನ್ನು ನೀಡಬೇಕು. ಪ್ರತಿದಿನ 9 ರಿಂದ 10 ಸಾವಿರ ಪ್ರಕರಣಗಳಾಗುತ್ತಿವೆ. ಬಹುಶಃ ಕೆಲವೇ ದಿನಗಳಲ್ಲಿ ಮಹಾರಾಷ್ಟ್ರ, ಆಂಧ್ರ ಪ್ರದೇಶವನ್ನು ನಾವು overtake ಮಾಡುತ್ತೇವೆ ಎನ್ನಿಸುತ್ತದೆ.

ಇನ್ನು ಮಾನ್ಯ ಮಂತ್ರಿಗಳು ಹೇಳಿದ ಹಾಗೆ vaccination trial 3ನೇ ಹಂತದಲ್ಲಿದೆ. ಬಹುಶಃ ಇನ್ನೂ ಆರೇಳು ತಿಂಗಳಾಗಬಹುದು. ಇನ್ನೂ ಒಂದು ವರ್ಷಗಳವರೆವಿಗೆ ನಾವು ಈ ಕೊರೊನಾ ಸೋಂಕಿನೊಂದಿಗೆ ಜೀವನ ಮಾಡಬೇಕಾಗುತ್ತದೆ. ಜನಗಳಿಗೆ herd immunity develop ಆಗಬೇಕು. ಅಲ್ಲಿಯವರೆವಿಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು ಕಡ್ಡಾಯವಾಗಿ ಆಗಬೇಕು. What will happen if a person not wearing a condom. ಅದೇ ರೀತಿ ಮಾಸ್ಕ್ ಅನ್ನು ಧರಿಸದಿದ್ದರೆ ತೊಂದರೆಯಾಗುತ್ತದೆ. ಕೇವಲ ಅವರೊಬ್ಬರಿಗೆ ಮಾತ್ರವಲ್ಲ, ಅವರ ಕುಟುಂಬದವರಿಗೂ ಸೋಂಕು ತಗಲುತ್ತದೆ. Mask wearing ಅನ್ನು compulsory ಎಂದು ಹೇಳಬೇಕು. Social distancing ಎನ್ನುವ ಬದಲು personal or physical distance ಎಂದು ಹೇಳಬೇಕು. ಇದಕ್ಕೆ ನಮ್ಮ social

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

distancing ಎಂದರೆ ನಮ್ಮ context ನಲ್ಲಿ ಬೇರೆಯದೇ ಅರ್ಥವಿದೆ. Prime Ministers Care Fund ನಿಂದ ಬೇರೆ ಬೇರೆ ರಾಜ್ಯಗಳಿಗೆ ವಿಶೇಷವಾಗಿ ಬಿಹಾರ್ ಮತ್ತು ಒಡಿಶಾ ರಾಜ್ಯಗಳಿಗೆ ಸಾಕಷ್ಟು ಹಣ ಹೋಗಿರುತ್ತದೆ. ಪಿ.ಪಿ.ಇ. ಕಿಟ್‌ಗಳನ್ನು ಮತ್ತು ಆಂಬ್ಯುಲೆನ್ಸ್‌ಗಳನ್ನು ಖರೀದಿ ಮಾಡಲು ಆ ಅನುದಾನವನ್ನು ಪಡೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

**ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, Cases ಬಗ್ಗೆ, ಚಿಕಿತ್ಸೆಯ ಬಗ್ಗೆ ಸಾಕಷ್ಟು find out ಗಳಾಗಬೇಕೆಂದು ಮಾನ್ಯ ಸದಸ್ಯರು ತಿಳಿಸಿರುವ ಕಾರಣ ಸಂಪೂರ್ಣವಾಗಿ ಇದರ ಕುರಿತು ಕೆಲಸ ಮಾಡುತ್ತೇನೆ. ಕೇಂದ್ರ ಸರ್ಕಾರ Front Line Warriors ಗಳು ಸಾವನ್ನಪ್ಪಿದಂತಹ ಸಮಯದಲ್ಲಿ ರೂ.50 ಲಕ್ಷಗಳ insurance ನೀಡುವ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ವಿಷಯದ ಕುರಿತು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದು ಯಾವ ರೀತಿಯಲ್ಲಿ ಆಗುವುದೋ ಆ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ. ಇತ್ತೀಚೆಗಷ್ಟೇ ತಾವು ನೋಡಿರಬಹುದು. ಕೋವಿಡ್–19 ವಿಚಾರದಲ್ಲಿ ಯಾರಾದರೂ symptoms ಕಂಡು ಬಂದು ಆಸ್ಪತ್ರೆಗೆ ದಾಖಲಾದಾಗ ಅವರಿಗೆ remedies ಅನ್ನು ಜಾಸ್ತಿ ಮಾಡಬೇಕೆಂದು ಚುಚ್ಚುಮದ್ದುಗಳು ಹೆಚ್ಚು ಹೆಚ್ಚು ಲಭ್ಯವಾಗುವಂತೆ ಮಾಡಿದ್ದೇವೆ. Rapid Test ಮತ್ತು RT-PCR (Real Time Reverse Transcription–Polymerase Chain Reaction) test ಗಳನ್ನು ಹೆಚ್ಚು ಮಾಡಬೇಕಾಗಿದೆ. ಇದರ ಬಗ್ಗೆ ನಿನ್ನೆ ಮೊನ್ನೆ ಟಾಸ್ಕ್‌ಫೋರ್ಸ್‌ನಲ್ಲಿ ಒಂದು ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಇವೆಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಎಲ್ಲವನ್ನೂ ಸರಿಪಡಿಸಲಾಗುವುದೆಂದು ಹೇಳಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

**ಡಾ:ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. 20ನೇ ಶತಮಾನ ಕಂಡಂತಹ ಅತ್ಯಂತ ಭೀಕರವಾದ ಕೊರೊನಾ ಸಮಸ್ಯೆಯನ್ನು ಇಡೀ ಜಗತ್ತು ಎದುರಿಸುವುದಕ್ಕೆ ಕಷ್ಟ ಪಡುತ್ತಿರುವ ಸಂದರ್ಭದಲ್ಲಿ 130 ಕೋಟಿ ಜನಸಂಖ್ಯೆಯನ್ನು ಹೊಂದಿರುವಂತಹ ಭಾರತ ಸರ್ಕಾರ ಮತ್ತು ಫೆಡರಲ್ ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲಾ ಸರ್ಕಾರಗಳು ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿವೆ ಎಂದು ನಾವು ಹೇಳಬೇಕಾಗುತ್ತದೆ. ಅದು ಯಾವುದೇ ಸರ್ಕಾರವಾಗಿರಬಹುದು. ಪ್ರತಿಪಕ್ಷದ ಮುಖ್ಯ ಸಚೇತಕರಾದ ಶ್ರೀ ಎಂ.ನಾರಾಯಣಸ್ವಾಮಿಯವರು ಒಂದೆರಡು ವಿಚಾರಗಳನ್ನು ಎತ್ತಿದ್ದಾರೆ. ಮೊದಲನೆಯದಾಗಿ ಈ ಸರ್ಕಾರವು ದಾಯಿತ್ವ ಅಂದರೆ ಜವಾಬ್ದಾರಿಯಿಂದ ನುಣುಚಿ ಕೊಳ್ಳುತ್ತಿದೆ ಎನ್ನುವುದು. ಇಂದು ಬೆಳಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಸದನದಲ್ಲಿ ಒಂದು ಘಟನೆ ನಡೆಯಿತು. ಸಂಸತ್ತಿನ ಎರಡು ಮನೆಗಳು ಹಾಗೂ ವಿಧಾನ ಮಂಡಲದ ಎರಡು ಮನೆಗಳು ಈ ನಾಲ್ಕೂ ಮನೆಗಳನ್ನು ನೋಡಿಬಂದಿರತಕ್ಕಂತಹ ನಮ್ಮ ಹಿರಿಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್ ಅವರು ಆಡಳಿತ ಪಕ್ಷದಲ್ಲಿದ್ದರೂ ಕೂಡ ಶಿಕ್ಷಕರ ವೇತನ ಬಾಕಿಯಿದೆಯೆಂದು ಸದನದ ಬಾವಿಗಿಳಿದು ಪ್ರತಿಭಟಿಸಿದ ಅಪರೂಪದ ಘಟನೆಯನ್ನು ನಾವೆಲ್ಲಾ ನೋಡಿದೆವು. ನಿಜವಾಗಿಯೂ ನಾವೆಲ್ಲರೂ ಒಂದು ಕ್ಷಣ ದಿಗ್ಭ್ರಮೆಗೊಂಡೆವು. ಇದಕ್ಕೆ ಪ್ರತಿಪಕ್ಷಗಳು ಸಮರ್ಥನೆಯನ್ನು ನೀಡಿದವು. ಈ ಘಟನೆ ನಡೆದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಶಿಷ್ಟಾಚಾರಗಳನ್ನು ಬದಿಗೊತ್ತಿ ನೇರವಾಗಿ ಸದನಕ್ಕೆ ಬಂದು ಅದಕ್ಕೆ ಸ್ಪಂದಿಸಿದ್ದು, ಇಂತಹ ಒಂದು ಮಾನವೀಯ ಸರ್ಕಾರ ನಮ್ಮ ಸರ್ಕಾರ ಎಂಬುದಕ್ಕೆ ಒಂದು ನಿದರ್ಶನವಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟುವ ಮೂಲಕ ಹರ್ಷವನ್ನು ವ್ಯಕ್ತ ಪಡಿಸಿದರು.)**

ಈಗಾಗಲೇ ನಮ್ಮ ಸಚಿವರು ಕೊಟ್ಟಿರುವ ಉತ್ತರವನ್ನು ನಾನು ಪುನರಾವರ್ತನೆ ಮಾಡುವುದಿಲ್ಲ. ಕೊರೊನಾ ಹೇಗಿರುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ನಮ್ಮ ಮಾಧ್ಯಮಮಿತ್ರರು ಕಲ್ಪನೆಗೆ ಮೀರಿದ ರೀತಿಯಲ್ಲಿ, ಈಸ್ಟ್‌ಮನ್ ಕಲರ್‌ನಲ್ಲಿ ಕೊರೊನಾ ವೈರಾಣುವನ್ನು ತೋರಿಸಿದರು. ಇದು ಕೇವಲ ರೋಗವನ್ನು ಎದುರಿಸಿದ್ದು ಮಾತ್ರವಲ್ಲ, psychological warfare ಅನ್ನು ಕೂಡ ನಾವು ಎದುರಿಸಿದೆವು. ಜೆ.ಸಿ.ಬಿಯ ಮೂಲಕ ಹೆಣಗಳನ್ನು ಹೂಳಿದ್ದನ್ನು ನೋಡಿದೆವು. ಗಂಡ ಅಥವಾ ಹೆಂಡತಿ ಯಾರೇ ಅಗಲಿದರೂ ಅಂತ್ಯಸಂಸ್ಕಾರ ಮಾಡುವಾಗ ಪೂಜೆ ಮಾಡದೆ ನೂರು ಅಡಿ ದೂರದಲ್ಲಿ ನಿಂತು ಉಪಗ್ರಹಕ್ಕೆ ಹೋಗುವವರ ರೀತಿಯಲ್ಲಿ ಪೋಷಾಕನ್ನು ಧರಿಸಿ ವೈದ್ಯಕೀಯ ಮಾರ್ಗದರ್ಶನವನ್ನು ಅನುಸರಿಸಿ ಶವವನ್ನು ವೀಕ್ಷಣೆ ಮಾಡುವಂತಾಯಿತು. ಈ ದೃಷ್ಟಿಕೋನವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಅದು ವೈರಾಣುವಿನ ಸೋಂಕನ್ನು ತಡೆಯಬೇಕೆನ್ನುವ ಉದ್ದೇಶದಿಂದ ಆಗಿದೆ. ಪ್ರತಿಪಕ್ಷದವರು ಕಳಪೆ ಗುಣಮಟ್ಟದ ಆರೋಪವನ್ನು ಮಾಡಿದರು. ಅದರಿಂದ ನಮಗೆ ಬಹಳ ನೋವಾಯಿತು. ಏಕೆಂದರೆ ಇಲ್ಲಿ ಮಾನ್ಯ ಆರೋಗ್ಯ ಸಚಿವರಾದ ಶ್ರೀ ಬಿ.ಶ್ರೀರಾಮುಲು ಅವರು ಕುಳಿತಿದ್ದಾರೆ. ಅವರ ಎದುರಿನಲ್ಲಿಯೇ ಹೇಳಿದರೆ ಅದು ಮುಖಸ್ತುತಿಯಾಗುತ್ತದೆ. ನನ್ನ ತಾಯಿ ಇಂದು ಇಲ್ಲ, ತೀರಿಕೊಂಡಿದ್ದಾರೆ. ಎರಡು ಬಾರಿ ನನ್ನ ತಾಯಿಯವರನ್ನು ಮೃತ್ಯುದವಡೆಯಿಂದ ಬದುಕಿಸಿದ್ದು ಇದೇ 108 ಆಂಬ್ಯುಲೆನ್ಸ್ ಮತ್ತು ಅದರ ಸಿಬ್ಬಂದಿ. ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಆಂಬ್ಯುಲೆನ್ಸ್ ಬೇಕು. ಕೋಟ್ಯಂತರ ಜನರಿರುವ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾರತದಲ್ಲಿ airborne disease ಗಾಳಿಯಲ್ಲಿ ಹರಡುವ ಈ ರೋಗ ಬಂದಾಗ ಒಂದು ಕಡೆ ಸೇವೆಯನ್ನು ಮಾಡಲಿಕ್ಕೆ ವಾರಿಯರ್ಸ್ ಅನ್ನು ತೊಡಗಿಸಬೇಕು.

**(...ಮುಂದು)**

**(ಸಭಾಪತಿಯವರ ಉಪಸ್ಥಿತಿ)**

(783) 6.20 22.9.2020 KG BNS

**ಡಾ॥ತೇಜಸ್ವಿನಿ ಗೌಡ ( ಮುಂದು.,):-**

ಮತ್ತೊಂದು ಕಡೆ machinery ಗಳನ್ನು ತೊಡಗಿಸಬೇಕು. ಇನ್ನೊಂದು ಕಡೆ lockdown ಮಾಡಿದ್ದೇವೆ. ಒಂದು ಕಡೆ ಔಷಧಿಗಳನ್ನು ಹೊಂದಿಸಬೇಕು. ಮತ್ತೊಂದು ಕಡೆ ಕೇಂದ್ರ ಸರ್ಕಾರದ instruction ಗಳನ್ನು follow ಮಾಡಬೇಕು. ನಾನು ಇವತ್ತಿನ ದಿವಸ ಅಭಿಮಾನದಿಂದ ಹೇಳುತ್ತೇನೆ. ಮಾನ್ಯ ಸಚಿವರುಗಳು ಈ ಸರ್ಕಾರದ ಮಂತ್ರಿಗಳ ತರಹ ಅವರು ಕೆಲಸ ಮಾಡಿದ್ದಲ್ಲ, ಹಾಗೆಯೇ, ನಮ್ಮ ವಿರೋಧ ಪಕ್ಷದವರು ಸೇರಿದ್ದಂತೆ, ಪ್ರತಿಯೊಬ್ಬ ಶಾಸಕರು ಸಹ corona warriors ಆಗಿ ಕೆಲಸ ಮಾಡಿದ್ದೇವೆಂದು ಹೇಳಬೇಕಾಗುತ್ತದೆ. ನಮ್ಮ ಸರ್ಕಾರ ಚೆನ್ನಾಗಿ ಈ issue ಅನ್ನು address ಮಾಡಿದ್ದೇವೆಂದು ಹೇಳಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ನಾನು ಮತ್ತೊಂದು ವಿಷಯವನ್ನು ಹೇಳಬೇಕಾಗುತ್ತದೆ. ನನ್ನ colleague ಆದ ಶ್ರೀ ನಾರಾಯಣಸ್ವಾಮಿಯವರು ಸದನದಲ್ಲಿ ಕುಳಿತ್ತಿದ್ದಾರೆ. 4 Covid Care Centres ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಉಪ ಮುಖ್ಯ ಮಂತ್ರಿಗಳಾಂದತಹ ಡಾ॥ಅಶ್ವಥ್ ನಾರಾಯಣ್‌ರವರ ನೇತೃತ್ವದಲ್ಲಿ ಮತ್ತು ಮಾನ್ಯ ಹಿರಿಯ ಸಚಿವರಾದಂತಹ ಶ್ರೀ ಆರ್.ಅಶೋಕ್‌ರವರು ಮತ್ತು ನಮ್ಮ ಎಲ್ಲ ಸಚಿವರ ಅವಗಾಹನೆಯಲ್ಲಿ ಆ ನಾಲ್ಕು ಸೆಂಟರ್‌ಗಳಲ್ಲಿ, ನಾನು ಸಹ ಒಂದು ಸೆಂಟರ್‌ಗೆ incharge ಆಗಿದ್ದೆ. ನನ್ನ ಸಹೋದ್ಯೋಗಿ ಶ್ರೀ ನಾರಾಯಣಸ್ವಾಮಿಯವರು ಸಹ ಒಂದು ಸೆಂಟರ್‌ಗೆ incharge ಆಗಿದ್ದರು. ಇದು ನಮಗೂ ಸಹ ಹೊಸದು. ನಾವು video conference ಮೂಲಕ ರೋಗಿಗಳ ಜೊತೆಗೆ ಮಾತನಾಡಿದ್ದೇವೆ. ಸರ್ಕಾರದ ಭಾಗವಾಗಿದ್ದರೂ ಸಹ, ನಾವು ಯಾರನ್ನು ನಂಬಲಿಲ್ಲ. ವೈದ್ಯರು ಸ್ವತಃ ಅವರ ಆರೋಗ್ಯವನ್ನು ರಕ್ಷಣೆ ಮಾಡಿಕೊಳ್ಳಬೇಕು. ಜೊತೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೋಗಿಗಳಿಗೆ treatment ಕೊಡಬೇಕು. psychologically ಈ patients ಏನಾಗಿ ಬಿಟ್ಟಿದ್ದರು ಎಂದರೆ, ಭಯದಿಂದ ಅರ್ಧಮೃತ್ಯು ಆಗಿದೆ ಎನ್ನುವಂತಂಥದ್ದು, ಬಿ.ಪಿ ಮತ್ತು diabetes ಹೆಚ್ಚಾಗಿರುವಂತಹ, other reasons ಇಂತಹ ಘಟನೆಗಳನ್ನು ನಾವು ನೋಡಿದ್ದೇವೆ. ನಮ್ಮ ಕುಟುಂಬದಲ್ಲಿ 4 ಜನ ಮಕ್ಕಳು ವೈದ್ಯರು ಇದ್ದಾರೆ. ನನ್ನ ಮಗ ವೈದ್ಯ ವಿದ್ಯಾರ್ಥಿ. ಪ್ರತಿ ದಿವಸ ನಾನು ಮನೆಗೆ ಹೋಗಬೇಕಾದರೆ, we are risking our life and we are bound to risk our life. ನಾವು ಸಮಾಜ ಸೇವೆಗಾಗಿ ಒಪ್ಪಿಕೊಂಡು ಬಂದಿದ್ದೇವೆ. ನಮಗೆ ಕೊರೋನಾ ಬಂದರೂ ಸಹ, ಇದು ನಮ್ಮ ಕರ್ತವ್ಯ. ನಾವು ಇನ್ನೊಂದು ಜೀವವನ್ನು ಉಳಿಸುವಂತಹ ಕರ್ತವ್ಯದಲ್ಲಿ ನಾವು ಅದನ್ನು ಶ್ರೇಷ್ಠ ಸೇವೆ ಎಂದು ಭಾವಿಸುತ್ತೇವೆ.

ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಒಂದು ವಿಷಯವನ್ನು mention ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಡಾ॥ವೆಂಕಟೇಶ್, Supervisor ಆಗಿದ್ದಾರೆ, ಅಲ್ಲಿ ಒಬ್ಬ ಸುವರ್ಣ ಎಂಬ nursing head ಇದ್ದಾರೆ. ಅವರು 35 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದಾರೆ. ಗಂಡ ಒಂದು ಕೊಠಡಿಯಲ್ಲಿ ಮತ್ತು ಆಕೆ ಒಂದು ಕೊಠಡಿಯಲ್ಲಿ ಕಂಡು ಕೇಳರಿಯದಂಥದ್ದು, ಏಕೆಂದರೆ, ಪ್ರತಿ ದಿವಸ treatment ಮಾಡುವಾಗ, quarantine life. ಒಂದು family life ಸಹ ಇಲ್ಲ. ಕೆಲವೊಂದು ಕಡೆ ಆಶಾ ಕಾರ್ಯಕರ್ತೆಯರು ಪ್ರತಿ ದಿವಸ ಒಂದೊಂದು ಕಡೆಗೆ ಹೋಗಬೇಕಾದರೆ, ಅವರಿಗೆ ನಮ್ಮೆಲ್ಲರ ಸಹಕಾರ ಇತ್ತು. ಅವರು ಇವರು ಎಂದು ಇರಲಿಲ್ಲ. ನಮ್ಮೆಲ್ಲರ ಸಹಕಾರ ಇತ್ತು. ಜನಸಂಖ್ಯೆಯ data ಇಲ್ಲದಿದ್ದರೆ, ಯಾವ ರೀತಿಯಲ್ಲಿ ಮಾಡುವುದಕ್ಕೆ ಆಗುತ್ತದೆ? ಈ ಸರ್ಕಾರ ಯಾವ ರಂಗಗಳಲ್ಲಿಯೂ ಪ್ರಯತ್ನವನ್ನು ಬಿಡಲಿಲ್ಲ. ಸರ್ಕಾರ ಕೊರೋನಾದಲ್ಲಿ ಭ್ರಷ್ಟಾಚಾರ ಮಾಡಿ ಹಣ ಮಾಡುತ್ತಿದೆ. ಸರ್ಕಾರ ಉದ್ದೇಶ ಪೂರ್ವಕವಾಗಿ ಕಳಪೆ ವಸ್ತುಗಳನ್ನು ಖರೀದಿ ಮಾಡಿದೆ. Airport ನಲ್ಲಿ ಒಂದು ಟೆಂಟ್ ಹಾಕಿಬಿಟ್ಟಿದ್ದಾರೆ. 800 ರೂಪಾಯಿಗಳಿಗೆ ಒಂದು ಬೆಡ್‌ಗೆ ಎಂದು ಹೇಳಿದರೆ, International Airport ಗೆ ನಮ್ಮ ಡಿ.ಸಿ., ಡಾ॥ರವೀಂದ್ರರವರು ಸಹ corona positive ಆಗಿದ್ದಾರೆ. ಹೆಮ್ಮೆಯಿಂದ ಹೇಳುತ್ತೇನೆ, International Airport ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ಬರುವುದರಿಂದ ಇಡೀ ನಮ್ಮ ಅಧಿಕಾರಿ ವರ್ಗ ಮತ್ತು deputation ಮೇಲೆ ಪ್ರತಿಯೊಂದು ಇಲಾಖೆಯವರು ಅಲ್ಲಿಗೆ ಹೋಗಿ ಕೆಲಸ ಮಾಡಿದ್ದಾರೆ. ತುರ್ತಾಗಿ ಸ್ಪಂದಿಸುವಾಗ ಆ ಬೆಲೆಗಳು ಜಾಸ್ತಿ ಆಗುತ್ತವೆ. ತದನಂತರ ಬೇಡಿಕೆಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಗುಣವಾಗಿ ಅದನ್ನು en masse ನಲ್ಲಿ ದೊಡ್ಡ ಪ್ರಮಾಣದಲ್ಲಿ ಮಾಡುವಾಗ ಬೆಲೆಗಳು ಕಡಿಮೆ ಆಗುತ್ತವೆ ಎನ್ನುವಂತಹ ಸನ್ನಿವೇಶದಲ್ಲಿ ಯಾವುದೇ ರೀತಿಯಲ್ಲಿಯೂ ನಮ್ಮ ಪಕ್ಷ ಕೊರೋನಾದಂತಹ ಮನುಕುಲವೆ ವಿನಾಶದ ಅಂಚಿನಲ್ಲಿರುವಂತಹ ಪರಿಸ್ಥಿತಿಯಲ್ಲಿ ಹಣ ಮಾಡುವಂತಹ ಸಂಸ್ಕೃತಿಯಾಗಲಿ ಅಥವಾ ಒಂದು ಅವಮಾನವೀಯ ರಾಜಕೀಯ ಸಂಸ್ಕೃತಿಯಾಗಲಿ ನಮ್ಮದಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಸ್ವತಃ 24 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದಾರೆ. ಅವರು ಪ್ರತಿಯೊಬ್ಬರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರನ್ನು ಕೇಳಲಿ, ಮಾನ್ಯ ಬಸವರಾಜ ಹೊರಟ್ಟಿಯವರು ಸದನದಲ್ಲಿ ಇದ್ದಾರೆ. ಅವರನ್ನು ಬೇಕಾದರೂ ಕೇಳಲಿ. ಒಂದು ಮಗು ಹೇಳಿದರೂ ಸಹ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಸರ್ಕಾರದ ಪ್ರಾಮಾಣಿಕವಾದ ಪ್ರಯತ್ನದ ಒಂದು ಒಳ್ಳೆಯ ಉತ್ತರವನ್ನು ಕೊಟ್ಟ ಮೇಲೂ ಮತ್ತು ಇದರ ಬಗ್ಗೆ ಸಮಗ್ರ ಉತ್ತರವನ್ನು ಕೊಟ್ಟ ಮೇಲೂ ಸಹ, ಸಭಾತ್ಯಾಗ ಮಾಡಿರುವಂಥದ್ದು ನಮಗೆಲ್ಲ ನೋವು ಉಂಟುಮಾಡಿದೆ. ಇಂತಹ ಒಂದು ಪರಂಪರೆಗೆ ನಮ್ಮ ವಿಧಾನ ಪರಿಷತ್ತಿನ ಮೇಲ್ಮನೆ ಸಾಕ್ಷಿಯಾಗಬಾರದು. ಇಂತಹ ಘಟನೆಗಳನ್ನು ಮುಂದೆ avoid ಮಾಡುವುದರಲ್ಲಿ ನಮ್ಮ ಹಿರಿಯ ಸದಸ್ಯರಾದಂತಹ ಮಾನ್ಯ ಬಸವರಾಜ ಹೊರಟ್ಟಿಯವರು ತಿಳುವಳಿಕೆಗಳನ್ನು ಹೇಳಬೇಕಾಗುತ್ತದೆ ಎಂದು ಹೇಳುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ. (ವಿಧಾನ ಸಭೆಯಿಂದ ಚುನಾಯಿತರಾದವರ):-** ಮಾನ್ಯ ಸಭಾಪತಿಯವರೇ, ಹೊಸದಾಗಿ ಆಯ್ಕೆ ಆದಂತಹ ಸದಸ್ಯರಿಗೆ ಅಧಿವೇಶನದ ಎರಡನೇ ದಿವಸವೇ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಊರಿನ ಎಲ್ಲಾ ಬಂಧು-ಮಿತ್ರರು ನನಗೆ ಹಿರಿಯರ ಮನೆಗೆ ಆಯ್ಕೆ ಆಗಿದ್ದೀಯಾ, ಹಿರಿಯರ ಮನೆಗೆ ವಿಶಿಷ್ಟ ಸಂಪ್ರದಾಯಗಳು ಇವೆ. ಅಲ್ಲಿ ಇಡೀ ರಾಜ್ಯಕ್ಕೆ ಮಾದರಿಯಾಗುವಂತಹ ರೀತಿಯಲ್ಲಿ ಚರ್ಚೆಗಳು ಅಲ್ಲಿ ನಡೆಯುತ್ತವೆ. ಆ ಚರ್ಚೆಯಲ್ಲಿ ಭಾಗವಹಿಸುವಂತಹ ಅವಕಾಶಗಳು ಸಿಗುತ್ತವೆ ಎಂದು ಸುಮಾರು ಜನರು ನನಗೆ ಶುಭ ಹಾರೈಸಿ ಕಳುಹಿಸಿದ್ದಾರೆ. ಆದರೆ, ಕಳೆದ ಎರಡು ದಿವಸಗಳಿಂದ ನಾನು ಸರ್ಕಾರದ ಅಥವಾ ಈ ವಿಷಯದ ಬಗ್ಗೆ ಮಾತನಾಡುವ ಮೊದಲು ಮನಸ್ಸಿಗೆ ಕಂಡಂತಹ ಆತಂಕವನ್ನು ಅಥವಾ ಭಾವನೆಯನ್ನು ಹಿರಿಯರ ಸದಸ್ಯರ ಜೊತೆಯಲ್ಲಿ ಹಂಚಿಕೊಳ್ಳಬೇಕೆಂದು ನನಗೆ ಕಂಡಿತ್ತು. ಅದಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭದ ಮಾತು. ನಾವು ಒಮ್ಮೊಮ್ಮೆ ಬೆಂಗಳೂರಿನ ಟ್ರಾಫಿಕ್‌ನ ಮಧ್ಯೆ ಇದ್ದ ಹಾಗೆ ನಿಯಮವನ್ನು ಪಾಲಿಸಿಕೊಂಡು ತಾಳ್ಮೆಯಿಂದ ಕುಳಿತುಕೊಂಡು ಕೇಳುತ್ತಿರುವಂತಹವರಿಗೆ ಎಲ್ಲೋ ಒಂದು ಕಡೆ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲವೋ, ಯಾರು ನಿಯಮವನ್ನು ಮೀರಿ, ಸಮಯವನ್ನು ಮೀರಿ, ಮಾತನಾಡುತ್ತಾ ಹೋಗುತ್ತಾರೋ ಅಂತಹವರಿಗೆ ಮಾತ್ರ ಅವಕಾಶವೋ ಎಂದು ಹೇಳುವಂತಹ ಭಾವನೆ ಬಂದಂತಹ ಸಂದರ್ಭದಲ್ಲಿ ತಾವು ಇಲ್ಲ, ಹೊಸ ಸದಸ್ಯರಿಗೂ ಮಾತಾನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡುವಂಥದ್ದನ್ನು ಮಾಡಿಕೊಟ್ಟಿದ್ದೀರಿ, ಅದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಇವತ್ತಿನ ಪರಿಸ್ಥಿತಿಯಲ್ಲಿ ಇವತ್ತು ಪ್ರತಿಪಕ್ಷದವರು ಮಾತಿನ ಕೊನೆಯಲ್ಲಿ ಸಭಾತ್ಯಾಗ ಮಾಡಿದರು. ನಾವು ಮಾತನಾಡುವಾಗ ಮಾತನಾಡಿದ ಶಬ್ದಗಳಿಗೂ ಮತ್ತು ಈ ಕ್ರಿಯೆಗೂ ಒಂದಕ್ಕೊಂದು ಪೂರಕವಾಗಲಿಲ್ಲ ಎಂದು ನನ್ನ ಎರಡು ದಿವಸಗಳ ಅನುಭವದ ಭಾವನೆ. ವಿಶ್ವವನ್ನೇ ಕಾಡುತ್ತಿರುವಂತಹ ಈ ಸಮಸ್ಯೆ ಇಲ್ಲಿ ಎಲ್ಲರೂ ಮಾತನಾಡುವಾಗ ಅಥವಾ ಹೊರಗಡೆ ಮಾತನಾಡುವಾಗಲೂ ಸಹ ನಾನು ಕಂಡಿದ್ದು ಒಂದು ರೀತಿಯಲ್ಲಿ ಕುರುಡರು ಆನೆಯನ್ನು ಮುಟ್ಟಿದಂತೆ. ಆನೆಯನ್ನು ಯಾರು ಸಹ ಪೂರ್ತಿಯಾಗಿ ನೋಡಲಿಲ್ಲ. ಒಬ್ಬರು ಬಾಲ, ಒಬ್ಬರು ಕಾಲು ಎಲ್ಲವನ್ನು ಹಿಡಿದುಕೊಂಡು ಇದೇ ಪರಮ ಸತ್ಯ ಎಂದು ಹೇಳುವಂತಹ ರೀತಿಯಲ್ಲಿ, ಏಕೆಂದರೆ, ನಮಗೆ ಅದರ ಬಗ್ಗೆ ಗೊತ್ತಿಲ್ಲ. ಕೊರೋನಾದ ಪರಿಣಾಮ ಏನು, ಅದು ಯಾವ ರೀತಿಯಲ್ಲಿ ಆಗುತ್ತದೆ ಎನ್ನುವುದು ಗೊತ್ತಿಲ್ಲ. ಫೆಬ್ರವರಿಯಲ್ಲಿ ಇದ್ದಂತಹ ಸ್ಥಿತಿಗೂ ಮತ್ತು ಇವತ್ತಿನ ಸ್ಥಿತಿಗೆ ಒಂದು ಚೂರು ನಾವು ತುಲನೆ ಮಾಡಿದರೆ, ಬಹುಶಃ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ನಮ್ಮ ಸರ್ಕಾರದ ಮುಖ್ಯಮಂತ್ರಿಗಳನ್ನು ಮತ್ತು ನಮ್ಮ ದೇಶದ ಪ್ರಧಾನ ಮಂತ್ರಿಗಳನ್ನು, ನಮ್ಮ ಆರೋಗ್ಯ ಸಚಿವರನ್ನು ಅಭಿನಂದಿಸುತ್ತೇನೆ. ಕತ್ತಲೆಯ ಮಧ್ಯದಲ್ಲಿ ಬೆಳಕನ್ನು ಹುಡುಕುವಂತಹ ಅವರದೇ ಆದಂತಹ ರೀತಿಯಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಪ್ರತಿ ಪಕ್ಷದವರು ಸಹ ಇದರ ಬಗ್ಗೆ ಖಂಡಿತವಾಗಿಯೂ ಅವರದೇ ಆದಂತಹ ರೀತಿಯಲ್ಲಿ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ, ಎಲ್ಲೋ ಒಂದು ಕಡೆ ಕೊನೆ ಆಗುವಾಗ ನಾವು ಈ ಒಟ್ಟು ಯುದ್ಧದ ವಿರುದ್ಧ ನಮ್ಮ ರಾಜಕೀಯ ಹಿತಾಸಕ್ತಿಗಳನ್ನೇ ಮೇಲೆ ಇಟ್ಟುಕೊಂಡು ನಾವು ಸಂಕುಚಿತ ಭಾವನೆಯ ಜೊತೆಗೆ ನಾವು ಮಾತನಾಡುತ್ತೇವೆ ಎಂದು ಹೇಳುವಂತಹ ಭಾವನೆ ನನ್ನ ಮನಸ್ಸಿನಲ್ಲಿ ಬಂದಿದೆ.

ಮಾನ್ಯ ಸಭಾಪತಿಯವರೇ, ನಾನು ಎರಡು ಸಂಗತಿಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಯುದ್ಧ ಎರಡು ರೀತಿಯಲ್ಲಿ ಇದೆ. ಅದರಲ್ಲಿ ಒಂದು ಮಾನಸಿಕವಾದಂತಹ ಯುದ್ಧ, ಎರಡನೆಯದು ವ್ಯವಸ್ಥೆಯನ್ನು ಮಾಡುವಂತಹ ದೃಷ್ಟಿಯಲ್ಲಿ ನಮ್ಮ ತಯಾರಿ. ಬಹುಶಃ ಇಡೀ ಜನರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಏನು, ಎಂದು ಹೇಳುವಂತಹ ಆತಂಕದ ಪರಿಸ್ಥಿತಿಯಲ್ಲಿ ಇರುವಾಗ, ಮಾನ್ಯ ಆರೋಗ್ಯ ಸಚಿವರು ಹೇಳಿರುವಂತಹ ರೀತಿಯಲ್ಲಿ ಒಬ್ಬೊಬ್ಬರು ಸಹ ಒಬ್ಬ ಯೋಧನ ರೀತಿಯಲ್ಲಿ ಕೆಲಸ ಮಾಡುವಾಗ, ಈ ಮೇಲ್ಮನೆಯಿಂದ ಸಾಮಾನ್ಯ ಜನರಿಗೆ ಸಂದೇಶ ಹೇಗೆ ಹೋಗಬೇಕು. ಇಲ್ಲ, ಸರ್ಕಾರ ಕೆಲಸ ಮಾಡುತ್ತಿದೆ, ವ್ಯವಸ್ಥೆ ಕೆಲಸ ಮಾಡುತ್ತಿದೆ, ನಿಮ್ಮ ಜೊತೆಗೆ ಇದ್ದೇವೆ. ನೂರರಲ್ಲಿ 99 ರಷ್ಟು ಕೆಲಸಗಳು ಒಳ್ಳೆಯದು ಆಗುವಾಗ, ಎಲ್ಲೋ ಒಂದು ಮನುಷ್ಯನ ತಪ್ಪಿನಲ್ಲಿ ಒಂದು ತಪ್ಪು ಆದಾಗ, ಆ ಒಂದು ತಪ್ಪನ್ನೇ ಹಿಡಿದುಕೊಂಡು 99 ಕೆಲಸಗಳು ಒಳ್ಳೆಯದು ಆಗಿದ್ದನ್ನು ನಾವು ಮರೆಯಬಾರದು. ತಮ್ಮ ಪ್ರಾಣವನ್ನೇ ಪಣವಾಗಿ ಇಟ್ಟುಕೊಂಡು ಕೆಲಸ ಮಾಡುತ್ತಿರುವಂತಹ ವೈದ್ಯರುಗಳು, ಆಶಾ ಕಾರ್ಯಕರ್ತೆಯರು, ಪೋಲೀಸರು ಒಮ್ಮೆ ನಾವು ಕಳೆದ ನಾಲ್ಕು ತಿಂಗಳು ಕಳೆದಂತಹ ಯಾತನೆಯನ್ನು ಮನಸ್ಸಿಗೆ ತೆಗೆದುಕೊಂಡರೆ, ಸ್ವಯಂ ಸೇವಾ ಸಂಸ್ಥೆಗಳು ಬೇರೆ ಬೇರೆ ರೀತಿಯಲ್ಲಿ ದಾರಿಯಲ್ಲಿ ಹೋಗುವವರಿಗೆ ಅವರಿಗೆ ಇವರಿಗೆ ಹೊಟ್ಟೆಗೆ ಏನು ಎಂದು ಹೇಳುವಂತಹ ವ್ಯವಸ್ಥೆಯನ್ನು ಇಡೀ ಸಮಾಜ ಇಡೀ ದೇಶ ಒಂದಾಗಿ ಕೆಲಸ ಮಾಡುವಾಗ ಇವತ್ತು ಒಂದು ರೀತಿಯಲ್ಲಿ ಒಂದು ಸಣ್ಣ ಧೈರ್ಯ. ಎಲ್ಲಾ ಹಿರಿಯರು ಹೇಳಿರುವಂತಹ ರೀತಿಯಲ್ಲಿಯೇ, ನಾವು ಇನ್ನೂ ಕೊರೋನಾ ಜೊತೆಯಲ್ಲಿಯೇ ಬದುಕುವಂತಹ ದಿವಸಗಳು ಎಲ್ಲಿಯವರೆಗೆ ಇದಕ್ಕೆ ಒಂದು ಶಾಶ್ವತವಾದಂತಹ ಪರಿಹಾರ ಸಿಗುವುದಿಲ್ಲವೋ ಆ ದೃಷ್ಟಿಯಲ್ಲಿ ಸರ್ಕಾರ ಇಷ್ಟೆಲ್ಲಾ ಕೆಲಸಗಳನ್ನು ಮಾಡಿದೆ. ಈ ಸಂದರ್ಭದಲ್ಲಿ ಮಾನಸಿಕವಾಗಿ ಜನರಿಗೆ ಧೈರ್ಯ ಕೊಡುವಂತಹ ದೃಷ್ಟಿಯಲ್ಲಿ ಒಂದು ವಿಶೇಷವಾದತಂಹ ರೀತಿಯ ಸಂದೇಶ ಮೇಲ್ಮನೆಯಿಂದ ಹೋಗಬೇಕು. ಆ ದೃಷ್ಟಿಯಲ್ಲಿ ನಮ್ಮೆಲ್ಲರ ಚರ್ಚೆ, ನಾವೆಲ್ಲರೂ ಒಟ್ಟಾಗಿ ಇದರ ವಿರುದ್ಧ ಹೋರಾಡಬೇಕಾದಂತಹ ಅವಶ್ಯಕತೆ ಇದೆ.

ಮುಂದು.,

(784)22–09–2020(6–30)ಎಂವಿ–ಬಿಎನ್ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ಮುಂದು):–**

ಜನರು ಏನೇನು ಮಾಡಬೇಕೆಂದು ಸರ್ಕಾರ ಕಾಲಕಾಲಕ್ಕೆ ಸಾಕಷ್ಟು ಸಂಗತಿಗಳನ್ನು ಹೇಳುತ್ತದೆ. ಜನರು ಸ್ವಯಂಪ್ರೇರಣೆಯಿಂದ, ಈ ನಿಯಮಗಳನ್ನು ಪಾಲಿಸುವುದರ ಜೊತೆಗೆ ಮತ್ತು ಸರ್ಕಾರದ ವ್ಯವಸ್ಥೆಯ ಜೊತೆಗೆ ಜನರಿಗೂ ಧೈರ್ಯ ತುಂಬಿಸಬೇಕು ಮತ್ತು ಕೆಲಸ ಮಾಡುವ ವ್ಯವಸ್ಥೆಗೂ ಧೈರ್ಯ ತುಂಬಿಸಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ. ಖಂಡಿತವಾಗಿ ಇದರಲ್ಲಿ ರಾಜಕೀಯ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸ್ವರಾಜಕೀಯ ಮತ್ತು ಪಕ್ಷದ ರಾಜಕೀಯಕ್ಕಿಂತ ಮೇಲೆ ನಿಂತು ನಮ್ಮ ಮೇಲ್ಮನೆಯಿಂದ ಸಂದೇಶ ಹೋಗಬೇಕೆಂದು ತಮ್ಮ ಮೂಲಕ ಹೇಳುತ್ತಾ, ಮತ್ತೊಮ್ಮೆ ಮುಖ್ಯಮಂತ್ರಿಗಳಿಗೆ ಮತ್ತು ಆರೋಗ್ಯ ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಅವರು ಮಾಡಿರುವಂತಹ ಅಭೂತಪೂರ್ವವಾದಂತಹ ಕೆಲಸಕ್ಕೆ ಅಭಿನಂದನೆಯನ್ನು ಸಲ್ಲಿಸಿ. ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ತಾವು ನನ್ನನ್ನು ಕೇಳಿ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕೆ ಅತ್ಯಂತ ಅಭಾರಿಯಾಗಿದ್ದೇನೆ. ನಾನು ಅತ್ಯಂತ ಹಿಂದುಳಿದ ಬುಡಕಟ್ಟು ಸಮುದಾಯದಿಂದ ಬಂದಿದ್ದೇನೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು ಎಪ್ಪತ್ತು ವರ್ಷ ಕಳೆದರೂ ಸಹ ಇವತ್ತಿನವರೆವಿಗೂ ಸಹ ನಾವು ಆಳಿಸಿಕೊಳ್ಳುವಂತಹ ಒಂದು ಸಮುದಾಯದಲ್ಲಿ ಇದ್ದಂತಹವರು. ಕಳೆದ ಎಲ್ಲಾ ಸರ್ಕಾರಗಳು ನಮಗೆ ಅಲ್ಲೋ ಇಲ್ಲೋ ಸ್ವಲ್ಪ ಕೊಟ್ಟು ಬೆಳೆಸಿಕೊಂಡು ಬಂದಿದ್ದವು. ಆದರೆ ಈ ಸರ್ಕಾರ ನನಗೆ ಆಳುವ ಜಾಗದಲ್ಲಿ ತಂದು ಕೂರಿಸಿದೆ. ನನ್ನನ್ನು ವಿಧಾನ ಪರಿಷತ್ತಿನ ಮೇಲ್ಮನೆಯ ಸದಸ್ಯನಾಗಿ ಮಾಡಿರುವುದಕ್ಕೆ ಈ ಸರ್ಕಾರ, ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಸೇರಿದಂತೆ ಎಲ್ಲರನ್ನು ಸಹ ಅತ್ಯಂತ ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಜೊತೆಗೆ ನಮ್ಮ ಸಹಪಾಠಿಗಳು ಹೇಳಿದ ಹಾಗೆ, ಇವತ್ತು ಬಹಳ ಗೌರವದಿಂದ ನಮ್ಮ ಬುಡಕಟ್ಟು ಸಮುದಾಯ ಕೂಡ ಈ ಕೊರೋನಾ ಹೋರಾಟದಲ್ಲಿ ಭಾಗವಹಿಸಿದೆ. ನಾನು ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ರಾಮನಗರ ಜಿಲ್ಲೆಯಲ್ಲಿ, ಕೊರೋನಾ ಹೋರಾಟದ ಸಂದರ್ಭದಲ್ಲಿ ಅಲ್ಲಿನ ಬುಡಕಟ್ಟು ಸಮುದಾಯದ ಜನರಿಗೆ ತಿನ್ನುವುದಕ್ಕೆ ಆಹಾರ ಇಲ್ಲದೇ ಇರುವಂತಹ ಸಂದರ್ಭದಲ್ಲಿ ನಮ್ಮ ಕಾರ್ಯಕರ್ತರು ಅವರ ಮನೆಗಳಿಗೆ ದವಸ ಧಾನ್ಯ ಮತ್ತು ವಸ್ತುಗಳನ್ನು ಕೊಡುವುದಕ್ಕೆ ಹೋದರು. ಅಲ್ಲಿನ ಒಬ್ಬ ಮನೆಯ ತಾಯಿ, ನನ್ನ ಮನೆಯಲ್ಲಿ ಧಾನ್ಯ ಇದೆ, ಅದನ್ನು ಪಕ್ಕದ ಮನೆಯವರಿಗೆ ನೀಡಿ ಎಂದು ಹೇಳಿದರು. ಇಂತಹ ಸನ್ನಿವೇಶದಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಹೋರಾಡುವಂಥದ್ದನ್ನು ನೋಡಿದ್ದೇವೆ. ಇವತ್ತು ಮತ್ತೆಮತ್ತೆ ಉಲ್ಲೇಖ ಮಾಡುತ್ತೇನೆ. ಮಾನ್ಯ ಆರೋಗ್ಯ ಸಚಿವರಾದ ಶ್ರೀರಾಮುಲು ಜೊತೆಯಲ್ಲಿ ನಾವೆಲ್ಲರೂ ಸಹ ಸೇರಿಕೊಂಡು ಕೆಲಸ ಮಾಡಬೇಕು. ಇಂತಹ ಸಂದರ್ಭದಲ್ಲಿ ಒಂದು ಸಣ್ಣ ವಿಚಾರವನ್ನು ಪ್ರಸ್ತಾಪ ಮಾಡಿ, ವಿರೋಧ ಪಕ್ಷದವರು ಎದ್ದು ಹೋಗಿರುವಂಥದ್ದು ನಿಜವಾಗಿಯೂ ನನಗೂ ಕೂಡ ನೋವಾಗಿದೆ. ನಾವೆಲ್ಲರೂ ಸೇರಿಕೊಂಡು ಹೋರಾಟ ಮಾಡಿ ಒಂದು ಒಳ್ಳೆಯ ಸಂದೇಶ ಕೊಡುವಂತಹ ಸಂದರ್ಭದಲ್ಲಿ ಈ ರೀತಿಯಾದಂತಹ ಘಟನೆ ನಡೆಯಬಾರದಾಗಿತ್ತು. ಅದು ಏನೇ ಇದ್ದರೂ ಸಹ ನನ್ನ ಅನೇಕ ಸಮಸ್ಯೆಗಳನ್ನು ಮುಂದಿನ ಅಧಿವೇಶನದಲ್ಲಿ ಹೇಳುವುದಿದೆ. ಇವತ್ತಿನ ದಿವಸ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ನಿಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ಸದನವನ್ನು ಸೆಪ್ಟೆಂಬರ್ 23, 2020ರ ಬುಧವಾರ ಬೆಳಗ್ಗೆ 10 ಗಂಟೆ 30 ನಿಮಿಷದವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 23ನೇ ಸೆಪ್ಟೆಂಬರ್ ಮಾಹೆ 2020ರ ಬುಧವಾರದಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸಭೆ ಸೇರಲು ನಿಶ್ಚಯಿಸಿತು)**

<><><>

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”